ಪ್ರಪಂಚದಲ್ಲಿ ಅನರ್ಘ್ಯಗಳಾದ ವಜ್ರ ವೈಡೂರ್ಯ ಮುಂತಾದ ಐಶ್ವರ್ಯಗಳು ಹೇರಳವಾಗಿದ್ದರೂ ಸದುಪಯೋಗವಿಲ್ಲದೆ ಅವುಗಳೆಲ್ಲವೂ ದುಃಖಸಾಧನಗಳಾಗಿಯೇ ಪರಿಣಮಿಸುವುದಲ್ಲದೆ ಆತ್ಮೋದ್ಧಾರ ಸಾಧಕಗಳಾಗಿ ಪರಿಣಮಿಸಲಾರವು ವಿವೇಕವಿಲ್ಲದೆ ಭೋಗ್ಯಪದಾರ್ಥಗಳನ್ನು ಎಷ್ಟೆಷ್ಟು ಅಪೇಕ್ಷಿಸುತ್ತ ಹೋಗುತ್ತೇವೆಯೋ ಅಷ್ಟಷ್ಟು ಆಶಾಪಾಶವು ಭದ್ರವಾಗುತ್ತ ಹೋಗುತ್ತದೆ "ಬೇಕಾದಷ್ಟು ನಿಧಿಯು ನಮ್ಮಲ್ಲಿ ಸೇರಿರುವದು ಇನ್ನೇನೂ ಸೇರಬೇಕಾಗಿಲ್ಲವು ಎಂಬ ನಿರಾಶಬುದ್ಧಿಯನ್ನು ಮಾತ್ರ ಅವು ಎಂದೂ ಹುಟ್ಟಿಸಲಾರವು ಆದುದರಿಂದ ರೋಗಿಗಳಿಗೆ ರೋಗವು ಹೆಚ್ಚಿದಹಾಗೆಲ್ಲಾ ದಾಹವು ಹೆಚ್ಚುವಂತೆ ಐಶ್ವರ್ಯವು ಹೆಚ್ಚುತ್ತಹೋದಹಾಗೆಲ್ಲಾ ಆಶೆಯೆಂಬ ಹುಚ್ಚು ದಾಹವು ಎದ್ದು ಉಚ್ಚಸ್ಥಿತಿಯಲ್ಲಿರುವ ಮನುಷ್ಯನನ್ನು ನೀಚಸ್ಥಿತಿಗೊಯ್ಯುತ್ತದೆ ವಿವೇಕಿಗಳು ಇಂಥ ಐಶ್ವರ್ಯವನ್ನು ಅಸ್ಥಿರವೆಂದು ತಿಳಿದು ಇದರ ಪಾಶಕ್ಕೆ ಸಿಕ್ಕದೆ ವಿವೇಕದಿಂದ ಆ ದ್ರವ್ಯವನ್ನು ಸಾಧು ಸತ್ಪುರುಷರ ಸೇವೆಗೂ, ವಿದ್ಯಾಲಯಗಳಿಗೂ, ಔಷಧಾಲಯಗಳಿಗೂ, ಬಡಬಗ್ಗರಿಗನುಕೂಲವಾಗುವಂತೆ ಪಾಠಶಾಲಾಸತ್ರಗಳ ರಚನೆಗೂ ಉಪಯೋಗಿಸುತ್ತ ತಾವು ಆರ್ಜಿಸಿದ ಆ ದ್ರವ್ಯದಿಂದ ಸ್ಥಿರವಾದ ಕೀರ್ತಿಯನ್ನು ಪಡೆದಿರುತ್ತಾರೆ ಇನ್ನು ಕೆಲವರು ಯಾವಾಗಲೂ ಲಕ್ಷ್ಮಿಯು ನಮ್ಮಧೀನದಲ್ಲಿಯೇ ಇರುವಳೆಂದು ಭ್ರಮಿಸಿ ಲೋಭಬುದ್ಧಿಯಿಂದ ಅವನ್ನು ಯಾವುದೊಂದು ಪುಣ್ಯಕಾರ್ಯಗಳಿಗೂ ಉಪಯೋಗಿಸದೆ ತಾವೂ ಸುಖಾನುಭವಮಾಡದೆ ಇರುತ್ತಾರೆ ಒಂದಾನೊಂದು ಸಮಯದಲ್ಲಿ ಆ ಲಕ್ಷ್ಮಿಯು ಜುಗುಪ್ಸೆಗೊಂಡು ಅವರನ್ನು ಬಿಟ್ಟುಹೋಗುವುದರಿಂದ ಆ ದಿನಂತೆ ದರಿದ್ರರಾಗಿ ಹೋಗಿರುತ್ತಾರೆ ಈಗ ಐಶ್ವರ್ಯವಂತನಾದವನು ನಾಳೆ ದರಿದ್ರನಾಗಬಹುದು ಐಶ್ವರ್ಯ ದಾರಿದ್ರ್ಯಗಳೆಂಬವುಗಳು ಯಾರಲ್ಲಿಯೂ ಸ್ಥಿರಗೊಂಡಿರಲಾರವು ಪೂರ್ವಪುಣ್ಯವಿಶೇಷದಿಂದ ಲಕ್ಷ್ಮೀಕಟಾಕ್ಷವನ್ನು ಪಡೆದ ವಿವೇಕಿಗಳಾದ ಧನಿಕರು ತಮ್ಮಲ್ಲಿರುವ ದ್ರವ್ಯದಲ್ಲಿ ಕೆಲವು ಅಂಶಗಳನ್ನು ಪುಣ್ಯಕಾರ್ಯಗಳಲ್ಲಿ ವಿನಿಯೋಗಿಸಿದ್ದಾದರೆ ಅವರ ಯಶಃಕಾಯವು ಪ್ರಪಂಚವಿರುವವರೆವಿಗೂ ಸ್ಥಿರವಾಗಿದ್ದು ಭಗವಂತನು ಅಂಥ ಪುಣ್ಯಾತ್ಮರಿಗೆ ಭೋಗಮೋಕ್ಷಗಳನ್ನು ದಯಪಾಲಿಸುವನು

> ದಾನಂ ಭೋಗೋ ನಾಶಸ್ತಿಸ್ರೋ ಗತಯೋ ಭವಂತಿ ವಿತ್ತಸ್ಯ
> ಯೋ ನ ದದಾತಿ ನ ಭುಂಕ್ತೇ ತಸ್ಯ ತೃತೀಯಾ ಗತಿರ್ಭವತಿ ।

ಪೂರ್ವಿಕರಿಂದ ದಾನ ಭೋಗ ನಾಶ ಎಂದು ದ್ರವ್ಯಕ್ಕೆ ಮೂರು ಗತಿಗಳು ಕಲ್ಪಿಸಲ್ಪಟ್ಟಿವೆ ಇವುಗಳಲ್ಲಿ ಮೊದಲನೆಯದು ದಾನವು, ಎರಡನೆಯದು ಭೋಗವು, ಮೂರನೆಯದು ನಾಶವು ಇವುಗಳಲ್ಲಿ ಆತ್ಮೋದ್ಧಾರ ಸಾಧಕವಾದುದರಿಂದ ಮೊದಲನೆಯದೇ ಉತ್ತಮವು ಐಹಿಕಸುಖಸಾಧಕವಾದುದರಿಂದ ಎರಡನೆಯದು ಮಧ್ಯಮವು ಮೂರನೆಯದು ಅಧಮವು ವಿವೇಕಮತಿಗಳಾದ ಆಸ್ತಿಕರು ತಮ್ಮ ದ್ರವ್ಯವನ್ನು ಬಹಳ ಮಾಡಿ ಪುಣ್ಯಕಾರ್ಯಕ್ಕೆ ವಿನಿಯೋಗಿಸುವರು ಕೇವಲ ಐಹಿಕಾಪೇಕ್ಷಿಗಳು ತಮ್ಮ ದ್ರವ್ಯವನ್ನು ತಮ್ಮ ಭೋಗಕ್ಕಾಗಿ ಉಪಯೋಗಿಸುವರು. ಐಹಿಕಾಮುಷ್ಮಿಕಾಪೇಕ್ಷೆಗಳಿಲ್ಲದ ಲೋಭಿಗಳಲ್ಲಿರುವ ದ್ರವ್ಯವು ಎಷ್ಟು ಭದ್ರವಾಗಿ ಇಡಲ್ಪಟ್ಟಿದ್ದರೂ ಒಂದಾನೊಂದು ಕಾಲದಲ್ಲಿ ಇದ್ದೆಡೆಯಲ್ಲಿಯೇ ನಾಶವಾಗಿ ಹೋಗುವುದು ವಿವೇಕಿಗಳಾದ ಮಾನವರ ಸ್ವಾಧೀನದಲ್ಲಿದ್ದ ದ್ರವ್ಯವು ಪರೋಪಕಾರಕ್ಕೂ ಆತ್ಮಭೋಗಕ್ಕೂ ಉಪಯೋಗವಾಗುವುದರಲ್ಲಿ ಸಂಶಯವಿಲ್ಲ ಪುಣ್ಯಕಾರ್ಯಕ್ಕೂ ಆತ್ಮಸುಖಕ್ಕೂ ದ್ರವ್ಯವನ್ನು ಉಪಯೋಗ ಮಾಡದ ಲೋಭಿಯನ್ನು ನೀತಿಗಾರರು ನಪುಂಸಕನಿಗೆ ಹೋಲಿಸುತ್ತಾರೆ ನಪುಂಸಕನಾದ ಮನುಷ್ಯನು ತನ್ನಲ್ಲಿರುವ ಭೋಗ್ಯವಸ್ತುವನ್ನು ತಾನು ಉಪಯೋಗಿಸುವುದಿಲ್ಲ ಇನ್ನೊಬ್ಬರಿಗೆ ಕೊಡಲು ಇಷ್ಟಪಡುವುದಿಲ್ಲ ತನ್ನದೆಂಬ ಅಭಿಮಾನದಿಂದ ಸುಮ್ಮನೆ ನೋಡುತ್ತಿರುವನಲ್ಲಿ ಆ ಭೋಗವಸ್ತುವು ಯಾರಿಂದಲೋ ಅಪಹರಿಸಲ್ಪಡುವಂತೆ ಲೋಭಿಯು ಸಹ ಪೆಟ್ಟಿಗೆಯೊಳಗಿರುವ ಲಕ್ಷ್ಮಿಯ ಸೌಂದರ್ಯವನ್ನು ಮಾತ್ರ ನೋಡುತ್ತಿರುವನಲ್ಲದೆ ಅದನ್ನು ತೆಗೆದು ಪುಣ್ಯಕಾರ್ಯಕ್ಕಾಗಲಿ ಆತ್ಮಭೋಗಕ್ಕಾಗಲಿ ಉಪಯೋಗಿಸಲು ಶಕ್ತಿಯನ್ನು ಪಡೆಯದೆ ಇದ್ದೆಡೆಯಲ್ಲಿಯೇ ಆ ಲಕ್ಷ್ಮಿ ಯಾರಿಂದಲೋ ಅಪಹೃತವಾಗಿ ಹೋಗುತ್ತದೆ ಮುಖ್ಯವಾಗಿ ತಾವು ಗಳಿಸಿದ ಸಂಪತ್ತನ್ನು ಹೇಗೆ ಉಪಯೋಗಿಸಬೇಕೆಂಬುದು ಗೊತ್ತಿಲ್ಲದೆ ಹೋದರೆ ಸುಖಕ್ಕೆ ಸಾಧನವೆಂದು ತಿಳಿದುಕೊಂಡ ಐಶ್ವರ್ಯವು ಸಾಧನವಾಗದಿರದು (ಸಶೇಷ)

ಪಟ್ಟಚರಮೂರ್ತಿಗಳ ಸಮ್ಮೇಲನಕ್ಕೆ ಗದಗ ಬೆಟಗೇರಿ ಪಟ್ಟಣವು ಕೇಂದ್ರವಾಗಿದೆ

ಬಾಗಲಕೋಟೆಯಲ್ಲಿ ಹೊರಡುವ **ವೀರಶೈವ ಗರ್ಜನಾ** ವಾರಪತ್ರಿಕೆಯು ಸಂಚಿಕೆ ೨೭ ತಾ|| ೯-೪-೫೩ ರಲ್ಲಿ ಅಖಿಲಭಾರತ ಪಟ್ಟಚರಮೂರ್ತಿಗಳ ಶುರ್ಕಸಭೆ ಕೂಡಿಸುವ ವಿಚಾರವಾಗಿ ಮಹಾರಾಷ್ಟ್ರ ಕರ್ನಾಟಕ ಪ್ರಾಂತಗಳಿಗೆ ಮಧ್ಯವರ್ತಿ ಸ್ಥಾನವನ್ನು ನಿರ್ಣಯಿಸುವ ಒಂದು ಲೇಖನವನ್ನು ಪ್ರಕಟಿಸಿದ್ದಾರೆ ನೈಜಾಂ ಪ್ರಾಂತಕ್ಕೆ ಸೇರಿದ ಗುಲ್ಬರ್ಗಾ ರಾಯಚೂರು ಬೀದರ್, ಜಿಲ್ಲೆಗಳಲ್ಲಿ ಮುಂಬೈ ಪ್ರಾಂತಕ್ಕೆ ಸೇರಿದ ಧಾರವಾಡ ವಿಜಾಪೂರ, ಸೋಲ್ಲಾಪೂರ ಜಿಲ್ಲೆಗಳಲ್ಲಿಯೂ ಪಟ್ಟಚರಾಧಿಕಾರಿಗಳು ವಿಶೇಷವಾಗಿದ್ದಾರೆ ಮೈಸೂರುಪ್ರಾಂತ, ಕೊಡಗು ಮಂಗಳೂರು ನೀಲಗಿರಿ ಕೊಯಿಮತ್ತೂರು ಜಿಲ್ಲೆಗಳಲ್ಲಿ ಅಲ್ಪಸ್ವಲ್ಪವಾಗಿದ್ದಾರೆ ಆದುದರಿಂದ ವಿಶೇಷ ಪಟ್ಟಚರಾಧಿಕಾರಿಗಳಿಂದ ಕೂಡಿದ ನಾಡಿಗೆ ಗದಗ ಬೆಟಗೇರಿ ಪಟ್ಟಣವು ಕೇಂದ್ರವಾಗಿದ್ದು ಅಲ್ಲಿ ನಡೆಸಲು ಯಾವ ಅಡ್ಡಿ ಆತಂಕಗಳು ಬರಲಾರವು ಮೇಲಾಗಿ ಈ ಪಟ್ಟಣವು ಆಗರ್ಭ ಶ್ರೀಮಂತರಾದ ವೀರಶೈವರಿಂದ ತುಂಬಿದ್ದು ಶ್ರೀಜಗದ್ಗುರು ಪಂಚಾಚಾರ್ಯರಲ್ಲಿ ನಿಷ್ಠೆಯುಳ್ಳದ್ದಾಗಿದೆ ಎಂಬುದಕ್ಕೆ ಇಲ್ಲಿರುವ ಪಂಚಾಚಾರ್ಯ ಸೇವಾಸಂಘವೇ ನಿದರ್ಶನವಾಗಿದೆ ಪ್ರತಿವರ್ಷ ಫಾಲ್ಗುಣ ಶು|| ೧೩ ದಿವಸ ನಡೆಯುವ ಶ್ರೀ ರೇಣುಕ ಜಯಂತಿಯು ಗದಗ ಬೆಟಗೇರಿ ವೀರಶೈವರ ಗುರುಭಕ್ತಿಯನ್ನು ತೋರುತ್ತದೆ ಗದಗಿನಲ್ಲಿ ವಾಸವಾಗಿದ್ದ ಶ್ರೀ ಷ ಬ್ರ ರೆ ವಣಸಿದ್ಧಶಿವಾಚಾರ್ಯ ಮಹಾಸ್ವಾಮಿಗಳು ದೇಶಮಧ್ಯದಲ್ಲಿ ಸಂಚರಿಸಿ ಧರ್ಮೋಪದೇಶ ಮಾಡುತ ಹಣ ಸಂಗ್ರಹಿಸಿ ಶ್ರೀರೇಣುಕಮಂದಿರ ಕಟ್ಟಡವನ್ನು ಪ್ರಾರಂಭಿಸಿದ್ದಾರೆ ಅದಕ್ಕಾಗಿ ಮುಳಗುಂದ ರಸ್ತೆಯಲ್ಲಿ ವಿಸ್ತೀರ್ಣವಾದ ಜಾಗೆಯನ್ನು ಕೊಂಡಿದ್ದಾರೆ ಅದರಲ್ಲಿಯೇ ಭಾವಿಯನ್ನು ತೆಗೆಯಿಸಿ ಕಲ್ಲಿನಿಂದ ಕಟ್ಟಿಸಿದ್ದಾರೆ ರೇಣುಕಮಂದಿರದ ಅಂಗವಾಗಿ ಬಡ ವಿದ್ಯಾರ್ಥಿಗಳಿಗೆ ಅನ್ನದಾನ ಮಾಡಲು ದಾಸೋಹದ ಕಟ್ಟಡವನ್ನು ಇಷ್ಟರಲ್ಲಿಯೇ ಪೂರೈಸಿ ದಾಸೋಹವನ್ನು ಪ್ರಾರಂಭಿಸುವವರಿದ್ದಾರೆ. ಆಚಾರ್ಯ ಪೀಠಾಭಿಮಾನವು ಇವರಲ್ಲಿ ತುಂಬಿ ತುಳುಕುತ್ತಿದೆ ಇಂಥ ಮಹನೀಯರು ಈ ಪಟ್ಟಣದಲ್ಲಿ ವಾಸವಾಗಿರುವಾಗ ಇವರ ಹಾಗೂ ಗದಗ-ಬೆಟಗೇರಿ ವೀರಶೈವರ ಸಹಾಯದಿಂದ ಪಟ್ಟ ಚರಾಧಿಕಾರಿಗಳ ಸಮ್ಮೇಳನವು ಇಲ್ಲಿ ನಡೆಯಬಹುದೆಂದು ಧಾರಾಳವಾಗಿ ಹೇಳಬಹುದು ಇದಲ್ಲದೆ ಈ ಪಟ್ಟಣವು ಸೊಲ್ಲಾಪುರ ಬಳ್ಳಾರಿ, ಹುಬ್ಬಳ್ಳಿ, ದಾವಣಗೇರಿ, ಕಡೆಗಳಿಂದ ಬರುವ ರೈಲುಗಳಿಗೆ ಜಂಕ್ಷನ್ ಆಗಿದೆ ನಾನಾಭಾಗಗಳಿಂದ ಬಸ್ಸುಗಳೂ ಬರುತ್ತಿವೆ ನೀರಿನ ಸೌಕರ್ಯವೂ ಚೆನ್ನಾಗಿರುತ್ತದೆ ಪ್ರಯುಕ್ತ ವೀರಶೈವಗರ್ಜನಾ ಸಂಪಾದಕರಾದ ಶ್ರೀ ಗುರುರಾಜಲಿಂಗಸ್ವಾಮಿ ಹಿರೇಮಠ ಬಾರ್ಸಿ ಈ ಮಹೋದಯರು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಿದಂತೆ ಸಮ್ಮೇಲನದ ಭಾವೀ ಸಿದ್ಧತೆಗಳನ್ನೇರ್ಪಡಿಸಿ ಕಾರ್ಯೋನ್ಮುಖರಾಗಲೆಂದೂ ಜಗದಾಚಾರ್ಯರು ಅವರಿಗೆ ಆರೋಗ್ಯ ಭಾಗ್ಯಾದಿಗಳನ್ನೀಯಲೆಂದೂ ಕೋರುವ

ಸಂ

ವರ್ತಮಾನಸಂಗ್ರಹ

ಬಳ್ಳಾರಿ ಮೈಸೂರಿಗೆ ಸೇರಿಸಿ ಹೈದರಾಬಾದ್ ಅಸೆಂಬ್ಲಿ ೧೭ ಸದಸ್ಯರ ಮನವಿ

ಹೈದರಾಬಾದ್ ಅಸೆಂಬ್ಲಿಯ ಹದಿನೇಳು ಜನ ಕರ್ನಾಟಕದ ಸದಸ್ಯರು ಬಳ್ಳಾರಿಯಲ್ಲಿ ಪೂರ್ಣ ಕನ್ನಡಿಗರಿದ್ದಾರಾದ್ದರಿಂದ ಬಳ್ಳಾರಿ ಜಿಲ್ಲೆಯನ್ನು ಮೈಸೂರು ಪ್ರಾಂತಕ್ಕೆ ಸೇರಿಸ ಬೇಕೆಂದು ಪ್ರಧಾನಿ ಪಂ|| ನೆಹ್ರೂರವರಿಗೆ ಮನವಿಯೊಂದನ್ನು ಕಳುಹಿಸಿದ್ದಾರೆ

ಬಳ್ಳಾರಿ ಜಿಲ್ಲಾ ಬೋರ್ಡ್ ಪುನಃ ಇಬ್ಬರು ಸದಸ್ಯರ ರಾಜೀನಾಮೆ

ಕೇಂದ್ರಸರ್ಕಾರದವರು ಬಳ್ಳಾರಿ ಜಿಲ್ಲೆಯ ವಿಷಯದಲ್ಲಿ ಮಾಡಿರುವ ನಿರ್ಣಯವನ್ನು ಪ್ರತಿಭಟಿಸಿ ಬಳ್ಳಾರಿ ಜಿಲ್ಲಾ ಬೋರ್ಡಿನ ಮತ್ತಿಬ್ಬರು ಸದಸ್ಯರು ಸದಸ್ಯತ್ವಕ್ಕೆ ರಾಜೀನಾಮೆ ಸಲ್ಲಿಸಿದ್ದಾರೆ. ಈಗಾಗಲೇ ಮುಂಚೆ ೧೯ ಮಂದಿ ಸದಸ್ಯರು ರಾಜಿನಾಮೆ ಇತ್ತಿದ್ದರು

ಬಳ್ಳಾರಿ ಜಿಲ್ಲೆಯ ಭವಿಷ್ಯ ಗಡಿ ನಿರ್ಧಾರಕ್ಕಾಗಿ ಏಕ ಸದಸ್ಯರ ಕಮಿಷನ್

ಬಳ್ಳಾರಿ ಜಿಲ್ಲೆಯ ಕನ್ನಡ ಮಾತನಾಡುವ ಮತ್ತು ತೆಲುಗು ಮಾತನಾಡುವ ಪ್ರದೇಶಗಳ ಗಡಿಯನ್ನು ನಿರ್ಧರಿಸಲು ಏಕಸದಸ್ಯರ ಕಮಿಷನೊಂದನ್ನು ರಚಿಸಲಾಗುವುದೆಂದೂ, ಇದಕ್ಕಾಗಿ ಜಡ್ಜರೊಬ್ಬರನ್ನು ನೇಮಿಸಬಹುದೆಂದೂ ತಿಳಿದುಬಂದಿದೆ

ಮೈಸೂರಿಗೆ ಸೇರುವ ಆರು ತಾಲ್ಲೂಕುಗಳ ಬಗ್ಗೆ ಬದಲಾವಣೆಯೇನೂ ಆಗುವುದಿಲ್ಲವೆಂದೂ, ಆಂಧ್ರಕ್ಕೆ ಸೇರಿಸಲಾಗುವುದೆಂದು ತಿಳಿಸಲಾಗಿರುವ ಮೂರು ತಾಲ್ಲೂಕುಗಳ ಕೆಲವು ಫಿರ್ಕಾಗಳೂ ಮತ್ತು ಭವಿಷ್ಯ ನಿರ್ಧಾರವಾಗದೆ ಇರುವ ಬಳ್ಳಾರಿತಾಲ್ಲೂಕಿನ ಕೆಲವು ಫಿರ್ಕಾಗಳೂ ಮೈಸೂರಿಗೆ ಸೇರಬಹುದೆಂದು ಹೇಳಲಾಗಿದೆ

ಇಡಿ ಬಳ್ಳಾರಿ ಜಿಲ್ಲೆ ಮೈಸೂರಿಗೆ ಸೇರಬೇಕು

ಬಳ್ಳಾರಿ ಜಿಲ್ಲೆಯ ವಿಭಜನೆಯನ್ನು ಸಮಿತಿಯು ತೀವ್ರವಾಗಿ ಪ್ರತಿಭಟಿಸಿ ಇಡೀಜಿಲ್ಲೆಯನ್ನು ಮೈಸೂರಿಗೆ ಸೇರಿಸಬೇಕಾಗಿ ಒತ್ತಾಯ ಮಾಡಿದೆ

ಉಪವಾಸ ಮಾಡುತ್ತಿದ್ದ ಶ್ರೀ ಶಂಕರ ಗೌಡರ ಸ್ಥಿತಿ ಮತ್ತಷ್ಟು ಕೆಟ್ಟಿದೆ

ಕರ್ನಾಟಕ ಪ್ರಾಂತ ರಚನೆಗಾಗಿ ಕೈಕೊಂಡಿರುವ ಆಮರಣಾಂತ ಉಪವಾಸ ಮಾಡುತ್ತಿದ್ದ ಶಂಕರಗೌಡ ಪಾಟೀಲರ ದೇಹಸ್ಥಿತಿ ಮತ್ತಷ್ಟು ಕೆಟ್ಟಿದೆ ಅವರು ತುಂಬಾ ನಿಶ್ಶಕ್ತರಾಗಿದ್ದಾರೆ ಶ್ರೀ ಗೌಡರು ವಿಪರೀತ ಬಳಲಿಕೆಯಿಂದ ಕೂಡಿದವರಾಗಿದ್ದಾರೆ ಅವರ ತೂಕವೀಗ ೮೦ ಪೌಂಡಗಳಷ್ಟಿದೆ

ಉಪವಾಸ ನಿಲ್ಲಿಸಲು ಪ್ರಯತ್ನ

ಕೆ ಪಿ ಸಿ ಸಿ ಅಧ್ಯಕ್ಷರಾದ ಶ್ರೀ ಎಸ್ ನಿಜಲಿಂಗಪ್ಪನವರು ದೆಹಲಿಯಿಂದ ಹಿಂತಿರಿಗಿದವರು ಅರಾತ್ರಿ ಶ್ರೀ ಶಂಕರಗೌಡ ಪಾಟೀಲರನ್ನು ಭೇಟಿ ಮಾಡಿ ದೇಹಲಿಯ ಚರ್ಚೆಗಳನ್ನವರಿಗೆ ತಿಳಿಸಿ ಉಪವಾಸನಿಲ್ಲಿಸಲು ಪ್ರಾರ್ಥಿಸಿದರೆಂದೂ ಆದರೆ ಶ್ರೀ ಶಂಕರಗೌಡರು ಅದಕ್ಕೆ ಒಪ್ಪಲಿಲ್ಲ ವೆಂದೂ ತಿಳಿಯ ಬಂದಿದೆ.

ನನ್ನ ಬಳಿ ಯಾವ ಕಾರ್ಯಕ್ರಮವೂ ಇಲ್ಲ ಕರ್ನಾಟಕ ಪ್ರಾಂತ ಸಾಧನೆಗಾಗಿ ಅಹಿಂಸಾತ್ಮಕ ಹೋರಾಟ ಹೂಡುವದು ನಿಮ್ಮ ಕೈಯಲ್ಲೇ ಇದೆ ಎಂದು ಶ್ರೀ ಶಂಕರಗೌಡರು ನಿಜಲಿಂಗಪ್ಪನವರಿಗೆ ತಿಳಿಸಿದರೆಂದು ವರದಿಯಾಗಿದೆ ಶ್ರೀ ನಿಜಲಿಂಗಪ್ಪನವರು ಚಿತ್ರದುರ್ಗಕ್ಕೆ ವಾಪಸು ತೆರಳಿದರು.

ಶ್ರೀ ಶಂಕರಗೌಡರಿಗೆ ಮುಂಬೈ ವಿಧಾನಸಭೆ ಸದಸ್ಯರ ಬೇಡಿಕೆ

ಕರ್ನಾಟಕ ಪ್ರಾಂತರಚನೆಗೆ ಈಗ ೨೦ ದಿನಗಳಿಂದ ಉಪವಾಸ ಕೈಗೊಂಡಿರುವ ಅದ್ರಗುಂಚಿ ಶ್ರೀ ಶಂಕರ ಗೌಡ ಪಾಟೀಲರಿಗೆ ಬೊಂಬಾಯಿ ವಿಧಾನಸಭೆ ಸದಸ್ಯರು ಉಪವಾಸ ನಿಲ್ಲಿಸಬೇಕೆಂದು ಬೇಡಿಕೊಂಡಿದ್ದಾರೆ ಮತ್ತು ಶ್ರೀ ಪಾಟೀಲರಿಗೆ ತಂತಿ ಳಿಸುಸಿ, ಕರ್ನಾಟಕ ಪ್ರಾಂತ ರಚನೆಗೆ ಬೇಕಾದ್ದನ್ನು ಮಾಡುವುದಾಗಿ ಭರವಸೆ ಇತ್ತಿದ್ದಾರೆ.

ಕರ್ನಾಟಕದಲ್ಲಿ ಪರಿಸ್ಥಿತಿ ಉಗ್ರವಾಗಿದೆ

ಶ್ರೀ ನಿಜಲಿಂಗಪ್ಪನವರಿಂದ ನಿಷ್ಠೂರವಾಗಿ ತಂತಿ

ಬಳ್ಳಾರಿ ತಾಲೂಕಿನ ವಿಷಯವಾಗಿಯೂ ಬಳ್ಳಾರಿ ಜಿಲ್ಲೆಯ ವಿಳಿಜನೆ ಸಂಬಂಧವಾಗಿಯೂ ಕರ್ನಾಟಕದಲ್ಲಿ ತೀವ್ರ ಆಸಮಾಧಾನ ಏರ್ಪಟ್ಟು ಪರಿಸ್ಥಿತಿ ಉಗ್ರರೂಪ ತಳೆದಿದೆ ಇದನ್ನು ಪರಿಶಿಲಿಸಲು ತಕ್ಷಣ ಕ್ರಮ ಕೈಗೊಳ್ಳಿರೆಂದು ಎಂಬುದಾಗಿ ಕೆ.ಪಿ.ಸಿ.ಸಿ. ಅಧ್ಯಕ್ಷರಿಗೆ ಶ್ರೀ ಎಸ್ ನಿಜಲಿಂಗಪ್ಪನವರು ತೀವ್ರತರದಿಂದ ಸಂಡಿತ್ ಸಹ್ರೂವರಿಗೂ ಕೇಂದ್ರದ ಇತರ ಮಂತ್ರಿಗಳಿಗೂ ತುರ್ತು ತಂತಿ ಕಳಿಸಿದ್ದಾರೆ

ಎಲ್ಲಾ ಕಾಂಗ್ರೆಸ್ಸಿಗೂ ತುಂಬಾ ವೇಗಾಟವಾದಿದೆ ಸಾರ್ವ ಜನಿಕರಿಗಂತೂ ಕಳವಳವಾದಿದೆ ಉಪವಾಸ ಮಾಡುತ್ತಿರುವ ಶ್ರೀ ಶಂಕರಗೌಡರ ಸ್ಥಿತಿ ವಿಶೇಷ ಚಿಂತಾಜನಕ ವಾಗಿದೆ ಈಪರಿಸ್ಥಿತಿಯನ್ನು ಇತರ ಪಕ್ಷಗಳವರು ತಮ್ಮ ರಾಜಕೀಯಕ್ಕೆ ದುರುಪಯೋಗಪಡಿಸಿಕೊಳ್ಳುತ್ತಿ ದ್ದಾರೆ ಹೀಗಿರುವುದೆಂದ ಬಳ್ಳಾರಿ ತಾಲ್ಲೂಕನ್ನು ಸಂಪೂರ್ಣವಾಗಿ ತಕ್ಷಣ ಮೈಸೂರು ಸಂಸ್ಥಾನಕ್ಕೆ ಸೇರಿಸಿ ಆಜ್ಞಪಿ ಜಿಲೆಗೆ ತಲ್ಲೂಕುಗಳಬಗ್ಗೆ ಗಡಿವಿವಾದಿತಿಯನ್ನೆ ರಚಿಸಿ. ಈ ಸಮಿತಿಯು ಆಕ್ಟೋಬರ್ ಒಂದರೊಳಗಾಗಿ ವರದಿ ವಿಷಯವಂತೆ ವಿಧಾಯಕಮಾಡಿ ಕರ್ನಾಟಕ ಪ್ರಾಂತರಚನೆ ಬಗ್ಗೆ ವರದಿ ಮಾಡಲು ಕಮಿಷನ್ನಿಂದ ನೆಮಿಸಿ ಎಂದೂ ಶ್ರೀ ನಿಜಲಿಂಗಪ್ಪನವರು ತಮ್ಮ ತಂತಿಯಲ್ಲಿ ಹೇಳಿದ್ದಾರೆ

ಹೋರಾಟ ಪ್ರಾರಂಭಿಸಬೇಕೆಂದುಕರೆ

ಹುಬ್ಬಳ್ಳಿ ಕಾಂಗ್ರೆಸ್ ಸಮಿತಿಯ ನಿರ್ಣಯ

ಕರ್ನಾಟಕ ಪ್ರಾಂತ ರಚನೆಯು ಇನ್ನು ಕ್ಷಣ ಮಾತ್ರವು ತಡವಾಗಬಾರದು ಕರ್ನಾಟಕ ಪ್ರಾಂತ ಹೋರಾಟ ಏನಿಲ್ಲದೆ ಈಡೇರಲಾರದೆಂಬ ಕಂಕೆ ಬಂದಿಲ್ಲ ಕರ್ನಾಟಕ ಕಾಂಗ್ರೆಸ್ ಸಮಿತಿಯು ತಕ್ಷಣ ಅಂಂಸಾತ್ಮಕ ಚಳುವಳಿಯನ್ನು ಘೋಷಿಸಬೇಕು ಎಂಬಾಗಿ ಹುಬ್ಬಳ್ಳಿ ತಾಲ್ಲೂಕು ಕಾಂಗ್ರೆಸ್ ಸಮಿತಿಯು ನಿರ್ಣಯಮಾಡಿದೆ

ಆಂಧ್ರ ರಾವಣರು

ಬಳ್ಳಾರಿ ಜಿಲ್ಲೆಯನ್ನು ಕೇಳುತ್ತಿರುವ ಆಂಧ್ರರ ಬೇಡಿಕೆಯು ಸುಂದರಿಯಾದ ಸೀತಾದೇವಿಯನ್ನು ಕೇಳಿದ ರಾವಣನ ರಾಕ್ಷಸಾಕಾಂಕ್ಷೆಯಂತೆ ಎಂಬುದಾಗಿ ಬಳ್ಳಾರಿಯ ಪ್ರಮುಖ ವರ್ತಕರಾದ ಶ್ರೀ ಕೊಳಗಲಹಳ್ಳಿ ಲಿಂಗಪ್ಪನವರು ಹೇಳಿಕೆ ಹೊರಡಿಸಿದ್ದಾರೆ ಸತ್ಯಾಂಶಗಳನ್ನು ಕೇಂದ್ರಸರ್ಕಾರ ಮನಗಾಣಬೇಕೆಂದೂ ಬಳ್ಳಾರಿಯಮೇಲೆ ಆಂಧ್ರರ ಆಳಿಕೆ ಹೊರಿಸಬಾರದೆಂದೂ ಅವರು ಒತ್ತಿ ನುಡಿದಿದ್ದಾರೆ.

ಶ್ರೀ ಮನ್ಮಹಾರಾಜ ರವರ ವಿದೇಶ ಪ್ರವಾಸ ರದ್ದು!

ಮುಂಬರುವ ಜೂನ್ನಲ್ಲಿ ಲಂಡನ್ನಲ್ಲಿ ನಡೆಯಲಿರುವ ಎರಡನೇ ವಿಶ್ವಪೀಸ್ ಕಾನ್ಫರೆನ್ಸಿಗೆ ತೀರ್ಥ ಧಾರಣಾ ಮಹೋತ್ಸವದಲ್ಲಿ ಭಾಗವಹಿಸಲು ತೀರಬೇಕಾಗಿದ್ದ ನೈಜಾಮ ತ್ರೈಮನ್ನವ್ಯಾಹಾಜರಿಯರು ತಮ್ಮ ಪ್ರವಾಸವನ್ನು ಈಗ ರದ್ದು ಗೊಳಿಸಿದ್ದಾರೆಂದು ತಿಳಿದುಬಂದಿದೆ ಮಹಾಪ್ರಭುಗಳು ತಮ್ಮ ಯೂರೋಪ್ ಮತ್ತು ದಕ್ಷಿಣಾ ಫ್ರಿಕಾ ಪ್ರವಾಸಗಳನ್ನು ಸಹಾ ರದ್ದುಗೊಳಿಸಿದ್ದಾರೆಂದು ತಿಳಿದುಬಂದಿದೆ

ಚಂದಾದಾರರಲ್ಲಿ ವಿನಂತಿ

ನಮ್ಮೀ ಪಂಚಾಚಾರ್ಯ ಪ್ರಭಾ ವಾರ ಪತ್ರಿಕೆಯ ವಾರ್ಷಿಕ ಚಂದಾ ೩ ರೂ ಗಳಿದ್ದು ೨ ವಿ ಳಾಸ ಇದೇ ವಿಳಾಸ ೧೯೩೨ ನೇ ಸಾಲಿನಿಂದ (೦-೭-೯) ಏಳು ಆಣೆ ಒಂಭತ್ತು ಕಾಸು ಆಗಿದೆ. ಆದ್ದರಿಂದ ನಾವು ವಿ ಪಿ ಮಾಡಿದರೆ ವಿ ಪಿ ಖರ್ಚು ೪೦ ಕಾಸು ಆಗುವದು ಈ ದುಡ್ಡು ನಮ್ಮ ಕೈ ಸೇರಬೇಕಾದರೆ ಆಯಾ ಪೋಸ್ಟಾಫೀಸಿಗೆ ಎರಡು ಆಣೆ ಹೆಚ್ಚಿಗೆ ಕೊಡಬೇಕಾಗುವದು ಹೀಗಾಗಿ ಪ್ರತಿಯೊಬ್ಬ ಚಂದಾದಾರರಿಗೆ ಹತ್ತು ಆಣೆ ಹೆಚ್ಚು ಖರ್ಚು ಬರುವದು ಆದ್ದರಿಂದ ಚಂದಾದಾರರ ಅವಧಿ ಮುಗಿಯುವ ೧ ವಾರ ಮುಂಚೆ ನಾವು ಪತ್ರಿಕೆಯಲ್ಲಿ ಸೂಚನೆಗಳನ್ನು ಕಳಿಸುತ್ತೇವೆ ಆ ಪ್ರಕಾರ ಕೂಡಲೆ ಮುಂರು ರೂಪಾಯಿ ಗಳನ್ನು ಮನಿಯಾರ್ಡರ ಮಾಡಿದರೆ ಎರಡೇ ಆಣೆಯಲ್ಲಿ ದುಡ್ಡು ನಮ್ಮ ಕೈಸೇರುವುದಲ್ಲದೆ ಯಾಪಕ್ಕಾರ ಪತ್ರಿಕೆಗೂ ನಿಮ್ಮ ಕೈಸೇರುತ್ತದೆ ದಯವಿಟ್ಟು ಎಲ್ಲರೂ ಮನಿಯಾರ್ಡರ ಮಾಡಬೇಕು ಮನಿಯಾರ್ಡರ ಕಳಿಸದೆ ಇದ್ದವರಿಗೆ ಪತ್ರಿಕೆಗಳನ್ನು ನಿಲ್ಲಿಸಿಬಿಡುತ್ತೇವೆ ಮನಿಯಾರ್ಡರ್ ಫಾರಮ್ಮಿನಲ್ಲಿ ಹೆಸರು ಊರೂ ತಮ್ಮ ರುಜು ನಂಬರನ್ನು ತೀಸಿದೇಕು ಹೀಗೆ ಮಾಡುವುದರಿಂದ ಚಂದಾದಾರರಿಗೆ ಅಳತಾಯವಾಗುವುದಲ್ಲದೆ ನಾವು ವಿ ಪಿ ಮಾಡಿ ನಾಣೀಕಾಯುವ ತೊಂದರೆಯೂ ತಪ್ಪುವ ತ್ತದೆ ಸರ್ವ ಮಹಾಶಯರು ನಾವು ಮಾಡಿಕೊಂಡ ವಿನಂತಿಯನ್ನು ಗಮುಕ್ಕೆ ತಂದು ೩ ರೂಪಾಯಿ ಚಂದಾ ಹಣವನ್ನು ಮನಿಯಾರ್ಡರ ರೂಪದಿಂದ ಸಲ್ಲಿಸುತ್ತೀ ರೆಂದು ನಂಬಿದ್ದೇವೆ

—ಸಂಪಾದಕರು

ಪ್ರಕಟಣ

ಗುರುವರ್ಗ ದರ್ಪಣ

ಈ ಗ್ರಂಥದಲ್ಲಿ (೧) ಪಂಚಪೀಠಗಳಪರಿಚಯ (೨) ಪಟ್ಟಚಂದ್ರಿಕಾವಿಗಳಪರಿಚಯ (೩) ಮಹಾಧಿಕಾರಿಗಳ ಫಲಿತಯ (೪) ಸಂಕೀರ್ಣಭಾಗ (ಇದರಲ್ಲಿ ವೀರ ಶೈವರಿಗೆ ಅಮೂಲ್ಯವಾದ ವಿಷಯಗಳಿವೆ) ಈ ಪ್ರಕಾರ (೪) ಭಾಗಗಳು ರಚಿಸಲ್ಪಟ್ಟಿವೆ ಇದನ್ನು ಸರ್ವರೂ ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಂಡು ಓದಿ ಧನ್ಯರಾಗಬೇಕೆಂದು ಆಶಿಸುತ್ತೇನೆ

ವಿಳಾಸ—

ಪುರಾಣಿಕಮಠದ ವಿರೂಪಾಕ್ಷಶಾಸ್ತ್ರಿಗಳು
ಪೋ॥ ಹಿರೇಹಡಗಲಿ
ಡಿ॥ ಬಳ್ಳಾರಿ

ಸ್ವೀಕಾರ

ಜೆಂಗಳೂರು ಟೌನ್ ವಾಸಿಗಳಾದ ವೈ ಸೂರು ಊಮು ಬತ್ತಿ ಫ್ಯಾಕ್ಟರಿ ಶ್ರೀ ಯಜಮಾನ್ ಕೆಂಚಪ್ಪನವರ ಸುಪುತ್ರ ವೈ॥ ಶ್ರೀಕಂಠಪ್ಪನಿಗೆ ಧಾರವಾಡ ಮುನಿಸಿಪಲ್ ಇಂಜಿನಿಯರ್ ಶ್ರೀ ಜಿ ಎಂ ಸೂಲಳ್ಳಿಯವರ ಸುಪುತ್ರಿ ಚಿಂ॥ ಸೌ॥ ಸುತೀಲಮ್ಮನವ್ವನ್ನು ವಧುವಿನ್ನಾಗಿ ಸ್ವೀಕರಿಸಿ ತಾ॥ ೪-೩-೩೩ ರಲ್ಲಿ ನಡೆದ ವಿವಾಹ ಸಮಯದಲ್ಲಿ ಪ್ರಭಾಪೋಷಕನಿಗಾಗಿ ಯಜಮಾನ್ ಕೆಂಚಪ್ಪನವರು ಸಮರ್ಪಿಸಿದ **5** ರೂ ಗಳು ಶ್ರೀ ನಂಜುಂಡಾರಾಧ್ಯರ ದ್ವಾರಾ ಸಲ್ಲಿರುತ್ತವೆ

ಧಾರವಾಡ ಡಿಗರಿಗ ಗ್ರಾಮ ವಾಸಿಗಳಾದ ಶ್ರೀ ವೀರಪ್ಪ ವೀರಭದ್ರಪ್ಪ ಬಳೆ ಗಾರ ಇವರು ತಮ್ಮ ಗೃಹದಲ್ಲಿ ತಾ॥ ೨೩-೩-೩೩ ನೇ ದಿನದ ಪಲಿ ಕಾಶೀಪೀಠ ಶಾಸ್ತ್ರಿಗಳವರ ಪುಣ್ಯತಿಥಿಯನ್ನು ತಾ॥ ೨೭-೩-೩೩ ನೇ ದಿವಸ ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತಿ ಯನ್ನೂ ವೇ॥ ಶ್ರೀ ಮಲ್ಲಯ್ಯನವರ ವೈದಿಕತ್ವದಿಂದ ವೈಭವಪೂರ್ವಕ ನಡೆಯಿಸಿದ ಸಮಯದಲ್ಲಿ ಪ್ರಭಾ ಪೋಷಕನಿಗಾಗಿ **4** ರೂ ಗಳನ್ನು ಸಮರ್ಪಿಸಿ ಕಳಿಸಿದ್ದಾರೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಸಂಜಾಜಾರ್ಯರು ಶ್ರೇಯ್ಯಮಂಗಲವನ್ನೈಯಲೆಂದು ಹಾರೈಸುತ್ತೇನೆ.

ನಾನಾವಿಧ ಬಣ್ಣಗಳಿಂದ ಮುದ್ರಿತವಾದ ಶ್ರೀಜಗದ್ಗುರು ರೇಣುಕಾಚಾರ್ಯರ ಲಿಂಗೋದ್ಭವ ಫೋಟೋ ಉಚಿತ!

ಸಚಿತ್ರ ರೇಣುಕವಿಜಯ ಹಾಗು ರೇಣುಕವಿಜಯ ಮಹಾಪುರಾಣ

ವೀರಶೈವ ಮತಾಮತಸ್ಥಾಪಕರಾದ ಶ್ರೀ ಜಗದ್ಗುರು ಪಂಚಾಚಾರ್ಯರಲ್ಲಿ ರೇಣುಕಾಚಾರ್ಯರು ಒಬ್ಬರು ಈ ಭಗವತ್ಪಾದರ ಲೀಲಾಮೋಧಕವಾದ **ಸಚಿತ್ರ ರೇಣುಕವಿಜಯವನ್ನೂ, ರೇಣುಕವಿಜಯಮಹಾಪುರಾಣವನ್ನೂ** ಸುಂದರ ಚಿತ್ರಗಳಿಂದ ರೀ ಪ್ರಿಂಟಾಗಿ ಶುತ್ತಮ ಬೈಂಡಿಸಿಂದ ಸಿದ್ಧವಾಗಿವೆ ಪ್ರತಿಯೊಬ್ಬ ವೀರಶೈವಧರ್ಮಾಭಿಮಾನಿಯು ತ ಪುಸ್ತಕಗಳನ್ನು ತರಿಸಿಕೊಂಡು ಓದಿ ಧರ್ಮದ ಮಹತ್ವನ್ನರಿತು ಆಚರಿಸಿ ಪವಿತ್ರಾತ್ಮಿಗಳಾಗಲೆಂಬ ಉದ್ದೇಶದಿಂದ ಕೆಳಗೆ ಪ್ರಕಟಿಸಿದಂತೆ ಈಗ ಪುಸ್ತಕಗಳ ಬೆಲೆಯನ್ನು ಕಡಿಮೆ ಮಾಡಿರುವುದಲ್ಲದೆ ಗ್ರಾಹಕರಿಗೆ ನಾನಾ ಬಣ್ಣಗಳಿಂದ ಮುದ್ರಿತವಾದ ರೇಣುಕಾಚಾರ್ಯರ ಫೋಟೋವನ್ನು (೧೪×೧೦) ಫ್ರೀಯಾಗಿ ಕಳಿಸಿಕೊಡುತ್ತೇವೆ. ಹೆಚ್ಚಿಗೆ ಪುಸ್ತಕ ತರಿಸುವವರು ಕಮಿಷನ್ ಅವೇಸ್ಟಿಸಿದರೆ ಫೋಟೋದ ಬದಲಾಗಿ ರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ಕೊಡುತ್ತೀವೆ ಟಪಾಲು ಖರ್ಚು ಪ್ರತ್ಯೇಕ.

ಸಚಿತ್ರ ರೇಣುಕವಿಜಯ (ಗದ್ಯ) ೧—೮—೦
ರೇಣುಕವಿಜಯ ಮಹಾಪುರಾಣ (ಭಾಮಿನಿ) ೨—೦—೦

ಮ್ಯಾನೇಜರ್—ಶ್ರೀ ಪಂಚಾಚಾರ್ಯ ವಿಲಿಕ್ಟ್ರಿಕ್ ಪ್ರೆಸ್, ಮೈಸೂರು.

ಸಿದ್ಧಾಂತಶಿಖಾಮಣಿ

ವೀರಶೈವಮತದಲ್ಲಿ ಜನ್ಮಧಾರಣಮಾಡಿದ ಪ್ರತಿಯೊಬ್ಬರಿಗೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣದಂತಿರುವುದು ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರು ರೇಣುಕಾಚಾರ್ಯರು ಜಗದ್ವಿಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು ವೀರಶೈವಮತದಲ್ಲಿ ಸದ್ಯಃ ದೊರೆಯತಕ್ಕ ಗ್ರಂಥಗಳಲ್ಲೆಲ್ಲ ಇದೇ ಅತ್ಯ ಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು ಈ ಗ್ರಂಥವು ಈಗ್ಗೆ ಸುಮಾರು ೩ಸಾವಿರ ವರ್ಷಗಳ ಪೂರ್ವದಲ್ಲಿ **ಶ್ರೀಶಿವಯೋಗಿಶಿವಾಚಾರ್ಯ**ರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿರುವದು ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭದಂತಿರುವುದರಿಂದ, ಇದಕ್ಕೆ ಇಂದಿನವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ ಆದರೆ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ ಈ ಕೊರತೆಯನ್ನು ದೂರವಾಡುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ ಈ ಗ್ರಂಥವನ್ನು ಓದಿನೋಡಿದಮೇಲೆ ಪಂಡಿತರ ವ್ಯಾಖ್ಯಾನದ ಮಹತ್ವವು ವಾಚಕರಿಗೆ ವೇದ್ಯವಾಗ ವುದು ವಾಚಕರ ಅನುಕೂಲ್ಯಕ್ಕಾಗಿ ಬಹು ಶ್ರಮವಹಿಸಿ ಸಿದ್ಧಗೊಳಿಸಿದ ವಿಷಯಾನುಕ್ರಮಣಿಕೆಯ ಶ್ಲೋಕ ಸೂಚ್ಯದ ನೆರವಿಯೂ ಈ ಗ್ರಂಥದಲ್ಲಿ ಕೂಡಿಸಲ್ಪಟ್ಟಿವೆ ಈ ಗ್ರಂಥವು ಒಟ್ಟು ೬೩೩ ಪುಟಗಳಿಂದ ಕೂಡಿದ್ದು ಸರ್ವಾಂಗ ಸುಂದರವಾಗಿ ಮುದ್ರಿಸಲ್ಪಟ್ಟಿದೆ ಈ ಗ್ರಂಥದಲ್ಲಿ ಸಂದರ್ಭೋಚಿತವಾಗಿ ಶ್ರೀಜಗದ್ಗುರುರೇಣುಕಾಚಾರ್ಯರ ಲೀಲಾತ್ಮಕವಾದ ಮನೋಹರಭಾವಚಿತ್ರಗಳ ಜೋಡಿಸಲ್ಪಟ್ಟಿದ್ದ ದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ ಕೈವಲ್ಯಕಲ್ಪತರುವಿನಂತಿರುವ ಈ ಅಮೂಲ್ಯಗ್ರಂಥವನ್ನು ವೀರಶೈವರೆಲ್ಲರೂ ಅವಶ್ಯವಾಗಿ ಓದಬೇಕು

ಬೆಲೆ ೩ ರೂಪಾಯಿ

ಮನೋಹರವಾದ ಫೋಟೋಗಳು.

ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು)ಸೈಜು ೧೪ × ೧೦ ಬೆಲೆ	೦—೬—೦
ಶ್ರೀಜಗದ್ಗುರು ಪಂಚಾಚಾರ್ಯರು ಪಂಚಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ	೦—೪—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ಒಕ್ಕೆ	೦—೪—೦
„ „ ಚಿಕ್ಕ ಸೈಜು ಬೆಲೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ	೦—೧—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೧—೬
ಶ್ರೀರೇಣುಕಾಚಾರ್ಯರು ಶ್ರೀಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರಲಿಂಗವನ್ನು ಅನುಗ್ರಹಿಸುವ ಫೋಟೋ	೦—೧—೬
ಶ್ರೀರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನೆಯಂತೆ ೩ ಕೋಟಿ ಶಿವಲಿಂಗಗಳನ್ನು ಸ್ಥಾಪಿಸುವ ಫೋಟೋ	೦—೧—೬
ಶ್ರೀ ಕಾಶೀ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ (ನಾನಾವಿಧಬಣ್ಣದ್ದು)	೦—೪—೦
ಶ್ರೀಕಾಶೀಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳು ಕಿರೀಟಧಾರಣಮಾಡುವ ಫೋಟೋ	೦—೧—೬
ಸದ್ಯಃ ಪೀಠಾರೋಹಣ ಮಾಡಿರುವ ಶ್ರೀಕಾಶೀಜಗದ್ಗುರು ವಿಶ್ವೇಶ್ವರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ	೦—೪—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಮರುಳಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೬
ಶ್ರೀಮದ್ರಂಭಾಪುರೀ ಪೀಠಾಧೀಶರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೧—೬
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ಒಕ್ಕೆ	೦—೩—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ಒಕ್ಕೆ	೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಸಿಂಹಾಸನದ ಅತ್ಯಂತ ಸುಂದರವಾದ ಫೋಟೋ ಒಕ್ಕೆ	೦—೧—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ಒಕ್ಕೆ	೦—೧—೬
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೧—೬
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶಿಷ್ಯಮನ್ನ ಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೨—೬
ಶ್ರೀಜಗದ್ಗುರುರಂಭಾಪುರೀ ಕ್ಷೇತ್ರದಲ್ಲಿ ಸ್ಥಾಪಿಸಲ್ಪಟ್ಟಿರುವ ಶಿಲಾಶಾಸನಗಳು	೦—೩—೦

ಸರ್ವೋತ್ತಮವಾದ ಮತಗ್ರಂಥಗಳು

ಕ್ಷೇತ್ರಸೂತ್ರಪಟ (೬ನೆಯ ಆವೃತ್ತಿ) — —	೧ ಆಣೆ
ಸಿದ್ಧಾಂತಸಾರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ) —	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೫ನೆಯ ಆವೃತ್ತಿ) —	೧ ಆಣೆ
ಶ್ರೀಜಗದ್ಗುರು ರೇಣುಕಾಚಾರ್ಯ ಕೀರ್ತನ —	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೧ನೆಯ ಆವೃತ್ತಿ) —	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ) —	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ — —	೨ ಆಣೆ
ಶಿವಶಕ್ತಿವಿಲಾಸ —	೨ ಆಣೆ
ವಿಜಯನಗರ ಸಾಮ್ರಾಜ್ಯವೂ ಶ್ರೀರೇಣುಕಾಚಾರ್ಯರೂ	೨ ಆಣೆ
ಬಿಲ್ವಮಾಹಾತ್ಮ್ಯ (೨ನೆಯ ಆವೃತ್ತಿ) —	೨ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೧೦ನೆಯ ಆವೃತ್ತಿ) —	೩ ಆಣೆ
ಜಸವಾದಿನಿಜತತ್ವದರ್ಪಣ (೫ನೆಯ ಆವೃತ್ತಿ) —	೩ ಆಣೆ
ಪಂಚಾಚಾರ್ಯಪ್ರಕಾಶ — —	೩ ಆಣೆ
ಪಂಚಾಚಾರ ಪ್ರಕಾಶಿಕಾ —	೩ ಆಣೆ
ಶ್ರೀಗುರುತತ್ವಪದಗಳು (೩ನೆಯ ಆವೃತ್ತಿ) —	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ) — —	೪ ಆಣೆ
ಲಿಂಗಧಾರಣವಿಧಿ — —	೪ ಆಣೆ
ವಿವಾಹವಿಧಿ (೪ನೆಯ ಆವೃತ್ತಿ) —	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ — —	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ — —	೪ ಆಣೆ
ವೈದಿಕವಾಙ್ಮಯರಹಸ್ಯ — —	೪ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೩ನೆಯ ಆವೃತ್ತಿ) —	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ) (೨ನೆಯ ಆವೃತ್ತಿ) —	೬ ಆಣೆ
ಸಿದ್ಧಾಂತಸಾರಮವಿಮರ್ಶತತ್ವಸ್ವೀಕರಣ (೩ನೆಯ ಆವೃತ್ತಿ) —	೬ ಆಣೆ
ವೀರಶೈವಾಂತ್ಯೇಷ್ಟಿ—ಶ್ರಾದ್ಧವಿಧಿ — —	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ- ಚಿಕ್ಕಸೈಜು) —	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ) — —	೮ ಆಣೆ
ವೀರಶೈವಮಹಾತ್ಮರು —	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ) —	೮ ಆಣೆ
ಆಗಮಪರಿಜ್ಞಾನ	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಶ್ರೀಜಗದ್ಗುರು ಶಿವಾನಂದವಿಜಯ	೮ ಆಣೆ
ಶ್ರೀಜಗದ್ಗುರು ವಿಶ್ವಕರ್ಣವಿಜಯ ನಕ್ಷತ್ರಮಾಲಿಕಾ	೮ ಆಣೆ
ಕನ್ನಡ ನ್ಯಾಯಶತಕಮ್	೮ ಆಣೆ
ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ)	೧೨ ಆಣೆ
ಶಿವಸೂತ್ರಸಿದ್ಧಾಂತದರ್ಪಣ	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ಪ್ರಾಚೀನತ್ವ	೧ ರೂ
ಮಾಹೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ)	೧ ರೂ
ವಿವೇಕಮುಕ್ತಾವಳಿ —	೧ ರೂ
ವಿಚಾರಸಾರಾವಳಿ	೧ ರೂ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದುದು ೨ನೆಯ ಆವೃತ್ತಿ)	೧। ರೂ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ —	೧॥ ರೂ
ಸಚಿತ್ರ ರೇಣುಕವಿಜಯ (೩ನೆಯ ಆವೃತ್ತಿ) —	೨ ರೂ
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ ಮಕುಟಾಗಮ ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಂತರಸಹಿತ) —	೨॥ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ) —	೩ ರೂ
ವೀರಶೈವರತ್ನ (೫ನೆಯ ಆವೃತ್ತಿ, ೩೦ ಮಹತ್ವದ ಫೋಟೋಗಳಿರುವುವು)	೩ ರೂ
A brief life-sketch of Pandit Sri Kashinatha Shastriji (*English*)	4 As
The Philosophical Aspect of Virasaivism (*English*)	8 As
Speeches by Pandit Shri Kashinatha Shastriji (*English*)	12 As
[illegible] (संस्कृत)	३ रु
[illegible] (मराठी) —	१ रु
[illegible] (वीरशैवभाष्य—संस्कृत)	१ रु.
[illegible] (संस्कृत) — —	२ आ

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್, ಪ್ರೆಸ್, ಮೈಸೂರು.

Edited Printed and Published by Brahmamathadhyaksha Sri Mahadevaiah at Sri Panchacharya Electric Press, Sayaji Rao Road, Mysore.

REGISTERED No. M ೨೨೬೬ ॥ ಶ್ರೀಜಗದ್ಗುರು ಪಂಚಾಚಾರ್ಯಪ್ರಸೀದಂತು ॥ REGISTERED No M 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾಸನಪಂಕಜಾತಜನಿತರ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಸಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಮೋಧಕರ್ । ಪಂಚಾಚಾರ್ಯಜಗದ್ಗುರೂತ್ತಮವರ್ ಪಾಲಿಪ್ಪುದೀಲೋಕಮಂ ॥

ಸಂಸ್ಥಾಪಕರು— ಹಾಗಲೂರು ಬೃಹನ್ಮಠಾಧ್ಯಕ್ಷರಾದ ನೇಮಿ ಪಂ॥ ಶ್ರೀ ಕಾಶೀನಾಥಶಾಸ್ತ್ರಿಗಳವರು.

ವಾರ್ಷಿಕ ಚಂದಾ ೩ ರೂ] ಸಂಪಾದಕರು— ಹಾಗಲೂರು ಬೃಹನ್ಮಠಾಧ್ಯಕ್ಷರಾದ ಶ್ರೀ ಮಹಾದೇವಯ್ಯನವರು [ಪ ಪಿ ಖರ್ಚು ಸೇರಿ ೩ ರೂ ೬ ಆ

ಸಂಪುಟ ೨೬] ಸೋಮವಾರ ತಾ॥ ೨೭ ನೇ ಏಪ್ರಿಲ್ ೧೯೫೩ [ಸಂಚಿಕೆ ೫೦

ಪತ್ರವ್ಯವಹಾರ

[ಜಾತ್ಯಾಧಾರು ಅಭಿಪ್ರಾಯ ಪಡುವ ಲೇಖನಗಳಿಗೆ ಪತ್ರಿಕಾಕರರು ಜವಾಬ್ದಾರರಲ್ಲ ಎಂಬ ವಿಷಯವನ್ನು ಪಕರರೂ ಲಕ್ಷ್ಯದಲ್ಲಿಡಬೇಕೆಂದು —ಸಂ]

ಶ್ರೀ ಜಗದ್ಗುರು ರಂಭಾಪುರಿ ವೀರ ಸಿಂಹಾಸನ ಮಹಾ ಸಂಸ್ಥಾನ ಮಠಕ್ಕೆ ಮೂವ್ಯ ಮಂತ್ರಿಗಳಾದ ಶ್ರೀಮಾನ್ ಸಿದ್ಧವೀರಪ್ಪನವರ ಆಗಮನ

ಶ್ರೀ ಜಗದ್ಗುರು ರಂಭಾಪುರಿ ವೀರ ಸಿಂಹಾಸನ ಮಹಾ ಸಂಸ್ಥಾನ ಮಠಕ್ಕೆ ಮೂವ್ಯ ಮಂತ್ರಿಗಳಾದ ಶ್ರೀಮಾನ್ ಸಿದ್ಧವೀರಪ್ಪನವರು, ಮತ್ತು ಚಿಕ್ಕಮಗಳೂರು ಜಿಲ್ಲಾ ಧಿಕಾರಿಗಳಾದ ಶ್ರೀ ಶಂಕರ ರಾವ್‌ರವರು ಡಿ ಪೊ ವೈ ಪ್ರೆ ವೀರಕ್ಷೇತ್ರ ಗೌಡರು ಎಕ್ಸಿಕ್ಯೂಟಿವ್ ಇಂಜನಿಯರ್ ಡಿ ಎಸ್ ಪಿ ಸಾಹೇಬರು, ಸಬ್ ಡಿವಿಜನ್ ಆಫೀಸ್ ಸಾಹೇಬರು ಎ ಎಸ್ ಪಿ ಸಾಹೇಬರು ಪಸ್ಟೇರೆ ಅಧಿಕಾರಿಗಳೊಡನೆ ಇಂದೆ ತಾ॥ ೧೯ ಭಾಮವಾರ ಪ್ರಾತಃ ಕಾಲ ೮। ಘಂಟೆಗೆ ಆಗಮಿಸಿದಾಗ್ಗೆ ಮಹಾ ಸಂಸ್ಥಾನದ ವೀರೇಶ್ವರ ಜೇವಸ್ಥಾನದ ಮುಂಭಾಗದ ಭವ್ಯ ಚಪ್ಪರದಲ್ಲಿ ಸಂಸ್ಥಾನದ ವಿಶೇಷರು ಮತ್ತು ಪಂಡಿತ ಮಂಡಲಿಯ ಪೆರು ಪುಷ್ಪಾಹಾರವನ್ನಿತ್ತು ಸ್ವಾಗತಿಸಿದರು ಅನಂತರ ಮಂತ್ರಿಗಳು ದೇವಸ್ಥಾನದ ಮುಂಭಾಗದ ಅವರಣದಲ್ಲಿ ಶ್ರೀ ೧೦೦೮ ಜಗದ್ಗುರು ವೀರ ಗಂಗಾಧರ ರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರ ದರ್ಶನವನ್ನು ಪಡೆದು ಸುಮಾರು ಮುಕ್ಕಾಲು ಘಂಟೆಯವರೆಗೆ ಜಗದ್ಗುರುಗಳವರ ದಿವ್ಯ ಸಾನಿಧ್ಯದಲ್ಲಿ ರಾಷ್ಟ್ರ ಮತ್ತು ಸಮಾಜ ಧರ್ಮದ ಬಾಂಧವ್ಯ ಹೊದಲಾದ ವಿಷಯಗಳ ಉಪದೇಶಾಮೃತವನ್ನು ಕೇಳಿ ಸಂತುಷ್ಟರಾಗಿ ಶ್ರೀ ಜಗದ್ಗುರುಗಳಿಂದ ಆಶೀರ್ವದಿಸಿದ ಪುಷ್ಪಾಹಾರಪ್ರಸಾದವನ್ನು ಸ್ವೀಕರಿಸಿ ಶ್ರೀ ರೇಣುಕಾಚಾರ್ಯರ ಹಾಗೂ ವೀರೇಶ್ವರ, ಧರ್ಮಶಾಲೆ, ನಂದೀಶ್ವರ ದರ್ಶನ ಮಹಾ ಮಂಗಳಾರತಿ ತೀರ್ಥ ಪ್ರಸಾದ ಪಡೆದುಕೊಂಡರು ಊಟಾಹಾರವನ್ನು ಸ್ವೀಕರಿಸಿದ ಹಿಂದೆ ಪತಕವಾಗಿ ಕಟ್ಟುಪಟ್ಟಿ ರುವ ಮಠದ ಕಾರ್ಯಾಲಯಗಳನ್ನು ನೋಡಿಸಿ ಸ್ಕೌಗೇರಿಗೆ ಪ್ರಯಾಣ ಮಾಡಿದರು

ಬಾಳೆಹೊನ್ನೂರು ಎಂ ಕೆ ರುದ್ರಪ್ಪಗೌಡ,
ತಾ॥ ೧೯-೪ ೫೩ ಪ್ರತ್ಯಕ್ಷದರ್ಶಿ

ವೀರಮಾಹೇಶ್ವರ ದೀಕ್ಷಾ ಮತ್ತು ವಿವಾಹ ಸಮಾರಂಭ ಮೆಟ್ರ

ಹೊಸಕೇಟೆ ತಾ॥ ಮೆಟ್ರಿನಲ್ಲಿ ತಾ॥ ೨೭ ೩ ೫೩ ನೇ ದಿನ ಹೆಜ್ ಎಂ ಮಹಾದೇವಯ್ಯನವರ ಸ್ವಗೃಹದಲ್ಲಿ ಶ್ರೀ॥ಷ॥ಬ್ರ॥ವಿದ್ಯಾಗುರುಗಳು ಮಹಾಂತಿಕ ಮಠದ ಪಟ್ಟಾಧ್ಯಕ್ಷರು ಕೊಟ್ಟೂರು ಶ್ರೀ॥ಷ ೬॥ ಭ ಶತಮುಜ ಗುರುಪದ ಪಟ್ಟಾಧ್ಯಕ್ಷರೂ ಹಾಗು ಜಜ್ಜಿಶಿ ಬ್ಯ ಮ ಚಿದಂಗೊಳ್ಳದ ಪಟ್ಟಾಧ್ಯಕ್ಷರೂ ಉತ್ಸಮಚಿತ್ತಗಳ ನೇತೃತ್ವದಲ್ಲಿ ಮೆಟ್ರಿ ಹಿರೇಮಾಳದ ರ ದ್ಯಾಧಾರ್ಯರ ಜೇಷ್ಠಪುತ್ರರಿಗೆ ಲಿಂಗದೀಕ್ಷೆ ಮತ್ತು ಕಂಡ ಕಾಯ ೧೪ ನೆರವೇರಿಸಲ್ಪಟ್ಟವು

ಉದಯಸ್ಮರಣೆಯ ದಲ್ಲಿ ಉಪಪಠಯಗಳು

೧ ಹೆಜ್ ಎಂ ಶಿವಲಿಂಗಯ್ಯನವರಮಗ ಪಡಾಸ್ಥರೆಯ್ಯ ನಿಗೂ ೨ ಹೆಜ್ ಎಂ ವಿಮಾಕ್ಷಯ್ಯನವರ ಮಗನಾದ ಕಲಿಗಣಾಧಿಪನಿಗೂ ೩ ಸೊಂಡೂರು ಹಿರೇಮಠದ ವಿದ್ಯಾ ಮಯ್ಯನವರ ಮಗ ಪಟ್ಟುಮಯ್ಯನಿಗೂ ೪ ಚಿಲಿಮಿಮಠ ಸೋಮಲಿಂಗಯ್ಯನವರ ಮಗ ರೇವಣಸಿದ್ದಯ್ಯನಿಗೂ ೫ ಸದರಿ ಮಠದ ತಿವಲಿಂಗಯ್ಯನವರ ಮಕ್ಕಳು ಪಡಾಸ್ಥರೆಯ್ಯ ನಿಗೂ ೬ ಚಿಕ್ಕರೆಯ್ಯನಿಗೂ ೭ ಹಂಪಾದೇವನ ಹಳ್ಳಿ ಮಠದ ಕಲ್ಲಯ್ಯನವರ ಮಗ ವಿರೂಪಾಕ್ಷಯ್ಯನಿಗೂ ೭ ವುಚ್ಚಲಕಾಂಡೆ ಈಶ್ವರಯ್ಯನವರ ಮಗ ಅಮರಯ್ಯನಿಗೂ ಇದೇ ದಿನ ಸಿಗುನಲಗದ್ದಲ್ಲಿ ಹೆಜ್ ಎಂ ಮಹಾದೇವಯ್ಯನವರ ಪುತ್ರಿ ಚಿ॥ ಕುಂ॥ ಸೌ॥ ದಾಕ್ಷಾಯಣಿದೇವಿಯನ್ನು ಕೊಟ್ಟೂರು ಚಿಗದೆರಿ ಜಾಜ್ಞಾಯಿ ವ ಶದ ಮಾಚಿದೇವಯ್ಯನವರ ಪುಶ್ರಕ್ತ ಮುಕ್ತಿನಾಥ ಕುಮಾರನಿಗೆ ಕೊಟ್ಟು ವಿವಾಹಕಾರ್ಯವು ಶಕ್ತಮವಾಗಿ ನಡೆದವು ಈ ದಿನ ಸಾಯಂಕಾಲ ಪಧೆಯಲ್ಲಿ ಶ್ರೀ॥ ಷ॥ ಬ್ರ॥ ಮಹಾಂತಿಕ ಮಠದ ಪಟ್ಟಾಧ್ಯಕ್ಷರು ಕುಮ್ಮ ಅನೃತ ವಾಣಿಯಿಂದ ಧರ್ಮಗಿಗೆ ಅನೆದಾಸಾಗುವಂತೆ ಪಾತಿವ್ರತ್ಯ ಮಜ್ಜಾಕ್ಷಿಯನ್ನು ಬೋಧಿಸಿ ದಂಪತಿಗಳಿಗೂ ನವಿ ಗಳಿಗೂ ಆಶೀರ್ವದಿಸಿ ಸಭಾಕಾರ್ಯ ಮುಗಿ ಸಲ್ಪಟ್ಟಿತು

ಪ್ರತ್ಯಕ್ಷದರ್ಶಿ
ರಜ್ಜೇಶ ಪಟ್ಟುಮಯ್ಯ ಪಂಚಾಯತಮೋಡರ್
ಕೈಸಿಕೆಂಟ ಮೆಟ್ರಿ

ಶ್ರೀ ಜಗದ್ಗುರು ಪಂಚಾಚಾರ್ಯಾಯ ಪ್ರಸೀದಂತು

ಪ್ರಕಟಣೆ

ಮೆರೆದ ಶ್ರೀ ಜಡೆಮರಾಧ್ಯಕ್ಷ ಗಂಗಾಧರಶಿವಾಚಾರ್ಯ ಮಹಾಸ್ವಾಮಿಗಳವರ ಪಟ್ಟಾಧಿಯೋಜನೆ—

ಶ್ರೀಮಠದ ರೈತರು ಭಕ್ತರು ವೃವಸಾಕ್ಷರತೆಯ ಮೊದಲಾಗಿ ಸಕಲರಿಗೂ ಈ ಮೂಲಕ ನಿರೂಪಿಸುವುದೇನೆಂದರೆ ?

ತಾ॥ ೧೬ ೭ ೪೧ ರಲ್ಲಿ ಶ್ರೀ ಸಿದ್ದಪ್ಪ ಭೀರಪ್ಪ ಪೆಟ್ಟಿಕೂಡ ಇವರನ್ನು ಒಟ್ಟು ಮತ್ತೆ ಯಾರಿಂದಲಾಗಿ ಇವರ ವಿದ್ಯಾಭ್ಯಾಸದಲ್ಲಿದ್ದ ಕಾರಣ ನೇಮಿಸಿಕೊಂಡುದಾಗಿತ್ತು

ತಾ॥ ೧೩ ೩ ೫೩ ರಂದ ಅವರು ತಮ್ಮ ಕಾರ್ಯ ಕ್ಷೇತ್ರದಿಂದ ಮುಕ್ತರಾಗಲು ಸ್ವಾಧೀಯಲ್ಲಿ ಪ್ರಾರ್ಥಿಸಿ ಕೊಂಡದ್ದರಿಂದ ಅವರನ್ನು ಒಟ್ಟು ಮಾಡಿಕೊಳ್ಳಲಾಗಿ ಇವರ ವೈಯಕ್ತಿಕ ಕೆಲಸದಿಂದ ನಿವೃತ್ತಿಗೊಳಿಸಲಾಗಿದೆ ಮಠದ ಪ್ರತಿಯೊಂದು ಕಾರ್ಯ ವಿಭಾಗದವರನು ಅವರ ಕೊತೆಗೆ ಮಠದ ಸಂಬಂಧವಾಗಿ ತನ್ನು ಮುಂದೆ ಯಾವ ವೈಯಕ್ತಿಕ ಸಹಿಯನ್ನು ಕೂಡದು ಒಂದುವೇಳೆ ಹಾಗೆ ಮಾಡಿದ್ದಾದರೆ ಯಾವ ದಕ್ಕೂ ಇವರು ಹೊಣೆಗಾರರಲ್ಲವೆಂಬ ವಿಷಯವನ್ನು ಈ ಪ್ರಕಟಣೆಯ ಮುಖಾಂತರ ತಿಳಿಸಲಾಗಿದೆ

ಇನ್ನು ಮೇಲೆ ಶ್ರೀ ಮಠದ ವ್ಯವಹಾರಗಳೆಲ್ಲವೂ ನೇರವಾಗಿ ನನ್ನ ಅಥವಾ ನಾವು ನಿಯಮಿಸಲಾಗುವ ವ್ಯಕ್ತಿ ಮುಖಾಂತರ ಸಾಗಿಸಲ್ಪಡತವು

ಈ ವಿಷಯ ವನ್ನು ಸರ್ವರೂ ಗಮನದಲ್ಲಿಟ್ಟು ವರ್ತಿಸುವೆರಾಗಿ ಕೋರುತ್ತೇವೆ

ತಾ॥ ೧೪ ೪ ೫೩ ಮುಖ್ಯಂ—ಮರಳ
ತಾ॥ ನವಲಗುಂದ ಜಲ್ಲಾ ಧಾರವಾಡ

ಗಡಿ ನಿರ್ಧಾರ ಸಮಿತಿ ನೇಮಕ

ಬಳ್ಳಾರಿ ತಾಲ್ಲೂಕಿನ ಕಪ್ಪಡಿ ಮತ್ತು ತೆಲುಗು ಪ್ರದೇಶಗಳ ಗಡಿಗಳನ್ನು ನಿರ್ಧರಿಸಲು ಗಡಿನಿರ್ಧಾರ ಸಮಿತಿ ಯೊಂದನ್ನು ನೇಮಿಸಲು ಇನ್ನು ಕೆಲವಿದಿನ ತಡವಾಗಬ ಹುದೆಂದು ತೆಳಲಾಗಿದೆ ಅಧವಾನಿ ರಾಯಮಗ್ಗ, ಆ ಜಿಲ್ಲಾ ತಾಲ್ಲೂಕುಗಳ ವಿಚಾರವನ್ನು ಸಹ ಆ ಸಮಿತಿಗೇ ಒಪ್ಪಿಸಬೇಕೆ ದು ಮೊದಲು ಆಕ್ಷೇಪಿಸಲಾಗಿತ್ತು ಹಾಗೆ ಮಾಡುವುದು ಮಜಾರ್ಪ್ರಧಾನರು ಮಾರ್ಚ ೨೫ ರಂದು ಪಾರ್ಲಿಮೆಂಟಲ್ಲಿ ಕೊಟ್ಟ ಹೇಳಿಕೆಗೆ ವಿರುದ್ಧ ವಾಗುವ ದೇ ಅಲ್ಲದೆ ಗಡಿಜಿಲ್ಲರು ಇನ್ನೂ ಹೆಚ್ಚು ಪ್ರೇತ್ಸಾಹಿಸಲು ಉತ್ಸೇಜನವಿತ್ತಂತೆ ಆಗುವುದೆಂದೂ ಅಭಿಪ್ರಾಯಪಡ ಲಾಗಿದೆ ಈ ಒಗ್ಗೆ ಕೇಂದ್ರತ್ವ ಮಜ್ಜಾಸ್ ಸರಕಾರದ ಅಭಿಪ್ರಾಯವನ್ನು ಪಡೆದುತಿಳಿಸಿದೆ-ದು ಪಾರ್ಲಿಮೆಂಟ್ರಿಗಳಲ್ಲಿ ಬಂಡಿಸಲಾಗಿದೆ ಗಡಿನಿರ್ಧಾರ ಸಮಿತಿ (ವಿಶಪಡಿಕೃತ ಸಮಿತಿ) ಮುಖ್ಯ ಕೆಲಸ ಬಳ್ಳಾರಿ ತಾಲ್ಲೂಕಿನಲ್ಲಿ ಗಡಿ ಗಳನ್ನು ನಿರ್ಧರಿಸುವುದು ಮುಂದಿನ ಮೇ ಒಳಗಾಗಿ ಸಮಿತಿ ವರದಿ ಪಟ್ಟಸಬೇಕೆಂದು ಸೂಚನೆ ಕೊಡಲಾಗಿದೆ ವೆಂದು ತಿಳಿದುಬಂದಿದೆ

ಸ್ವೀಕಾರ

ರಾಯಚೂರು ತಿ॥ ಲಿಂಗಾಪುರಿ ಸಾವಿರದೇವರು ಸಂಸ್ಥಾನಮಠದಲ್ಲಿ ತಾ॥ ೪ ೪ ೫೩ ನೇ ದಿನ ನಡೆದ ಶ್ರೀ ಮಹಾಂತೇಶ್ವರ ರಥೋತ್ಸವ ಸಮಯದಲ್ಲಿ ಪ್ರಭಾ ಪ್ರಚಾರಕ್ಕಾಗಿ ಸಮರ್ಪಿಸಿದ ೨ ರು- ಗಳು ಮಠದ ಶ್ರೀಗಳ ದ್ವಾರಾ ಕಲ್ಪಿಸಲ್ಪಟ್ಟವು.

ಹೊಸಕೇಟೆ ತಾಲೂಕು ಮೆಟ್ರಿ ಶ್ರೀ ಹೆಜ್ ಎಂ ಮಹಾದೇವಯ್ಯನವರ ಸ್ವಗೃಹದಲ್ಲಿ ತಾ॥ ೨೭ ೩-೫೩ ರಲ್ಲಿ ನೆರವೇರಿದ ವಿವಾಹ ಉಪನಯನ ಸಮಾರಂಭದಲ್ಲಿ ಪ್ರಭಾಪ್ರಚಾರಕ್ಕಾಗಿ ನೆರೆದುಸಿದ ೨ರು- ಗಳು ಶ್ರೀ ಸಿದ್ಧ ಸೊಳ್ಳದ ಸಿದ್ಧಪ್ಪನವರ ದ್ವಾರಾ ಕಲ್ಪಿಸಲ್ಪಟ್ಟವು

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯ ಮಂಗಲವನ್ನೀಯಲೆಂದು ಪ್ರಾರ್ಥಿಸುವೆ

ಸಂಚಾಚಾರ್ಯಪ್ರಭಾ
೧೯೫೩ ನೆಯ ಏಪ್ರಿಲ್ ಶಾ ೨೭ ನೇ ಸೋಮವಾರ

ಸಂಪದ್ವಿನಿಯೋಗ

[ಕಳೆದ ಸಂಚಿಕೆಯಿಂದ ಮುಂದುವರೆದುದು.]

ಗ್ರೀಕ್ ದೇಶದ ಒಬ್ಬ ಮಹಾರಾಜನು ತಪ್ಪುಕ್ಷಮೆ ಯನ್ನು ಕೃಪೆ ಪಡೆದ ಪ್ರಸಂಚದಲ್ಲಿ ತನಗೆ ಸಮಾನ ರಾದ ಶ್ರೀಮಂತರೇ ಇಲ್ಲವೆನಿಸಿಕೊಳ್ಳಬೇಕೆಂಬ ದ ರಾಶೆ ಯಿಂದಿಡೀರಾಷ್ಟ್ರವನ್ನು ಸಿರಿಸಂಪತ್ತಿನಲ್ಲಿ ಮುಳುಗಿಸಿ ತೀರ್ಮಾನ ಮಾಡಿ ದೇವರಷ್ಟು ಪ್ರತ್ಯಕ್ಷಮಾಡಿಕೊಂಡು ತಾನು ಕೈಯಿಂದೇನನ್ನು ಮುಟ್ಟುವನೋ ಅವೆಲ್ಲವೂ ಭಂಗಾ ರವೇ ಆಗಿಹೋಗುವಂತೆ ದೇವರಿಂದ ವರವನ್ನು ಪಡೆ ದನು ಮುಟ್ಟಿದ ಪದಾರ್ಥವೆಲ್ಲವೂ ಭಂಗಾರವಾಗುವು ದೆಂಬ ಸಂತೋಷದಿಂದ ತನ್ನ ಅರಮನೆಗೆ ಒಂದು ಮೇಲಕ್ಕೆ ಹತ್ತುವಾಗ ಹಂತಗಳ ಎರಡು ಪಾರ್ಶ್ವಗಳಲ್ಲಿ ನಿಲ್ಲಿಸಿದ್ದ ಕಟ್ಟಣದ ಸಲಾಕೆಗಳ ಮೇಲೆ ಕೈಯಿಡಲು ಎರಡು ಸಲಾಕೆಗಳೂ ಈತನ ಹಸ್ತಸ್ಪರ್ಶದಿಂದ ಜಂಗಾ ರದ ಸಲಾಕೆಗಳಾದವು ಅತನ ಸಂತೋಷಕ್ಕೆ ಪಾರವೇ ಇಲ್ಲದಂತಾಯಿತು ಮೆಸಡಿಯುಮೇಲೆ ಅಲಂಕರಿಸಿದ್ದ ಕಟ್ಟಣದ ಮಂಚದನೇಲೆ ಕೈಯಿಟ್ಟು ಉಳಿತುಕೊಳ್ಳು ವುದರೊಳಗಾಗಿ ಆ ಮಂಚಕ್ಕೆಲ್ಲವೂ ಜಂಗಾರವಾಗಿಹೋ ಯಿತು ತಾನು ವಿಹರಿಸುವ ಉದ್ಯಾನವನಕ್ಕೆ ಹೋಗಿ ಒಂದು ಗಿಳಿಬಿಯ ಹೂವನ್ನು ಕೈಯಲ್ಲಿ ತೆಗೆದು ಕೊಂಡನು ಅದು ಸಹ ಅತನ ಹಸ್ತಸ್ಪರ್ಶದಿಂದ ಭಂಗಾರವಾಯಿತು ನೋಡುವುದಕ್ಕೆ ಮನೋಹರವಾ ದರೂ ಮೊದಲಿದ್ದ ವಾಸನೆಯಿಲ್ಲವೂ ಹೊರಟುಹೋಗಿ ನಿಗಂಧಕಸುಮವಾಗಿ ಪರಿಣಮಿಸಿದುದರಿಂದ ಸ್ವಲ್ಪ ಖೇದವೆನಿಸಿತು ಅತ್ಯರ್ಥಲಿಯೇ ಅತನಿಗೆ ಒಹಳವಾಗಿ ಹಸಿವು ಉಂಟಾಗಿ ಸಮಾಪಪಡಲ್ಪಿಗಿನ ತನ್ನ ಭುಕ್ತಿಯನ್ನು ಕುರಿತು ಸೇವಕರಿಗೆ ಫಲಹಾರವನ್ನು ತರಹೇಳದನು ತನ್ನ ದುರಿಗೆ ತಂದಿಟ್ಟ ಫಲಹಾರವನ್ನು ಕೈಯಂದ ಮುಟ್ಟಿದ ಕ್ಷಣದಲ್ಲಿಯೇ ಆ ಫಲಹಾರಗಳೆಲ್ಲವೂ ಚಿನ್ನದ ಗಟ್ಟುಗಳಾದವು ಸ್ವಲ್ಪ ನೀರನ್ನಾದರೂ ಕುಡಿದು ಹಸಿ ವನ್ನು ನೀಗಿಸಿಕೊಳ್ಳೋಣವೆಂದು ನೀರಿನ ತಂಬಿಗೆಯನ್ನು ಕೈಗೆ ತೆಗೆದುಕೊಳ್ಳಲಾಗಿ ಆ ತಂಬಿಗೆಯೂ ಮತ್ತು ನೀರೂ ಚಿನ್ನದ ಮುದ್ದೆಯಾದವು ಅನಂತರ ತನ್ನ ಸಮಾಸಪಲಿದ್ದ ಪ್ರೀಮಪುತ್ರಿಯನ್ನಾದರೂ ಅಲಿಂಗಿಸಿ ಸ್ವಲ್ಪ ಸಂತೋಷಪೊಳ್ಳೋಣವೆಂದು ಪುತ್ರಿಯನ್ನಾಲಿಂ ಗಿಸಹೋದಲು ಅಗಲೆ ಅಕೆಯು ಶರೀರವೆಲ್ಲಾ ಭಂಗಾ ರದ ಮೂರ್ತಿಯಾಗಿ ಪರಿಣಮಿಸಿತು ಹೀಗೆ ಮುಟ್ಟಿದುದೆಲ್ಲವೂ ಚಿನ್ನವಾದುದರಿಂದ ಹೊಟ್ಟೆಗೆ ಅನ್ನೋದಕವೂ ಸಹ ಇಲ್ಲದಂತಾಗಿ ಬಹಳವಾಗಿ ಪರಿತಪಿಸುತ್ತ ದೇವರಿಗೆ ಮೊರೆಹೊಕ್ಕು ತನ್ನ ಕಕೃವನ್ನು ಪರಿಹರಿಸಿಕೊಂಡನು

ಆದುದರಿಂದ ತನ್ನಲ್ಲಿ ದ್ರವ್ಯವು ಎಷ್ಟು ಹೆಚ್ಚಿದ್ದರೂ ವಿನಿಯೋಗ ಕೌಶಲವನ್ನು ಪಡೆಯದಿದ್ದರೆ ಅದೇ ದ್ರವ್ಯವು ತನಗೆ ದುಃಖವನ್ನುಂಟುಮಾಡದಿರಲಾರದೆಂಬುದಕ್ಕೆ ಈ ಕಥೆಯು ಒಂದು ದೊಡ್ಡ ಉದಾಹರಣೆಯಾಗಿದೆ ಆದುದ ರಿಂದ ದ್ರವ್ಯವು ಗಳಿಸುವಾಗ ದುಃಖವನ್ನುಂಟುಮಾಡು ತ್ತದೆ ಗಳಿಸಿದ ದ್ರವ್ಯವು ಕಳೆದುಹೋದರೆ ಸಂತಾಪ ವನ್ನು ಂಟುಮಾಡುತ್ತದೆ ಆ ದ್ರವ್ಯವು ಹಿಟ್ಟಕ್ಕಿಹೋದ ಹಾಗೆಲ್ಲಾ ಮನುಷ್ಯರನ್ನು ಕರ್ತವ್ಯ ಕರ್ತವ್ಯವಿಮುಖರ ನ್ನಾಗಿ ನೂಡುತ್ತದೆ ಆದುದರಿಂದ ಅದ್ಯಂತದಲ್ಲಿಯೂ ದ್ರವ್ಯವಿಂದ ಸುಖವೆಂಬುದು ಎನ್ನುಮಾತ್ರವೂ ಇಲ್ಲ ವೆಂದು ನೀತಿಶಾಸ್ತ್ರವು ಹೇಳುತ್ತಾನೆ ಇದನ್ನೆಲ್ಲಾ ಪರ್ಯಾ ಲೋಚಿಸಿದರೆ ವಿಶ್ವಸೃಷ್ಟಿಯೇನೋ ಸೌಖ್ಯಸಾಧವವಾಗಿದ್ದರೂ ಜೀವಿತದ ಮುಖ್ಯ ಧ್ಯೇಯವೆಂದು ತಿಳಿಯುವುದು ವಿವೇಕಿಗಳ ಕರ್ತವ್ಯವಲ್ಲ. ದ್ರವ್ಯವನ್ನಾರ್ಜಿಸಿ ಅದರಲ್ಲಿ ಕೆಲವು ಭಾಗವನ್ನು ಲೋಕಕಲ್ಯಾಣ ಕಾರ್ಯಕ್ಕೂ ಕೆಲ ವನ್ನು ತನ್ನ ಸುಖಾನುಭವಕ್ಕೂ ಉಪಯೋಗಿಸುತ್ತ ಲೋಕದಲ್ಲಿ ಪ್ರತಿಷ್ಠೆಯನ್ನು ಪಡೆಯುವವರ ದ್ವಾರಾ ಭಗವಂತನ ಪ್ರೇಮಕ್ಕೆ ಪಾತ್ರರಾಗುವಂತೆ ಮಾಡಿಕೊಳ್ಳು ವದೇ ಸಂಪತ್ತಿನ ಫಲವಾಗಿದೆ ಅದಿಲ್ಲದೆ ತನ್ನ ಹೊಟ್ಟೆ ಗೂ ಒಟ್ಟಿಗೂ ಭಗವತ್ಸಂಬಂಧಿಯಾದ ಪುಣ್ಯಕಾರ್ಯ ಗಳಗೂ ಯಾವುದೊಂದಕ್ಕೂ ಉಪಯೋಗಿಸದೆ ಹಾಗ ಲಿರುಳೂ ಕೇವಲ ಸಂಗ್ರಹದಲ್ಲಿ ಮಾತ್ರ ಲೋಲರಾಗಿ ದ್ದರೆ ಅಂಥವನು ಮದ್ಯಪಾನದ ಅಧ್ಯಾಸವನ್ನು ಮಾಡಿ ದವನು ಎನ್ನು ಮದ್ಯನನ್ನು ಪಾನಮಾಡದೆಯೂ ಸಹ ಪುನಃ ಪಾನಾಸಕ್ತನೇ ಹೆಚ್ಚುತ್ತ ಆ ಮಿತಿಮೀರಿದ ಮದ್ಯಪಾನದಿಂದ ಬುದ್ಧಿವಿನೇಕಾದಿಗಳು ಹಾಳಾಗಿಹೋಗಿ ದುಃಖಕ್ಕೀಡಾಗುವಂತೆ ದ್ರವ್ಯದ ಅಮಲಿನಲ್ಲಿರುವ ಲೋ ಭಿಯು ಸಹ ಒಂದು ದಿವಸ ಲಕ್ಷ್ಯೇಕಟಾಕ್ಷದಿಂದ ದೂರ ನಾಗಿ ಕಷ್ಟಕ್ಕೀಡಾಗದಿರಲಾರನು ಆದುದರಿಂದ ತಾವು ದ್ರವ್ಯವನ್ನಾರ್ಜಿಸುವ ಶಕ್ತಿಯನ್ನು ಪಡೆದಿದ್ದರೂ ಅರ್ಜಿ ಸಿದ ದ್ರವ್ಯವನ್ನು ನಿಯಮಾನುಸಾರ ಸದ್ವಿನಿಯೋಗವನ್ನು ಪಡೆಯುವುದನ್ನು ನಿಜವಾಗಿಯೂ ಮೋಸಹೋಗುವನು

ಕನ್ನಡನಾಡಿನ ಜ್ಯೋತಿ ಶ್ರೀ ಪಾಟೀಲ ಶಂಕರಗೌಡರ ಉಪವಾಸದ ಮುಕ್ತಾಯ

ಕನ್ನಡ ನಾಡು ನುಡಿಯ ಸೇವೆಗಾಗಿ ಕ್ರಮಿಕ ಕ್ರಿಯವ ಹುಬ್ಬಳ್ಳಿ ತಾಲೂಕು ಆದರಗುಂಜಿ ಗ್ರಾಮದ ಶ್ರೀ ಪಾಟೀಲ ಶಂಕರಗೌಡರು ಹುಬ್ಬಳ್ಳಿ ತಾಲೂಕು ಕಾಂಗ್ರೆಸ್ ಕಮಿಟಿ ಅಧ್ಯಕ್ಷರಾಗಿದ್ದು ಎಂದಿನಿಂದಲೂ ಕಾಂಗ್ರೆಸ್ಸಿಗೆ ಸೇವಾಸಕ್ತಿಯನ್ನುಂಟುಮಾಡಿ ಕಾಂಗ್ರೇಸ ನಿಷ್ಠರೂ ದೇಶಭಕ್ತರೂ ಭಾಷಾಪ್ರಾಂತಗಳೂ ಆದ ಇವರು ನೆರೆಯ ಆಂಧ್ರಪ್ರಾಂತ ರಚನೆಯ ಘೋಷಣೆಯನ್ನು ಕೇಳಿದೊಡನೆ ಭಾಷಾವಾರು ಪ್ರಾಂತ ರಚನೆಯಲ್ಲಿ ಮುಖ್ಯಳಾದ ಶ್ರೀಮತಿ ಇಂದಿರಾಗಾಂಧಿ ಮೊದಲಾದ ರಾಷ್ಟ್ರದ ಹಿರಿಯರಿಂದ ಹಕ್ಕು ಪಡೆದ ಕರ್ನಾಟಕ ಪ್ರಾಂತ ರಚನೆಯು ಈ ಸಮಯದಲ್ಲಿ ಏಕೆ ಆಗಬಾರದು ಎಂಬ ಬುದ್ಧಿಯು ಇವರಿಗೆ ಜಂಗುರಿಸಿತು ಈ ವರೆಗೆ ಅಲ್ಲಲ್ಲಿ ನಡೆದ ಸಭೆಗಳಲ್ಲಿ ಕರ್ನಾಟಕ ಪ್ರಾಂತ ರಚನೆಗೆ ದೀಕ್ಷಾಮುಖಂಡ ರಿಂದ ಪ್ರಯತ್ನಾನವು ದೊರೆಯದಿರುದನ್ನು ಮೊದಲೇ ಅರಿತ ಇವರು ಉ.ದ್ಯ ಪ್ರಾಂತ ರಚನೆಗಾಗಿ ಆಮರಣಾಂತ ಉಪವಾಸಕ್ಕೆದ ಕೈಟ್ಟಿ ಶ್ರೀ ಪೊಟ್ಟಿ ರಾಮುಲುವರೆ-ಕೆ ನಾಷ್ಟಾದರೂ ಕರ್ನಾಟಕ ಪ್ರಾಂತ ರಚನೆಗಾಗಿ ಆಮರಣಾಂತ ಉಪವಾಸವನ್ನು ಮಾಡಲೇ ಬೇಕೆಂದು ಸಂಕಲ್ಪಿಸಿ ಇದೇ ಮಾರ್ಚ ೯೦೦ಗ ಕೊಪ್ಪಳ ನಾರದಲ್ಲಿ ಆರಂಭಿಸಿದರು "ಪಡೆಯಬೇಕು ಇಲ್ಲವೆ ಮಡಿಯಬೇಕೆಂಬ" ವೀರಪ್ರತಿಜ್ಞೆಯನ್ನು ಸಂಕಲ್ಪಿಸಿ ಕೊಂಡ ಇವರು ಅನ್ನಸೇವನೆಯನ್ನು ನಿಲ್ಲಿಸಿದರು ಕರ್ನಾಟಕ ಸ್ಥಾಂತ ರಚನೆಯ ಆಮರಕ್ತರಾದ ಇವರು ಭಗವಂತನನ್ನು ಸ್ಮರಿಸುತ್ತ ಉಪವಾಸದಲ್ಲಿಯೇ ೨೨ ದಿವಸಗಳನ್ನು ಕಳೆದರು ದೇಹದ ಸ್ಥಿತಿಯು ಚಿಂತಾಜನಕ ವಾಯಿತು ಆದರೂ ಹೊಸ್ಮುಖಿಯಾಗಿದ್ದರು ನೋಡಿ ದವರಿಗೆ ತುಂಬಾ ವ್ಯಸನವೆನಿಸಿತು ಕನ್ನಡ ನಾಡಿಗಾ ಇವರಿಗು ಒಲಿಕೆಯಿಟ್ಟು ನಾವು ಏಕೆ ಬಾಳಬೇಕೆಂಬ ವಿಷಯು ಪಸ್ಥಿತಿಯು ನಾಲ್ಕೂ ದಿಕ್ಕಿಗೆ ಹಬ್ಬಿತು ದುಃವಿದ ೧೦೦ನೆಯ ದಿವಸದಾಗಿ ಸಾವಿರಾರು ಎತ್ತಿನ ಗಾಡಿ ಗಳನ್ನು ಸೂಡಿಕೊಂಡು ಬಂದ ಮೂವತ್ತು ಸಾವಿರ ಜನರು ಹುಬ್ಬಳ್ಳಿಯನ್ನು ಸೇರಿ "ಶಂಕರಗೌಡರ ಉಪವಾಸವನ್ನು ನಿಲ್ಲಿಸಿ" ಎಂಬ ಕೂಗನ್ನೆಬ್ಬಿಸಿದರು ಪೋಲೀಸರು ಬಂದರು ಪರಿಸ್ಥಿತಿಯು ಉಗ್ರವಾಗಿ ಗೋಳೇಬಾರು ಸಹ ನಡೆಯಿತು ಕೆ ಪಿ ಸಿ ಸಿ ಅಧ್ಯಕ್ಷ ಶ್ರೀ ನಿಜಲಿಂಗಪ್ಪನವರು ಕರ್ನಾಟಕ ಪ್ರಾಂತ ರಚನೆಗಾಗಿ ಶ್ರೀ ಶಂಕರಗೌಡರಿಗೆ ಭರವಸೆ ಕೊಟ್ಟು ಅವರ ಉಪವಾಸ ವ್ರತವನ್ನು ನಿಲ್ಲಿಸಿ ಅವರ ಕಡೆಯಿಂದ ಪತ್ರವನ್ನು ತಂದು ಜನಸಂದಣಿಗೆ ಓದಿ ಹೇಳಿದ್ದರಿಂದ ಇವರ ಉಪವಾಸ ವ್ರತವನ್ನು ಕೋಟ್ಯಾಂತರ ಕನ್ನಡಿಗರನ್ನು ಎಚ್ಚರಗೊಳಿಸಿ ಮಾರ್ಗದರ್ಶಕವಾಯಿತಲ್ಲದೆ ಇವರ ಹೆಸರು ಜ್ಯೋತಿಯಂತೆ ಪ್ರಕಾಶಮಾನವಾಯತು ಇಂಥ ಕಾಂಗ್ರೆಸ್ಸಿನವರಿಂದಲೇ ರಾಷ್ಟ್ರೋದ್ಧಾರವು ರಾಷ್ಟ್ರೋ ದ್ಧಾರಕ್ಕಾಗಿ ಪ್ರಾಣವನ್ನು ಅರ್ಪಿಸಲು ಸಿದ್ಧರಾದ ಇವರ ಬಯಕೆಯು ಶೀಘ್ರದಲ್ಲಿಯೇ ಈಡೇರಿ ಕನ್ನಡಿಗರಿಗೆ ಕೃಪ್ತಿಯಾಗಲೆಂದೂ ಶ್ರೀ ಪಾಟೀಲರಿಗೆ ಪರಿಶಿವು ಚಿರಾಯುರಾರೋಗ್ಯವನ್ನುಂಟುಮಾಡಲೆಂದೂ ಹಾರೈಸು ತ್ತೇವೆ.

ವರ್ತಮಾನಸಂಗ್ರಹ

೧೯೫೩ನೇ ಅಕ್ಟೋಬರ್ ಒಳಗೇ ಕರ್ನಾಟಕ ಪ್ರಾಂತ್ಯರಚನೆ ಆಗಬೇಕು

ಕೆ. ಪಿ. ಸಿ. ಸಿ. ಸಭೆಯ ಅಂಗೀಕಾರ

೧೯೫೩ನೇ ಅಕ್ಟೋಬರ್ ಒಳಗೇ ಕರ್ನಾಟಕ ಪ್ರಾಂತ್ಯ ರಚನೆಯಾಗಬೇಕೆಂದೂ ಆ ಬಗ್ಗೆ ಭಾರತ ಸರ್ಕಾರವು ೧೯೫೩ನೇ ಅಕ್ಟೋಬರ್ ಅಂತ್ಯದೊಳಗೇ ಅನುಮಾನಕ್ಕೆಡೆಯಿಲ್ಲದಂತಹ ಸ್ಪಷ್ಟ ಹೇಳಿಕೆಯೊಂದನ್ನು ಕೊಡಬೇಕೆಂದೂ ಸೂಚಿಸುವ ನಿರ್ಣಯವು ಏಪ್ರಿಲ್ ೨೦ ರಂದು ಹುಬ್ಬಳ್ಳಿಯಲ್ಲಿ ನಡೆದ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಸಭೆಯಲ್ಲಿ ಅಂಗೀಕರಿಸಲ್ಪಟ್ಟಿತು

ಈ ಸಮಸ್ಯೆಯನ್ನು ಬಿಡಿಸುವ ಶಕ್ತಿ ಭಾರತ ಸರ್ಕಾರ ದವರಿಗೆ ಮಾತ್ರವಲ್ಲದೆ ಅಖಿಲ ಭಾರತ ಕಾಂಗ್ರೆಸ್ ಸಮಿ ತಿಗೆ ಸಹ ಇದೆಯೆಂದೂ, ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯು ಬೇಡಿಕೆಯಷ್ಟು ಅಂಗೀಕಾರವನ್ನಷ್ಟೆ ಆದು ಸರ್ಕಾರವನ್ನು ಒತ್ತಾಯಪಡಿಸಬೇಕೆಂದು ನಿರ್ಣಯವು ಸೂಚಿಸುತ್ತದೆ.

ಈ ಬಗ್ಗೆ ಸುದೀರ್ಘವಾದ ನಿರ್ಣಯವನ್ನು ಖಾಸಗಿ ಸಭಾ ಸದಸ್ಯರಾದ ಶ್ರೀ ಸಿ ಜೆ ಕಂಬಳಿಯವರು ಮುಂದಿ ಟ್ಟರು ಅದಕ್ಕೆ ಸರ್ವಾನುಮತದ ಒಪ್ಪಿಗೆ ದೊರಕಿತು.

ಸಮಿತಿಯ ಬೇಡಿಕೆಯನ್ನೆಣಾದರೂ ತಳ್ಳಿಹಾಕಿದ್ದಾ ದರೆ, ಕೆ. ಪಿ ಸಿ ಸಿ ಸದಸ್ಯರು ಮೊದಲು ರಾಜೀನಾಮೆ ಕೊಡುವೆಂದೂ, ಅನಂತರ ಖಾಸಗಿಸಭಾ ಸದಸ್ಯರೂ, ಪಾರ್ಲಿಮೆಂಟಿನಲ್ಲಿರುವ ಕರ್ನಾಟಕ ಸದಸ್ಯರೂ, ರಾಜೀ ನಾಮೆ ಸಲ್ಲಿಸುವೆವೆಂದೂ ನಿರ್ಣಯದಲ್ಲಿ ಪ್ರಸ್ತಪಿಸಲಾ ಗಿದೆ

ರಾಜೀನಾಮೆಗೆ ಸಂಬಂಧಿಸಿದ ಭಾಗವನ್ನು ತೆಗೆದು ಹಾಕಿಸಿಬಿಡಬೇಕೆಂದು ಬೆಳಗಾಂಚ ಸದಸ್ಯರೊಬ್ಬರು ಯತ್ನಿಸಿ ರಾಜೀನಾಮೆ ಕೊಡುವುದಾಗಿ ಹೇಳುವುದು ಬೆದ ರಿಕೆಯಾದೀತೆಂದು ಅವರು ಸೂಚಿಸಿದರು ಆದರೆ ಅವರ ತಿದ್ದುಪಡಿ ಬಿದ್ದುಹೋಯಿತು.

ಕರ್ನಾಟಕ ಪ್ರಾಂತ್ಯ ರಚನೆಗೆ ಕೊಡಬೇಕಾದ ಕಾಲಾ ವಕಾಶವನ್ನು ಮುಂದಿನ ಮಹಾ ಚುನಾವಣೆಗಳವರೆಗೆ ನಿಶ್ಚರಿಸಬೇಕೆಂದು ಖಾಸಗಿಸಭಾ ಸದಸ್ಯರಾದ ವಿ ವಿ. ಪಾಟೀಲರು ಸೂಚಿಸಿದರು ಅದನ್ನು ಸಹ ಸಮಿತಿ ತಳ್ಳಿ ಹಾಕಿತು

ಬಳ್ಳಾರಿ ತಾಲ್ಲೂಕು ಪೂರ್ಣವಾಗಿ ಕನ್ನಡ ಪ್ರದೇಶ

ಬಳ್ಳಾರಿ ತಾಲ್ಲೂಕಿನ ಭವಿಷ್ಯದ ಬಗ್ಗೆ ಸಮಿತಿಯು ಇನ್ನೊಂದು ನಿರ್ಣಯ ಮಾಡಿ, ಅದು ಪೂರ್ಣವಾಗಿ ಕನ್ನಡ ಪ್ರದೇಶವೆಂದು ಸಾರಿದ್ದಲ್ಲದೆ, ಅದರ ಬಗ್ಗೆ ತಪ್ಪಿಲ್ ನಡೆಯುವಂತೆ ಎರ್ಪಡಿಸಿರುವುದರ ಬಗ್ಗೆ ಪ್ರತಿಭಟನೆ ಯನ್ನು ವ್ಯಕ್ತಪಡಿಸಿತು ವಿಶೇಷವಾಗಿಯೂ ಮತ್ತು ಭೌಗೋಳಿಕವಾಗಿಯೂ ಆಲೂರು, ಆದವಾನಿ ಮತ್ತು ರಾಯದುರ್ಗ ಇವು ಮೂರು ತಾಲ್ಲೂಕುಗಳೂ ಕನ್ನಡ ಪ್ರದೇಶಗಳೆಂದು ಅಭಿಪ್ರಾಯಪಡಲಾಯಿತು.

ಬಳ್ಳಾರಿ ಜಿಲ್ಲೆಯನ್ನು ವಿಭಜನೆ ಮಾಡದಂತೆ ನೋಡಿ ಕೊಳ್ಳಬೇಕೆಂದು ಬಳ್ಳಾರಿ ಪ್ರತಿನಿಧಿಗಳು ಕೆ ಪಿ ಸಿ ಸಿ ಯನ್ನು ಸ್ವಾಧೀನಪಡಿಸು ಸಭೆಯು ಕೆ ಪಿ ಸಿ ಸಿ ಈಚೆ ರಿಯಲ್ಲಿ ನಡೆಯಿತು ಸತ್ಯಬಲವಾದ ಪೋಲಿಸ್ ಕಾವಲಿನ್ನು ಹಾಕಲಾಗಿತ್ತು

ಹಿಂಸೆಯ ಕಾರ್ಯಕ್ಕೆ ಎಡೆಕೊಡಬಾರದು

ಕರ್ನಾಟಕ ಪ್ರಾಂತ್ಯ ಸ್ಥಾಪನೆಗಾಗಿ ಕೆ ಪಿ ಸಿ ಸಿ ಯು ಕೈಲಾದ ಪ್ರಯತ್ನಗಳನ್ನೆಲ್ಲಾ ಮಾಡುತ್ತಿದೆ ಯೆಂದು ಅಧ್ಯಕ್ಷರಾದ ಶ್ರೀ ನಿಜಲಿಂಗಪ್ಪನವರು ಭರವಸೆ ಯಿತ್ತು ಹಿಂಸಾಯುತವಾದ ಮತ್ತು ತುಂಟತನದ ಕಾರ್ಯ ಗಳನ್ನು ನಡೆಸುವ ಪ್ರೇರಣೆಗೆ ಬಲಿಯಾಗಕೂಡದೆಂದು ಜನರನ್ನು ಎಚ್ಚರಿಸಿದರು

ಸಮಿತಿಯವರು ನಿನ್ನೆ ಹುಬ್ಬಳ್ಳಿಯಲ್ಲಿ ನಡೆದ ಹಿಂಸಾ ತ್ಮಕ ಗಲಭೆಗಳನ್ನು ಖಂಡಿಸಿ ಅಂತಹ ಚಟುವಟಿಕೆಗಳಿಂದ ಕಾಂಗ್ರೆಸ್ಸಿಗರು ದೂರವಿರಬೇಕೆಂದು ಕೋರಲಾಯಿತು.

ಕರ್ನಾಟಕ ಪ್ರಾಂತ್ಯಕ್ಕೆ ಸಂಬಂಧಿಸಿದ ನಿರ್ಣಯ ಚರ್ಚೆಗೆಬಂದಾಗ, ತುಮಕೂರು ಜಂಧ್ಯ ರಾಯಚೂರು ಆಲೂರು, ಆದವಾನಿ ಮತ್ತು ರಾಯದುರ್ಗ ತಾಲ್ಲೂಕು

ಗಳ ಬಗ್ಗೆ ರಹಸ್ಯ ಒಡಂಬಡಿಕೆ ಆಗಿದೆಯೆಂಬ ವರದಿ ನಿರಾಧಾರವಾದುದೆಂದು ಶ್ರೀ ನೆಹರೂಗಳವರು ತಿಳಿಸಿದರು.

ಅಂತಹ ಒಡಂಬಡಿಕೆ ಖಂಡಿತ ಆಗುವುದಿಲ್ಲವೆಂದು ಅವರು ತಿಳಿಸಿದರು ಮೇಲ್ಮಂಡೆ ಮೂರು ಶಾಖೆಗಳಾಗಲಿ ಎಂಬ ಅಭಿಪ್ರಾಯವನ್ನು ಅಂಧ್ರದಲ್ಲಿ ಸೇರಿಸುವ ಯೋಚನೆಯನ್ನು ತಾವು ಪ್ರತಿಭಟಿಸಿರುವುದಾಗಿ ಅವರು ತಿಳಿಸಿದರು

ವಿಧಾನವಾದರೆ ಉಗ್ರ ಪರಿಣಾಮ ಉಂಟಾದೀತು

ಈಗಿನ್ನೂ ಸ್ಪಷ್ಟನ್ನಿನ ನೇಪಥ್ಯದಲ್ಲಿ ತನ್ನ ಮೇಲೆ ಬಿದ್ದಿರುವ ವಿಶೇಷ ಜವಾಬ್ದಾರಿಯನ್ನು ಗಮನಕ್ಕೆ ತಂದುಕೊಂಡು ಸಮಿತಿಯು ಕರ್ನಾಟಕ ಪ್ರಾಂತ್ಯದ ಬೇಡಿಕೆಯನ್ನು ಮುಂದಿಟ್ಟಿದೆ ಕರ್ನಾಟಕದಲ್ಲೂ ನಡೆದ ಮತ್ತು ನಡೆಯು ತ್ತಿರುವ ಭಿನ್ನಾಭಿಪ್ರಾಯ ದಿನೆಯಿಂದ, ೧೯೫೫ ನೇ ಆಕ್ಟೋಬರ್‌ಗೆ ಮುಂಚೆ ಕರ್ನಾಟಕ ಪ್ರಾಂತ್ಯ ರಚನೆ ಯಾಗಬೇಕೆಂಬ ನಿರ್ಧಾರಕ್ಕೆ ಸಮಿತಿಯು ಬಂದಿದೆ ಈ ಕಾರ್ಯ ನಿರ್ಧಾರವಾದರೆ, ಇಡೀ ದೇಶದ ಮೇಲೆಯೇ ಉಗ್ರ ಪರಿಣಾಮವನ್ನು ಉಂಟುಮಾಡುವುದರಲ್ಲಿ ಸಂದೇಹವಿಲ್ಲ. ಬಳ್ಳಾರಿಜಿಲ್ಲೆಯ ಕನ್ನಡ ಪ್ರದೇಶಗಳನ್ನು ಮೈಸೂರಿನಲ್ಲಿ ಸೇರಿಸಿದ ತೀರ್ಮಾನ ಸ್ವಾಗತಾರ್ಹವಾದಿದೆ ಆದರೆ ಪಕ್ಷೀಯ ಕಾಂಗ್ರೆಸ್ ಅಧ್ಯಕ್ಷರಾದ ಮುಖ್ಯಮಂತ್ರಿಗಳೂ ಕೊಟ್ಟ ಹೇಳಿಕೆಗಳಿಂದ ಕರ್ನಾಟಕದ ಜನರಲ್ಲಿ ಬಂಳಿತೂ ಡಿದೆ ಕೆ. ಪಿ. ಸಿ. ಸಿ. ಇದುವರೆಗೆ ಸಹನೆಯ ನೀತಿಯ ನ್ನು ವಲಂಬಿಸುತ್ತಾ ಬಂದು ಇದೆಂದ ಕರ್ನಾಟಕದ ಪರಿ ಸ್ಥಿತಿ ವಿಷಮವಾಗಲು ಕಾರಣವಾಗಿದೆ ಅಖಿಲ ಭಾರತ ಕಾಂಗ್ರೆಸ್ ಸಮಿತಿ ಈ ಅಂಶವನ್ನು ಚೆನ್ನಾಗಿ ಅರ್ಥ ಮಾಡಿಕೊಂಡಿಲ್ಲ ಎಂಬುದಾಗಿ ತಿಳಿಸಿದರು

ಭಾಷಾವಾರು ಸ್ಫಾಂತ್ಯಗಳ ರಚನೆ ವೇಗವನ್ನೆ ಆಗಬೇಕು

ಭಾಷಾವಾರು ಪ್ರಾಂತ್ಯಗಳ ಬಗ್ಗೆ ಆರೋಗ್ಯಕರವಾದ ನೀತಿಯನ್ನು ಅನುಸರಿಸುವಂತೆ ಕಮ್ಯೂನಿಸ್ಟ್ ನಾಯಕ ಶ್ರೀ ಪಿ ಸುಂದರಯ್ಯನವರು ದೆಹಲಿ ರಾಜ್ಯಪರಿಷತ್ತಿನಲ್ಲಿ ಭಾಷಣ ಮಾಡುತ್ತ ತಿಳಿಸಿದರು ಕರ್ನಾಟಕ ಮತ್ತು ಇತರ ಪ್ರಾಂತ್ಯಗಳ ರಚನೆಯನ್ನು ಸಾಧಕಾಶ ಮಾಡಲಾ ಗದೆಂದು ಅವರು ಸೂಚಿಸಿದರು.

ಭಾಷಾವಾರು ಪ್ರಾಂತ್ಯ ಸಮಸ್ಯೆ ಕುರಿತು ವಿಚಾರ ಮಾಡಲು ಒಂದು ಕಮಿಷನ್ ಸ್ಥಾಪಿಸಬೇಕೆಂದೂ ೧೯೫೨ ರ ಅಂತ್ಯದೊಳಗೇ ಭಾಷಾವಾರು ಪ್ರಾಂತ್ಯ ರಚನೆ ಕಾರ್ಯವನ್ನು ಮುಗಿಸಬೇಕೆಂದೂ ತಿಳಿಸಿದರು

ಕನ್ನಡಜನತೆಗೆ ಕರ್ನಾಟಕ ಏಕೀಕರಣ ಸಂಘದ ಕಾರ್ಯನಿರ್ವಾಹಕ ಸಮಿತಿಯ ಕರೆ

ಹುಬ್ಬಳ್ಳಿಯಲ್ಲಿ ಅಖಿಲಕರ್ನಾಟಕ ಏಕೀಕರಣ ಸಂಘ ದವರ ಕಾರ್ಯಕಾರಿಸಮಿತಿಯ ಶ್ರೀ ಶಾಂತವ್ವ ಯಳಮಲಿ ಇವರ ಅಧ್ಯಕ್ಷತೆಯಲ್ಲಿ ಸೇರಿತ್ತು. ೧೯ ನೆಯ ತಾ॥ ಕೆ ಪಿ ಸಿ ಸಿ ಮಹಾಸಭೆ ಧಾರವಾಡದಲ್ಲಿ ನಡೆದ ಹಿಂಸಾಯುತ ಕೃತ್ಯಗಳನ್ನು ಖಂಡಿಸಲಾಯಿತು ಕರ್ನಾಟಕದ ಜನರು ಒಂಸೆಮತ್ತು ಆತ್ಮಸ್ಥೈರ್ಯವನ್ನು ಸಂಪೂರ್ಣವಾಗಿ ತ್ಯಜಿಸಿ ಸ್ಥಿರ ರಿಂದ ಶಾಂತಿಯುತವಾಗಿ ಚಳುವಳಿ ನಡೆಸಬೇಕೆಂದು ಕೋರಲಾಯಿತು

ಕರ್ನಾಟಕ ಪ್ರಾಂತ್ಯ ಸಮಸ್ಯೆಯನ್ನು ಸಾಧಕಾಶವಿಲ್ಲದೆ ವಿಡಿಸಬೇಕೆಂದು ಸಮಿತಿ ಒತ್ತಾಯಪಡಿಸಿತು ಅಖಿಲ ಭಾರತಕ್ಕೆ ಆನ್ವಯಿಸುವಂತೆ ಗಡಿಭಿನರ್ವ್ಯವಸ್ಥೆ ಕಾರ್ಯ ಕ್ಕೆಗೊಳ್ಳುವ ಯೋಜನೆ ಒತ್ತಾಯ ಮಾಡಿತು ಕೇಂದ್ರ ಸಚಿವ ಸಂಪುಟದಲ್ಲಿ ಕನ್ನಡಿಗರಿಗೆ ಪ್ರಾತಿನಿಧ್ಯ ಕೊಡುವಂತೆ ಒತ್ತಾಯಪಡಿಸಲಾಯಿತು

ಬೊಂಬಾಯಿ, ಮದ್ರಾಸ್, ಹೈದರಾಬಾದಿಗಳಲ್ಲಿ ಕನ್ನಡ ಪ್ರದೇಶಗಳ ಗಡಿಗಳನ್ನು ಗೊತ್ತುಮಾಡಲು ಕೇಂದ್ರ ಕಮಿಷನ್ ಒಂದನ್ನು ನೇಮಿಸಿ ಸಂಯುಕ್ತ ಕರ್ನಾಟಕದ ರಚನೆಗೆ ದಾರಿ ಮಾಡಬೇಕೆಂದು ಪ್ರಾರ್ಥಿ ಸಲಾಯಿತು.

ದಕ್ಷಿಣಕನ್ನಡ ಏಳಿಗೂರು ಜಿಲ್ಲೆಗಳು ಮತ್ತು ಕೊಳ್ಳೇ ಗಾಲ ತಾಲೂಕಿನವರು ಮೈಸೂರು ಸ್ವಾತಂತ್ರಿಯಂದಿಗೆ ೀರಲು ಬಯಸುವುದರ ಬಗ್ಗೆ ಸಮಿತಿಯು ಸಂತೋಷ ವನ್ನು ಸೂಚಿಸಿ ದೇಶಾಭಿಮಾನಿಗಳಾದ ಮತ್ತು ಮೈಸೂರಿನ ಮುಖ್ಯ ಸಚಿವರಾದ ಶ್ರೀ ಕೆ. ಹನುಮಂತಯ್ಯ ನವರು ಕರ್ನಾಟಕ ಜನರಿಗೆ ನೀಡಿರುವ ಸ್ಪೇಹ ಹಸ್ತಕ್ಕಾಗಿ ಮೆಚ್ಚುಗೆಯನ್ನು ವ್ಯಕ್ತಪಡಿಸಿತು.

ಕೆ. ಪಿ. ಸಿ. ಸಿ. ನಿಯೋಗ

ಹಂ॥ ನೆಹರೂರವರನ್ನು ಭೇಟಿ ಮಾಡಲಿದೆ.

ಮಹಾರಾಷ್ಟ್ರದಲ್ಲಿ ಸಂಭವಿಸಿರೋಗುಗ ಪಂ॥ ನೆಹರೂ ರವರು ಏ ೨೮ ರಂದು ದೆಗಾಂವಿಗೆ ಬರಲಿದ್ದಾರೆ ಆಗ ಕೆ ಪಿ ಸಿ ಸಿ ನಿಯೋಗವೊಂದು ಅವರನ್ನು ಭೇಟಿಮಾಡಿ ಬಳ್ಳಾರಿ ಜಿಲ್ಲೆಯ ಬಗ್ಗೆ ಮತ್ತು ಕರ್ನಾಟಕ ಪ್ರಾಂತ್ಯದ ಬಗ್ಗೆ ಕನ್ನಡಿಗರ ತೀವ್ರ ಆಕಾಂಕ್ಷೆಯನ್ನು ವಿವರಿಸಲಿದೆ ನಿರ್ಧಾರ ಸಮಿತಿ ತನ್ನ ಕಾರ್ಯವನ್ನು ಮುಗಿಸುವವರೆಗೆ ಕೆ. ಪಿ ಸಿ. ಸಿ ಕಛೇರಿ ಬಳ್ಳಾರಿಯಲ್ಲಿರುವುದು

ಕರ್ನಾಟಕಕ್ಕೆ ಅವಮಾನ ಶ್ರೀ ಹಳ್ಳಿಕೇರಿಯವರ ಹೇಳಿಕೆ

ಬಳ್ಳಾರಿ ಶಾಖೆಯಿಗೆ ಮಾತ್ರ ಗಡಿನಿರ್ಧಾರ ಕಮಿಷನ್ ನೇಮಿಸಿದ್ದು ಸರಿಯಲ್ಲ

ಬಳ್ಳಾರಿಶಾಖೆಯನ್ನೆನ ಗಡಿಗಳನ್ನ ಗೊತ್ತುಮಾಡಲು ಕಮಿಷನರ್ ಒಬ್ಬರನ್ನು ನೇಮಿಸಿರುವುದನ್ನು ಕೆ ಪಿ ಸಿ ಕಾರ್ಯದರ್ಶಿ ಶ್ರೀ ಎಲ್ಲಪ್ಪಶೆಟ್ಟರಿಯವರು ಬೇಕಿಸಿ ಇದು ಕೆ ಪಿ ಸಿ ಸಿ ಗೆ ನೇರವಾದ ಸವಾಲಿನಂತೆಯೆಂದು ತಿಳಿಸಿ ದ್ದಾರೆ. ವಾದಗ್ರಸ್ತವಾಗಿರುವ ಅದವಾನಿ ಆಲೂರು, ರಾಯದುರ್ಗ ಮತ್ತು ಒಳ್ಳಾರಿ ಈ ತಾಲ್ಲೂಕುಗಳೆಲ್ಲ ಸಂಬಂಧಪಟ್ಟಂತೆ ಗಡಿನಿರ್ಧಾರ ಕಮಿಷನರನ್ನು ನೇಮಿ ಸುವುದಾಗಿ ತಾವೆಲ್ಲ ಭಾವಿಸಿದ್ದಾರೆಂದು ಅವರು ತಿಳಿಸಿದರು ಈಗ ಕೇವಲ ಬಳ್ಳಾರಿ ತಾಲ್ಲೂಕಿನ ಪ್ರಶ್ನೆಯನ್ನು ಮಾತ್ರ ಇತ್ಯರ್ಥಗೊಳಿಸಲು ಕಮಿಷನರ್ ಒಬ್ಬರನ್ನು ನೇ ಮಿಸಿರುವುದು ನ್ಯಾಯಸಮ್ಮತವಲ್ಲವೆಂದೂ

ಭಾರತ ಸರಕಾರ ನ್ಯಾಯವಾದ ವರ್ತನೆ ತೋರಿಸು ವುದೆಂದು ಕನ್ನಡಿಗರು ಇಟ್ಟಿದ್ದ ನಂಬಿಕೆ ತಗ ಬುದ ಮೇಲಾಗಿದೆ ಸರಕಾರದ ಈ ಕಾರ್ಯಕ್ರಮವನ್ನು ತಾವು ಅವಮಾನವನ್ನು ಸಹಿಸಲು ಸಾಧ್ಯವಿಲ್ಲ ಎಂದು ಅವರು ತಿಳಿಸಿದ್ದಾರೆ

ಶ್ರೀ ಯಳಮಲಿಯವರ ಹೇಳಿಕೆ

ಬಳ್ಳಾರಿ ತಾಲ್ಲೂಕಿಗೆ ಮಾತ್ರ ಗಡಿ ನಿರ್ಧಾರ ಕಮಿ ಷನ್ ನೇಮಿಸಿರುವ ಸರಿಯಲ್ಲವೆಂದು ಕರ್ನಾಟಕ ಏಕೀ ಕರಣ ಸಂಘದ ಅಧ್ಯಕ್ಷರಾದ ಶ್ರೀ ಯಳಮಲಿಯವರು ತಿಳಿಸಿರುವಂತೆ ಅದವಾನಿ, ರಾಯದುರ್ಗ ತಾ॥ ಗಳವಿಭಾಗವನ್ನು ಸಹ ಆವರಿವಿಮರ್ಶೆಗೆ ವಲಯ ಸುವ ಸೂಚನೆ ಇದ್ದು ಇತ್ತೀಚೆಗೆ ಆದಷ್ಟು ರೆದ್ದು ಗೊಳಿಸಿದ್ದರಿಂದ ಕನ್ನಡಿಗರಿಗೆ ಬಹಳಯೋಚನೆ ಆಗಿದೆ ಆಗ ಸಹ ಮೇಲ್ಮಂಡೆ ಮೂರು ತಾಲ್ಲೂಕುಗಳಿಗೆ ಒಂದು ಗಡಿನಿರ್ಧಾರ ಕಮಿಷನ್ ನೇಮಿಸಬೇಕೆಂದು ಒತ್ತಾಯ ಪಡಿಸುತ್ತೇನೆ ಎಂದು ತಿಳಿಸಿದ್ದಾರೆ

ಬಳ್ಳಾರಿ ತಾಲ್ಲೂಕಿನ ಭವಿಷ್ಯ

ಬಳ್ಳಾರಿ ತಾಲ್ಲೂಕಿನ ಭವಿಷ್ಯದ ಬಗ್ಗೆ ತನಿಕೆಗಡೆಸಲು ಹೈದರಾಬಾದು ಹೈಕೋರ್ಟಿನ ಶ್ರೇಷ್ಠ ನ್ಯಾಯಾಧೀಶ ರಾದ ಜಗಿ ಅಬ್ದ್ಲಿಕ್ರಾಕರಮಿಶ್ರರವರನ್ನು ಭಾರತಸರಕಾರ ನೇಮಿಸಿದ ಜಗಿ ಮಿಶ್ರರು ಇಲ್ಲಿ ಕೆಲವು ದಿನಗಳಕೂಳಗೇ ಬಳ್ಳಾರಿಗೆ ತೆರಲ ಮೇ ೧೫ ರೊಳಗೆ ಸರಕಾರಕ್ಕೆ ತಮ್ಮ ನವದಿಯನ್ನು ಒಪ್ಪಿಸುವರೆಂದು ತಿಳಿದುಬಂದಿದೆ.

ಬಳ್ಳಾರಿ ಬಳಿ ಬಸ್ಸುಗಳನ್ನು ತಡೆದರು

ಅನಂತಪುರದ ಗಡಿಯಲ್ಲಿ ಬಳ್ಳಾರಿಯಿಂದ ೧೫ಮೈಲಿ ದೂರದಲ್ಲಿರುವ ಜಲಗುರ್ಕಿ ಎಂಬಲ್ಲಿ ಆಕ್ಷೇಯ ಗುಂಪು ಕೂಡಿ ಬಸ್ಸುಗಳನ್ನು ತಡೆದು ನಿಲ್ಲಿಸಿ, ಪ್ರತ್ಯೇಕ ಕರ್ನಾ ಟಕ ಪ್ರಾಂತ್ಯದ ಸ್ಥಾಪನೆಪ್ರಚೆಯೆಂದು ಕೂಗುತ್ತಿತ್ತು ಬಸ್ಸುಗಳ ಮೇಲೆ ತೆಲುಗು ಅಕ್ಷರಗಳಲ್ಲಿ ಬರೆದಿದ್ದ ಊರು ಹೆಸರುಗಳನ್ನೂ ಅಳಿಸಿದರು. ಬಳ್ಳಾರಿಯಿಂದ ವಿಶೇಷ ಪೋಲೀಸ್ ದಳದವರು ಹೋಗಿ ಜನರನ್ನು ಚದುರಿಸಿ ದರು. ಈ ಸಂಬಂಧದಲ್ಲಿ ೬೨ ಜನರ ಬಂದನವಾಗಿದೆ

ಮಹಾಪ್ರಧಾನರಿಗೆ ಬಳ್ಳಾರಿ ಪುರಸಭಾ ಸದಸ್ಯರ ಮನವಿ

ಬಳ್ಳಾರಿ ತಾಲ್ಲೂಕಿನ್ನು ಮೈಸೂರು ಸಂಸ್ಥಾನಕ್ಕೆ ಸೇರಿ ಸಬೇಕೆಂಬ ಒತ್ತಾಯಮಾಡಿ ಬಳ್ಳಾರಿ ಪುರಸಭಾ ಸದ ಸ್ಯರುಗಳು ಮಹಾಪ್ರಧಾನರಾದ ಪಂ॥ ನೆಹರೂರವರಿಗೂ ಕೇಂದ್ರ ಸರ್ಕಾರದ ಇತರ ಸಚಿವರಿಗೂ ಮೆಮೊರಾಂಡಂ ಸಲ್ಲಿಸಿದ್ದಾರೆ.

ಬಳ್ಳಾರಿ ತಾಲ್ಲೂಕು ಮತ್ತು ನಗರದಲ್ಲಿ ಕನ್ನಡಿಗರ ಸಂಖ್ಯೆಯೇ ಅಧಿಕವಾಗಿದೆಯೆಂದು ಅವರು ತಮ್ಮ ಮೆಮೊ ರಾಂಡಂನಲ್ಲಿ ತಿಳಿಸಿರುವರೆಂದೂ, ೧೯೫೧ ನೇ ಇಸ್ವಿಯ ಮತ್ತು ೧೯೫೨ ನೇ ಇಸ್ವಿಯ ಸೆನ್ಸಸ್ ಅಂಕಿಅಂಶಗಳು ಇವಕ್ಕೆ ಪ್ರತ್ಯಕ್ಷಸಾಕ್ಷಿಯೆಂದೂ ಅವರು ತಿಳಿಸಿದ್ದಾರೆ

ಈ ಕೌನ್ಸಿಲಿಯಲ್ಲಿ ಸಭೆ ಸೇರಿ ಬಳ್ಳಾರಿ ತಾಲೂ ಕನ್ನು ಆಂಧ್ರಕ್ಕೆ ಸೇರಿಸಬೇಕೆಂದು ಎನ್ನಲ್ ಆರಂದು ಬಳ್ಳಾರಿ ಪುರಸಭೆಯಲ್ಲಿ ಮಾಡಲಾದ ನಿರ್ಣಯವನ್ನು ಒಪ್ಪಲು ಸಾಧ್ಯವಿಲ್ಲವೆಂಬ ನಿರ್ಣಯಮಾಡಿದರು. ಏಳೆ ನೆಯ ತಾ ಸೇರಿದ್ದ ಪುರಸಭಾಧಿವೇಶನದಲ್ಲಿ ೩೨ ಮಂದಿ ಸದಸ್ಯರ ಪೈಕಿ ಕೇವಲ ೧೩ ಮಂದಿ ನುತ್ತ, ಹಾಜರಿದ್ದ ರೆಂದೂ ಅಂಗೀಕೃತವಾದ ನಿರ್ಣಯದ ನ್ಯಾಯದ ಸ್ಥಾ ಒತ್ತಿಯ ಬಗ್ಗೆ ನ್ಯಾಯಸ್ಥಾನವಿದೆಲ್ಲಿ ವ್ಯಕ್ತವಾಗಿ ನಿರ್ಣಯ ಲಾಗುವುದೆಂದೂ ವರದಿಯಾಗಿದೆ.

ಕರ್ನಾಟಕ ಪ್ರಾಂತರಚನೆ ಅಂಧ್ರದಪ್ಪು ತೊದಳ್ಳು

ಅಂಧ್ರ ಪ್ರಾಂತ್ಯ ರಚನೆಯಪ್ಪು ಕರ್ನಾಟಕ ಪ್ರಾಂತ್ಯ ರಚನೆಯು ತೊಡಕು ವಿಚಾರಗಳಿಂದ ಕೂಡಿಲ್ಲ ಭಾಷಾ ವಾರು ಪ್ರಾಂತ್ಯಗಳನ್ನು ಒಂದಾದ ಮೇಲೆ ಒಂದರಂತೆ ರಚಿಸುವುದಾದರೆ ಕೇವಲ ೨ ವರ್ಷಗಳಲ್ಲಿ ಭಾಷಾವಾರು ಹೊಸ ಪ್ರಾಂತ್ಯಗಳ ರಚನೆಯನ್ನು ಪೂರ್ಣಗೊಳಿಸಬ ಹುದು—ಎಂಬುದಾಗಿ ಕರ್ನಾಟಕ ಪ್ರಾಂತೀಯ ಕಾಂಗ್ರೆ ಸ್‌ಸಮಿತಿ ಅಧ್ಯಕ್ಷರಾದ ಶ್ರೀ ಎಸ್ ನಿಜಲಿಂಗಪ್ಪನವರು ಬೆಂಗಳೂರಿಗೆ ಆಗಮಿಸಿದಾಗ ಪತ್ರಿಕಾ ಪ್ರತಿನಿಧಿಗಳ ಭೇಟಿ ಯಲ್ಲಿ ತಿಳಿಸಿರುವರೆಂದು

ಬಳ್ಳಾರಿಯ ಇತರ ಆರು ಕನ್ನಡ ತಾಲ್ಲೂಕುಗಳಂತೆ ಬಳ್ಳಾರಿ ತಾಲ್ಲೂಕು ಸಹ ಅಕ್ಕಕನ್ನಡದ ತಾಲ್ಲೂಕು. ಅದೂ ಸಹ ಮೈಸೂರಿಗೆ ಸೇರಿಬೇಡವೆಂದು ನ್ಯಾಯಾ ಧೀಶ ಇದೆ ಆದರೆ ಹಾಗೆ ಮಾಡದೆ ಕೇಂದ್ರ ಸರ್ಕಾರ ದವರು ಬಳ್ಳಾರಿ ತಾಲ್ಲೂಕು ಭವಿಷ್ಯ ನಿರ್ಧಾರದ ವಿಚಾ ರವನ್ನು ಒಳಸ್ಥಾಪಕ್ಕೆ ಕಮಿಷನ್ನಿನ ಪರಿಶೀಲನೆಗೆ ಒಪ್ಪಿಸಿ ರುವುದು ಅತ್ಯರ್ಯಕರವಾದಿದೆ ಎಂದರು

ಬಳ್ಳಾರಿ ತಾಲ್ಲೂಕು ಮಿಶ್ರ ಭಾಷಾಪ್ರದೇಶವೆಂದು ನಾವಿಸುವುದು ನನಗೆ ಅರ್ಥವಾಗದು. ಹಾಗೆ ಪರಿಶೀಲಿ ಸುವುದಾದರೆ ಯಾವ ಊರು ಇಂತಹ ಭಾಷಾ ಜನ ಬಾಹುಳ್ಯದಿಂದ ಕೂಡಿರುವುದಿಲ್ಲ ? ಮುಖ್ಯವಾಗಿ ಬಳ್ಳಾರಿ ತಾಲ್ಲೂಕು ವಿನಹ, ಅಚ್ಚಕನ್ನಡ ತಾಲ್ಲೂಕು ಆದರಲ್ಲಿರುವ ಅಂಗಿ ಅಧ್ಯ ಭಾಷಾ ಊರಿಗಳು ಕೂಡಾ ಅಧ್ಯ ಪ್ರಾಂತ್ಯಕ್ಕೆ ಅಂಟಿಕೊಂಡಿಲ್ಲ. ಅವು ಕನ್ನಡ ಪ್ರದೇಶದ ಮಧ್ಯೆ ಇವೆ

ಕನ್ನಡ ಮತ್ತು ಅಂಧ್ರ ಪ್ರದೇಶಗಳ. ಜೂವುವು ಎಂಬುದಷ್ಟು ನಿರ್ದಿಷ್ಟವಾಗಿ ಗೊತ್ತುಪಡಿಸುವುದು ಅಷ್ಟೇನೂ ಕಷ್ಟವಾದ ಕಾರ್ಯವಲ್ಲ. ಹೀಗಿರಲು ಆದ ವಾಸಿ, ಆಲೂರು ಮತ್ತು ರಾಯದುರ್ಗ ತಾಲ್ಲೂಕುಗಳ ವಿಚಾರವನ್ನೂ ಸಹ ಬಳ್ಳಾರಿ ತಾಲ್ಲೂಕು ವಿಚಾರದಂತೆಯೆ ಕಮಿಷನ್ನಿನ ಪರ್ಯಾಲೋಚನೆಗೆ ಒಪ್ಪಿಸುವುದು ಏನೇ ಕಯಾಪವಾದಮಾರ್ಗ ಈ ವಿಚಾರವನ್ನು ಇತ್ಯರ್ಥ ಪಡಿ ಸುವುದಕ್ಕಾಗಿಯೇ ಕಮಿಷನ್ ನಿರ್ಧರಿಸುತ್ತಾ ಈ ಮೂರು ತಾಲ್ಲೂಕುಗಳ ನಿಜವಸ್ಥಿತಿಯನ್ನು ಅವರು ಎಷ್ಟೀಸಿ ಗೊತ್ತುಪಡಿಸುವುದು ಸಾಧುವಾದುದು ಎಂದರು.

ಹುಬ್ಬಳ್ಳಿಯಲ್ಲಿ ನಡೆದ ಈಚಿನ ಗಲಭೆಗಳನ್ನು ಶ್ರೀ ನಿಜಲಿಂಗಪ್ಪನವರು ಖಂಡಿಸುತ್ತಾ ಕರ್ನಾಟಕ ಪ್ರಾಂತ್ಯ

ರಚನೆಯ ಬಗ್ಗೆ ಜನತೆಗಿರುವ ಆಸಕ್ತಿ ಮತ್ತು ಹುರುಪನ್ನು ಕೆಲವು ಸ್ವಾರ್ಥಸಾಧಕರು ಈ ರೀತಿ ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆ ಎಂದರು

ಕರ್ನಾಟಕ ಪ್ರಾಂತ್ಯ ಸ್ಥಾಪನೆ
ಪಂಡಿತ ನೆಹರೂರವರ ಭರವಸೆ

ವಾಣಿಜ್ಯ ಶಾಖಾ ಸಚಿವರಾದ ಶ್ರೀ ಡಿ ಪಿ ಕರ್ಮಾರ್ಕರವರು ಏಪ್ರಿಲ್ ೧೭ ರಂದು ಪಂ॥ ನೆಹರೂರವರನ್ನು ಭೇಟಿ ಮಾಡಿ ಕರ್ನಾಟಕದ ಪರಿಸ್ಥಿತಿಯನ್ನು ವಿವರಿಸಿದರೆಂದು ತಿಳಿದುಬಂದಿದೆ

ಕರ್ನಾಟಕದ ಪರಿಸ್ಥಿತಿ ಪೂರ್ಣವಾಗಿ ತಮಗೆ ಅರಿವಾಗಿದೆಯೆಂದು ಪಂ॥ ನೆಹರೂರವರು ತಮಗೆ ತಿಳಿಸಿದುದಾಗಿ ಶ್ರೀ ಕರ್ಮಾರ್ಕರ್ ತಿಳಿಸಿದ್ದಾರೆ

ಕೆಳಗೆ ಕಂಡ ಪತ್ರಿಕೆ ಕೊಡಲು ಪಂ॥ ನೆಹ್ರೂರವರು ಶ್ರೀ ಕರ್ಮಾರ್ಕರವರಿಗೆ ಅಧಿಕಾರವಿತ್ತಿದ್ದಾರೆ —

" ಕರ್ನಾಟಕ ಪ್ರಾಂತ್ಯ ಸ್ಥಾಪನೆಗಾಗಿ ಕನ್ನಡಿಗರು ಹಂಬಲಿಸುತ್ತಿರುವುದನ್ನು ನಾವು ಒಪ್ಪಿಕೊಳ್ಳುತ್ತೇನೆ ಈ ಆಕೆಯನ್ನು ಈಡೇರಿಸಬೇಕೆಂಬ ಇಚ್ಛೆ ನಮಗಿದೆ ಆದರೆ ಸಂಸ್ಥಾನಗಳ ಪುನರ್ವ್ಯವಸ್ಥೆಯೊಂದಿಗೆ ಈ ಪ್ರಶ್ನೆಯನ್ನು ವಿಮರ್ಶಿಸಬೇಕೇ ಹೊರತು ಪ್ರತ್ಯೇಕವಾಗಿ ವಿಮರ್ಶಿಸಲು ಸಾಧ್ಯವಿಲ್ಲ, ನಾವು ಸಂಸ್ಥಾನಗಳ ಪುನರ್ರಚನೆ ಪ್ರಶ್ನೆಯನ್ನು ವಿಮರ್ಶಿಸಿ, ಆ ಬಗ್ಗೆ ಸೂಕ್ತ ಕಾರ್ಯಕ್ರಮವು ಕೈಗೊಳ್ಳಲಿಚ್ಛಿಸಿದ್ದೇನೆ ಈ ಕಾರ್ಯವನ್ನು ಭಿನ್ನ ಮಾಡುವ ಇಚ್ಛೆ ನಮಗಿಲ್ಲ, ಆದರೆ ಅಂಧ್ರಪ್ರಾಂತ್ಯ ಸ್ಥಾಪನೆ ಆದ ನಂತರ ಮಾತ್ರ ನಾವು ವಿಚಾರವನ್ನು ವಿಮರ್ಶೆಗೆ ತೆಗೆದುಕೊಳ್ಳುವುದು ಸಾಧ್ಯ '

ಕರ್ನಾಟಕ ಏಕೀಕರಣ ದಿನಾಚರಣೆ

ಮೈಸೂರಿನ ಕರ್ನಾಟಕ ಸಂಘದ ಆಶ್ರಯದಲ್ಲಿ ತಾ॥ ೧೫-೪-೫೨ನೇ ಸೋಮವಾರ ಸಂಜೆ ಪುರ ಭವನದ ಆವರಣದಲ್ಲಿ ಬಹಿರಂಗ ಸಭೆಯನ್ನು ಏರ್ಪಡಿಸಲಾಗಿತ್ತು ಶ್ರೀ ಕೆ ಟಿ ರಾಜಗೋಪಾಲರವರು ಕೆಲವು ಕನ್ನಡ ಗೀತೆಗಳನ್ನು ಹಾಡಿದಮೇಲೆ ಸಾಹಿತಿಗಳಾದ ಶ್ರೀ ರಂಜನ ತರಂಗ ಸುಬ್ಬರಾವ್ ಬಳ್ಳಾರಿ ವೈಷಭೇದ್ಯಸ್ವಾಮಿ, ಗಂಗಾಧರ, ಸೋಮಸುಂದರಶರ್ಮ ಇವರುಗಳು ಏಕೀಕರಣದ ಬಗ್ಗೆ ಭಾಷಣ ಮಾಡಿದರು ಒಳಕ ಈ ಕೆಳಗಿನಂತೆ ನಿರ್ಣಯಗಳನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು ಈ ಸಭೆಯು ಬಳ್ಳಾರಿಜಿಲ್ಲೆಯ ಕನ್ನಡಿಗರಿಗೆ ಏಕೀಕರಣದ ಬಗ್ಗೆ ನಡೆಯುತ್ತಿರುವ ಹೋರಾಟಕ್ಕೆ ಬೆಂಬಲ ನೀಡಬೇಕೆಂದು ಎಂದು ಬಳ್ಳಾರಿ ಜಿಲ್ಲೆಯ ೪ ತಾಲೂಕುಗಳನ್ನೂ ಹಾಗೂ ಆನಂತಪುರ ಜಿಲ್ಲೆಯ ಮಡಕಸಿರ ಹಿಂದೂಪುರಗಳನ್ನೂ ಮೈಸೂರಿಗೆ ಸೇರಿಸಲು ತಕ್ಕ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ಒತ್ತಾಯಪಡಿಸುತ್ತದೆ

೨ ಕರ್ನಾಟಕ ಪ್ರಾಂತ್ಯ ನಿರ್ಮಾಣಕ್ಕಾಗಿ ಅಮರಣಾಂತ ಉಪವಾಸ ಕೈಗೊಂಡಿರುವ ಹುಬ್ಬಳ್ಳಿಯ ಶ್ರೀ ಶಂಕರಗೌಡ ಪಾಟೀಲರ ಬಗ್ಗೆ ಈ ಸಭೆಯು ಸಂಪೂರ್ಣ ಸಹಾನುಭೂತಿಯನ್ನು ವ್ಯಕ್ತಪಡಿಸುತ್ತದೆ

೩ ಕೇಂದ್ರ ಹಾಗೂ ಪ್ರಾಂತೀಯ ಶಾಸನ ಸಭೆಗಳ ಕನ್ನಡ ಸದಸ್ಯರು ಮತ್ತು ಇತರ ಅಧಿಕಾರಸ್ಥಾನದಲ್ಲಿರುವ ಕನ್ನಡಿಗರು ಅಂದ್ರ ಪ್ರಾಂತ್ಯ ರಚನೆಯ ಜತೆಯಲ್ಲಿಯೇ ಕರ್ನಾಟಕ ಪ್ರಾಂತ್ಯ ನಿರ್ಮಾಣಕ್ಕೆ ಸ್ಪಷ್ಟರ ತಮ್ಮ ಎಲ್ಲ ಶಕ್ತಿಗಳನ್ನೂ ಪ್ರಯೋಗಿಸಿ ಬಲವತ್ತರವಾದ ಒತ್ತಾಯ ತರಬೇಕೆಂದು ಈ ಸಭೆಯು ಸೂಚಿಸುತ್ತದೆ

ನಿರ್ಣಯಗಳು ಅಂಗೀಕಾರವಾದಮೇಲೆ ಶ್ರೀ ನಾರಾಯಣಸ್ವಾಮಿಗಳು ವಂದನಾರ್ಪಣೆ ಮಾಡಿದರು ಬಳಿಕ ಸಭೆಯು ಮುಗಿಯಿತು

ತುಮಕೂರಿನಲ್ಲಿ ಕರ್ನಾಟಕ ಏಕೀಕರಣ ದಿನಾಚರಣೆ

ಭಾನುವಾರ ತಾ ೧೩೦ ಸಾಯಂಕಾಲ ಗಿಲೆಯರ ತಂಡದ ಆಶ್ರಯದಲ್ಲಿ ಮೇಲೆಕಂಡ ದಿನಾಚರಣೆಯ ಸಂಬಂಧವಾಗಿ ಸಾರ್ವಜನಿಕಸಭೆ ನಡೆಯಿತು ಅಧ್ಯಾಪಕಿ ಪತ್ರಿಕೆಯ ಸಂಪಾದಕರಾದ ಶ್ರೀ ಆರ್ ಎಸ್ ಆರಾಧ್ಯರು ಅಧ್ಯಕ್ಷತೆ ವಹಿಸಿದ್ದರು ಶ್ರೀಗಳಾದ ಬಿ ಯಸ್ ರಾಮಾಡಾರ್, ಚೆಳ್ಳಕೆರೆಯ್ಯನವರ ಕನ್ನಡಗೀತೆಗಳಿಂದನೆ ಸಮಾರಂಭ ಪ್ರಾರಂಭವಾಯಿತು ಗಣ್ಯನ್ಯಾಯವಾದಿಗಳಾದ ಶ್ರೀ ಕೆ ರಂಗಯ್ಯಂಗಾರ್, ಪ್ರಗತಿಶೀಲ ಲೇಖಕರಾದ ಶ್ರೀ ಕುಳಕುಂದ ಶಿವರಾಯ, ಎಸ್ ವಿ ಶಾಂತವೀರಾರಾಧ್ಯರು ಕರ್ನಾಟಕ ಏಕೀಕರಣದ ಬಗ್ಗೆ ಸ್ಫೂರ್ತಿಯುತವಾದ ಭಾಷಣಮಾಡಿದುಮೇಲೆ ಈ ಕೆಳಗಿಕಂಡ ನಿರ್ಣಯಗಳನ್ನು ಅಂಗೀಕರಿಸಲಾಯಿತು ಕೇಂದ್ರಸರ್ಕಾರದವರು ಭಾಷಾವಾರು ಪ್ರಾಂತ ರಚನೆಯತತ್ವವನ್ನೊಪ್ಪಿರುವುದು ಫಲಪ್ರಾಪ್ತಿಯಾದುದು ಉದಯವಾಣಿಯಾಗಿರುವ ನೂತನ ಅಂದ್ರಕ್ಕೆ ಇಲ್ಲಿನ ನಾಗರಿಕರ ಸಭೆಯು ಸ್ವಾಗತವನ್ನು ಬಯಸುತ್ತದೆ ಅದೇ ಹೊತ್ತಿಗೆ ಕರ್ನಾಟಕ ಪ್ರಾಂತವನ್ನೂ ಇತರ ಭಾಷಾವಾರು ಪ್ರಾಂತಗಳನ್ನೂ ರಚಿಸಲು ಕೇಂದ್ರ ಸರ್ಕಾರವು ಅಸಮರ್ಥವಾಗಿರುವುದಕ್ಕಾಗಿ ಈ ಸಭೆಯು ವಿಷಾದವನ್ನು ಸೂಚಿಸ ತ್ತದೆ ಕೇಂದ್ರ ಸರಕಾರವು ಈ ನೀತಿಯನ್ನು ಬಿಟ್ಟು ಕರ್ನಾಟಕ ಮತ್ತು ಇತರ ಭಾಷಾ ಪ್ರಾಂತ್ಯಗಳ ರಚನೆಯನ್ನು ತಕ್ಷಣ ಕೈಗೊಳ್ಳುವಂತೆ ಈ ಸಭೆಯು ಆಗ್ರಹಿಸುತ್ತದೆ

ಹೊಗೆ ಸೊಪ್ಪಿನ ಪದಾರ್ಥಗಳ ಮೇಲೆ ತೆರಿಗೆ

ಬೀಡಿ, ಸಿಗರೇಟು ಚುಟ್ಟಾ ಮುಂತಾದುಗಳನ್ನು ಹೊಗೆಸೊಪ್ಪಿನಿಂದ ತಯಾರಿಸುತ್ತಾರೆ ಅವುಗಳ ಮೇಲೆ ತೆರಿಗೆ ಹಾಕಬೇಕು ಎಂಬ ಮಸೂದೆಯು ಸಂಸ್ಥಾನದ ಶಾಸನ ಸಭೆಯ ಅಂಗೀಕಾರ ಪಡೆದಿದೆ ಇದರಿಂದ ಸರಕಾರಕ್ಕೆ ೨೦ ಅಥವಾ ೨೫ ಲಕ್ಷ ರೂಪಾಯಿ ಆದಾಯ ಬರುತ್ತದೆ ಈ ಪದಾರ್ಥಗಳ ಮೇಲೆ ಮಾರಾಟದ ತೆರಿಗೆಯನ್ನು ವಿಧಿಸುವುದಿಲ್ಲವೆಂಬ ನಿರ್ಣಯ ಮತ್ತು ಕಚ್ಚಾ ಹೊಗೆಸೊಪ್ಪಿನ ಮೇಲೆ ತೆರಿಗೆ ವಿಧಿಸುವುದಿಲ್ಲ

ಹೈಕೋರ್ಟಿನ ಮೇಲೆ ಶಾಸನ ಸಭೆಗೆ ಅಧಿಕಾರವಿಲ್ಲ

ಮೈಸೂರಿನ ಹೈಕೋರ್ಟಿನ ಮೇಲೆ ಸಂಸ್ಥಾನದ ಶಾಸನ ಸಭೆಗೆ ಅಧಿಕಾರ ವಿದೆಯೇ ಇಲ್ಲವೇ ಎಂಬ ಪ್ರಶ್ನೆ ಶಾಸನಸಭೆಯ ಮುಂದೆ ಬಂದು ಅದರ ಬಗ್ಗೆ ಮಾತನಾಡುತ್ತ ಸಚಿವ ಎ ಜಿ ರಾಮಚಂದ್ರರಾಯರು ಮೈಸೂರಿನ ಹೈಕೋರ್ಟಿನ ಮೇಲೆ ಸಂಸ್ಥಾನದ ಶಾಸನಸಭೆಯ ವ್ಯಾಪ್ತಿ ಇಲ್ಲ ಕೇಂದ್ರದ ಪಾರ್ಲಿಮೆಂಟಿಗೆ ಮಾತ್ರ ಅಧಿಕಾರ ಇದೆ ಎಂದುತಿಳಿಸಿದರು

ದಕ್ಷಿಣ ದೇಶದ ಭಾಷೆಗಳನ್ನೂ ಕಲಿಯಬೇಕು

ದೆಹಲಿಯ ಹಿಂದಿ ಸಂಘದವರು ಪಾರ್ಲಿಮೆಂಟಿನ ಸದಸ್ಯರಿಗೆ ತಮಿಳು ತರಗತಿಯನ್ನು ಪ್ರಾರಂಭಿಸಿದ್ದಾರೆ ಅದರ ಪ್ರಾರಂಭೋತ್ಸವವನ್ನು ನೆರವೇರಿಸುತ್ತ ಕೇಂದ್ರದ ವಿದ್ಯಾ ಸಚಿವರಾದ ಮೌಲಾನ ಅಬುಲ್ ಕಲಾಂ ಆಜಾದ್ ಅವರು ಮಾತಾಡುತ್ತ ದಕ್ಷಿಣ ಭಾರತದಲ್ಲಿ ಹಿಂದಿ ಭಾಷೆಯು ಕಲಿಸಲು ಹೇಗೆ ಪ್ರಚಾರ ನಡೆಯುತ್ತಿದೆಯೋ ಹಾಗೆಯೇ ಉತ್ತರ ಭಾರತದಲ್ಲಿ ದಕ್ಷಿಣ ಭಾಷೆಯನ್ನು ಕಲಿಸಲು ಪ್ರಚಾರ ನಡೆಯುವುದು ಅಗತ್ಯ ಎಂದು ತಿಳಿಸಿದರು

ಚಂದಾದಾರರಲ್ಲಿ ವಿನಂತಿ

ನಮ್ಮ ಪಂಚಾಚಾರ್ಯ ಪ್ರಭಾ ವಾರ ಪತ್ರಿಕೆಯ ವಾರ್ಷಿಕ ಚಂದಾ ೩ ರೂ ಗಳಾಗಿದ್ದು ಪಿ ಪಿ ಚಾರ್ಜ ಇದೇ ಏಪ್ರಿಲ್ ೧೫ನೇ ತಾರೀಖಿನಿಂದ (೦೭೯) ಏಳು ಆಣೆ ಹೆಚ್ಚಳವು ಕಾಯ ಆಗಿದೆ ಆದ್ದರಿಂದ ನಾವು ವಿ ಪಿ ಮಾಡಿದರೆ ವಿ ಪಿ ಖರ್ಚು ಸೇರಿ ೩-೮-೦ ಆಗುವದು ಈ ದುಡ್ಡು ನಮ್ಮ ಕೈ ಸೇರಬೇಕಾದರೆ ಅಯಾ ಪೋಸ್ಟಾಫೀಸಿಗೆ ಎರಡು ಆಣೆ ಹೆಚ್ಚಿಗೆ ಕೊಡಬೇಕಾಗುವದು ಹೀಗಾಗಿ ಪ್ರತಿಯೊಬ್ಬ ಚಂದಾದಾರರಿಗೆ ಹತ್ತು ಆಣೆ ಹೆಚ್ಚು ಖರ್ಚು ಬರುವದು. ಆದ್ದರಿಂದ ಚಂದಾದಾರರ ಅವಧಿ ಮುಗಿಯುವ ೧ ತಿಂಗಳು ಮುಂಚೆ ನಾವು ಪತ್ರಿಕೆಯಲ್ಲಿ ಸೂಚನೆಗಳನ್ನು ಕಳಿಸುತ್ತೇವೆ. ಆ ಪ್ರಕಾರ ಕೂಡಲೆ ಮೂರು ರೂಪಾಯಿಗಳನ್ನು ಮನಿಯಾರ್ಡರ ಮಾಡಿದರೆ ಎರಡೇ ಆಣೆಯಲ್ಲಿ ದುಡ್ಡು ನಮ್ಮ ಕೈಸೇರುವುದಲ್ಲದೆ ಯಥಾಪ್ರಕಾರ ಪತ್ರಿಕೆಗಳೂ ನಿಮ್ಮ ಕೈಸೇರುತ್ತವೆ. ದಯವಿಟ್ಟು ಎಲ್ಲರೂ ಮನಿಯಾರ್ಡರ ಮಾಡಬೇಕು ಮನಿಯಾರ್ಡರ ಕಳಿಸದೆ ಇದ್ದವರಿಗೆ ಪತ್ರಿಕೆಗಳನ್ನು ನಿಲ್ಲಿಸಿಬಿಡುತ್ತೇವೆ. ಮನಿಯಾರ್ಡರ ಫಾರಮ್ಮಿನಲ್ಲಿ ಹೆಸರು ಹಾಗೂ ತಮ್ಮ ರೈ ನಂಬರನ್ನು ತಿಳಿಸಬೇಕು ಹೀಗೆ ಮಾಡುವುದರಿಂದ ಚಂದಾದಾರರಿಗೆ ಉಳಿತಾಯವಾಗುವುದಲ್ಲದೆ ನಾವು ವಿ ಪಿ ಮಾಡಿ ದಾರೀಖಾಯಿನ ತೊಂದರೆಯೂ ತಪ್ಪುತ್ತದೆ ಸರ್ವ ಮಹನೀಯರು ನಾವು ಮಾಡಿಕೊಂಡ ವಿನಂತಿಯನ್ನು ಗಮನಕ್ಕೆ ತಂದು ೩ ರೂಪಾಯಿ ಚಂದಾ ಹಣವನ್ನು ಮನಿಯಾರ್ಡರ ರೂಪದಿಂದ ಸಲ್ಲಿಸುತ್ತೀರೆಂದು ನಂಬಿದ್ದೇವೆ

—ಸಂಪಾದಕರು

ನಾನಾವಿಧ ಬಣ್ಣಗಳಿಂದ ಮುದ್ರಿತವಾದ ಶ್ರೀಜಗದ್ಗುರು ರೇಣುಕಾಚಾರ್ಯರಿಂ ಲಿಂಗೋದ್ಭವ ಫೋಟೋ ಉಚಿತ'

ಸಚಿತ್ರ ರೇಣುಕವಿಜಯ ಹಾಗು ರೇಣುಕವಿಜಯ ಮಹಾಪುರಾಣ

ವೀರಶೈವ ಮಹಾಮತಸ್ಥಾಪಕರಾದ ಶ್ರೀ ಜಗದ್ಗುರು ಪಂಚಾಚಾರ್ಯರಲ್ಲಿ ರೇಣುಕಾಚಾರ್ಯರು ಒಬ್ಬರು ಈ ಭಗವತ್ಪಾದರ ಲೀಲಾಬೋಧಕವಾದ ಸಚಿತ್ರ ರೇಣುಕವಿಜಯವೂ, ರೇಣುಕವಿಜಯಮಹಾಪುರಾಣವೂ ಸುಂದರ ಚಿತ್ರಗಳಿಂದ ೨ ಪ್ರಿಂಟಾಗಿ ಉತ್ತಮ ಬೈಂಡಿಂಗಿಂದ ಸಿದ್ಧವಾಗಿವೆ ಪ್ರತಿಯೊಬ್ಬ ವೀರಶೈವಪಥಮಾಳಿ ಮನೆಯಲ್ಲಿಯೂ ಈ ಪುಸ್ತಕಗಳನ್ನು ತರಿಸಿಕೊಂಡು ಓದಿ ಧರ್ಮದ ಮಹತ್ವವನ್ನರಿತು ಆಚರಿಸಿ ಪವಿತ್ರಾತ್ಮಿಗಳಾಗಲೆಂಬ ಉದ್ದೇಶದಿಂದ ಕೆಳಗೆ ಪ್ರಕಟಿಸಿದಂತೆ ಈಗ ಪುಸ್ತಕಗಳ ಬೆಲೆಯನ್ನು ಕಡಿಮೆ ಮಾಡಿರುವುದಲ್ಲದೆ ಗ್ರಾಹಕರಿಗೆ ನಾನಾ ಬಣ್ಣಗಳಿಂದ ಮುದ್ರಿತವಾದ ರೇಣುಕಾಚಾರ್ಯರ ಫೋಟೋವನ್ನು (೧೪×೧೦) ಪ್ರೀಯಾಗಿ ಕಳಿಸಿಕೊಡುತ್ತೇವೆ ಹೆಚ್ಚಿಗೆ ಪುಸ್ತಕ ತರಿಸುವವರು ಕಮಿಷನ್ ಆಫೀಸ್ಸಿನಿಂದ ಫೋಟೋದ ಬದಲಾಗಿ ರೂಪಾಯಿಗೆ ಪಾಲ್ಯಾಜೆಯಂತೆ ಕಮಿಷನ್ ಕೊಡುತ್ತೇವೆ ಟಪಾಲ ಖರ್ಚು ಪ್ರತ್ಯೇಕ.

ಸಚಿತ್ರ ರೇಣುಕವಿಜಯ (ಗದ್ಯ) ೧—೮—೦
ರೇಣುಕವಿಜಯ ಮಹಾಪುರಾಣ (ಭಾಮಿನಿ) ೨—೦—೦

ಮ್ಯಾನೇಜರ್—ಶ್ರೀ ಪಂಚಾಚಾರ್ಯ ವಿಲೆಕ್ಟ್ರಿಕ್ ಪ್ರೆಸ್, ಮೈಸೂರು.

Edited Printed and Published by Brihanmathadhyaksha Sri Malladevaiah at Sri Panchacharya Electric Press, Sayaji Rao Road, Mysore

REGISTERED No. M 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಭ್ಯಾಂ ಪ್ರಸೀದಂತು ॥ REGISTERED No. M 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಮ್ನಾನಪಂಕಜಾತಜನಿತರ್ ಪಂಚಾಸ್ಯಸೀರಾದಿಪರ್ ।ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೇಶ್ವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಮೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ಪಾಲಿಪ್ಪುದೀಲೋಕಮಂ ॥

ಸಂಸ್ಥಾಪಕರು— ನಾಗನೂರು ಬೃಹನ್ಮಹಾಧ್ಯಕ್ಷರಾದ ವೆಱ ಪಂ॥ ಶ್ರೀ ಅತೀಶಾಚಾರ್ಯಶಾಸ್ತ್ರಿಗಳವರು.

ವಾರ್ಷಿಕ ಚಂದಾ ೩ ರೂ.] ಸಂಪಾದಕರು— ನಾಗನೂರು ಬೃಹನ್ಮಹಾಧ್ಯಕ್ಷರಾದ ಶ್ರೀ ಮಹಾದೇವಮ್ಯನವರು [ವಿ ಪಿ ಖರ್ಚು ಸೇರಿ ೩ ರೂ ೬ ಆ.

ಸಂಪುಟ ೨೬] ಸೋಮವಾರ ತಾ॥ ೪ ನೇ ಮೇ ೧೯೨೩ [ಸಂಚಿಕೆ ೫೧

ಪತ್ರವ್ಯವಹಾರ

[ಚಾಪ್ಟೀದಾರರು ಅಭಿಪ್ರಾಯ ಪಡುವ ಲೇಖನಗಳಿಗೆ ಪತ್ರಕರ್ತರು ಜವಾಬ್ದಾರರಲ್ಲ ಎಂಬ ವಿಷಯವನ್ನು ಸರ್ವರೂ ಲಕ್ಷ್ಯವಲ್ಲಿಡಬೇಕೆಂದು —ಸಂ]

ಶ್ರೀಜಗದ್ಗುರು ರಂಭಾಪುರೀ ಮಹಾಸಂಸ್ಥಾನ ನೂತನಮಂದಿರ ಪ್ರಾರಂಭೋತ್ಸವ

ಈ ಮಹಾಪೀಠವು ಮಲಯ ಪರ್ವತದ ಮೇಲ್ಭಾಗದಲ್ಲಿ ಸಹಸ್ರಾರು ವರ್ಷಗಳಿಂದ ವಿರಾಜಮಾನವಾಗಿರುವ ವಿಷಯ ಸರ್ವರಿಗೂ ತಿಳಿದಿದ್ದಾಗಿದೆ. ಕೈಲಾಸ ನಾಯಿಗಾದ ಶ್ರೀ ೧೦೦೮ ಜಗದ್ಗುರು ಶ್ರೀ ರೇಣುಕಾಚಾರ್ಯರು ಶಿಲಾಮಯವಾದ ಪುರಾತನ ಆಟ್ಟಡಕ್ಕನ್ನು ನೂತನವಾಗಿ ಶಿಲಾಮಯವಾದ ಸ್ವಾಗಿ ಮಾಡಬೇಕೆಂದು ಸಂಕಲ್ಪಿಸಿ ದೇಶಮಧ್ಯದಲ್ಲಿ ಸಂಚರಿಸುತ್ತ ಜೀರ್ಣೋದ್ಧಾರ ಸಂದಣ್ಣ ಸಂಗ್ರಹಿಸಿದರು. ಸುಮಾರು ಒಂದೂಕಾಲು ಲಕ್ಷರೂಪಾಯಿಗಳ ವೆಚ್ಚದಿಂದ ಪೂರ್ತನವಾಗಿ ಅಂದವಾದ ಮೊದಲಿನಂತೆ ಭೂಭಾಗ ಅಂತಸ್ತನ್ನು ನಿರ್ಮಿಸಿದರು

ಇತ್ತೀಚೆಗೆ ಈಗಿನ ಶ್ರೀ ಜಗ॥ ಮಹಾಸ್ವಾಮಿಗಳವರು ಮೇರಿನ ಭಾಗವನ್ನು ಸುಮಾರು ಮುಕ್ಕಾಲು ಲಕ್ಷರೂಗಳ ವೆಚ್ಚದಿಂದ ಆಟ್ಟುಸುತ್ತಲಿದ್ದಾರೆ ಕೀಳ್ಭಾದಲ್ಲಿಯೇ ಅಳವಡಿಸಿದ ಕಾಮಗಾರಿಯು ಮುಕ್ತಾಯವಾಗುವುದರಲ್ಲಿದೆ ನೂತನ ಮಂದಿರ ಪ್ರಾರಂಭೋತ್ಸವವು ಹಿಂದಿನ ಶ್ರೀ ಜಗದ್ಗುರುಗಳವರ ದಿವ್ಯ ಸಂಕಲ್ಪದ ಮೇರೆಗೆ ಮೈಸೂರು ಶ್ರೀಮನ್ಮಹಾರಾಜರವರಿಂದ ನೆರವೇರಿಸಲ್ಪಡಬೇಕಾಗಿದೆ ಅದರಂತೆ ಪ್ರಾರಂಭೋತ್ಸವದ ಸುದಿನವು ಸಮೀಪಿಸುತ್ತಿರುವುದಾಗಿಯೂ ಅದರ ಪ್ರಕಟನೆಯು ಅಪೇಕ್ಷಿತ ಪತ್ರಿಕೆಗಳಲ್ಲಿಯೇ ಹೊರಬೀಳುವದಾಗಿಯೂ ಇರುವ ವಿಷಯವನ್ನು ಸಲಲ ಸಧ್ಯತ್ಸ ಮಹಾಶಯರಿಗೆ ತಿಳಿಸಲು ಸಂತೋಷವೆನಿಸುತ್ತದೆ

ಬಾಳೆಹೊನ್ನೂರು ಏಜೆಂಟ್
ತಾ॥ ೨೩-೪-೨೩ ರಂಭಾಪುರಿ ಸಂಸ್ಥಾನಮಠ

ಲಿಂಗ ಮಹಾಪುರಾಣ ಪ್ರಾರಂಭ ಸೊಲ್ಲಾಪುರ

ಶ್ರೀಮಜ್ಜಗದ್ಗುರು ಶಿವಧರ್ಮಸಂಸ್ಥಾಪನಾಚಾರ್ಯ ಉತ್ತರ ಕರ್ನಾಟಕಾಲಂಕಾರವೂ ಆದ ಸೊಲ್ಲಾಪುರದಲ್ಲಿ ವಿಶ್ವಕಲ್ಯಾಣಾರ್ಥವಾಗಿ ಸಪತ್ನಿ ಭಗವದಭಿಷ್ಟಾನಸಿದ್ಧಾಂತಾಗಮಿಕ್ಕಾದ ಹೋಟೀಗೇ ಬೃಹನ್ಮಹಾಧ್ಯಕ್ಷ ವೀರ ತಪೋನಿಧಿ ಶ್ರೀ ಶ್ರೀ ಶ್ರೀ ವೀರತಿಪಾಚಾರ್ಯರ ಮಹಾಮಠದಲ್ಲಿ ಇದೇ ತಾ ೪ ರಿಂದ ೧೫ ನೇ ಆಧಿಕ ವೈಶಾಖ ಶುಕ್ಲ ೪ ಮಂಗಳವಾರದಿಂದ ತಾ॥ ೧೭-೪-೨೩ ವರೆಗೆ ಅಧಿಕಮಾಸ ಪ್ರಯುಕ್ತ ವಾಗಿ ಮಹರ್ಷಿ ವ್ಯಾಸೋಕ್ತ "ಲಿಂಗ ಮಹಾಪುರಾಣ" ವು ಪ್ರಾರಂಭವಾಗಿರುವುದು ಸಮಸ್ತ ಜಾಗರೀತಿಗೆ ಪೂಜ್ಯರದ ವಿಷಯವಾಗಿದೆ

ಪ್ರತಿದಿನ ಸಂಜೆ ೫ ಘಂಟೆಯಿಂದ ೭ ರ ವರೆಗೆ ಸಾಗುತ್ತಿರುವುದು ಪ್ರವಚನ ಪಟು ವೇಗ ಅಲ್ಲವೆ. ಪ್ರಭುಗಳು ತಮ್ಮ ಭಕ್ತರಂಜಪವಾಣಿಯಂತೆ ಜಿಲ್ಲೆಗೇ ರಸಿಕವಾಗಿ ಹೇಳುತ್ತಿರುವರು ಸರ್ವರೂ ಅಗವಿ ಧನ್ಯರಾಗಬೇಕಾಗಿ ಕೋರಿಕೆ

ಕಾರ್ಯದರ್ಶಿ
ಶ್ರೀ ಮದ್ವೀರಶೈವ ಗುರುಕುಲ ಸೊಲ್ಲಾಪುರ

ದುಃಖವಾರ್ತೆ

ಹುಬ್ಬಳ್ಳಿಕಹರ ಭೂಪಟೇಲ್ ನಿವಾಸಿಗಳಾದ ಶ್ರೀ ಫಕೀರಪ್ಪ ಗದಿಗೆಪ್ಪ ಮುರಿಗೆಪ್ಪನವರ ಇವರು ತಮ್ಮ ೪೦ ನೇ ವಯಸ್ಸಿನಲ್ಲಿ ಸ್ವರ್ಗಸ್ಥರಾದರು ತಾ॥ ೩೬-೪ ೧೯೨೩ ರವಿವಾರ ರಾತ್ರಿ ೯ ಘಂಟೆಗೆ ಸ್ವರ್ಗಸ್ಥರಾದರು ಈ ಮಹಾನುಭಾವರು ದಲಾಲಿ ವ್ಯಾಪಾರಸ್ಥರಿದ್ದು ಸಜ್ಜನರಾಗಿ ಹರ ಗುರು, ಲಿಂಗ, ಜಂಗಮ ಭಕ್ತರಾಗಿ ಸದಾ ದಾಸೋಹ ಬುದ್ಧಿಯಿಂದ ವರ್ತಿಸುತ್ತಿದ್ದರು ಮಾನ, ಧರ್ಮ, ಸರ್ಕಾರದಲ್ಲಿ ನಿರತರಾಗಿ ಶರಣಾಗತಿದ್ದರು ಇವರ ಅತ್ಯಕ್ಕೆ ಶಾಂತಿಯ ನ್ನೂ ಇವರ ಚಿ॥ ಗಳಾದಿಯಾಗಿ ಬಂಧುವರ್ಗ ಕ್ಕೆ ದುಃಖ ಶಮನವನ್ನು ಶ್ರೀ ಜ॥ ಪಂಚಾಚಾರ್ಯರು ಅನುಗ್ರಹಿಸಲೆಂದು ಬೇಡುತ್ತೇನೆ

ದುಃಖಭಾಗಿ

ಆಯುರ್ವೇದ ವೈಶಿಷ್ಟ್ಯ

"ಭಾರತದಲ್ಲಿ ಆಯುರ್ವೇದ ಪದ್ಧತಿಯು ವಿಶಿಷ್ಟ ಸ್ಥಾನವನ್ನು ಪಡೆದಿದೆ. ಪರದೇಶ್ಯಗಳಾದ ಗ್ರೀಸ್, ಇಟಲಿ ಮತ್ತು ಅರೇಬಿಯಾಗಳಲ್ಲಿ ಆಯಾರಾಷ್ಟ್ರಗಳ ರಾಜ್ಯೀಯ ವೈದ್ಯಕ್ರಮವು ಇತ್ತೀಚೆಗೆ ಬಲವಾಗಿ, ಅಧುನಿಕ ಅಲೋಪತಿಕ್ ಪದ್ಧತಿಗೆ ಸ್ಪಾರ್ಧೆಯೊಟ್ಟಿದೆ ಆದರೆ ಭಾರತದಲ್ಲಿ ಇನ್ನೂ ಶೇಕಡ ೯೦ ಮಂದಿ ಜನತೆಗೆ ಆಯುರ್ವೇದದಲ್ಲಿ ಇರುವಷ್ಟು ವಿಶ್ವಾಸ ಬೇರಾವ ಪದ್ಧತಿಯ. ವೈದ್ಯಕ್ರಮದಲ್ಲಿಯೂ ಇಲ್ಲ"

ಆಲೋಪತಿಕ್ ಔಷಧಿಗಳಲ್ಲಿನ ದೋಷ

ಅಧುನಿಕಅಲೋಪತಿಕ್ ಮತ್ತು ಆಯುರ್ವೇದ ಕ್ರಮಗಳನ್ನು ಸಮಾಕ್ಷಿಸುತ್ತ, ಅಲೋಪತಿಕ್ ಪದ್ಧತಿಯಲ್ಲಿ ಔಷಧಗಳು ಪ್ರಸ್ತುತ ಆಯುರ್ವೇದಾ ಪಾಡುವುದರ ಜತೆಗೆ ಮುಂದಿನ ಆಯುಲೆಗೆ ಏಕಿತೆಗೆ ಹಾಕುತ್ತದೆಂದೂ, ಆಯುರ್ವೇದ ಕ್ರಮದಲ್ಲಿ ಔಷಧಿಗಳು ಈ ರೀತಿ ಏರಿಣಾಮ ನುವದಿಲ್ಲವೆಂದೂ ತಿಳಿಯುತ್ತದೆ.

ಇತ್ತೀಚೆಗೆ ಗಂಧಕ ಮಿಶ್ರಿತ ಸಲ್ಫಾ ಔಷಧಗಳು ಸಂವೇದಾಪಾರಣ ಆಯಿಲೆಗಳೊ ಆಲೋಪತಿ ಡಾಕ್ಟರು ಗಳಂದ ಕೊಡಲ್ಪಡುತ್ತಿವೆ ಆದರೆ ಅನೇಕ ವೇಳೆ ಈ ಔಷಧಗಳ ಸೇವನೆಯಿಂದ ಆಯುಲೆಯೂ ಮೊದಲಿಗಿಂತ ಹೆಚ್ಚಾಗಿ ಪರಿಣಾಮಿಸಿರುವ ಎಷ್ಟೋ ನಿದರ್ಶನಗಳು ನಮ್ಮ ಅನ್ನೆಗೆ ಬಿದ್ದಿವೆ ಅಮೆರಿಕದ "ಟ್ರೈಬ್ಯೂನ್" ಪತ್ರಿಕೆಯು ತನ್ನ ಡಿಸೆಂಬರ್ ಸಂಚಿಕೆಯಲ್ಲಿ ಕೇವಲ ಅಶ್ಪ್ರಿನ್ ಸೇವನೆಯಿಂದ ಮೃತಿಹೊಂದಿದ ನೂರು ಮಕ್ಕಳ ನಿದರ್ಶನವೊಂದನ್ನ ಪ್ರಕಟಿಸಿದೆ ಈ ವಿಧದ ಗಂಧಕ ಮಿಶ್ರಿತ ಸಲ್ಫಾ ಔಷಧಗಳನ್ನೂ ಮತ್ತು ಅಧುನಿಕ ಅಂಟಿಒಟಿಕ್ಸ್ ಗಳನ್ನೂ ಜನಸಾಮಾನ್ಯಗೆ ಉಪಯೋಗಕ್ಕೆ ಕೊಡುವುದನ್ನು ಆದಷ್ಟು ನಿಲ್ಲಿಸಬೇಕು

ಅಖಿಭಾ॥ ಆಯುರ್ವೇದ ವಿಶ್ವವಿದ್ಯಾಪಿಲಯ

ಋಷಿಕೇಶದಲ್ಲಿ ಸ್ಥಾಪಿಸಬೇಕೆಂದು ನಿರ್ಧಾರ

ಅಖಿಲ ಭಾರತ ಆಯುರ್ವೇದಿಕ್ ಕಾಂಗ್ರೆಸ್ಸಿನ ಗವರ್ನಿಂಗ್ ಕೌನ್ಸಿಲ್ ಸಭೆಯು ಕಾರ್ಯಕಲಾಪಗಳು ತಾ॥ ೨೬-೪ ರಲ್ಲಿ ಬೆಂಗಳೂರಲ್ಲಿ ನಡೆದು ಮುಖ್ಯವಾಗಿ ಹಲವಾರು ನಿರ್ಣಯಗಳನ್ನು ಅಂಗೀಕರಿಸಲಾಯಿತು

ಹಿಮಾಲಯದ ಕೆಳ್ಭಲ್ಲಿರುವ ಋಷಿಕೇಶದಲ್ಲಿ ಒಂದು ಅಖಿಲಭಾರತ ಆಯುರ್ವೇದ ವಿಶ್ವವಿದ್ಯಾಪಿಲಯವನ್ನು ಸ್ಥಾಪಿಸಬೇಕೆಂದು ನಿರ್ಧರಿಸಲಾಯಿತು

ಅಲ್ಲದೆ ಆಯುರ್ವೇದ ಔಷಧಗಳ ತಯಾರಿಕೆಯಲ್ಲಿ ಒಳಸುವ ವಿದೇಶಿ ಔಷಧ ಇಮಾಗ್ರಿಗಳ ಮೇಲೆ ವಿಧಿಸುವ ಆಮದು ಸುಂಕವನ್ನು ವಜಾಮಾಡಬೇಕು ಅದು ಸಾಧ್ಯವಾಗದಿದ್ದರೆ ಸುಂಕದ ದರವನ್ನಾದರೂ ಇಳಿಸ ಬೇಕು ಎಂದು ಭಾರತ ಸರ್ಕಾರವನ್ನು ಕೊರಿವ ನಿರ್ಣಯ ಮಾಡಲಾಯಿತು ಆಯುರ್ವೇದ ಅಭಿವೃದ್ಧಿ ವಿಚಾರದ ಮೇಲ್ವಿಚಾರಣೆಯನ್ನು ಆಯುರ್ವೇದಕ್ಕೆ ವಿರೋಧವಾಗುವ ಪಾಶ್ಚಾತ್ಯ ವೈದ್ಯರುಗಳ ಕೈ ತಪ್ಪಿಸಿ ಆದಷ್ಟು ಆಯುರ್ವೇದ ಪ್ರವೀಣರ ಮೇಲ್ವಿಚಾರಣೆಗೆ ಒಳಪಡಿಸಬೇಕೆಂದೂ ನಿರ್ಣಯ ಮಾಡಲಾಯಿತು.

ದೇಶದ ವೈದ್ಯಕ್ರಮ ಮತ್ತು ಆರೋಗ್ಯ ವ್ಯವಸ್ಥೆಯಲ್ಲಿ ಆಯುರ್ವೇದ ಚಿಕಿತ್ಸಾ ಪದ್ಧತಿಗೆ ಹೆಚ್ಚಿನ ಸ್ಥಾಮುಖ್ಯತೆ ದೊರೆಯುವಂತೆ ಮಾಡಲು ಮತ್ತು ಇದರ ಅವಶ್ಯಕತೆಯನ್ನು ಪ್ರಭುತ್ವದವರಿಗೆ ಮನದಟ್ಟಾಗುವಂತೆ ಮಾಡಲು ಆಯುರ್ವೇದ ಕಾಂಗ್ರೆಸ್ಸಿನ ಅಧ್ಯಕ್ಷರು ಭಾರತಾದ್ಯಂತ ಪ್ರವಾಸ ಕೈಕೊಂಡು, ಭಾರತ ಸರಕಾರದ ಮತ್ತು ಸಂಸ್ಥಾನಗಳ ಸರ್ಕಾರಗಳ ಆರೋಗ್ಯ ಸಚಿವರುಗಳೊಡನೆ ಮಾತುಕತೆ ನಡೆಸಬೇಕೆಂದೂ ನಿರ್ಧರಿಸಲಾಯಿತು

ಪಾರ್ಲಿಮೆಂಟಿನಲ್ಲಿ ಆಂಧ್ರ ಸದಸ್ಯರು

ಆಂಧ್ರ ಪ್ರಾಂತ್ಯ ರಚನೆಯಾದಮೇಲಿನ ಕೇಂದ್ರ ಪಾರ್ಲಿಮೆಂಟಿನಲ್ಲಿ ಆಂಧ್ರವನ್ನು ಪ್ರತಿನಿಧಿಸಲು ೨೮ ಮಂದಿ ಸದಸ್ಯರಿಗೆ ಸದಸ್ಯತ್ವ ಕೊಡಲಾಗಿದೆ ಆಂಧ್ರ ಬಿಟ್ಟು ಉಳಿದ ಮದ್ರಾಸು ಪ್ರಾಂತ್ಯಕ್ಕೆ ಪಾರ್ಲಿಮೆಂಟಿನಲ್ಲಿ ೪೯ ಸ್ಥಾನಗಳನ್ನು ಕೊಡಲಾಗಿದೆ

ಪಂಚಾಚಾರ್ಯಪ್ರಭಾ

೧೯೫೩ ನೆಯ ಮೇ ತಾ|| ೪ ನೇ ಸೋಮವಾರ

ಶ್ರೀ ಪಟ್ಟ-ಚರಾಧಿಕಾರಿಗಳ ಸಮ್ಮೇಲನವೂ ಅವಶ್ಯಕತೆಯೂ

ಶ್ರೀ ರೇಣುಕಾದಿ ಪಂಚಾಚಾರ್ಯರಿಂದ ಸ್ಥಾಪಿತವಾದ ವೀರಶೈವ ಧರ್ಮಸಾಮ್ರಾಜ್ಯವನ್ನು ಆಚಾರ್ಯ ಭಗವತ್ಪಾದರು ರಾಜಾಧಿರಾಜರ ಪ್ರೋತ್ಸಾಹದಿಂದ ಕಾಪಾಡುತ್ತಾ ಬಂದರು. ರಾಜರಿಗೂ ಧರ್ಮಗುರುಗಳಿಗೂ ನಿಕಟ ಸಂಬಂಧವಿದ್ದುದರಿಂದ ಅವರು ಗುರುಗಳನ್ನು ಭಕ್ತಿ ವಿಶ್ವಾಸಗಳಿಂದ ಕಂಡು ಅವರ ಯೋಗಕ್ಷೇಮಗಳಲ್ಲಿ ಭಾಗಿಗಳಾಗಿ ಸದಸದ್ವಿವೇಕದಿಂದ ವರ್ತಿಸಿ ಶ್ರೀ ಗುರುಕೃಪೆಯನ್ನು ಪಡೆದು ಇಹ-ಪರ ಸುಖವನ್ನನುಭವಿಸಿದರೆಂಬುದಕ್ಕೆ ಅನೇಕ ದೃಷ್ಟಾಂತಗಳುಂಟು.

ಆಗಿನ ಕಾಲದ ಭಾರತೀಯರಲ್ಲಿ ಸತ್ಯಪ್ರೇಮ ಧರ್ಮನೀತಿಗಳು ರಕ್ತಗತವಾಗಿದ್ದವು, ಆದರೆ ಇತ್ತೀಚೆಗೆ ಆಧುನಿಕ ವಿದ್ಯಾಪ್ರಚಾರದ ಫಲವಾಗಿ ಧರ್ಮದ ಪ್ರೇಮವು ಕುಗ್ಗಲಾರಂಭಿಸಿತು. ಗುರುಗಳು ಧರ್ಮಾಧಿಕಾರವನ್ನೂ ಭಕ್ತೋದ್ಧಾರವನ್ನೂ ಮರೆತು ಶಿವಪೂಜಾ ಲೋಲರಾದರು. ಮೇರೆದಪ್ಪಿ ಬರುತ್ತಿರುವ ಕಲಿಯ ಮಾಯಾಸ್ತ್ರಕ್ಕೆ ಧರ್ಮವು ಬಲಿಯಾಯಿತು. ಧರ್ಮವನ್ನೂ ಧರ್ಮಗುರುಗಳನ್ನೂ ಮನ್ನಿಸದೆ, ರಾಜ್ಯಸೂತ್ರಗಳು ಜಗತ್ತನ್ನು ವ್ಯಾಪಿಸಿದುವು. ಈ ಸಮಯದಲ್ಲಿ ಗುರುಗಳು ತಮ್ಮ ಪೂಜಾ ಜಪ ತಪೋನುಷ್ಠಾನಗಳೊಂದಿಗೆ ಧರ್ಮವನ್ನು ಕಾಪಾಡಲು ಆಯಾಭಾಗದ ಪರಿಸ್ಥಿತಿಗನುಸಾರವಾಗಿ ಶ್ರೀ ಜ|| ಪಂಚಾಚಾರ್ಯ ಸಮ್ಮೇಲನ ಶ್ರೀ ಪಟ್ಟ ಚರಾಧಿಕಾರಿಗಳ ಸಮ್ಮೇಲನಗಳನ್ನು ಕರೆದು ತದ್ವಾರಾ ಧರ್ಮನಿಬಂಧನೆಗಳನ್ನು ಪ್ರಕಾಶಪಡಿಸಬೇಕಾಯಿತು. ಅಂತೆಯೇ ಪಂ|| ಕಾಶೀನಾಥ ಶಾಸ್ತ್ರಿಗಳವರ ಪ್ರಯತ್ನದಿಂದ ೧೯೫೦ ನೇ ಇಸ್ವಿಯಲ್ಲಿ ಕಾಶೀಪಂಚಾಚಾರ್ಯ ಸಮ್ಮೇಲನವೂ ಕುಂದಗೋಳ ನವಲಗುಂದ ಸಕ್ರೀಗೇರಿ ಉಜ್ಜಯಿನಿ ಪಟ್ಟ ಚರಾಧಿಕಾರಿಗಳ ಸಮ್ಮೇಲನಗಳೂ ನಡೆದು ಗುರುವರ್ಗವು ಜಾಗ್ರತವಾಯಿತು. ಈ ಸಮ್ಮೇಲನಗಳು ಆಗಾಗ್ಗೆ ನಡೆಯುತ್ತಿರುವುದರಿಂದ ಧರ್ಮದಲ್ಲಿ ಒಂದು ತರದ ನವಚೈತನ್ಯ ಬರುತ್ತಿರುವುದು ಸಹಜವಾಗಿದೆ. ಈಗ ಸುಮಾರು ೨೦ ೩೦ ವರ್ಷಗಳಿಂದ ಸಮ್ಮೇಲನದ ವಿಚಾರವೇ ನಿಂತುಹೋದ್ದರಿಂದ ಗುರುಗಳಲ್ಲಿ ಅನೈಕ್ಯತೆಯು ತಲೆದೋರಿಪತ್ತಿದ. ಇದನ್ನರಿತ ಬಂಕಿ "ವೀರಶೈವ ಗರ್ಜನಾ" ಪತ್ರಿಕೆಯ ಸಂಪಾದಕರಾದ ಶ್ರೀ ರಾಚಲಿಂಗಸ್ವಾಮಿಗಳು ಶ್ರೀ ಪಟ್ಟ ಚರಾಧಿಕಾರಿಗಳ ಸಮ್ಮೇಲನವನ್ನು ಕರೆಯಲು ಯೋಗ್ಯಸ್ಥಾನವಾವುದೆಂಬ ಬಗ್ಗೆ ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಿದ್ದಕ್ಕೆ ಉತ್ತರವಾಗಿ ಈಗ ಎರಡುವಾರಗಳ ಹಿಂದೆಯೇ ನಮ್ಮ ಪತ್ರಿಕೆಯಲ್ಲಿ ಗದಗ ಪಟ್ಟಣವು ಅನುಕೂಲವೆಂದು ಸಬಲಕಾರಣಗಳೊಂದಿಗೆ ಸ್ಪಷ್ಟಪಡಿಸಲಾಗಿದ. ಈಗ ೧೫ ದಿನಗಳು ಕಳೆದರೂ ಶ್ರೀಗಳಿಂದ ಉತ್ತರವಿಲ್ಲ. ಶುಭಸ್ಯ ಶೀಘ್ರಂ ಎಂಬಂತೆ ಹಮ್ಮಿದ ಕಾರ್ಯವನ್ನು ಬೇಗನೆ ನೆರವೇರಿಸುವುದು ಶ್ರೇಯಸ್ಕರ. ಬಹುದಿನಗಳಿಂದ ನಿಂತುಹೋದ ಈ ಸಮ್ಮೇಲನದ ವಿಚಾರವನ್ನು ಜ್ಞಾಪಿಸಿಕೊಟ್ಟಿದ್ದಕ್ಕೆ ಶ್ರೀಗಳಿಗೆ ಅನಂತ ವಂದನೆಗಳನ್ನು ಅರ್ಪಿಸಬಹುದು. ನವಿಲು ಸ್ವಾತಿಮಳೆಯ ಹನಿಯನ್ನು ಅಪೇಕ್ಷಿಸಿದಂತೆ ಗುರುವರ್ಗವು ಸಮ್ಮೇಲನದ ನಿಶ್ಚಿತ ದಿನವನ್ನು ಕಾದುಕೊಂಡಿದೆ. ಪಂ|| ಕಾಶೀನಾಥ ಶಾಸ್ತ್ರಿಗಳವರಂತೆ ಶ್ರೀ ರಾಚಲಿಂಗ ಸ್ವಾಮಿಗಳು ಎಲ್ಲಿಯೇ ಆಗಲಿ ಸಮ್ಮೇಲನವನ್ನು ನಡೆಯಿಸಿ ಕೀರ್ತಿಭಾಗಿಗಳಾಗಲೆಂದೂ ಜಗದಾಚಾರ್ಯರು ಅವರಿಗೆ ಆಯುರಾರೋಗ್ಯ ಭಾಗ್ಯವನ್ನಿತ್ತು ಕಾಪಾಡಲೆಂದೂ ಕೋರುತ್ತೇವೆ.

ಸಮ್ಮೇಲನದಲ್ಲಿ ನಡೆಯಬೇಕಾದ ವಿಷಯಗಳು

೧ ಈ ಒಳಗಾಗಿ ಕುಂದಗೋಳ-ನವಲಗುಂದ-ಸಕ್ರೀಗೇರಿ ಉಜ್ಜಯಿನಿ ಮೊದಲಾದ ಸಮ್ಮೇಲನಗಳಲ್ಲಿ ಪಾಸಾದ ಠರಾವುಗಳು ಸರ್ವಸಮ್ಮತವಾಗಿ ಬಳಕೆಯಲ್ಲಿ ಬಂದಬಗ್ಗೆ ಒಪ್ಪಿಗೆಯನ್ನು ವ್ಯಕ್ತಪಡಿಸುವುದು.

೨ ಪೀಠಾಧಿಕಾರಿಗಳು ವೇದ ಘೋಷಣೆಯೊಂದಿಗೆ ಪೂಜಾ ಜಪ ತಪೋನುಷ್ಠಾನಗಳನ್ನು ನಡೆಸಲು ವೇದ ಪಾಠಶಾಲೆಗಳನ್ನು ಸ್ಥಾಪಿಸುವುದು, ಮಾಹೇಶ್ವರ ವಟುಗಳಿಗೆ ಜ್ಯೋತಿಷ್ಯ ವೈದಿಕ ಮೊದಲಾದ ಉಪಯುಕ್ತ ವಿದ್ಯಾಭ್ಯಾಸ ಕ್ರಮವನ್ನು ಜರುಗಿಸಲು ಗುರುಕುಲವನ್ನು ಏರ್ಪಡಿಸುವುದು. ಅತಿಥಿಗಳಿಗೆ ಅನ್ನ ಸಂತರ್ಪಣೆಯ ವ್ಯವಸ್ಥೆಯನ್ನಿಡುವುದು, ಆಸ್ಥಾನಪಂಡಿತರನ್ನು (ಶಾಸ್ತ್ರಿಗಳನ್ನು) ನೇಮಿಸಿಕೊಂಡು ತದ್ವಾರಾ ದೇಶಮಧ್ಯದಲ್ಲಿ ಧರ್ಮಬೋಧೆ ನಡೆಯುವಂತೆ ಮಾಡುವುದು. ಸಕಲ ರಾಜಮರ್ಯಾದೆಗಳೊಂದಿಗೆ ದಂಡಿಗೆ ಛತ್ರಚಾಮರಾದಿಗಳನ್ನು ಮಾಡುತ್ತ ಸಂಚರಿಸುವುದು, ಪಂಚ ಪೀಠಗಳಲ್ಲಿ ಯಾವುದೇ ಒಂದು ಪೀಠವು ಅನಾಯಕವಾದರೆ ಅದು ಉಳಿದ ನಾಲ್ಕು ಪೀಠಾಧಿಕಾರಿಗಳಿಂದ ಸನಾಯಕವಾಗುವಂತೆ ಅಧಿಕಾರ ಕೈಕೊಳ್ಳುವುದು. ಪೀಠಗಳ ಪ್ರಾಚೀನ ಇತಿಹಾಸಗಳನ್ನು ಶೋಧಿಸಿ ಪ್ರಕಟಿಸುವುದು, ಸದ್ಯಕ್ಕೆ ವ್ಯಾಜ್ಯದ ತೊಡಕಿನಲ್ಲಿದ್ದ ಶ್ರೀ ಕೇದಾರ ಪೀಠವನ್ನು ರೂಪುಗೊಳಿಸುವುದು, ಪವಿತ್ರವಾದ ಗೋಸಂರಕ್ಷಣೆಗಾಗಿ ಗೋಶಾಲೆಗಳನ್ನೂ ಯೋಗಾಭ್ಯಾಸದ ಅನುಕೂಲಕ್ಕಾಗಿ ಯೋಗಶಾಲೆಗಳನ್ನೂ ನಿರ್ಮಿಸುವುದು, ತಮ್ಮ ತಮ್ಮ ಮೂಲ ಪೀಠಾಚಾರ್ಯರ ಜಯಂತಿಗಳು ಪೀಠಗಳಲ್ಲಿಯೂ ದೇಶದಲ್ಲಿಯೂ ವೈಭವಪೂರ್ವಕ ನಾಡಹಬ್ಬಗಳಂತೆ ನಡೆಯಲು ಪ್ರಯತ್ನಿಸುವುದು. ಗುರುವರ್ಗದ ಒಕ್ಕಟ್ಟನ್ನು ಕಾಪಾಡುವದು. ಇವೇ ಮೊದಲಾದ ಪೀಠೋದ್ಧಾರದ ಕಾರ್ಯಗಳನ್ನು ಕೈಕೊಳ್ಳುವಂತೆ ಪಂಚ ಪೀಠಾಧಿಕಾರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದು.

೩ ಶ್ರೀ ಉಪಾಚಾರ್ಯರು (ಪಟ್ಟ ಚರಾಧಿಕಾರಿಗಳು) ತಮ್ಮ ಪೂಜಾ ಜಪ ತಪೋಧ್ಯಾನಗಳೊಂದಿಗೆ ಸಂಚರಿಸುತ್ತ ಸಕಲ ವೀರಶೈವ ಜನಾಂಗಕ್ಕೆ ಧರ್ಮಾಚಾರ ಶಿಷ್ಟಾಚಾರಗಳನ್ನು ಬೋಧಿಸುವುದು ತಮ್ಮ ತಮ್ಮ ಮಠಗಳಲ್ಲಿ ಸಂಸ್ಕೃತ ಪಾಠಶಾಲೆಗಳನ್ನು ಪ್ರಾರಂಭಿಸಿ ಮಾಹೇಶ್ವರ ವಟುಗಳಿಗೆ ವೈದಿಕ ಅಭ್ಯಾಸವನ್ನು ಮಾಡಿಸುವದು. ಗ್ರಾಮದ ಮಠಾಧಿಕಾರಿಗಳ ಕರ್ತವ್ಯಗಳನ್ನು ನೋಡಿಕೊಳ್ಳುತ್ತ ಅವರಲ್ಲಿ ಯಾವ ತರದ ವಂಚನೆಗಳು ಬರದಂತೆ ಮಾಡುವದು. ಅತಿಥಿ ಸತ್ಕಾರದೊಂದಿಗೆ ಗೋಸೇವೆಗಾಗಿ ಗೋವೃಂದವನ್ನು ನಿರ್ಮಿಸುವುದು ಮಠಗಳಲ್ಲಿ ಆಚಾರ್ಯ ಭಗವತ್ಪಾದರ ಲಿಂಗೋದ್ಭವ ಶಿಲಾಮೂರ್ತಿಗಳನ್ನು ಸ್ಥಾಪಿಸಿ ತ್ರಿಕಾಲ ವೇದೋಕ್ತ ಪೂಜೆ ನಡೆಯುವಂತ ವ್ಯವಸ್ಥೆ ಮಾಡುವದು. ದಿನಕ್ಕೆ ಒಂದಾವರ್ತಿಯಾದರೂ ೨ ಗಟಿಗಳಕಾಲ ಪುರಾಣ ಪ್ರವಚನ ಶಾಸ್ತ್ರಶ್ರವಣ ಉಪನ್ಯಾಸಾದಿ ಬೋಧನೆಗಳನ್ನು ನಡೆಯಿಸುತ್ತಿರುವುದು. ಅ ದವಾದ ಮಠಗಳನ್ನು ನಿರ್ಮಿಸಿ ಅಂಗಳದಲ್ಲಿ ಪೂಜೋಪಯುಕ್ತವಾದ ಹೂ ಬಳ್ಳಿಗಳಿಂದ ಮಠದ ಶೋಭೆಯನ್ನು ಹೆಚ್ಚಿಸುವುದು. ಸಾಯಂಕಾಲ ಉತ್ತಮ ಗಾಯನದೊಂದಿಗೆ ತಾಳ ಮೇಳದವರಿಂದ ಗುರುಭಜನೆಯನ್ನು ನಡಿಸುವುದು. ಶ್ರೀ ಭಗವತ್ಪಾದರ ಜಯಂತಿಗಳನ್ನು ವೈಭವದಿಂದ ಏರ್ಪಡಿಸುವದು ಹಾಗೂ ಪ್ರಚಾರಮಾಡುವುದು. ಗುರುವರ್ಗದ ಪ್ರಭಾವವನ್ನು ಬೀರುವದು ಇವೇ ಮೊದಲಾದ ಧರ್ಮ ಜಾಗ್ರತೆಯ ಕಾರ್ಯಗಳನ್ನು ಕೈಕೊಳ್ಳುವಂತೆ ಠರಾಯಿಸುವುದು.

೪ ಗ್ರಾಮದ ಮಠಾಧಿಕಾರಿಗಳು ಯಾವ ಪಕ್ಷ ಪಂಗಡಗಳಿಗೆ ಸೇರದೆ ವ್ಯಾಜ್ಯಗಳಿಗೆ ಅವಕಾಶ ಕೊಡದೆ ಭಕ್ತಸುಧಾರಣೆಯ ಕರ್ತವ್ಯವನ್ನೇ ಪ್ರಧಾನವಾಗಿಟ್ಟುಕೊಂಡು ಅತಿಥಿಗಳಿಗೆ ಅನ್ನವನ್ನೀಯುತ್ತ ಧರ್ಮದಲ್ಲುಂಟಾದ ತೊಂದರೆಗಳನ್ನು ಗೌಡ ಶೆಟ್ಟಿ ಕೈತರ ಸಹಾಯದಿಂದ ನಿವಾರಣೆಮಾಡುತ್ತ ಧರ್ಮಜಾಗ್ರತೆಯನ್ನು ಮಾಡುವುದು. ಉತ್ತಮವಾದ ಲಿಂಗ (ಪೀಠಿಕ) ಗಳನ್ನು ಕಾಯ್ದಿಟ್ಟುಕೊಂಡು ವೀರಶೈವ ಶಿಶುಗಳಿಗೆ ಲಿಂಗಧಾರಣೆ ಮಾಡುವುದು. ಸಾಧ್ಯವಾದಷ್ಟು ಗ್ರಾಮದ ಚಿಕ್ಕಮಕ್ಕಳನ್ನು ಬೆಳಗಿನ ೬ ಘಂಟೆಗೆ ಮಠಕ್ಕೆ ಕರೆಯಿಸಿಕೊಂಡು ೭ ಘಂಟೆಯವರೆಗೆ ಗುರುಸ್ತೋತ್ರದೊಡನೆ ಧರ್ಮಬೋಧೆ ಮಾಡುವುದು, ಗೋಸಂರಕ್ಷಣೆ ಮಾಡುವುದು ಇವೇ ಮೊದಲಾದ ಕಾರ್ಯಗಳಲ್ಲಿ ನಿರತರಾಗುವಂತೆ ಆಜ್ಞೆ ಮಾಡುವುದು.

ಮೇಲೆ ವಿವರಿಸಿದ ರೀತಿಯಲ್ಲಿ ಗುರುವರ್ಗವು ಜಾಗ್ರತವಾದರೆ ಧರ್ಮದ ತೇಜವು ಪ್ರಫುಲ್ಲಿತವಾಗಿ ಆಚಾರ್ಯ ಭಗವತ್ಪಾದರ ಹೆಸರು ದಿಗಂತಕೀರ್ತಿ ಹೊಂದುವುದರಲ್ಲಿ ಯಾವ ಅಭ್ಯಂತರವೂ ಇಲ್ಲ, ಭಗವಂತನ ಕೃಪೆಯಿಂದ ಈ ಸಮಯದಲ್ಲಿ ಶ್ರೀ ಪಟ್ಟ-ಚರಾಧಿಕಾರಿಗಳ ಸಮ್ಮೇಲನವು ಅವಶ್ಯವಾಗಿ ನಡೆದು ಮಾರ್ಗದರ್ಶಕವಾಗಲಿ.

ವರ್ತಮಾನ ಸಂಗ್ರಹ

ಮೈಸೂರಿನ ಮುಖ್ಯ ಮಂತ್ರಿಗಳ ಬಳಿ ಕರ್ನಾಟಕ ಮುಖಂಡರ ನಿಯೋಗ

ಕರ್ನಾಟಕ ಏಕೀಕರಣವು ಜಾಗ್ರತೆ ಸಾಧ್ಯವಾಗುವಂತೆ ಮಾಡುವ ಸಲುವಾಗಿ ಮೈಸೂರು ಸಂಸ್ಥಾನವು ಹೆಚ್ಚು ಆಸಕ್ತಿ ವಹಿಸಿ ಕೂಡಲೇ ಈ ಬಗ್ಗೆ ಕಾರ್ಯಕ್ರಮ ಕೈಗೊಳ್ಳುವಂತೆ ಮುಖ್ಯಮಂತ್ರಿ ಶ್ರೀ ಕೆ ಹನುಮಂತಯ್ಯನವರನ್ನು ಶ್ರೀಗಳಾದ ಮದ್ರಾಸಿನ ಮಾಜಿ ಮಂತ್ರಿ ಕೆ ಆರ್ ಕಾರಂತ ಮಾಸ್ತಿ ವೆಂಕಟೇಶಯ್ಯಂಗಾರ್ ಶ್ರೀ ಸಿದ್ದಪ್ಪ ಹೊಸಮನಿ ಮುಂತಾದವರು ಭೇಟಿ ಮಾಡಿ ಒತ್ತಾಯ ಪಡಿಸಿದರು. ಏಕೀಕರಣದ ಬಗ್ಗೆ ತಮಗೆ ಆಸಕ್ತಿ ಇರುವುದಾಗಿಯೂ ಈ ವಿಷಯವನ್ನು ಶಾಸನ ಸಭೆಯ ಕಾಂಗ್ರೆಸ್ ಪಕ್ಷ ಮತ್ತು ಎಂ ಪಿ ಸಿ. ಸಿ. ಗಳ ಮುಂದೆ ಇಟ್ಟು ಅವುಗಳ ಅಭಿಪ್ರಾಯ ಪಡೆಯಬೇಕಾಗಿರುವುದೆಂದೂ ಈ ಬಗ್ಗೆ ಅಗತ್ಯವಾದ ಎಲ್ಲಕ್ರಮಗಳನ್ನೂ ತಾವು ಕೈಗೊಳ್ಳಲಿರುವುದಾಗಿಯೂ ಅವರು ಹೇಳಿದರು. ಏಕೀಕರಣದ ಬಗ್ಗೆ ಮುಖ್ಯ ಮಂತ್ರಿಯವರಿಗೆ ಮನವಿಯೊಂದನ್ನು ಸಲ್ಲಿಸಲಾಯಿತು.

ಕರ್ನಾಟಕ ಏಕೀಕರಣಕ್ಕೆ ಮೈಸೂರಿನ ಮುಖ್ಯ ಮಂತ್ರಿಯವರ ಸ್ವಾಗತ

ಬೆಂಗಳೂರು ಸಿವಿಲ್ ಪ್ರದೇಶದಲ್ಲಿ ಮಂಗಳ ಚಂದಜೈನ್ ಹೆರಿಗೆ ಮತ್ತು ಶಿಶು ಸಂರಕ್ಷಣಾ ಕೇಂದ್ರದ ಶಂಕುಸ್ಥಾಪನೆ ಮಾಡುತ್ತ ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಕರ್ನಾಟಕ ಏಕೀಕರಣವಾಗುವುದಕ್ಕೆ ತಾವು ಸಂತೋಷಿಸುವುದಾಗಿಯೂ ಇದು ತಮ್ಮ ವೈಯಕ್ತಿಕ ಅಭಿಪ್ರಾಯವೆಂದೂ ತಿಳಿಸಿದರು. ಭಾಷಾವಾರು ಸಂಸ್ಥಾನಗಳ ಬಗ್ಗೆ ಕಮಿಷನ್ನಿನ ನೇಮಕವನ್ನು ಅವರು ಸ್ವಾಗತಿಸಿದರು. ಬಳ್ಳಾರಿ ಭವಿಷ್ಯವನ್ನು ಕುರಿತು ಆಂಧ್ರರು ನಡೆಸುತ್ತಿರುವ ಚಳುವಳಿಯನ್ನು ಅವರು ಖಂಡಿಸಿ ಗಲಾಟೆಗಳನ್ನು ಮಾಡಿಕೊಳ್ಳದೆ ಪ್ರತಿಯೊಬ್ಬರೂ ತಮ್ಮ ಕಾರ್ಯ ಸಾಧಿಸಬೇಕಾದುದು ಅಗತ್ಯವೆಂದು ತಿಳಿಸಿ ಬಳ್ಳಾರಿ ಜನರು ಮೈಸೂರಿಗೆ ಸೇರಿದರೆ ಅವರನ್ನು ತಾವು ಸ್ವಾಗತಿಸುವುದಾಗಿ ಹೇಳಿದರು. (ಸಾದ್ವಿ ಮೇ-೧)

ದಕ್ಷಿಣ ಕನ್ನಡಜಿಲ್ಲೆ ಮೈಸೂರಿಗೆ ಸೇರಲಿ

ಶಾಸನಸಭಾ ಸದಸ್ಯರಾದ ಶ್ರೀ ಬಿ ಮಾಧವಾಚಾರ್ಯರು ಈ ರೀತಿ ತಿಳಿಸುತ್ತಾರೆ.

ಭಾಷಾವಾರು ತತ್ವದ ತಳಹದಿಯಮೇಲೆ ಪ್ರಾಂತ್ಯರಚನೆಯಾಗುವ ಪರ್ವಕಾಲವಿದು. ಆಂಧ್ರ ಪ್ರಾಂತ್ಯ ಸ್ಥಾಪನೆಯ ದಿನ ನಿಶ್ಚಯವಾಯಿತು. ಕರ್ನಾಟಕದ ಮುಹೂರ್ತ ಸದ್ಯದಲ್ಲೇ ತಿಳಿಯುವುದು. ಬಳ್ಳಾರಿ ಜಿಲ್ಲೆಯ ಕನ್ನಡ ವಿಭಾಗ ಮೈಸೂರಿಗೆ ಸೇರಿದ ಮೇಲೆ ಮದರಾಸಿನಲ್ಲಿ ಉಳಿಯುವುದು ನೀಲಗಿರಿ ಮತ್ತು ದಕ್ಷಿಣ ಕನ್ನಡ ಜಿಲ್ಲೆ. ನಮ್ಮ ಮುಖ್ಯ ಮಂತ್ರಿಗಳು ಈ ಪ್ರದೇಶಗಳಿಗೆ ತಮ್ಮ ಸ್ನೇಹಹಸ್ತವನ್ನು ನೀಡಿ ಮಿಲನದ ದಾರಿ ಸುಗಮವಾಗಿ ಮಾಡಿಕೊಟ್ಟಿದ್ದಾರೆ. ಗಡಿ ವಿಸ್ತರಣೆಗಳಾಗುವಾಗ ಆಯಾ ಭೂಭಾಗದ ಸೂಕ್ಷ್ಮ ಪರಿಚಯವಿರಬೇಕಾದುದು ಅಗತ್ಯ.

ಕರ್ನಾಟಕದ ಒಂದು ಅಂಗ

ಸಹ್ಯಾದ್ರಿಗೂ, ಪಶ್ಚಿಮಾಂಬುಧಿಗೂ ನಡುವೆ ಕಂಗು ತೆಂಗುಗಳ ನಂದನವನದಂತೆ ಕಂಗೊಳಿಸುತ್ತಿರುವ ದಕ್ಷಿಣ ಕನ್ನಡ ಜಿಲ್ಲೆ ಕರ್ನಾಟಕದ ಒಂದು ಪ್ರಮುಖ ಅಂಗವಾಗಿದೆ. ೧೩೦ ಮೈಲಿ ಉದ್ದ ಮತ್ತು ೩೦ ಮೈಲಿ ಅಗಲವಿರುವ ಈ ಭೂಭಾಗವು ಪರಶುರಾಮ ಸೃಷ್ಟಿಯದು ಎಂದು ಪೌರಾಣಿಕರು ನುಡಿಯುತ್ತಾರೆ. ಈ ಜಿಲ್ಲೆಯ ಉತ್ತರಕ್ಕೆ ಮುಂಬಯಿ ಪ್ರಾಂತ್ಯಕ್ಕೆ ಸೇರಿದ ಉತ್ತರ ಕನ್ನಡಜಿಲ್ಲೆಯು, ದಕ್ಷಿಣಕ್ಕೆ ಮಲಬಾರು ಜಿಲ್ಲೆ, ಪೂರ್ವಕ್ಕೆ ಮೈಸೂರು ಮತ್ತು ಕೊಡಗು, ಪಶ್ಚಿಮಕ್ಕೆ ಗಂಭೀರವಾದ ಅರಬ್ಬೀಸಮುದ್ರ. ಪ್ರಾಚೀನ ಕಾಲದಲ್ಲಿ ಈ ನಾಡಿಗೆ ತುಳು ನಾಡೆಂಬ ಹೆಸರಿತ್ತು. ಬಹುಜನರ ಮನೆಮಾತು ತುಳು ಭಾಷೆಯಾದರೂ ವ್ಯವಹಾರವೆಲ್ಲಾ ಕನ್ನಡದಲ್ಲಿ.

ಸಾರಸ್ವತ, ಗೌಡಸಾರಸ್ವತ ಮತ್ತು ಕ್ರೈಸ್ತಬಂಧುಗಳ ಮನೆಮಾತು ಕೊಂಕಣಿ ಕರ್ನಾಟಕದ ಇತಿಹಾಸದಲ್ಲಿ ಪ್ರಸಿದ್ಧರಾದ ಕದಂಬ, ಚಾಲುಕ್ಯ, ವಿಜಯನಗರ, ಅರಸರ ಆಳ್ವಿಕೆಗೆ ಒಳಪಟ್ಟಿತ್ತಲ್ಲದೆ, ಹೈದರ್ ಮತ್ತು ಮೈಸೂರು ಹುಲಿ ಟಿಪ್ಪುವಿನ ಆಡಳಿತ ಇಲ್ಲಿ ಕೆಲಕಾಲ ನಡೆದಿತ್ತು. ಬ್ರಿಟಿಷರ ಆಡಳಿತ ಸ್ಥಾಪನೆಯಾದ ಮೇಲೆ ೧೮೬೨ ರಲ್ಲಿ ಉತ್ತರ ಕನ್ನಡವನ್ನು ಬೊಂಬಾಯಿ ಪ್ರಾಂತ್ಯಕ್ಕೆ ಸೇರಿಸಿ ದಕ್ಷಿಣ ಕನ್ನಡವನ್ನು ಮದ್ರಾಸಿಗೆ ಸೇರಿಸಲಾಯಿತು

ಮೈಸೂರು ಸಂಸ್ಥಾನದಲ್ಲಿ ಆಹಾರ ಪಡಿತರವು ರದ್ದಾಯಿತು

ಇದೇ ಮೇ ೧ ನೇ ತಾರೀಖಿನಿಂದ ಮೈಸೂರು ಸಂಸ್ಥಾನಾದ್ಯಂತ ಆಹಾರಪಡಿತರವು ರದ್ದಾಯಿತು ಬೇಕಾದವರು ಬೇಕಾದ ಧಾನ್ಯಗಳನ್ನು ಕೊಳ್ಳಬಹುದು ಮಾರಬಹುದು ಆದರೆ ಆರು ಚೀಲಗಳಿಗಿಂತ ಹೆಚ್ಚಿಗೆ ಸ್ಟಾಕು ಇಟ್ಟು ಮಾರುವವರು ಜಿಲ್ಲಾಧಿಕಾರಿಗಳಿಂದ ಲೈಸನ್ಸ ಪಡೆಯಬೇಕು ಜನರು ರೇಷನ್ ಕಾರ್ಡುಗಳನ್ನು ಬೀಸಾಡಬಾರದು ಫೇರ್ ಪ್ರೈಸ್ ಡಿಪೋಗಳು ಕೆಲವು ದಿನಗಳ ಮಟ್ಟಿಗೆ ಇರುವವು ಆದ್ದರಿಂದ ಅವಶ್ಯಬಿದ್ದ ಪದಾರ್ಥಗಳನ್ನು ಅಲ್ಲಿಂದ ತರಲು ಅನುಕೂಲವಾಗುವುದು ಸಂಸ್ಥಾನದೊಳಗೆ ಧಾನ್ಯದ ಸಾಗಾಣಿಕೆಯನ್ನು ಎಲ್ಲಿಂದ ಎಲ್ಲಿಗೆ ಬೇಕಾದರೂ ಮಾಡಬಹುದು ಆತಂಕವಿಲ್ಲ

ಕರ್ನಾಟಕ ಪ್ರಾಂತ್ಯರಚನೆಗಾಗಿ ಬೆಳಗಾಂವಿಯಲ್ಲಿ

ಪಂ|| ನೆಹ್ರೂರವರ ಭಾಷಣ

ಆಂಧ್ರ ಪ್ರಾಂತ್ಯ ರಚನೆಯಾದಮೇಲೆ ಸ್ವಲ್ಪ ಕಾಲ ಅಂದರೆ ಒಂದು ವರ್ಷಕಾಲ ಅದರ ಪ್ರಗತಿಯನ್ನು ವೀಕ್ಷಿಸಿ ನಂತರ ಕರ್ನಾಟಕಪ್ರಾಂತರಚನೆಗಾಗಿ ಕಮಿಷನ್ನು ನೇಮಿಸಲಾಗುವುದು ಎಂದು ಪಂ|| ನೇಹ್ರೂರವರು ತಿಳಿಸಿದರು

ಭಾಷಾವಾರು ತಕ್ಕದ ಆಧಾರದ ಮೇಲೆ ಪ್ರಾಂತಗಳ ಪುನರ್ವಿಂಗಡಣೆಯ ಸಾಧಕಬಾಧಕಗಳು ಮತ್ತು ಭಾಷಾವಾರು ಪ್ರಾಂತವು ಆರ್ಥಿಕ ಭದ್ರತೆ ಹೊಂದಿರುವುದೇ ಎಂಬ ವಿಷಯಗಳನ್ನು ಕಮಿಷನ್ ಪರಿಶೀಲಿಸುವುದು ಎಂದು ಪಂಡಿತ್‌ಜಿ ತಿಳಿಸಿದರು ಭಾಷಾವಾರು ಪ್ರಾಂತಗಳ ರಚನೆಗೆ ಸಂಬಂಧಪಟ್ಟ ಎಲ್ಲಾ ಸಮಸ್ಯೆಗಳನ್ನೂ ಪರಿಶೀಲಿಸಿ ನೂತನ ಪ್ರಾಂತಗಳ ರಚನೆಗೆ ಸೂಕ್ತ ಶಿಫಾರ್ಸುಗಳನ್ನು ಮಾಡುವುದು ಕಮಿಷನ್ನಿನ ವರದಿಯ ಆಧಾರದ ಮೇಲೆ ಸರ್ಕಾರವು ಮಸೂದೆಯೊಂದನ್ನು ಸಿದ್ಧಗೊಳಿಸಿ ಆ ಮಸೂದೆಯ ಬಗ್ಗೆ ಸಾರ್ವಜನಿಕಾಭಿಪ್ರಾಯವನ್ನು ಆಹ್ವಾನಿಸುವುದು ಎಂದು ಪಂ|| ನೇಹ್ರೂರವರು ತಿಳಿಸಿದರು.

ಕರ್ನಾಟಕ ಪ್ರಾಂತ

ಕರ್ನಾಟಕ ಪ್ರಾಂತರಚನೆಯ ಸಮಸ್ಯೆ ಕುರಿತು ಪ್ರಸ್ತಾಪಮಾಡುತ್ತ ಕರ್ನಾಟಕಪ್ರಾಂತ ಸ್ಥಾಪನೆಯ ಅವಶ್ಯಕತೆ ಬಗ್ಗೆ ಯಾವ ಸಂದೇಹವೂ ಇರಲಿಲ್ಲವೆಂದು ತಿಳಿಸಿದರು ಕರ್ನಾಟಕ ಪ್ರಾಂತ ನಿರ್ಮಿಸಲು ಬೊಂಬಾಯಿ ಮತ್ತು ಮದರಾಸ್ ಪ್ರಾಂತಗಳಲ್ಲಿರುವ ಕನ್ನಡ ಜಿಲ್ಲೆಗಳನ್ನು ಮೈಸೂರು ಸಂಸ್ಥಾನಕ್ಕೆ ಸೇರಿಸಬೇಕು ಆದರೆ ಮೈಸೂರು ಸಂಸ್ಥಾನವು ಈ ಸಲಹೆಗೆ ಒಪ್ಪಿರಲಿಲ್ಲ ಮೈಸೂರು ಈ ಸಲಹೆಯನ್ನು ಒಪ್ಪುವಂತೆ ಬಲಾತ್ಕರಿಸುವುದಕ್ಕೆ ನಾನು ಖಂಡಿತ ಒಪ್ಪುವುದಿಲ್ಲ ಒಮ್ಮತವಿಲ್ಲದಿರುವಾಗ ನಾವು ಈ ಸಮಸ್ಯೆಯ ಬಗ್ಗೆ ಅಭಿಪ್ರಾಯಪಡಿಸುವುದಿಲ್ಲ ಈ ವಿಷಯವನ್ನು ಜನತೆಯ ಅಭಿಪ್ರಾಯಕ್ಕೆ ಬಿಟ್ಟುಬಿಡುತ್ತೇವೆ ಸಂಬಂಧಪಟ್ಟವರೆಲ್ಲ ಒಂದು ಒಡಂಬಡಿಕೆಗೆ ಬಂದರೆ ಸರ್ಕಾರದವರು ಖಂಡಿತವಾಗಿಯೂ ಈ ವಿಷಯಕ್ಕೆ ಗಮನಕೊಡುವರು ಎಂದು ಪಂಡಿತ್‌ಜಿ ತಿಳಿಸಿದರು

ಕರ್ನಾಟಕ ಪ್ರಾಂತ್ಯಕ್ಕಾಗಿ ಆಮರಣಾಂತ ಉಪವಾಸ

ಸರ್ವಪಕ್ಷೀಯ ಸಮ್ಮೇಳನವೊಂದು ಸೇರಿ ಕರ್ನಾಟಕ ಪ್ರಾಂತ... [illegible] ಒಳಗಾಗಿ ಕರ್ನಾಟಕ ಪ್ರಾಂತ [illegible] ನಿರ್ಮಾಣಿಸಿದರೆ ಮಾತ್ರ ತಾವು ಉಪವಾಸ ಮುಕ್ತಾಯ ಮಾಡುವುದಾಗಿ ದಾವಣಗೆರೆಯಲ್ಲಿ ಕಳೆದ ೨೭ನೇ ತಾರೀಖಿನಿಂದ ಆಮರಣಾಂತ ಉಪವಾಸ ಕೈಗೊಂಡಿರುವ ಶ್ರೀ ಬಸವಯ್ಯ ಹಿರೇಮಠರವರು ತಿಳಿಸಿರುತ್ತಾರೆ

ಹುಬ್ಬಳ್ಳಿಯಲ್ಲಿ ಆಮರಣಾಂತ ಉಪವಾಸ ಕೈಗೊಂಡಿರುವ ಶ್ರೀ ವಿರೂಪಾಕ್ಷಗೌಡ ಪಾಟೀಲರ ಪತ್ನಿ ಶ್ರೀಮತಿ ಸುನಂದಾ ಪಾಟೀಲರು ಒಂದು ಹೇಳಿಕೆಯನ್ನಿತ್ತು, ತಮ್ಮ ಪತಿಯ ಪ್ರಾಣಕ್ಕೆ ಏನಾದರೂ ವಿಪತ್ತು ಸಂಭವಿಸಿದರೆ ಆ ಹೊಣೆ ಸರ್ಕಾರದ್ದೆಂದೂ, ಪಂಡಿತ ನೆಹರೂರವರ ಹೃದಯವು ಕಲ್ಲಾಗಿದ್ದರೆ ತನ್ನ ಪತಿಯ ಪ್ರಾಣವನ್ನು ಜನರೇ ಉಳಿಸಬೇಕೆಂದು ಪ್ರಾರ್ಥಿಸುತ್ತೇನೆಂದು ತಿಳಿಸಿರುತ್ತಾರೆ

ಸಮಾಚಾರ ಮೇ-೧

ಕರ್ನಾಟಕ ಏಕೀಕರಣ ಬೇಕೇ ಬೇಡವೇ

ಮೈಸೂರು ಜನತೆಯ ಅಭಿಪ್ರಾಯ ಸಂಗ್ರಹ

ಕರ್ನಾಟಕ ಏಕೀಕರಣದ ವಿಷಯವಾಗಿ ಮೈಸೂರಿನ ಅಭಿಪ್ರಾಯದಲ್ಲಿ ಭಿನ್ನತೆಯಿದೆಯೆಂದು ಪ್ರಧಾನ ಸಚಿವರಾದ ಪಂಡಿತ್ ಜವಹಿರಲಾಲ್ ನೇಹ್ರೂರವರು ಹುಬ್ಬಳ್ಳಿಯಲ್ಲಿ ಇತ್ತೀಚೆಗೆ ಹೇಳಿರುವುದು ಸರಿಯಷ್ಟೇ ಈ ವಿಷಯದಲ್ಲಿನ ನಿಜಸ್ಥಿತಿಯನ್ನು ಬಹಿರಂಗಪಡಿಸಿ ಕರ್ನಾಟಕದ ಏಕೀಕರಣದ ಉನ್ನತ ಧ್ಯೇಯವನ್ನು ಸ್ಪಷ್ಟಪಡಿಸಿ ನಗರದ ಮತ್ತು ಸಂಸ್ಥಾನದ ಪತ್ರಿಕೆಗಳು ಅಗ್ರಲೇಖನ ಬರೆದಿರುವುದು ಸರ್ವರ ಮೆಚ್ಚುಗೆಗೆ ಪಾತ್ರವಾಗಿದೆ ಕರ್ನಾಟಕದ ಏಕೀಕರಣವನ್ನು ಅನುಮೋದಿಸುವ ಲಕ್ಷಾಂತರ ಮೈಸೂರು ಜನತೆಯ ಸಹಿಗಳನ್ನು ಸಂಗ್ರಹಿಸಿ ಪಂಡಿತ ನೆಹರೂರವರಿಗೆ ಖುದ್ದಾಗಿ ಅರ್ಪಿಸಲು ಆರ್ ಪಿ ಎಫ್ ಸಂಸ್ಥೆ ನಿಶ್ಚಯಿಸಿದೆ ಸಂಸ್ಥಾನದ ಪ್ರತಿ ಸ್ಥಳದಲ್ಲಿನ ಕರ್ನಾಟಕ ಸಂಘದವರು ಏಕೀಕರಣವನ್ನು ಅನುಮೋದಿಸುವ ಜನರ ರುಜುಗಳನ್ನು ತಕ್ಷಣ ಸಂಗ್ರಹಿಸಿ ಆರ್ ಪಿ ಎಫ್ ಸಂಚಾಲಕರಿಗೆ ಕಳುಹಿಸಿಕೊಡಬೇಕಾಗಿ ಈ ಮೂಲಕ ಕೋರಲಾಗಿದೆ ಅನುಕೂಲವಿದ್ದ ಜನರೆಲ್ಲಾ ಆರ್ ಪಿ ಎಫ್ ಕಚೇರಿಗೆ ನೇರವಾಗಿ ಏಕೀಕರಣಕ್ಕೆ ತಮ್ಮ ಅನುಮೋದನೆಯನ್ನು ತಿಳಿಸಿ ಪೋಸ್ಟ್‌ಕಾರ್ಡುಗಳನ್ನು ಹಾಕಬೇಕಾಗಿ ಕೋರಲಾಗಿದೆ ಮೈಸೂರು ಜನತೆ ವೈಯಕ್ತಿಕವಾಗಿಯೂ ಸಂಘದ ಬಲದಿಂದಲೂ ಸಹಕರಿಸುವರೆಂದು ನಂಬಲಾಗಿದೆ

ವಿಳಾಸ—ಸಂಚಾಲಕರು ಅಭಿಮತ ಸಂಗ್ರಹ
ರಾವ್ಸ್ ಪ್ರೆಸ್ ಫೀಚರ್ಸ್
ಚಾಮರಾಜಪೇಟೆ ಬೆಂಗಳೂರು ೨

ಬಳ್ಳಾರಿ ಭಾಷಾವಾದಿಗಳಲ್ಲಿ ಘರ್ಷಣೆ

ಬಳ್ಳಾರಿಯನ್ನು ಆಂಧ್ರಕ್ಕೆ ಸೇರಿಸಕೂಡದೆಂದು ಬಳ್ಳಾರಿ ಬೆಂಗಳೂರು ರಸ್ತೆ ಮಾರ್ಗದಲ್ಲಿ ಅಲ್ಲಿನ ಕನ್ನಡಿಗರು ಘೋಷಣೆಗಳನ್ನು ಬರೆಯುತ್ತಿದ್ದಾಗ ಆಂಧ್ರದವರು ಅವರುಗಳ ಮೇಲೆ ಕಲ್ಲುಗಳನ್ನೆಸೆದರೆಂದೂ ಅದರಿಂದ ಗಲಭೆಯಾಗಿ ಪೋಲೀಸರು ಲಾಠಿಪ್ರಹಾರ ಮಾಡಿ ಗುಂಪಿನವರನ್ನು ಚದುರಿಸಿದರೆಂದೂ ವರದಿಯಾಗಿದೆ

ಹರಿದ್ವಾರದಲ್ಲಿ ಕರ್ನಾಟಕಭವನ

ಒಂದು ಲಕ್ಷ ರೂ. ವೆಚ್ಚದಲ್ಲಿ

ದಕ್ಷಿಣಭಾರತದಿಂದ ವಿಶೇಷತಃ ಕರ್ನಾಟಕದಿಂದ ಹರಿದ್ವಾರಕ್ಕೆ ಒರುವ ಯಾತ್ರಾರ್ಥಿಗಳಿಗೋಸ್ಕರ ಸುಮಾರ ಒಂದು ಲಕ್ಷ ರೂಪಾಯಿಗಳ ಖರ್ಚಿನಲ್ಲಿ ಕರ್ನಾಟಕ ಭವನವನ್ನು ನಿರ್ಮಾಣ ಮಾಡುವ ಸಲುವಾಗಿ ಮತ್ತು ಯಾತ್ರಾರ್ಥಿಗಳಿಗೆ ಇತರ ಅವಶ್ಯಕ ಅನುಕೂಲತೆಗಳನ್ನು ಕಲ್ಪಿಸಿ ಕೊಡುವ ಉದ್ದೇಶದಿಂದ "ಕರ್ನಾಟಕ ಧರ್ಮಶಾಲಾ ಸೊಸೈಟಿ ಹರಿದ್ವಾರ" ಎಂಬ ಸಂಸ್ಥೆ ಜನ್ಮತಾಳಿದೆ

ಹರಿದ್ವಾರದಲ್ಲಿ ಭಾರತದ ನಾನಾ ಸ್ಥಾನಗಳ ಮತ್ತು ಪ್ರಾಂತಗಳ ದಾನಿಗಳಿಂದ ಕಟ್ಟಿಸಲ್ಪಟ್ಟ ಅನೇಕಧರ್ಮಶಾಲೆಗಳೂ, ವಸತಿ ಗ್ರಹಗಳೂ ಇದ್ದರೂ ಸಹ ದಕ್ಷಿಣ ಭಾರತೀಯರಿಗೆ ವಿಶೇಷತಃ ಕನ್ನಡಿಗರಿಗೆ ವಸತಿ ಇಲ್ಲದಿರುವ ತೊಂದರೆಗಳನ್ನು ಮನಗಂಡು ಇಲ್ಲಿಯೇ ಸುಮಾರು ೨೦ ವರ್ಷಗಳಿಗೂ ಮೇಲ್ಪಟ್ಟು ನೆಲೆಸಿರುವ ಮೈಸೂರಿನ ಶ್ರೀ ಪಿ ನಂಜುಂಡಶಾಸ್ತ್ರಿಗಳವರು ದಕ್ಷಿಣ ಭಾರತದ ಯಾತ್ರಾರ್ಥಿಗಳಿಗಾಗಿ ಒಂದು ಧರ್ಮ ಶಾಲೆಯನ್ನು ಸ್ಥಾಪಿಸಲು ಅನೇಕಬಾರಿ ಪ್ರಯತ್ನ ಪಟ್ಟರೂ ಕಾರಣಾಂತರದಿಂದ ಈವರೆವಿಗೂ ಅವರ ಪ್ರಯತ್ನಗಳು ಕಾರ್ಯರೂಪಕ್ಕೆ ಬಂದಿರಲಿಲ್ಲ ಈಚೆಗೆ ಈ ಸ್ಥಳಕ್ಕೆ ಭೇಟಿಕೊಟ್ಟ ಶ್ರೀ ಕೆ ಸಿ ರೆಡ್ಡಿ (ಕೇಂದ್ರ ಉತ್ಪನ್ನ ಮಂತ್ರಿ) ಶ್ರೀ ಆರ್.ಆರ್, ದಿವಾಕರ್ (ಬಿಹಾರ್ ಗವರ್ನರ್) ಶ್ರೀ ಎಸ್.ವಿ ಕೃಷ್ಣಮೂರ್ತಿರಾಯರು (ಉಪಾಧ್ಯಕ್ಷರು, ರಾಜ್ಯ ಪರಿಷತ್ತು) ಶ್ರೀ ಡಿ ಪಿ ಕರಮರಕರ್ (ಕೇಂದ್ರವಾಣಿಜ್ಯಮಂತ್ರಿ) ಶ್ರೀ ಎಸ್ ದಾತಾರ್, (ಕೇಂದ್ರ ಡೆಪ್ಯುಟಿ ಹೋಂ ಮಂತ್ರಿ) ಶ್ರೀ ಎಸ್ ನಿಜಲಿಂಗಪ್ಪ (ಕರ್ನಾಟಕ ಪ್ರದೇಶ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರು) ಮುಂತಾದ ಮುಂದಾಳುಗಳೂ ಉನ್ನತಾಧಿಕಾರಿಗಳೂ ಮತ್ತು ಅನೇಕ ಗಣ್ಯ ಜನರ ಪ್ರೋತ್ಸಾಹ ಮತ್ತು ಬೆಂಬಲಿಗರ ಫಲವಾಗಿ ಈಯೋಜನೆಗೆ ಪುನಃ ಒಂದುಹೊಸ ಹುರುಪು ಬಂದಿದೆ

ಸಂಗಮೇಶ್ವರ ಫ್ರೀ ಬೋರ್ಡಿಂಗ

ಬೆಳಗಾಂವ, ಹುಬ್ಬಳ್ಳಿ, ಸವದತ್ತಿ, ಪಟ್ಟಣಗಳಲ್ಲಿ ಸ್ಥಾಪಿತವಾದ ಶ್ರೀ ಸಂಗಮೇಶ್ವರ ಫ್ರೀ ಬೋರ್ಡಿಂಗಿಗೆ ಸೇರಲಿಚ್ಛಿಸುವ ವಿದ್ಯಾರ್ಥಿಗಳು ಇದೇ ಮೇ ೩೧ ರೊಳಗಾಗಿ ತಮ್ಮ ಅರ್ಜಿಯನ್ನು ಗ್ರಾಮಸ್ಥರ ಅಥವಾ ಸಭ್ಯಗ್ರಹಸ್ಥರ ಶಿಫಾರಸಿನ ಪತ್ರದೊಂದಿಗೆ ಬೆಳಗಾಂವದಲ್ಲಿ ಸೇರಲಿಚ್ಛಿಸುವವರು ಶ್ರೀಗಳವರ ಸನ್ನಿಧಿಗೆ ಹುಬ್ಬಳ್ಳಿಯಲ್ಲಿ ಸೇರಲಿಚ್ಛಿಸುವವರು ಹುಬ್ಬಳ್ಳಿ ಟ್ರೇನಿಂಗ ಕಾಲೇಜದ ಪ್ರಿನ್ಸಿಪಾಲರ ಕಡೆಗೆ ಸವದತ್ತಿಯಲ್ಲಿ ಸೇರಲಿಚ್ಛಿಸುವವರು ಸವದತ್ತಿ ಹೈಸ್ಕೂಲ ಹೆಡ್ಮಾಸ್ತರರ ಕಡೆಗೆ ಕಳಿಸಿಕೊಡಬೇಕು

ಚಂದಾದಾರರಲ್ಲಿ ವಿನಂತಿ

ನಮ್ಮೀ ಪಂಚಾಚಾರ್ಯ ಪ್ರಭಾ ವಾರ ಪತ್ರಿಕೆಯ ವಾರ್ಷಿಕ ಚಂದಾ ೩ ರೂಗಳಿದ್ದು ವಿ ಪಿ. ಚಾರ್ಜ ಇದೇ ಏಪ್ರೀಲ ೧ ನೇ ತಾರೀಖಿನಿಂದ (೨ ೭ ೯) ಏಳು ಆಣೆ ಒಂಭತ್ತು ಕಾಸು ಆಗಿದೆ ಆದ್ದರಿಂದ ನಾವು ವಿ ಪಿ ಮಾಡಿದರೆ ವಿ ಪಿ ಖರ್ಚು ಸೇರಿ ೩|೮|೦ ಆಗುವದು ಈ ದರ್ದು ನಮ್ಮ ಕೈ ಸೇರಬೇಕಾದರೆ ಆಯಾ ಪೋಸ್ಟಾಫೀಸಿಗೆ ಎರಡು ಆಣೆ ಹೆಚ್ಚಿಗೆ ಕೊಡಬೇಕಾಗುವದು ಹೀಗಾಗಿ ಪ್ರತಿಯೊಬ್ಬ ಚಂದಾದಾರರಿಗೆ ಹತ್ತು ಆಣೆ ಹೆಚ್ಚು ಖರ್ಚು ಬರುವದು ಆದ್ದರಿಂದ ಚಂದಾದಾರರ ಅವಧಿ ಮುಗಿಯುವ ೧ ವಾರ ಮುಂಚೆ ನಾವು ಪತ್ರಿಕೆಯಲ್ಲಿ ಸೂಚನೆಗಳನ್ನು ಕಳಿಸುತ್ತೇವೆ ಆ ಪ್ರಕಾರ ಕೂಡಲೆ ಮೂರು ರೂಪಾಯಿಗಳನ್ನು ಮನಿಯಾರ್ಡರ ಮಾಡಿದರೆ ಎರಡೇ ಆಣೆಯಲ್ಲಿ ದುಡ್ಡು ನಮ್ಮ ಕೈಸೇರುವುದಲ್ಲದೆ ಯಥಾಪ್ರಕಾರ ಪತ್ರಿಕೆಗಳೂ ನಿಮ್ಮ ಕೈಸೇರುತ್ತವೆ. ದಯವಿಟ್ಟು ಎಲ್ಲರೂ ಮನಿಯಾರ್ಡರ ಮಾಡಬೇಕು ಮನಿಯಾರ್ಡರ ಕಳಿಸದೆ ಇದ್ದವರಿಗೆ ಪತ್ರಿಕೆಗಳನ್ನು ನಿಲ್ಲಿಸಿಬಿಡುತ್ತೇವೆ. ಮನಿಯಾರ್ಡರ ಫಾರಮ್ಮಿನಲ್ಲಿ ಹೆಸರು ಹಾಗೂ ತಮ್ಮ ರಜಿ ನಂಬರನ್ನು ತಿಳಿಸಬೇಕು ಹೀಗೆ ಮಾಡುವುದರಿಂದ ಚಂದಾದಾರರಿಗೆ ಉಳಿತಾಯವಾಗುವುದಲ್ಲದೆ ನಾವು ವಿ ಪಿ ಮಾಡಿ ದಾರೀಕಾಯುವ ತೊಂದರೆಯೂ ತಪ್ಪುತ್ತದೆ ಸರ್ವ ಮಹನೀಯರು ನಾವು ಮಾಡಿಕೊಂಡ ವಿನಂತಿಯನ್ನು ಗಮನಕ್ಕೆ ತಂದು ೩ ರೂಪಾಯಿ ಚಂದಾ ಹಣವನ್ನು ಮನಿಯಾರ್ಡರ ರೂಪದಿಂದ ಸಲ್ಲಿಸುತ್ತೀರೆಂದು ನಂಬಿದ್ದೇವೆ

—ಸಂಪಾದಕರು.

ಸ್ವೀಕಾರ

ಬೆಳಗಾಂ ತಿ|| ಹೂಲಿ ಸಾ. ಬಯ್ಯನವರ ಮರದ ಶ್ರೀ ಚರಮೂರ್ತಿ ಸ್ವಾಮಿಗಳವರು ರಾಮೇಶ್ವರಯಾತ್ರೆಯನ್ನು ಮುಗಿಸಿಕೊಂಡು ಮೈಸೂರಿನಲ್ಲಿರುವ ಪಂಚಾಚಾರ್ಯ ಪ್ರಭಾ ಆಪೀಸಿಗೆ ಭೇಟ್ಟಿಕೊಟ್ಟು ಸುಗಮವಾಗಿ ನಡೆದ ಒಗ್ಗೆ ಸಂತೋಷವನ್ನು ವ್ಯಕ್ತಪಡಿಸಿ ಪ್ರಭಾ ಪೋಷಣೆಗಾಗಿ 2 ರೂ ಗಳನ್ನು ಅರ್ಪಿಸಿದ್ದಾರೆ

ಹುಬ್ಬಳ್ಳಿ ನಗರವಾಸಿಗಳಾದ ಶ್ರೀಪಕೀರಪ್ಪ ಮುರಿಗೆಪ್ಪನವರ ಇವರು ಸ್ವರ್ಗಸ್ತರಾಗಿದ್ದು ಅವರ ಕೈಲಾಸಗಮನಾರಾಧನೆಯ ಸಮಯದಲ್ಲಿ ಪ್ರಭಾ ಪೋಷಣೆಗಾಗಿ 1 ರೂ ಸಮರ್ಪಿಸಿದ್ದು ಶ್ರೀ ಶಿವಲಿಂಗಯ್ಯಸ್ವಾಮಿ ಹಿರೇಮಠ ಇವರ ದ್ವಾರಾ ತಲ್ಪಿರುತ್ತದೆ

ಹುಬ್ಬಳ್ಳಿ ನಗರವಾಸಿಗಳಾದ ಶ್ರೀ ಸಿ ಎಸ್. ಸಂಸ್ಥಾನಮಠ ಇವರು ರಾಮೇಶ್ವರ ಯಾತ್ರೆಯನ್ನು ಪೂರೈಸಿಕೊಂಡು ಮೈಸೂರಿನಲ್ಲಿರುವ ಶ್ರೀ ಪಂಚಾಚಾರ್ಯ ಪ್ರಭಾ ಆಫೀಸಿಗೆ ಭೇಟ್ಟಿ ಕೊಟ್ಟು ಅಲ್ಲಿ ನಡೆಯುತ್ತಿರುವ ಕಾರ್ಯಕಲಾಪಗಳಿಗಾಗಿ ತಮ್ಮ ಸಂತೋಷವನ್ನು ವ್ಯಕ್ತಪಡಿಸಿ ಪ್ರಭಾ ಪೋಷಣೆಗಾಗಿ 2 ರೂ ಗಳನ್ನು ಸಮರ್ಪಿಸಿದರು

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯ ಮಂಗಲವನ್ನೀಯಲೆಂದು ಹಾರೈಸುತ್ತೇನೆ

ನಾನಾವಿಧ ಬಣ್ಣಗಳಿಂದ ಮುದ್ರಿತವಾದ ಶ್ರೀಜಗದ್ಗುರು ರೇಣುಕಾಚಾರ್ಯರ ಲಿಂಗೋದ್ಭವ ಫೋಟೋ ಉಚಿತ!

ಸಚಿತ್ರ ರೇಣುಕವಿಜಯ ಹಾಗು ರೇಣುಕವಿಜಯ ಮಹಾಪುರಾಣ

ವೀರಶೈವ ಮಹಾಮತಸ್ಥಾಪಕರಾದ ಶ್ರೀ ಜಗದ್ಗುರು ಪಂಚಾಚಾರ್ಯರಲ್ಲಿ ರೇಣುಕಾಚಾರ್ಯರು ಒಬ್ಬರು ಈ ಭಗವತ್ಪಾದರ ಲೀಲಾಬೋಧಕವಾದ **ಸಚಿತ್ರ ರೇಣುಕವಿಜಯವೂ, ರೇಣುಕವಿಜಯಮಹಾಪುರಾಣವೂ** ಸುಂದರ ಚಿತ್ರಗಳಿಂದ ರೀ ಪ್ರಿಂಟಾಗಿ ಉತ್ತಮ ಬೈಂಡಿನಿಂದ ಸಿದ್ಧವಾಗಿವೆ ಪ್ರತಿಯೊಬ್ಬ ವೀರಶೈವಕುಟುಂಬಿಯು ಮಾಡಿಯು ಈ ಪುಸ್ತಕಗಳನ್ನು ತರಿಸಿಕೊಂಡು ಓದಿ ಧರ್ಮದ ಮಹತ್ವವನ್ನರಿತು ಅಜರಾಮರ ಪವಿತ್ರಾತ್ಮಗಳಾಗಲೆಂಬ ಉದ್ದೇಶದಿಂದ ಕೆಳಗೆ ಪ್ರಕಟಿಸಿದಂತೆ ಈಗ ಪುಸ್ತಕಗಳ ಬೆಲೆಯನ್ನು ಕಡಿಮೆ ಮಾಡಿರುವುದಲ್ಲದೆ ಗ್ರಾಹಕರಿಗೆ ಜಾಹಿರಾತು ಬಣ್ಣಗಳಿಂದ ಮುದ್ರಿತವಾದ ರೇಣುಕಾಚಾರ್ಯರ ಫೋಟೋವನ್ನು (೧೪×೧೦) ಫ್ರೀಯಾಗಿ ಳಕಳಿಸಿಕೊಡುತ್ತೇವೆ. ಹೆಚ್ಚಿಗೆ ಪುಸ್ತಕ ತರಿಸುವವರು ಕಮಿಷನ್ ಅಪೇಕ್ಷಿಸಿದರೆ ಫೋಟೋದ ಬದಲಾಗಿ ರೂಪಾಯಿಗೆ ಣಾಲ್ಕಾಣೆಯಂತೆ ಕಮಿಷನ್ ಕೊಡುತ್ತೇವೆ ಟಪಾಲು ಖರ್ಚು ಪ್ರತ್ಯೇಕ

ಸಚಿತ್ರ ರೇಣುಕವಿಜಯ (ಗದ್ಯ) ೧—೮—೦

ರೇಣುಕವಿಜಯ ಮಹಾಪುರಾಣ (ಭಾಮಿನಿ) ೨—೦—೦

ಮ್ಯಾನೇಜರ್—ಶ್ರೀ ಪಂಚಾಚಾರ್ಯ ವಿಲೆಕ್ಟ್ರಿಕ್ ಪ್ರೆಸ್, ಮೈಸೂರು.

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೩ನೆಯ ಆವೃತ್ತಿ)	೧ ಆಣೆ
ಷಣ್ಮತಸಾಸ್ತ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚಮಿಂಶತಿ ಪ್ರಶ್ನಪ್ರಕಾಶ (೫ನೆಯ ಆವೃತ್ತಿ)	೧ ಆಣೆ
ಶ್ರೀಜಗದ್ಗುರು ರೇಣುಕಾಚಾರ್ಯ ಕೀರ್ತನ	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೧ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ತಿಪತಕ್ತಿವಿಲಾಸ	೨ ಆಣೆ
ವಿಜಯನಗರ ಸಾಮ್ರಾಜ್ಯವೂ ಶ್ರೀರೇಣುಕಾಚಾರ್ಯರೂ	೨ ಆಣೆ
ಶಿವಮಾಹಾತ್ಮ್ಯ (೨ನೆಯ ಆವೃತ್ತಿ)	೨ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೧೦ನೆಯ ಆವೃತ್ತಿ)	೩ ಆಣೆ
ಜಗನ್ನಾಥವಿಜಯತತ್ವದರ್ಪಣ (೫ನೆಯ ಆವೃತ್ತಿ)	೩ ಆಣೆ
ಪಂಚಾಚಾರ್ಯಪ್ರಕಾಶ	೩ ಆಣೆ
ಪಂಚಾಚಾರ ಪ್ರಕಾಶಿಕಾ	೩ ಆಣೆ
ಶ್ರೀಗುರುತತ್ತ್ವಪದಗಳು (೩ನೆಯ ಆವೃತ್ತಿ)	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೪ನೆಯ ಆವೃತ್ತಿ)	೪ ಆಣೆ
ಶ್ರೀಪತಸಂಹಿತಾಧಾರ್ಯರ ಕಾಲನಿರ್ಣಯ	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ಶೈವಿಕವಾಙ್ಮಯರಹಸ್ಯ	೪ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ಪಾಮಾವಳಿ (೩ನೆಯ ಆವೃತ್ತಿ)	೪ ಆಣೆ
ಶೈವೋಪನಿಷತ್ಸಂಗ್ರಹ (ಸಂಸ್ಕೃತ) (೨ನೆಯ ಆವೃತ್ತಿ)	೬ ಆಣೆ
ಷಣ್ಮತಸಾಸ್ತ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ)	೬ ಆಣೆ
ವೀರಶೈವಾಷ್ಟೋತ್ತರ–ಶಾಸ್ತ್ರವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ- ಚಿತ್ರಗಳು)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ವೀರಶೈವಮಹಾಸ್ಥರು	೮ ಆಣೆ
ಬಸವಧ್ವಾಂತವಿವಾಕರ (೨ನೆಯ ಆವೃತ್ತಿ)	೮ ಆಣೆ
ಆಗಮಪರಿಜ್ಞಾನ	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಗಳು (ತೆಲುಗು)	೮ ಆಣೆ
ಶ್ರೀಜಗದ್ಗುರು ಶಿವಾನಂದವಿಜಯ	೮ ಆಣೆ
ಶ್ರೀಜಗದ್ಗುರು ವಿಶ್ವಕರ್ಮವಿಜಯ ವಕ್ಷತ್ರಮಾಲಿಕಾ	೮ ಆಣೆ
ಕನ್ನಡ ನ್ಯಾಯಶತಕಮ್	೮ ಆಣೆ
ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ)	೧೨ ಆಣೆ
ಶಿವಾಗಮಸೂತ್ರಸಿದ್ಧಾಂತದರ್ಪಣ	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ಪ್ರಾಚೀನತ್ವ	೧ ರೂ
ಮಾಹೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ)	೧ ರೂ
ವಿವೇಕಮುಕ್ತಾವಳಿ	೧ ರೂ
ವಿಚಾರಸಾರಾವಳಿ	೧ ರೂ
ವೈದಿಕಶಿವಪೂಜಾವಿಧಿ (ವೈದಿಕಸ್ತರಯುಕ್ತವಾದುದು ೩ನೆಯ ಆವೃತ್ತಿ)	೧॥ ರೂ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧॥ ರೂ
ಸಚಿತ್ರ ರೇಣುಕವಿಜಯ (೩ ನೆಯ ಆವೃತ್ತಿ)	೨ ರೂ
ತಿರುಗಮಸಂಗ್ರಹ (ಶೂದ್ರಜಾತ್ಯಾಚಾರಾಗಮ-ಮಾಹೇಶ್ವರಾಗಮ-ಸೂತ್ರಾಗಮಗಳಿಂದ ಕೂಡಿರುವುದು)	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೩॥ ರೂ
ಸಿದ್ಧಾಂತಶಿಖಾಮಣಿ (ಸಂಸ್ಕೃತ ವೀಕಾಸಹಿತ)	೨ ರೂ
ವೀರಶೈವರತ್ನ (೩ನೆಯ ಆವೃತ್ತಿ, ೩೦ ಮಹತ್ಕಾರ್ಯ ಫೋಟೋಗಳುಳ್ಳವು)	೩ ರೂ
A brief life-sketch of Pandit Sri-Kashinatha Shastrigal (English)	4 As.
The Philosophical Aspect of Virasaivism (English)	8 As
Speeches by Pandit Shri Kashinatha Shastrigal (English)	12 As
ಶಿವಾಚಾರಲಿಂಗಧಾರಣಾ (ಅಚ್ಚಾಗಿದೆ)	೩ ಕ
ವೀರಶೈವರತ್ನ (ಅಚ್ಚಾಗಿದೆ)	೪ ಕ
ಸಚಿತ್ರ ರೇಣುಕವಿಜಯ (ಅಚ್ಚಾಗಿದೆ)	೪ ಕ
ಸಚಿತ್ರ ರೇಣುಕವಿಜಯ (ಅಚ್ಚಾಗಿದೆ)	೪ ಕ.
ಶಿವಾಚಾರಲಿಂಗಧಾರಣಾ (ಅಚ್ಚಾಗಿದೆ)	೨ ಆಣೆ

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

Edited Printed and Published by Brihanmathadhyaksha Sri Mahadevaiah at Sri Panchacharya Electric Press, Sayaji Rao Road, Mysore.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಭ್ಯಾಂ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನವಂಶಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸಂಸ್ಥಾಪಕರು— ನಾಗನೂರು ಬೃಹತ್ಶಾಖಾಧ್ಯಕ್ಷರಾದ ವೇದಿ ಸಂಚಿ ಶ್ರೀ ಶಾಂತೀಜಾಹಶಾಸ್ತ್ರಿಗಳವರು.

ವಾರ್ಷಿಕ ಚಂದಾ ೩ ರೂ] ಸಂಪಾದಕರು— ಶಾಗನೂರು ಬೃಹತ್ಶಾಖಾಧ್ಯಕ್ಷರಾದ ಶ್ರೀ ಮಹಾದೇವಯ್ಯಪವರು [ಏ ಪ ಬಿಡುಗಡೆ ಸಂಖ್ಯೆ ೩ ರೂ ೬ ಆ.

ಸಂಪುಟ ೫೩] ಸೋಮವಾರ ತಾ॥ ೧೧ನೇ ಮೇ ೧೯೫೩ [ಸಂಚಿಕೆ ೫೨

ಪತ್ರವ್ಯವಹಾರ

[ಪತ್ರಿಕಾದಾರರು ಅಭಿಪ್ರಾಯ ಪಡುವ ಲೇಖನಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ ಎಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡಬೇಕಾಗಿದೆ] —ಸಂ]

ಚಿಕ್ಕಮಣ್ಣೂರು ಶ್ರೀಗಳನ್ನ ಧರ್ಮೋಪದೇಶ ಸಿಕಗುಸ್ಸಿ

ಧಾರವಾಡ ಜಿಲ್ಲಾ ಕುಬ್ಬಳ್ಳಿ ತಾಲ್ಲೂಕು ಪೈಕಿ ಸಿರಗುಪ್ಪಿ ಗ್ರಾಮದ ಪ್ರಮುಖರು ಆಮಂತ್ರಣದ ಮೇರೆಗೆ ದಯಮಾಡಿಸಿದ ಚಿಕ್ಕಮಣ್ಣೂರು ಶ್ರೀಗಳಿಬ್ಬರಿಗೆ ರೇವಣಸಿದ್ಧ ಶಿವಾಚಾರ್ಯರು ಸಾಮಾಶಾಸ್ತ್ರಿಗಳವರ ಆಧ್ಯಕ್ಷತೆಯಲ್ಲಿ ತಾ॥ ೨೨-೪-೫೩ನೇ ತಾರಿಖಿ ದಿವಸ ಸಭೆಯು ಸಡೆಯಿತು. ಸಭೆಯಲ್ಲಿ ಶ್ರೀಗಳವರು ವ್ಯಾಖ್ಯಾನ ಮಾಡಿದ ವಿಷಯ ನೇನಂದರೆ —ಸಮಸ್ತ ಪ್ರಾಣಿಗಳಲ್ಲಿ ಶ್ರೇಷ್ಠರಾದ ಮನುಷ್ಯರಿಗೆ ನಿತ್ಯಾನಂದ ಸುಖವು ಯಾವಾಗಲೂ ಬೇಕು ಕಷ್ಟವನ್ನು ಯಾರೂ ಒಪೇಕ್ಷೆ ಮಾಡಲಾರರು ಜ್ಞಾನರು ಮಾತ್ರ ಇಹಲೋಕದ ಸುಖವನ್ನೇ ಬಯಸಿ ಮುಕ್ತಿ ವಿಹೀನರಾಗಿ ಹಿನ್ನಾನಾದ ಜೀವನದ ಯಾತನೆಗೆ ಗುರಿಯಾಗುತ್ತಾರೆ ತಿಳಿದ ಪೌಮ್ಯಜ್ಞಾನಿಗಳು ಮಾತ್ರ ಪರಲೋಕ ಸುಖಪ್ರದವಾದ ಮೋಕ್ಷವನ್ನೇ ಬಯಸಿ ಸುಖಪ್ರದರಿಪಿಗಳಾಗುತ್ತಾರೆ ಇಂತಹ ಸುಖವು ಧರ್ಮಾಂತರಿಗೆ ಮಾತ್ರ ಒದಗುತ್ತದೆ, ಅಧರ್ಮಿಗಳಿಗೆ ಹೊರೆಯಲಾರದು ಮಾನವರು ಧರ್ಮದಿಂದ ದೂರಾದರೆ ಸುಖಸಂಪತ್ತು ಒದಗುವದಿಲ್ಲ, ದರಿದ್ರತನವೇ ಪ್ರಾಪ್ತವಾಗಿ ಮಾನವರ ಧೈರ್ಯ ಸಾಹಸವೆಲ್ಲವೂ ಕುಂದಿಹೋಗುತ್ತವೆ, ಯಾವ ಕಾಲದಲ್ಲಿ ಅದರೂ ಧರ್ಮವೇ ಸುಖಸಾಧನವೆಂದು ಶ್ರುತಿಯಾಣಿಪದೆ, ಧರ್ಮಶಾಸ್ತ್ರವನ್ನು ಬಹುಶೋಧ ಮಾಡಿನೋಡಿದರೂ ಧರ್ಮರಹಸ್ಯವನ್ನೇ ಬೋಧಿಸುತ್ತವೆ ಧರ್ಮಭ್ರಷ್ಟರಾದ ರಾಜರು ಜಟಿಸಿಗಳು ಮಾನವರು ದುರ್ಗತಿ ಗೀಡಾದ ರೆಂಬುದಕ್ಕೆ ಅನೇಕ ಉದಾಹರಣೆಗಳುಂಟು

ವೇದ ಶಾಸ್ತ್ರ ಪುರಾಣ ವೈಟಲ್ ಮೊದಲಾದ ಸೃಷ್ಟಿಯೊಳಗಿನ ಧರ್ಮಗ್ರಂಥಗಳೆಲ್ಲ ಧರ್ಮದಮಹತ್ವವನ್ನೆ ಹೇಳುವವಲ್ಲದೆ ಭಕ್ತಿ ಜ್ಞಾನ ವೈರಾಗ್ಯ ಪುಣ್ಯ ಪಾಪ ವಿಚಾರಗಳನ್ನೂ ಸಹ ಬೋಧಿಸುತ್ತವೆ ಸಮಸ್ತ ಧರ್ಮದರರು ಧರ್ಮಮಾರ್ಗ ಪ್ರವೃತ್ತಿ ಉಳ್ಳವರಾಗಬೇಕು ಸರ್ವ ಮತೀಯ ಸ್ವೀಯರುಗಳು ಸತ್ಗುರುಗಳ ಗುರುಭಕ್ತಿ ಶಿವ ಭಕ್ತಿಯಲ್ಲಿ ಮುಂದುವರಿಯಬೇಕು ಸಮಾಜದಲ್ಲಿ ನನ್ನ ಜಾತಿ ಹೆಚ್ಚು, ನಿನ್ನ ಜಾತಿ ಆಡಿಮೆಯೆಂದು ಒಬ್ಬರಿಗೊಬ್ಬರು ದ್ವೇಷಮಾಡುವುದು ಸಾಧುಮಾರ್ಗವಲ್ಲ. ಸಮಸ್ತ ವರ್ಗದವರೂ ನಿತ್ಯಸ್ನಾನವನ್ನು ಮಾಡಿ ಶರೀರ ಆರೋಗ್ಯವಾಗ್ಯುಕೊಂಡು ಬಟ್ಟೆಗಳನ್ನು ಸ್ವಚ್ಛವಾಗಿಟ್ಟುಕೊಂಡಿರಬೇಕು ಹೊಲಸಾಗಿದ್ದರೆ ಜತರಲ್ಲಿ ಮಾನ್ಯತೆ ಸಿಗುವದಿಲ್ಲ ಯಾವಜಾತಿಯವನಾದರೇನು, ನಿಷ್ಕಲಂಕವಾದ ಶುದ್ಧ ಮನಸ್ಸು ಪವಿತ್ರವಾದ ಆಚಾರವೂ ಯಾರಲ್ಲಿರುತ್ತದೆಯೋ ಅವರೇ ಶ್ರೇಷ್ಠರಾಗಿಲ್ಲಿ ಸಂದೇಹವಿಲ್ಲ, ಅಕ್ಕರಿಗೆ ಕಷ್ಟವನ್ನು ಕೊಟ್ಟು ದುರ್ಗುಣಗಳಿಂದ ತುಂಬಿದ ಪಾಪಾತ್ಮರೇ ನೀಚಕುಲದವರೆಂದು ಬರೆಯಬಹುದು, ಕೇವಲ ಶಿವಸ್ವರೂಪರೇ ಆದಂಥ ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯ ಸರ್ವಜ್ಞಮೂರುರು ಶ್ರೀ ಜಗದ್ಗುರು ತಂಕ ರಾಜಾಯಾರು ಕೈಪ್ಪ ಮಹಮ್ಮದ್ ಪೈಗಂಬರ್ ಬುದ್ಧ ಮೊದಲಾದ ಮಹಾವಿಭೂತಿಗಳು ನಿತ್ಯಸಟುವಾದ ಆತ್ಮ ಶುದ್ಧಿಯುಳ್ಳ ಹಿರುಳಿದ ಜನಾಂಗವನ್ನು ಮುಂದುವರಿಸಿ ಜಗತ್ತನ್ನು ಪಾವನಮಾಡಿದರು ಎಲ್ಲ ಮತಗಳಲ್ಲಿ ಸಜ್ಜನರೂ ಉಂಟು ಮಜ-ನರೂ ಉಂಟು, ಆದ್ದರಿಂದ ಜಾತಿ ಜಾತಿಗಲ್ಲಿ ದ್ವೇಷ ಮಾಡುವುದು ಅವಿವೇಕತನವು ಎಲ್ಲರೂ ಮಹದೇವನ ಮಕ್ಕಳೆಂಬ ಭಾವನೆ ಬರಬೇಕು ಹೀಗೆ ಇದ್ದರೆ ಸ್ವರ್ಗಸುಖದ ಆನಂದವನ್ನೂ ಸೌಖ್ಯವನ್ನೂ ಹೊಂದುವಿರಿ ಇದೇ ವಿಷಯವಾಗಿ ಶ್ರೀ ನಿಜಗುಣ ಶಿವಯೋಗಿಗಳು " ನಿನ್ನೊಳಗೇಕೋ ಭಾವನೆ ಯೊಡಗೂಡಮೊ " ಎಂಬುದಾಗಿಯೂ ಶ್ರೀ ಪುರಂದರ ಕೃತ್ತನು ಪರಾತ್ಪರತಾಳಿಯಾದ ಅರ್ಜುನನಿಗೆ ಭಗವದ್ಗೀತೆಯಲ್ಲಿ " ಸ್ವಧರ್ಮೇ ನಿಧನಂ ಶ್ರೇಯಃ " ಎಂಬುದಾಗಿಯೂ ಬೌದ್ಧ ಮಾತಿದ್ದಾರೆ, ಆದ್ದರಿಂದ ಎಲ್ಲರೂ ಪ್ರೇಮಾದರಗಳಿಗ್ಯ ಭಕ್ತ ಪದವನ್ನೇ ಹಿಡಿದು ಧರ್ಮ ಮಾರ್ಗದಿಂದ ನಡೆಯಬೇಕು

ಒಡವಿದ್ಯಾರ್ಥಿಗಳಿಗೆ ಬೋಧಿಂಗುಗಳಿಗೆ ಮಂದಿರ ಕಟ್ಟಿಡಗಳಿಗೆ ಧರ್ಮಧುರೀಣರಾದ ಪುಣ್ಯಾತ್ಮರು ಭವ್ಯ ಭೂಮಿ ನಗೈರೆ ಕೊಟ್ಟು ಬಹುಪ್ರಾಣವನ್ನು ಸಂಪಾದಿಸುತ್ತಾರೆ ಮಾನವರಿಗೆ ಪುಣ್ಯ ಕೀರ್ತಿಗಳು ಮಾತ್ರ ಶಾಶ್ವತವಾದವುಗಳು ಶ್ರೀಮಂತರಾದವರು ಅಲಸ್ಯಮಾಡದೆ ಶ್ರೀಗಳವರಿಂದ ನಿರ್ಮಿಸಲ್ಪಡುವ ಗದಗ ಶ್ರೀ ಜ॥ ರೇಣುಕಾಶ್ರಮಾರ್ಯ ಮಂದಿರಕ್ಕೆ ಸೇವೆಯನ್ನು ಸಲ್ಲಿಸಿ ಕೀರ್ತಿಶಾಲಿಗಳಾಗಬೇಕು ಧರ್ಮವಿಹಿನರ ಜನ್ಮ ಆಹಿನ ಕೊರಳಲ್ಲಿದ್ದ ಮಲೆಗಳಂತೆ ನಿರರ್ಥಕವಾದುದು ಅಂತೆ ವೇದವೂ ಕೂಡ " ಯತೋಧರ್ಮಸ್ತತೋ ಜಯಃ " ಎಂಬಂತೆ ಮಾನವರಿಗೆ ಧರ್ಮಗುಣವಿದ್ದರೆ ಮರಣ ಹೊಂದುವ ಪರ್ಯಂತರ ಸರ್ವ ಜಯಪ್ರದವೇ ಆಗುವುದು, ಸಕಲ ಕಾರ್ಯಗಳು ಫಲಕಾರಿಗಳಾಗುವುವು, ಆಯುಷ್ಯ ವರ್ಧಿಸುತ್ತವೆ ಕೀರ್ತಿಲತೆಗಳು ಹೆಚ್ಚಿ ಮನ್ನಣೆ ಉಂಟಾಗುವುದು ಎಂಬುದಾಗಿ ಬೋಧಿಸಿದರು.

ಮಹಾತಪಸ್ವಿ ಶ್ರೀ ಚಿಕ್ಕಮಣ್ಣೂರು ಜ್ಞಾನಿಗಳವ ಯೋಗಿಗಳು ಸಕಲ ಮತೀಯರಿಗೆ ಬೋಧಮಾಡಿ ರಾಷ್ಟ್ರ ಧರ್ಮಾಭಿವೃದ್ಧಿಗೆ ಇವೆಲ್ಲ ಸುಧಾರಣೆ ಮಾಡುವುದು ಕೇವಲ ದರೆ ಯಾರಿಗೆ ತಾನೆ ಆವಂದವಿಸಲಿಕ್ಕಿಲ್ಲ ಈ ಪುಣ್ಯ ಗುರುಜೋಡಿಗಳು ೩೦-೩೫ ವರ್ಷಗಳಿಂದ ವೀಡಿ ಮಧ್ಯದಲ್ಲಿ ಸಂಚರಿಸಿ ಅನೇಕ ಧರ್ಮಪರರಿಗೆ ರಾಜ್ಯಪೀಠ ಧರ್ಮ ಸೈರಿಗಳಾಗಿ ಬೋಧಮಾಡುತ್ತಿರುವುದು ಅಭಿಮಾನದ ವಿಷಯವಾಗಿದೆ

ವೀರಪ್ಪ ಪರಮಪ್ಪನವರ

ಗುರುವರ್ಗದ ಸಮ್ಮೇಳನಕ್ಕೆ ಸುಸಂದಿ

ಗುರುವರ್ಗ ಸಮ್ಮೇಳನದ ಬಗ್ಗೆ ವೀರಶೈವ ಗರ್ಜನಾ ಮತ್ತು ಪಂಚಾಚಾರ್ಯಪ್ರಭಾ ಪತ್ರಿಕೆಗಳಲ್ಲಿ ಪ್ರಕಟಿಸಲಾಗಿದೆಯಷ್ಟೆ ವೀರಶೈವ ಗರ್ಜನೆಯು ಅನುಕೂಲ ಸ್ಥಳವೆನ್ನು ಆಕೇಕ್ಷಿಸಿದೆ, ಪಂಚಾಚಾರ್ಯಪ್ರಭೆಯು ಗದಗ ನಗರವನ್ನು ಅನುಮೋದಿಸಿದೆ. ಇದು ಸೂಕ್ತವಾಗಿಯೇ ತಾರುತ್ತದೆ, ಗದಗಿನ ವೀರ ಗುರುಭಕ್ತರು ಯಾವುದಕ್ಕೂ ಸಿದ್ಧರಾಗಿಯೇ ಇರುತ್ತಾರೆ ಶ್ರೀ ರಂಭಾಪುರೀ ಜಗದ್ಗುರುಗಳವರ ಗದಗ ನಗರ ಪ್ರವೇಶೋತ್ಸವದೇ ಅವರ ಗುರು ಭಕ್ತಿಗೆ ನಿದರ್ಶನವಾಗಿದೆ

ಗುರುವರ್ಗಕ್ಕೆ ಜಗತ್ಕಲ್ಯಾಣದ ಭಾರವು ವಿಪುಲವಾಗಿರುತ್ತದೆ, ಗುರುವರ್ಗವು ಸುಸಜ್ಜಿತವಾಗಬೇಕಾಗಿದೆ, ಇನ್ನೂ ಮುಂದುವರಿಯಬೇಕಾಗಿದೆ, ಗುರುವರ್ಗಕ್ಕೆ ತಿಳ್ಳರ ಸಹಾಯ-ನೇನೂ ಕಡಿಮೆಯಾಗಿಲ್ಲ, ಗುರುವರ್ಗದ ಸರ್ವೋಳಿತಗಳು ಕಿಲ್ಲಲ್ಲಿ ಪಡೆಯುತ್ತ ಒದ್ಯರುವುದರಿಂದ ಗುರುಗಳಿಗೆ ಸ್ವಕರ್ತವ್ಯ ಜ್ಞಾನವೂ ಶಿಷ್ಯರಿಗೆ ಗುರುಗಳ ಪರಿಚಯವೂ ಆಗಿ ಅವರವರ ಕರ್ತವ್ಯ ಪ್ರೇತ್ರಗಳು ಸಾಧ್ಯವಾದ ವಿಧಾನಗಳೊಡನೆ ವಿಸ್ತಾರ ಗೊಳ್ಳುತ್ತವೆ

ಶ್ರೀರಂಭಾಪುರೀ ಜಗದ್ಗುರುಗಳವರ ನೂತನ ಅಶ್ವ ಪಲ್ಲಕ್ಕಿ ಮಹೋತ್ಸವವು ಮೈಸೂರು ನಾಡಿನ ಮೂರನೆಯ ಸುಪ್ರಸಿದ್ಧ ನಗರವಾದ ದಾವಣಗೆರೆ ಪಟ್ಟಣದಲ್ಲಿ ಜರಲಿರುವ ೧-೬-೧೯೫೩ ನೇ ಸೋಮವಾರ ಸುದಿನದ ದಲ್ಲಿ ಸಕಲ ರಾಜಮರ್ಯಾದೆಯೊಂದಿಗೆ ನೆರವೇರುವಂತಿ ನಿಶ್ಚಿತವಾಗಿರುವುದಾಗಿ ತಿಳಿಯುತ್ತದೆ ಆ ಪಟ್ಟಿ ನೇಪವು ಗುರುವರ್ಗದ ಅಧಿವೇಶನಕ್ಕೆ ತುಂಬಾ ಅನುಕೂಲವಾಗಿರುತ್ತದೆ ಅಲ್ಲಿ ಇಲ್ಲಿ ಎಂಬು ಸ್ಥಳವನ್ನು ಹುಡುಕುವುದ ಕ್ಕಿಂತಲೂ ಈ ಸುಸಂಧಿಯನ್ನು ಗುರುವರ್ಗವು ಳೆದು ಕೊಳ್ಳಬಾರದು ಆಗ ಆಹಾರಾವಸಾನಿ ಸಭಾಮಂಟಪ ಮುಂತಾದವುಗಳ ವ್ಯವಸ್ಥೆಯು ಇದ್ದೇ ಇರುತ್ತದೆ, ವಸತಿಗೆ ಸ್ಥಾನಾಸೂಲಕತೆಯೂ ಹೇರಳವಾಗಿರುತ್ತದೆ, ಎಲ್ಲ ಕಡೆಗಂದಲೂ ರೈಲು ಮೋಟಾರ್ ವಾಹನಗಳ ಸೌಕರ್ಯವುಂಟು

ಈ ಎಲ್ಲ ಕಾರಣಗಳಿಂದ ದಾವಣಗೆರೆಯೇ ಗುರುವರ್ಗ ಸಮ್ಮೇಳನಕ್ಕೆ ರಕ್ಷ ಸ್ಥಾನವಾಗಿರುತ್ತದೆ ಇಂತಹ ಸುಸಂಧಿ ರ್ಭವನ್ನು ತಳ್ಳಿಹಾಕದೆ ಗುರುವರ್ಗವು ಇದರ ಲಾಭ ವನ್ನು ಪಡೆದು ಕೊಳ್ಳಬೇಕಾಗಿ ಈ ಮೂಲಕ ಸಭಧಿ ಮಾನ ಪೂರ್ವಕ ನಿವೇದಿಸಿ ಕೊಳ್ಳಲಾಗಿದೆ, ದಾವಣಗೆರೆ ವೀರಶೈವ ಬಾಂಧವರು ಇದಕ್ಕೆ ತಕ್ಕಸಹಾಯ ನೀಡುವ ರೆಂದು ನಂಬಿರುವ

ಬಿ ಬಿ. ಮಲ್ಲಪ್ಪಶೆಟ್ಟಿ
ಆಲೂರು

ಜಾ॥ ೬-೫-೧೯೫೩

ಮನಬಂದಂತೆ ಪ್ರಯಾಣಮಾಡಿ

" ಮನಬಂದಂತೆ ರೈಲ್ವೆ ಪ್ರಯಾಣಮಾಡಿ " ಎಂಬ ಯೋಜನೆಯಂತೆ ಮೇ ೪ ರವರೆಗೆ ದೇಶದ ಸೈಟಿನ್ ಕಲ್ಲಿ ೬,೫೦೦ ಮಂದಿ ಈ ರೈಲ್ವೆ ಟಿಕೆಟ್ ಕೊಂಡಿರು ತ್ತಾರೆ

ಶ್ರೀಮಜ್ಜಗದ್ಗುರು ಏಕೋರಾಮಾರಾಧ್ಯರ
ಹಾಗೂ
ಶ್ರೀಜಗದ್ಗುರು ದಾರುಕಾಚಾರ್ಯರ
ಜಯಂತೀಮಹೋತ್ಸವಗಳು

ವೈಶಾಖ ಶು॥ ೩ ಶುಕ್ರವಾರ ವೈಶಾಖ ಶು॥ ೫ ಭಾನುವಾರ

ಧಾನವ ನಿರ್ನಾಶಾರ್ಥವು ಭರತಖಂಡದಲ್ಲಿರತಕ್ಕ ಸವ ಸ್ಥಾವರಕ್ಷೇತ್ರ ಮಸ್ಥಳವು ಗಳೇ ಭೂತಗಳು. ಪ ಶ್ರೀರಾಮಾಸ್ವಾಮಿ, ಉಜ್ಜಯಿನೀಕ್ಷೇತ್ರಗಳಲ್ಲಿ ವಿರಾಜಿಸುವ ಶ್ರೀಭೀಮನಾಥ ಶ್ರೀಸಿದ್ಧೇಶ್ವ ವ ಹಾಲಿ ಗಗಳಿಂದವತರಿಸಿ, ವರಸಾಧಿತವಾದ ವೀರಶೈವಸಿದ್ಧಾಂತವನ್ನು ಭೂಮಂಡಲದಲ್ಲಿ ಸೆರಿಸಿ, ವ್ಯಾಸ, ರಥಿ ಮೊ ಲಾದ ಅನಂತಜನ ಮಹರ್ಷಿಗಳನ್ನೂ, ಗೌತಮೇಂ, ದೇವನಂದನ ಮೊದಲಾದ ಚಕ್ರವರ್ತಿಗಳನ್ನೆ ತಿನಸಿದ್ಧಾಂತೋಪದೇಶದ್ವಾರಾ ಉದ್ಧರಿಸಿ ಲೋಕೈಕಪೂಜ್ಯರಾಗಿಸಿದೆ, ಅಂತಹ ಶ್ರೀಜಗದ್ಗುರು ಏಕೋರಾಮಾರಾಧ್ಯರ ಹಾಗೂ ಶ್ರೀಜಗದ್ಗುರು ದಾರುಕಾಚಾರ್ಯರ ಜಯಂತೀಮಹೋತ್ಸವಗಳು ಇದೇ ನಿಜವೈಶಾಖ ಬಹುಳಪಕ್ಷದಲ್ಲಿ ವ್ಯಾಪ್ತವಾಗುವುದರಿಂದ ಸರ್ವ ಗುರುಭಕ್ತರೂ ಈ ಜಯಂತೀ ಹೋತ್ಸವಗಳನ್ನು ಅತ್ಯಂತ ವೈಭವದಿಂದ ನೆರವೇರಿಸಬೇಕು. **ನಿಜವೈಶಾಖ ಶು॥ ೩ ಶುಕ್ರವಾರ ತಾ॥ ೧೫—೫—೧೯೫೩ ನೆಯ ದಿವಸ ಶ್ರೀಜಗದ್ಗುರು ಏಕೋರಾಮಾರಾಧ್ಯರ ಜಯಂತೀಮಹೋತ್ಸವವನ್ನೂ, ನಿಜವೈಶಾಖ ಶು॥ ೫ ಭಾನುವಾರ ತಾ॥ ೧೭—೫—೧೯೫೩ ನೆಯ ದಿವಸ ಶ್ರೀಜಗದ್ಗುರು ದಾರುಕಾಚಾರ್ಯರ ಜಯಂತೀ ಮಹೋತ್ಸವವನ್ನೂ ನೆರವೇರಿಸಬೇಕು.** ಈ ಮೊದಲು ಈ ಪತ್ರಿಕೆಯಲ್ಲಿ ಪ್ರಸಿದ್ಧಪಡಿಸಿದಂತೆ ಭರತಖಂಡದಲ್ಲಿರುವ ಲಕ್ಷೋಪಲಕ್ಷ ಜನ ಶುದ್ಧಸಂಪ್ರದಾಯದ ವೀರಶೈವರು ಶ್ರೀಜಗದ್ಗುರು ರೇಣುಕಾಚಾರ್ಯರ ಹಾಗೂ ಪಂಡಿತಾರಾಧ್ಯ, ವಿಶ್ವಾರಾಧ್ಯರ ಜಯಂತೀ ಮಹೋತ್ಸವಗಳನ್ನು ಆಯಾಯ ಪವಿತ್ರದಿನಗಳಲ್ಲಿ ಅತ್ಯಂತಭಕ್ತಿಯಿಂದಲೂ, ವೈಭವದಿಂದಲೂ ನೆರವೇರಿಸಿದ ವಿಷಯವು ಈ ಪತ್ರಿಕೆಯಿಂದ ಸರ್ವರಿಗೂ ವೇದ್ಯವೇ ಆಗಿದೆ. ಶುದ್ಧಸಂಪ್ರದಾಯದ ವೀರಶೈವರು ಸದ್ಯಃ ಪ್ರಾವೃತ್ತವಾಗಿರುವ ಆಚಾರ್ಯರ ಜಯಂತೀ ಮಹೋತ್ಸವಗಳನ್ನು ಅತ್ಯಂತ ಭಕ್ತಿಯಿಂದಲೂ, ಉತ್ಸಾಹದಿಂದಲೂ, ವೈಭವದಿಂದಲೂ ನೆರವೇರಿಸಿ, ಜಗದಾಚಾರ್ಯರ ಕೃಪೆಗೆ ಪಾತ್ರರಾಗಬೇಕೆಂದು ಹಾರೈಸುತ್ತೇವೆ.

—ಸಂ.

ಜಯಂತಿ ಮಹೋತ್ಸವ
ಹಳ್ಯಾಳ
(ಸಂ॥ ಶಾಶೀನಾಥಶಾಸ್ತ್ರಿಗಳ ನೆನಹು)

ಪ್ರತಿವರ್ಷ ಪದ್ಧತಿಯಂತೆ ಗುಲ್ಬರ್ಗಾ ಡಿ॥ ಹಳ್ಯಾಳ ಗ್ರಾಮದಲ್ಲಿ ಶ್ರೀ ಜಗ॥ ಪಂಡಿತಾರಾಧ್ಯ ವಿಶ್ವಾರಾಧ್ಯರ ಜಯಂತೀಮಹೋತ್ಸವಗಳೂ ಶ್ರೀ ಜಗ॥ ರೇಣುಕಾಚಾರ್ಯರ ಜಯಂತಿಯೂ ಆಯಾ ದಿವಸಗಳಲ್ಲಿ ಶ್ರೇ ದುಂಡಲಿಂಗಪ್ಪ ಮಾಸ್ತರ ಬಳುದಿಗಿಯವರ ಪ್ರೋತ್ಸಾಹದಿಂದನಡೆದವಲ್ಲದೆ ಲಿಂಗೈಕ್ಯ ವೀರಶೈವ ಮಹೋಪಾಧ್ಯಾಯಕೈಲಂಡಿಕ ಪ್ರಕಾಂಡ ಪಂಡಿತಾಗ್ರಣಿ ಕಾಶೀನಾಥ ಶಾಸ್ತ್ರಿಜೆಯವರ ಪುಣ್ಯತಿಥಿಯು ವೈಭವದಿಂದ ಆಚರಿಸಲ್ಪಟ್ಟಿತು

ಈ ಕಾರ್ಯಗಳಿಗಾಗಿ ಶ್ರೀ ಮಾಸ್ತರರಿಂದ ಶ್ರೀ ಪಟ್ಟಚರಾಧಿಕಾರಿಗಳಿಗೆ ಆಮಂತ್ರಣಗಳನ್ನು ಆಸಿಸಿದ್ದರೂ ಕೂಡ ಅವರು ಬಾರದಿದ್ದುದಕ್ಕೆ ಮಾಸ್ತರರು ವೈಷಕೊಳ್ಳಿಗಾದರು, ಅದರೂ ಜಗದಾಚಾರ್ಯ ತತ್ವಪ್ರಚಾರಕರಾದ ವೇ॥ ಶಂಕರ ಶರ್ಮ ವೇದವಿಗಾಂವ ಇವರ ಅಧ್ಯಕ್ಷತೆಯಿಲ್ಲಿ ಸಭೆಕರೆದು ವೀರಶೈವ ಧರ್ಮರಹಸ್ಯಗಳನ್ನು ಜನರಿಗೆ ಬೋಧಿಸಿದರು. ಶ್ರೀ ಶಂಕರಶರ್ಮರು ಮಹೋಪಾಧ್ಯಾರಿಂದ ಹೇಳಲ್ಪಟ್ಟವರೆಂದರೆ ಶ್ರೀ ಉಪಾಧ್ಯಾಯರು ನಶ್ವರವಾದ ಸಿರಿಯನ್ನು ಸಂಬಂಧಪಡಿದ ಬಾಳುವ ಶ್ರೀ ದುಂಡಲಿಂಗಪ್ಪನವರ ಭಕ್ತಿ ಸಿರಿಯನ್ನು ನೋಡದಾದರಲ್ಲ ಗುರುವರ್ಗಕ್ಕೆ ಸಂಹಸಂಕಿದ್ದ ಪೂಜ್ಯ ಪಂಡಿತ ಕಾಶೀನಾಥ ಮನುಷ್ಯನೇ ನೀನು ಕಣ್ಣಿರಯಾದ ಇಪ್ಪೇ ಜವಧಿಯಲ್ಲಿ ಗುರುವರ್ಗವು ನಿರ್ಗಯವಾಯಿತೆ ? ಸಮ್ಮೇಲನದಲ್ಲಿ ಮಾಡಿದ ರಣವುಗಳು ಮಾಯವಾದವೇ ? ಮಹಾತ್ಮಾ ನೀನು ಪುನಃ ಉದಯಿಸಲಿಕ್ಕೆ ಪರಮಾತ್ಮನ ಆಪ್ಪನೆ ಇಲ್ಲವೆ ? ಹೀಗಾದರೆ ಧರ್ಮಜಾಗ್ರತಿಯೆಂತು, ಮೊದಲಾಗಿ ಶಾಸ್ತ್ರಿಗಳವರಿಷ್ಟು ನೆನೆದು ಅವರ ಕಾರ್ಯವನ್ನು ಕೊಂಡಾಡಿ ಜಯಂತಿಯ ವಿಷಯಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು

ಪ್ರತ್ಯಕ್ಷದರ್ಶಿ.

ಶ್ರೀ ಪಟ್ಟ-ಚರಾಧಿಕಾರಿಗಳ ಸಮ್ಮೇಳನವನ್ನು ಹಾನಗಲ್ಲಿನೆರೆಯಲ್ಲಿ ನೆರವೇರಿಸುವದು ಅಗತ್ಯ

ವೀರಶೈವ ಮಹಾಸಭೆಗಳೂ ಗುರುವರ್ಗದ ಸಮ್ಮೇಲನಗಳೂ ಧರ್ಮಸಾಮ್ರಾಜ್ಯದ ಸುವ್ಯವಸ್ಥೆಗೆ ತಳಹದಿಯಾಗಿದ್ದುದರಿಂದ ಈ ಸಭೆ ಸಮ್ಮೇಲನಗಳು ನಿಂತು ಹೋಗಿ ಧರ್ಮಜಾಗ್ರತಿಯೂ ಗುರುವರ್ಗದ ಮುಂದೋಟವೂ ಕುಸಿಯುಅುರೂಪುಸಿದೆ ಸನಾತನೀಯವಾದ ಈ ಧರ್ಮದಲ್ಲಿ ಬುದ್ಧಿವಂತರು, ಮೇಧಾವಿಗಳು, ಧನಿಕರು, ಪಂಡಿತರು ಹೇರಳವಾಗಿದ್ದರೂ ಕೂಡ ಈ ಪರಿಸ್ಥಿತಿಯನ್ನು ಗಮನಿಸದಿರುವುದು ಕಲಪ್ರಭಾವದ ಅತಿರೇಕವನ್ನು ಸೂಚಿಸುತ್ತದೆ ಧರ್ಮಾಭಿಮಾನಿಗಳು ತಕ್ಷಣ ಸಮಯವನ್ನು ಕ್ಷೇಪಿಸುತ್ತ ಧರ್ಮಜಾಗ್ರತಿಗಾಗಿ ತನುಮನ ಧನಗಳನ್ನರ್ಪಿಸಿ ಕೀರ್ತಿಭಾಗಿಗಳಾಗಬೇಕು.

ವೀರಶೈವ ಧರ್ಮದ ಆಗರವಾದ ಜಾನಗಲೆರೆ ಪಟ್ಟಣದ ಮಾನ್ಯ ಮಹಾಜನರು ಅತುಲಾನಂದದಿಂದ ರೆಂಭಾಪುರೀ ಜಗದ್ಗುರು ಶ್ರೀ ವೀರಗಂಗಾಧರರಾಜೇಂದ್ರ ಶಿವಾಚಾರ್ಯಮಹಾಸ್ವಾಮಿಗಳವರ ಅಡ್ಡಪಾಲಕೆ ಮಹೋತ್ಸವನ್ನು ಸಕಲ ರಾಜಮರ್ಯಾದೆಗಳೊಂದಿಗೆ ನಡೆಯಿಸುವವರಾಗಿದ್ದು ಆ ಸಮಯಕ್ಕೆ ಸಕಲ ಸಿದ್ಧತೆಗಳನ್ನು ಮಾಡುವುದರ ಜೊತೆಗೆ ಶ್ರೀ ಜಗದ್ಗುರುಗಳ ಅಧ್ಯಕ್ಷತೆಯಲ್ಲಿ ಶ್ರೀ ಪಟ್ಟಚರಾಧಿಕಾರಿಗಳ ಸಮ್ಮೇಲನವನ್ನು ಕರೆದು ಗುರುವರ್ಗದ ಜಾಗ್ರತೆಗೆ ಅನುಕೂಲವನ್ನು ಕಲ್ಪಿಸಿಕೊಟ್ಟು, ಪುಣ್ಯಭಾಗಿಗಳಾಗಿ ಶ್ರೀಗುರು ಕೃಪೆಗೆ ಪಾತ್ರರಾಗಲೆಂದು ಕೋರುತ್ತೇನೆ. —ಸಂ

ಕರ್ನಾಟಕ ಏಕೀಕರಣದ ಬಗ್ಗೆ
ನೌಡಕುಂದಿ ಸ್ವಾಮೀಜಿಯವರ ಸಂದೇಶ

ಶೀ ಪ್ರ ಬ್ರ ಶಿವಯೋಗಿಸ್ವಾಮಿಜಿ ಸಂದೇಶ

ಕನ್ನಡ ಸಂಸ್ಕೃತಿಯ ಕೇಂದ್ರವಾದ ಬಳ್ಳಾರಿ ಜಿಲ್ಲೆಯನ್ನು ವಿಭಾಗಿಸಿ ಕೇಂದ್ರ ಸರಕಾರವು ಕನ್ನಡಿಗರಿಗೆ ಹುಬ್ಬಿ ಬಾರದಷ್ಟು ಅಪಾರ ಅಘಾತವನ್ನು ಬಳ್ಳಾರಿ ಜಿಲ್ಲೆಯನ್ನು ವಿಭಾಗಿಸುವುದಂದರೆ ತೀರ್ಮಾನ ತರ ಕನ್ನಡಿಗರ ಹೃದಯವನ್ನೇ ಸೀಳಿದಂತೆ ಕರ್ನಾಟಕ ಏಕೀಕರಣದ ಬೇಡಿಕೆಯು ಏಸುಕ ವರುಷಗಳಿಂದ ಸರಸಾದದ ಮುಂದಿದ್ದರೂ ಇದನ್ನು ಕಣ್ಣೆತ್ತಿ ನೋಡದೆ ಇಲ್ಲಸಲ್ಲದ ನೆಪವನ್ನು ಮುಂದಮಾಡಿ ಧರ್ಮವಿಂದ ಕನ್ನಡಿಗರ ಆಯೆಯಮೇಲೆ ಕೈಯೆತ್ತಿಯುತ್ತ ಒಂದಿಬ್ಬರಿಗೆ ಸ್ವತಿಯೊಬ್ಬ ಕನ್ನಡಿಗನಿಗೆ ತಿಳಿದೇ ಇಪ ಕನ್ನಡ ನಾಡಿನ ವ್ಯಾತಿಯಲ್ಲದೆ ಯಾವ ಕನ್ನಡಿಗರೂ ಶಾಂತಿಯಿಲ್ಲ ಸುಖವಿಲ್ಲ ಭಾರತದ ಪ್ರಧಾನಮಂತ್ರಿಗಳು ಕರ್ನಾಟಕದ ವಕೀಹಾಸಿಕ ಹಿನ್ನೆಲೆಯನ್ನು ಅವಲೋಕಿಸಿ ಸದೆ ಅಂಧ್ರರಾಯರು ಕೈತ್ರಿಮತನದಿಂದ ಒಪ್ಪಿಸಿದ ವರಡಿಗಳನ್ನೆ ಅಲಂಬಿಸಿ ಬಳ್ಳಾರಿ ಜಿಲ್ಲೆಯನ್ನು ತುಂಡರಿಸಿ ಕನ್ನಡಿಗರ ಹಕ್ಕುಬಾಧ್ಯತೆಯುಳ್ಳ ಅದವಾಸಿ ಅಲೂರು, ರಾಯದುರ್ಗ ತಾಲೂಕುಗಳನ್ನು ಅಂಧ್ರರಿಗೆ ಒಪ್ಪಿಸಿದುದೂ, ವಾದಗ್ರಸ್ತವೆಷ್ಟಿದ ಬಳ್ಳಾರಿಯನ್ನು ವಾದಗ್ರಸ್ತ ಪ್ರದೇಶವೆಂದು ಸಾರಿದುದೂ ಪಂಚಾತಿಯ ಆವೆಹೇಳನ ವಲ್ಲದೆ ಮತ್ತೇನು. ಕೇಂದ್ರಸರಕಾರವು ಈರೀತಿ ಮಾಡಿದುದು ಸರಿಯಾದುದಲ್ಲ ಕನ್ನಡಿಗರು ಅಂಧ್ರರಿಗೆ ಒಪ್ಪಿಸಿದ ೩ ತಾಲೂಕುಗಳಂಥ ಹೆಸರಿಸ್ಕಾರದೆಂತಲೇ ಬಳ್ಳಾರಿ ತಾಲೂಕನ್ನು ವಾದಗ್ರಸ್ತಪ್ರದೇಶವೆಂದು ಸಾರಿದ್ದಾರೆ ಭಾರತದ ಹಕ್ಕು ಸಾಬಿರ ವರುಷಗಳ ಹಿಂದಿನ ವಕಿಹಾಸಿಕ ಸಂಪುಟವನ್ನು ಅವಲೋಕಿಸಿದಲ್ಲಿ ಉಜ್ವಲ ಕರ್ನಾಟಕದ ಪವಿತ್ರತಾಣವು ಸುವರ್ಣಾಕ್ಷರಗಳಿಂದ ರಂಜಿಸುತ್ತಲಿದೆ ಶ್ರೀಲೋಕಾಧಿಪತಿ ರಾವಣನ ನಾಶಕ್ಕೆ ಕಾರಣೀಭೂತ ನಾದ ಲೋಕೈಕವೀರ ಅಂಜನೇಯನು ಹುಟ್ಟಿದುದು ಈ ಕನ್ನಡ ನಾಡಿನಲ್ಲಿಯೆ! ಧರ್ಮಾಕ್ಷರಾದ ಪಾಂಡವರ ಅಜ್ಞಾತವಾಸದಲ್ಲಿ ತನ್ನ ಒಡಲೊಳಗಿಟ್ಟುಕೊಂಡು ಸಂರಕ್ಷಿಸಿ ಸರ್ವಸಹಾಯವನ್ನು ಇತ್ತ ನಾಡು ಕರ್ನಾಟಕವೆ ಶ್ರೀ ರೇಣುಕಾಚಾರ್ಯ ಏಂಕರಾಚಾರ್ಯ ರಾಮಾನುಜ, ಮಧ್ವ, ನಪ್ಪಳಿ, ನಿಂಬಾರ್ಕ ಮೊದಲಾದ ಧರ್ಮಸಾಧ್ಯಕರು ಬಸವ, ಚೆನ್ನಬಸವ, ಪ್ರಭುದೇವ ಸಿದ್ಧರಾಮ, ಏಂಬಿಣ್ಣರಿಣ್ಣ ಮೊದಲಾದ ಮಹಾ ಮಹಾ ವಿಭೂತಿಗಳು ಜನಿಸಿದುದು ಈ ಕನ್ನಡನಾಡು ಕುರುನಂತರ ಪುನರುದ್ಭಾವಕ್ಕೆ ಕಾರಣೀಭೂತವಾದುದು ಈ ಕನ್ನಡ ನಾಡು ಧರ್ಮರಾಜ್ಯವೆಂದು ಹೆಸರಾತ ಈ ಕನ್ನಡ ನಾಡು ಬರಬರುತ್ತ, ಪರಕೀಯರ ಆಳಿಕೆಯ ಪ್ರಭಾವದಿಂದ ಹಂಚಿ ನಾವೆಲ್ಲರೂ ಕನ್ನಡಿಗರೆಂಬ ಭಾವನೆಯನ್ನೆ ಕಳೆದುಕೊಂಡು ಬಂದಿಕು ಆದರೆ ಇಂದು ಕನ್ನಡ ನಾಡು ಎಚ್ಚೆತ್ತಿದೆ ತನ್ನ ಭವಿಷ್ಯವನ್ನು ನಿರ್ಧರಿಸಲು ಸಮರ್ಥವಾಗಿದೆ. ಕರ್ನಾಟಕ ಪ್ರಾಂತರಚನೆಗೆ ಕಾಂಗ್ರೇಸು ಅದೆಷ್ಟುಸಾರಿ ಅಶ್ವಾಸನ ಕೊಟ್ಟಿಲ್ಲ ಅದೆಷ್ಟವನ್ನು ಮರೆತು ತುಂಡಾದ ನಾಡನ್ನ ಮತ್ತೆಸ್ಸು ತುಂಡರಸಲಿಕ್ಕೆ ಕೇಂದ್ರಸರಕಾರ ಮನಸ್ಸು ಮಾಡಿದುದು ತೀರ ಖಂಡನೀಯವಾಗಿರುವದು ಇಂಥಾ ಕಠಿಣ ಪರಿಸ್ಥಿತಿಯಲ್ಲಿ ಕನ್ನಡಿಗರು ನಾಡ ಬೇಕಾದುದೇನು "ಏಕ್ಯ" ವ್ಯಕ್ತಿಯಂದ ಬೇಕಾದಂಥ ಕೆಲಸಗಳು ಸಿದ್ಧಿಯಾಗುತ್ತವೆ ಏಕ್ಯತೆಯೇ ಮಹಾ ತಪಸ್ಸು ಈ ಏಕ್ಯತೆಯಿಂದಲೇ ಬ್ರಿಟಿಷರು ಭಾರತವನ್ನು ಬಿಟ್ಟೋಡಿದರು ಅಂದನೇಲೆ ಅಖಂಡ ಕನ್ನಡಿಗರ ಏಕ್ಯತೆಯಿಂದ ಯಾವುದು ಕಾರೇ ಅಸಾಧ್ಯವಾದೀತು ಈಗ ಸಮಗ್ರ ಕರ್ನಾಟಕದಲ್ಲಿ ಏಕ್ಯತೆಯ ಚಿನ್ನವು ತೋರುತ್ತಿದೆ ನಿಜವಾದ ಕರ್ನಾಟಕ ಏಕೀಕರಣ ಬೇಕಾಗಿದ್ದರೆ ಸಂಸ್ಕೃತಿ, ಭಿನ್ನ ಭಿನ್ನವೆಂಬ ಸಂಕುಚಿತ ಮನೋಭಾವ ಪ್ರತಿಯೊಬ್ಬ ಕನ್ನಡಿಗನ ಹೃದಯದಿಂದ ಮಾಯವಾಗಬೇಕು ಕನ್ನಡ ನಾಡು, ನುಡಿ, ಜನ, ಸಂಸ್ಕೃತಿ ಒಂದೊಂದು ಸದ್ಭಾವ ಒಡಮೂಡ ಬೇಕು. ಕೇಂದ್ರಸರಕಾರದಿಂದ ಕನ್ನಡಿಗರ ಕಷ್ಟವನ್ನು ರಿಸಲು ಬಳ್ಳಾರಿಗೆ ಬಂದಿರುವ ಶ್ರೀ ಮಿಶ್ರಾರವರ ಕಡೆಗೆ ಕರ್ನಾಟಕದ ಮೂಲೆ ಮೂಲೆಗಳಿಂದಲೂ ಸಾವಿರಾರು ಕನ್ನಡ ಮುಖಂಡರ ವಿಷ್ಟಮಂಡಲಗಳು ಧಾವಿಸಿ ಬರುವಂತಾಗಬೇಕು. ತಮ್ಮ ಮಹಿವಿಯನ್ನೆತ್ತಿ ಸಕ್ಯತೆಯ ಕಿರಿಮನ್ಸಿಂಬಿಸುಮಾಡಿಕೊಡಬೇಕು. ಪ್ರಸಂಗ ಒಂದರೆ ಲಕ್ಷಾವಧಿ ಕನ್ನಡಿಗರು ಹೆಜ್ಜಾಗಿ ಅದವಾಸಿ ರಾಯದುರ್ಗ ಅಲೂರು ತಾಲೂಕಿನ ಕನ್ನಡಿಗರು ಆಹಿಂಸಾಯುಕ್ತ ಸತ್ಯಾಗ್ರಹವನ್ನು ಕೈಕೊಳ್ಳಬೇಕು. ಸದ ಅದವಾಸಿಯಲ್ಲಿರ್ಗ ದಿನಗಳಿಂದ ಉಪವಾಸವನ್ನು ಕೆ ಕೆಂಡಿರುವ ೧೭ ವರುಷ ವೆಯಸ್ಸಿನ ಮಸ್ಸಿಯ ಶ್ರೀ ಗುಂಡಧರಸ್ವಾಮಿಯವರ ಅನುಕರಣವನ್ನು ಮಾಡಬೇಕು ಮೊನ್ನೆ ಒಳ್ಳಾರಿಯಲ್ಲಿ ಕೆಲವು ಅಂಧ್ರರು ಕನ್ನಡಿಗರ ಮೇಲೆ ಹಿಂಸಾಕಾರ್ಯವನ್ನು ಕೈಕೊಂಡಂತೆ ಪ್ರತಿಕೃಷ್ಟಿ ವರದಿಯಾಗಿದ ಇದನ್ನು ನೋಡಿ ಕನ್ನಡ ಜಾಗರವರಿಗೆ ಕಳವಳವಾಗಿರದು ಹಿಂಸಾಯುಕ್ತ ಮಾರ್ಗವು ಧರ್ಮವಿರೋಧವಾದ ಕರ್ನಾಟಕಕ್ಕೆ ನಿಷೇಧ ವಿದೆ ಅಹಿಂಸಾತತ್ವವು ಕನ್ನಡಿಗರ ಜನ್ಮಸಿದ್ಧ ಹಕ್ಕು. ಅಂತೆಯೇ ಇವನ್ನು ಗಾಂಧಿ ನಾಡೆಂದು ಕರೆದಿರು ಸಾರ್ವಕಾಲಿಕವಾಗಿದೆ ಅದುದರಿಂದ ಕನ್ನಡ ನಾಡಿನ ವಕ್ಯತೆಗಾಗಿ ಎಲ್ಲ ಕನ್ನಡಿಗರು ಮೂಲಮಂತ್ರವಾದ ಸತ್ಯಾಗ್ರಹವನ್ನು ಆರಂಭಿಸಬೇಕು ಇಂದು ನಿನ್ನೆರರು ಕನ್ನಡಿಗರ ನೊಚ್ಚಾದ ಬಳ್ಳಾರಿ ಜಿಲ್ಲೆಯ ೩ ತಾಲೂಗಳನ್ನು ಬಂಧ್ರಕ್ಕೆ ಸೇಲಿಸ್ವೆನೆಂಕು ಘೋಷಿಸಿರುವ ಪ್ರಧಾನಿ ನಪ್ಪ ಅಖಂಡ ಕನ್ನಡ ನಾಡಿನ ಅಪರಿಚ್ಛಿನ್ನ ತಾಲೂಕಿನ ಕನ್ನಡ ಜನಾಂಗವನ್ನ ಒಕ್ಕೊರಲಿಂದಿದ ಬೇಡಿಕೆಯನ್ನಿತ್ತಲ್ಲಿ ಎಂಥಾ ಸರಕಾರವಾದರೂ ಬಾಗಲೇ ಬೇಕು ಆಹಿಂಸಾಯುಕ್ತ ಸತ್ಯಾಗ್ರಹವೆಂಬ ತತ್ವವನ್ನು ತಪ್ಪಿಸಿಗೆ ನೇತರೇ ಒಲಿಯುವಾಗ ಇತರರ ಪಾಡೇನು ಒಂದು ನೇಳೆ ಈ ಪರಿಸ್ಥಿತಿ ಬಾರದೆ ಹೋದಲ್ಲಿ ನಿಸರ್ಗವೇ ನಿರ್ಣಯ ರಾಜಸತ್ತೆಯನ್ನು ನಿರ್ನಾಮವಾಗಿಸಿದ ಬಿಡ ಅಖರದು

" ಜನನಿಯ ಒಡಾದಂಡೇ ನಮ್ಮಾ ನಾಡಿತ ಏಕ್ಯತೆ "

ಜೈ ಭುವನೇಶ್ವರಿ

ನರ್ತಮಾನಸಂಗ್ರಹ

ಹೊಸಪೇಟೆಗೆ ಮಿಶ್ರಾರವರ ಭೇಟಿ

ಹೊಸಪೇಟೆಯನ್ನು ಜಿಲ್ಲೆಯ ಕೇಂದ್ರವನ್ನಾಗಿ ಮಾಡಿಲು ಸೂಕ್ತವಾಗಿದೆ ಎಂಬುದನ್ನು ಸಮರ್ಥಿಸಲು ಹಲವು ಅಂಧ್ರ ನಾಯಕರುಗಳು ನ್ಯಾಯಮೂರ್ತಿ ಮಿಶ್ರಾ ಅವರನ್ನು ಹೊಸಪೇಟೆಗೆ ಭೇಟಿಕರ್ತವೆಕೆಂದು ಕೋರಿದರ ಮೇರೆಗೆ ಜಗಿ ಮಿಶ್ರಾ ಅವರು ಹೊಸಪೇಟೆಗೆ ಭೇಟಿ ಇತ್ತು ಸರ್ಕಾರಿ ಮತ್ತು ತುಂಗಭದ್ರ ಯೋಜನೆಯ ಕಟ್ಟಡಗಳನ್ನು ಪರಿಶೀಲಿಸಿದರು.

ಜಿಲ್ಲಾ ವ್ಯವಸಾಯ ಸಂಪದವರು ಜ ಮಿಶ್ರಾರವರನ್ನು ಭೇಟಿಮಾಡಿ ವ್ಯವಸಾಯೋತ್ಪತ್ತಿ ಅಂಕಿ ಅಂಶಗಳನ್ನು ಮುಂದಿಟ್ಟು ಜಿಲ್ಲೆಯ ವ್ಯಾಪಾರ ಒತುಮಟ್ಟಿಗೆ ಅಂಧ್ರದೊಡನಿದೆಯೆಂದು ಹೇಳಿರುವುದು ನಿರಾಧಾರವಾ ದುದೆಂದು ವಾದಿಸಿದರು.

ಜಿಲ್ಲಾ ಕರ್ನಾಟಕ ಕ್ರಿಯಾ ಸಮಿತಿಯವರು ಭೇಟಿ ಮಾಡಿ ಬಳ್ಳಾರಿ ಮೈಸೂರಿಗೆ ಸೇರಲೇಕೆಂದು ಒತ್ತಾಯ ಮಾಡಿದರು

ಜಗಿ ಮಿಶ್ರಾರವರಿಗೆ ಕೆ.ಪಿ.ಸಿ.ಸಿ. ಮನವಿ

ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀ ಎಸ್. ನಿಜಲಿಂಗಪ್ಪನವರೂ ಮತ್ತು ಕೆ.ಪಿ.ಸಿ.ಸಿ ಸದಸ್ಯರು ಹಲವರು ಜಗಿ ಮಿಶ್ರಾರವರನ್ನು ಭೇಟಿ ನೂಡಿ ಬಳ್ಳಾರಿ ತಾಲ್ಲೂಕು ಕರ್ನಾಟಕಕ್ಕೆ ಸೇರಲೇಕೆಂದು ಒತ್ತಾಯಸಿರುವ ಮನವಿ ಪತ್ರವನ್ನು ಅರ್ಪಿಸಿದರು.

ಜಗಿ ಮಿಶ್ರಾರವರಿಗೆ ಅರ್ಪಿಸಿದ ಮನವಿ ಪತ್ರದಲ್ಲಿ ಡಾಗಿ ಕೆಳ್ಳೆರ ಅವಾರ್ಡ್‌ನಾರ್ ಸಮಿತಿ ನಲ್ಲಿಜೆ ವಿ ಪಿ ವರದಿ ಮತ್ತು ವಾಂಚೂ ವರದಿಗಳ ಪ್ರಕಾರ ಬಳ್ಳಾರಿ ತಾಲ್ಲೂಕಿನ ಸ್ವಾಭಾವಿಕ ಹಿನ್ನೆಲೆ ಮತ್ತು ಪರಿಸ್ಥಿತಿಗಳಿಂದ ಅದು ಕನ್ನಡ ತಾಲ್ಲೂಕು ಎಂಬುದು ಸಿದ್ಧಾಂತವಾಗಿದೆ ಎಂದು ತಿಳಿಸಲಾಗಿದೆ

ಇತಿಹಾಸದ ಪ್ರಕಾರ ನೋಡಿದರೆ ಬಳ್ಳಾರಿಯು ಮೈಸೂರಿನ ಒಂದುಭಾಗ ಇತ್ತಚೆಗೆ ಬಳ್ಳಾರಿಯ ಭಾಷೆ ಆ ಬಗ್ಗೆ ಸಾಹಿತ್ಯ ಸಿದ್ಧಾಂತಗಳಿವೆ ಅಲ್ಲದೆ ಬಳ್ಳಾರಿಯ ಶ್ರಿ ಕನ್ನಡಿಗರ ಆಸ್ತಿಪಾಸ್ತಿಗಳೇ ತೆಲುಗರಿಗಿಂತಾ ಹೆಚ್ಚಿಗೆ ಇದೆಯೆಂದು ತಿಳಿಸಲಾಗಿದೆ

ಬಳ್ಳಾರಿ ತಾಲ್ಲೂಕನ್ನು ಮೈಸೂರಿನೊಡನೆ ಸೇರಿಸಿದರೆ ತಾಲ್ಲೂಕಿನ ಕೈಗಾರಿಕಾಭಿವೃದ್ಧಿಗೆ ಮಹತ್ತರಸಹಾಯವಾಗು ವುದು ಆಡಳಿತ ದೃಷ್ಟಿಯಿಂದಲೂ ಬಳ್ಳಾರಿ ತಾಲ್ಲೂಕು ಮೈಸೂರಿಗೆ ಸೇರಲೇಕು ಎಂದು ಮನವಿ ಪತ್ರದಲ್ಲಿ ತಿಳಿಸಲಾಗಿದೆ

ಬಳ್ಳಾರಿ ಜಿಲ್ಲಾ ಕಾಂಗ್ರೆಸ್ ನಿಯೋಗದ ಮನವಿ

ಬಳ್ಳಾರಿ ಜಿಲ್ಲಾ ಕಾಂಗ್ರೆಸ್ ಸಮಿತಿಯ ನಿಯೋಗದ ಸದಸ್ಯರು ಪಾರ್ಲಿಮೆಂಟ್ ಸದಸ್ಯರಾದ ಶ್ರೀ ಟಿ ಸುಬ್ರಹ್ಮಣ್ಯಂ ನಾಯಕತ್ವದಲ್ಲಿ ಜಸ್ಟೀಸ್ ಮಿಶ್ರಾರವರನ್ನು ಭೇಟಿ ನೂಡಿ, ಬಳ್ಳಾರಿ ತಾಲ್ಲೂಕು ಮೈಸೂರು ಸಂಸ್ಥಾನಕ್ಕೆ ಸೇರಲೇಕು ಎಂಬ ಕರ್ನಾಟಕ ಸ್ಥಾನಿಕ್ಯ ಕಾಂಗ್ರೆಸ್ ಸಮಿತಿಯ ನಿಲುವನ್ನು ಪುನರುಚ್ಚಾರಿಸಿದರು.

ಕೂಡ್ಲಿಗಿ ತಾ! ಕಾಂಗ್ರೆಸ್ ಕಾರ್ಯಾಚರಣೆ ಸಮಿತಿಯ ಸದಸ್ಯರೂ ಜಗಿ ಮಿಶ್ರಾರನ್ನು ಭೇಟಿಮಾಡಿ ಬಳ್ಳಾರಿ ಮತ್ತು ಅದರ ಸೂರ್ವಕ್ಕಿರುವ ೩ ವಿಕಾಗಗಳನ್ನು ಅಂಧ್ರ ಪ್ರಾಂತ್ಯದಲ್ಲಿ ಸೇರಿಸುವುದರಿಂದ ಮೈಸೂರಿಗೆ ಸೇರುವ ಕನ್ನಡ ತಾಲ್ಲೂಕುಗಳ ಪ್ರಗತಿಗೆ ಧಕ್ಕೆಯುಂಟಾಗುವುದೆಂದು ತಿಳಿಸಿದರು

ಜಗಿ ಮಿಶ್ರಾರನ್ನು ಭೇಟಿ ಮಾಡಿದ ಶ್ರೀ ಎಂ ದೇವೇಂದ್ರ ನಾಯ್ಡು, ಡಾ||ಎಸ್ ವೆಂಕಟರಾಮನ್, ಕೌಶಿಕಭಾಧ್ಯಕ್ಷರಾದ ಶ್ರಿ ಎಂ ಕೊಡ್ಡಪಪ್ಪನವರುಗಳು ಬಳ್ಳಾರಿ ತಾಲ್ಲೂಕನ್ನು ಆಂಧ್ರಪ್ರಾಂತ್ಯ ದಲ್ಲಿಯೇ ಸೇರಿಸಲೇಕೆಂದು ಮನವಿ ಮಾಡಿದರೆಂದು ತಿಳಿಯಬಂದಿದೆ.

೪೦ ಸಂಘಿ ಸಂಸ್ಥೆಗಳವರು ಜಗಿ ಮಿಶ್ರಾರನ್ನು ಭೇಟಿ ಮಾಡಿ ಬಳ್ಳಾರಿ ತಾಲ್ಲೂಕ್ ಆಂಧ್ರಕ್ಕೇ ಸೇರಲೇಕೆಂದು ಮನವಿ ಪತ್ರಗಳನ್ನ ಸಿಸಿದರು

ಸುಮಾರು ೬೦೦ ಸೆಂದಿ ಮುಖ್ಯಮರು ಜಗಿಮಿಶ್ರಾರವರ ಬಿಡಾರದ ಮುಂದೆ ಪ್ರದರ್ಶನ ನಡೆಸಿ ಬಳ್ಳಾರಿ ತಾಲ್ಲೂಕನ್ನು ಆಂಧ್ರಕ್ಕೆ ಸೇರಿಸಬೇಕೆಂಬ ಘೋಷಣೆಗಳನ್ನು ಮಾಡಿದರೆಂದು ವರದಿಯಾಗಿದೆ

ಜಗಿ ಮಿಶ್ರಾರವರೊಡನೆ ಶ್ರೀ ಮಾಸ್ತಿ ಮತ್ತು ಶ್ರೀ ಎಳಮಲಿಯವರ ಭೇಟಿ

ಕರ್ನಾಟಕ ಏಕೀಕರಣ ಸಮಿತಿಯ ಅಧ್ಯಕ್ಷರಾದ ಶ್ರೀ ಶಾಂತಪ್ಪ ಎಳಮಲಿಯವರೂ ಪ್ರಸಿದ್ಧ ಸಾಹಿತಿಗಳಾದ ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರವರೂ ಜಗಿ ಎಸ್ ಮಿಶ್ರಾರವರನ್ನು ಭೇಟಿಮಾಡಿ ಬಳ್ಳಾರಿ ತಾಲ್ಲೂಕಿನ ಬಗ್ಗೆ ಮನವಿ ಪತ್ರವೊಂದನ್ನ ಸಿಸಿದರು

ಅವರ ಮನವಿಪತ್ರದಲ್ಲಿನ ಮುಖ್ಯಾಂಶಗಳೆಂದರೆ ಬಳ್ಳಾರಿ ಮತ್ತು ಅದವಾಸಿಯು ತಾಲ್ಲೂಕುಗಳಲ್ಲಿ ಅಂಧ್ರರ ಬೆಡಿಕೆ ಇದುಮೊದಲ ವಾದ ಹುರುಳಲ್ಲದ್ದು ಬಳ್ಳಾರಿ ತಾಲ್ಲೂಕಿನಲ್ಲಿರು-ನ ಸುಮಾರು ೯ ಸಾವಿರ ಕರ್ನಾಟಕಿಗರುಗಳು ಆಂಧ್ರರಾಗಿದ್ದಾರೆ ಅವೂ ಜಾಗೂ ಅವರ ಸಂಸಾರದವೂ ತಂಗಾಮು ನಾಸಸ್ಥಳೇ ವಿನಃ ಅವರಿಗೆ ನೆಗರದಲ್ಲಿ ಯಾವ ಖಾಯಂ ಆಸ್ತಿಯೂ ಇಲ್ಲ ಎಂದು. ತಿಳಿಸಲಾಗಿದೆ.

ಭಾರತ ಸರ್ಕಾರದ ಅನ್ಯಾಯ

ಆಲೂರು, ಅದವಾಸಿ, ರಾಯದುರ್ಗಗಳನ್ನು ಆಂಧ್ರದಲ್ಲಿ ಸೇರಿಸಿ ಭಾರತ ಸರ್ಕಾರ ಅನ್ಯಾಯ ಮಾಡಿತೆ ಎಲ್ಲಿನ ಜನತೆಯ ಅಭಿಪ್ರಾಯಪಡೆಯದೆ ಈ ರೀತಿ ಮಾಡಿರುವುದು ಎಲ್ಲಿದ್ದ ಕನ್ನಡಿಗರಿಗೆ ಅನ್ಯಾಯವಾಗಿದ್ದು ವೆದು ಹೊಸ ಆಂಧ್ರಸ್ಥಾಂತ ನಿರ್ನಾಣದ ಮಹಾದೆಯು ಪಾರ್ಲಿಮೆಂಟಿನ ಮುಂದೆ ಒಯವ ಮುನ್ನ ಮೇಲ್ಕಂಡ ಮೂರು ತಾಲ್ಲೂಕುಗಳ ಭವಿಷ್ಯ ನಿರ್ಧರಿಸಲು ಗಡಿ ನಿರ್ಧಾರಸಮಿತಿ ಸೇಮಿಸಬೇಕೆಂದು ವ ನವಿಯಲ್ಲಿ ಒತ್ತಾಯಿಸಲಾಗಿದೆ.

ಜಸ್ಟಿಸ್ ಮಿಶ್ರಾರವರಿಗೆ ಆದವಾನಿಯ ಪ್ರತಿನಿಧಿಗಳ ಮೆಮೊರ್ಯಾಂಡಂ ಅರ್ಪಣೆ

ಆದವಾನಿಯ ನಾಲ್ವರು ನಗರ ಸಭಾ ಸದಸ್ಯರು ಅನೇಕ ಪ್ರಮುಖ ವ್ಯಾಪಾರಿಗಳು ಮತ್ತು ನಗರ ಪ್ರಮುಖರು ಜಸ್ಟಿಸ್ ಮಿಶ್ರಾರವರನ್ನು ಭೇಟಿಮಾಡಿ ಮೆಮೊರ್ಯಾಂಡಂ ಒಪ್ಪಿಸಿದರು

ಕನ್ನಡ ಸಾರ್ವಜನಿಕರು, ಮತ್ತು ಕೆ. ಪಿ. ಸಿ. ಯನ್ನು ವಿಚಾರಿಸದೆ ಆಂಧ್ರ ಪ್ರಾಂತ್ಯದಲ್ಲಿ ಆಲೂರು, ಆದವಾನಿ ಮತ್ತು ರಾಯದುರ್ಗಗಳನ್ನು ಸೇರಿಸಬಾರದೆಂದೂ ಮತ್ತು ಬಳ್ಳಾರಿ ಜಿಲ್ಲೆಯು ಪೂರ್ತಿಯಾಗಿ ಮೈಸೂರಿಗೆ ಸೇರಬೇಕೆಂದೂ ಆಂದರೆ ಆ ಜಿಲ್ಲೆಯ ಆರ್ಥಿಕ ಮತ್ತು ಶೈಕ್ಷಣಿಕ ಅಭಿವೃದ್ಧಿಯಾಗುವುದೆಂದೂ ಮೆಮೊರಾಂಡಂನಲ್ಲಿ ಸೂಚಿಸಲಾಗಿದೆ.

ಮಹಿಳಾ ಫೆಡರೇಷನ್ನಿನ ಪ್ರತಿನಿಧಿಗಳು ಜ|| ಮಿಶ್ರಾರನ್ನು ಭೇಟಿಮಾಡಿ ಬಳ್ಳಾರಿ ಜಿಲ್ಲೆ ಮೈಸೂರಿಗೆ ಸೇರಬೇಕೆಂದು ತಿಳಿಸಿದರೆಂದು ಗೊತ್ತಾಗಿದೆ

ಆಲೂರು, ಆದವಾನಿ, ರಾಯದುರ್ಗ ತಾಲ್ಲೂಕಿನ ಅನೇಕ ಪ್ರತಿನಿಧಿಗಳು ಮಿಶ್ರಾರನ್ನು ಭೇಟಿಮಾಡಿ ಮೆಮೊರ್ಯಾಂಡಂ ಒಪ್ಪಿಸಿದರು

ಬಳ್ಳಾರಿ ಮೈಸೂರಿಗೇ ಸೇರಬೇಕು

ಮಾಧ್ವ ಮತ್ತು ವೀರಶೈವ ಮತಸ್ಥರ ಧಾರ್ಮಿಕ ಗುರುಗಳು ಜಸ್ಟಿಸ್ ಮಿಶ್ರಾರವರನ್ನು ಭೇಟಿಮಾಡಿ ಬಳ್ಳಾರಿಯ ತಾಲ್ಲೂಕು ಸಾಂಸ್ಕೃತಿಕವಾಗಿಯೂ ಆರ್ಥಿಕವಾಗಿಯೂ ಭಾಷಾವಾರಿನಲ್ಲಿಯೂ ಮೈಸೂರಿಗೇ ಸೇರುವು ದುಚಿತವೆಂದು ತಿಳಿಸಿದ್ದಾರೆ. ಅವರು ತಮ್ಮ ಅಭಿಪ್ರಾಯವನ್ನು ಪುಷ್ಟೀಕರಿಸಲು ೩೫೦ ವರ್ಷಗಳ ಕನ್ನಡ ಮೂಲದಲ್ಲಿಯೇ ಇರುವ ದಾಖಲೆಗಳನ್ನು ಮಿಶ್ರಾರವರ ಮುಂದಿಟ್ಟಿದ್ದಾರೆಂದು ಗೊತ್ತಾಗಿದೆ.

ಬಳ್ಳಾರಿ ಮುಸ್ಲಿಮರ ಸ್ಫೂರ್ತಿಗೆ ಜಸ್ಟಿಸ್ ಮಿಶ್ರಾರವರ ಮೆಚ್ಚಿಗೆ

ಬಳ್ಳಾರಿ ಮೈಸೂರಿನೊಂದಿಗೆ ಸೇರಬೇಕೆಂಬ ತಮ್ಮ ಅಶೋತ್ತರಗಳನ್ನು ಮಿಶ್ರಾರವರಿಗೆ ತಿಳಿಸಲು ೬,೦೦೦ ಕ್ಕಿಂತ ಹೆಚ್ಚಾಗಿ ಬಳ್ಳಾರಿಯ ಮುಸ್ಲಿಮರು ಅಬ್ದುಲ್ ರಜಾಕ್ ಸಾಹೇಬರವರ ನಾಯಕತ್ವದಲ್ಲಿ ಅದ್ಭುತ ಪ್ರದರ್ಶನ ನಡೆಸಿದರು.

ಮುಸ್ಲಿಮರು ಮಾಡುತ್ತಿದ್ದ ಕನ್ನಡ ಘೋಷಣೆಗಳು ಗಗನವನ್ನು ಮುಟ್ಟುತ್ತಿದ್ದವು. ಎಲ್ಲೆಲ್ಲಿಯೂ ಕನ್ನಡ ಘೋಷಣೆಗಳ ಝೇಂಕಾರವಿತ್ತು.

ಜ|| ಮಿಶ್ರಾ ತನಿಖೆ ಮುಕ್ತಾಯ

"ಬಳ್ಳಾರಿಯಲ್ಲಿ ನಾನು ಆರು ದಿನಗಳು ನಡೆಸಿದ ತನಿಖೆಯ ಕಾಲದಲ್ಲಿ ಎರಡು ಸಪ್ತದವರೂ, ಎಷ್ಟು ಸಾಧ್ಯವೋ ಅಷ್ಟು ವಿಷಯಗಳನ್ನು ತಿಳಿಸಲು ಪ್ರಯತ್ನಿಸಿದರು. ಕೆಲವು ಸಂದರ್ಭಗಳಲ್ಲಿ ಜನಗಣತಿ ಅಂಕಿ ಅಂಶಗಳ ಪ್ರಾಮುಖ್ಯತೆಯನ್ನು ಕಡಿಮೆ ಮಾಡುವ ದೃಷ್ಟಿಯಿಂದ ಉತ್ಪ್ರೇಕ್ಷೆಗಳನ್ನು ಮಾಡಲಾಯಿತು" ಎಂದು ಜಸ್ಟಿಸ್ ಮಿಶ್ರಾರವರು ತಿಳಿಸಿದರು.

ಬಳ್ಳಾರಿ ಭವಿಷ್ಯದ ಬಗ್ಗೆ ತನಿಖೆ ನಡೆಸುತ್ತಲಿರುವ ಜಸ್ಟಿಸ್ ಎಲ್. ಎಸ್. ಮಿಶ್ರಾರವರು ತಮ್ಮ ಬಳ್ಳಾರಿಯ ಕಾರ್ಯಕ್ರಮವನ್ನು ಪತ್ರಿಕಾ ಸಂದರ್ಶನದೊಡನೆ ಮುಕ್ತಾಯಗೊಳಿಸಿದರು.

ಜ|| ಮಿಶ್ರಾರವರು ಮುಂದುವರಿದು—"ಎಲ್ಲಾ ವಿಷಯಗಳನ್ನು ನಿರ್ಧರಿಸಲು ಅನುಕೂಲವಾಗುವಂಥ ಎಲ್ಲಾ ಸಕಾರಣ ಅಂಶಗಳು ನನಗೆ ದೊರೆತಿವೆ. ನಾನು ಇನ್ನೂ ಕೆಲವು ವಿಷಯಗಳನ್ನು ಪರೀಕ್ಷಿಸಬೇಕಾಗಿದೆ. ಅದಕ್ಕಾಗಿ ಬೆಂಗಳೂರಿಗೆ ಹೋಗುತ್ತಲಿದ್ದೇನೆ. ಬೆಂಗಳೂರಲ್ಲಿ ಸಮಾಲೋಚನೆ ನಡೆಸಿದಮೇಲೆ ಮದರಾಸಿಗೂ ಹೋಗಬೇಕಾಗಿ ಬರಬಹುದು" ಎಂದು ನುಡಿದರು. ಜ|| ಮಿಶ್ರಾರವರ ಈಗಿನ ಕಾರ್ಯಕ್ರಮದ ಪ್ರಕಾರ ಬೆಂಗಳೂರಲ್ಲಿ ಎರಡು ದಿನಗಳ ಕಾಲವಿದ್ದು, ಅಲ್ಲಿಂದ ಹೈದರಾಬಾದಿಗೆ ವಿಮಾನದಲ್ಲಿ ತೆರಳಿ, ೧೮ ನೇ ತಾ|| ಬೇಳಿಗೆ ದೆಹಲಿಗೆ ಪ್ರಯಾಣ ಬೆಳೆಸಬೇಕಾಗಿದೆ.

ಮಿಶ್ರಾರವರು ಒಟ್ಟು ೩೧೦ ಮನವಿ ಪತ್ರಗಳನ್ನು ಸ್ವೀಕರಿಸಿದ್ದಾರೆ ಇವುಗಳ ಪೈಕಿ ೧೯೩ ಮನವಿ ಪತ್ರಗಳು ಬಳ್ಳಾರಿಯನ್ನು ಮೈಸೂರಿಗೆ ಸೇರಿಸಬೇಕೆಂದು ಒತ್ತಾಯಪಡಿಸಿವೆ ೩೬೭ ಮನವಿಗಳು ಆಂಧ್ರರ ಪರವಾಗಿವೆ ೩೦ ಪಂಚಾಯತಿ ಬೋರ್ಡುಗಳು ಕರ್ನಾಟಕದ ಪರವಾಗಿ ಮನವಿಸಲ್ಲಿಸಿವೆ ಕೇವಲ ೮ ಪಂಚಾಯತಿಗಳು ಆಂಧ್ರದ ಪರವಾಗಿ ಮನವಿಸಲ್ಲಿಸಿವೆ. ಬಳ್ಳಾರಿಯ ಕೆಲವು ಧಿಕ್ಕಾರಗಳನ್ನು ಪ್ರತಿನಿಧಿಸುವ ಜಿಲ್ಲಾ ಬೋರ್ಡ್ ಸದಸ್ಯರು ಮನವಿಯೊಂದನ್ನು ಸಲ್ಲಿಸಿ, ಒಳ್ಳಾರಿಯನ್ನು ಆಂಧ್ರಕ್ಕೆ ಸೇರಿಸಿದರೆ, ಉಳಿದ ಆರು ತಾಲ್ಲೂಕುಗಳಿಗೆ ಬಹಳ ನಷ್ಟವಾಗುವುದೆಂದು ತಿಳಿಸಿದರು

ಕನ್ನಡ ಸತ್ಯಾಗ್ರಹಿಗಳ ಉಪವಾಸ ಮುಕ್ತಾಯ

ಹುಬ್ಬಳ್ಳಿಯಲ್ಲಿ ಏಪ್ರಿಲ್ ೨೪ ರಿಂದ ಮತ್ತು ಮೇ ೧ ರಿಂದ ಆಮರಣ ಉಪವಾಸವಾರಂಭಿಸಿದ್ದ ಶ್ರೀ ವಿರುಪಾಕ್ಷ ಗೌಡ ಪಾಟೀಲ್ ಮತ್ತು ಮಹದೇವಪ್ಪ ಮುರುಗೋಡ್ ಇವರು ೮ ನೇ ತಾರೀಕು ಕಿತ್ತಳೆ ಹಣ್ಣಿನ ರಸವನ್ನು ಸ್ವೀಕರಿಸಿ ಉಪವಾಸ ಮುಕ್ತಾಯಗೊಳಿಸಿದರು.

ದಾವಣಗೆರೆ ಪೌರಸಭಾಧ್ಯಕ್ಷರೂ ಮತ್ತು ಇದೇ ತಿರುಂದು ದಾವಣಗೆರೆಯಲ್ಲಿ ಸೇರುವ ಸಕಲ ಪಕ್ಷಗಳ ಸಮ್ಮೇಳನದ ಸ್ವಾಗತಾಧ್ಯಕ್ಷರೂ ಆದ ಏನಹಳ್ಳಿ ದೊಡ್ಡ ವೀರಪ್ಪನವರು ಉಭಯ ಸತ್ಯಾಗ್ರಹಿಗಳಿಗೂ ಭರವಸೆ ಇತ್ತ ಮೇಲೆ ಅವರು ಉಪವಾಸವನ್ನು ನಿಲ್ಲಿಸಿದರು.

ಮಂಗಳೂರಿನಲ್ಲಿ ಮೈಸೂರಿನ ಮುಖ್ಯ ಮಂತ್ರಿಗಳ ವಿವರಣೆ

ಕರ್ನಾಟಕ ಪ್ರಾಂತ್ಯರಚನೆಯ ವಿಷಯದಲ್ಲಿ ಮೈಸೂರಿನವರು ಔಚಿತ್ಯವನ್ನು ಮೀರಿಹೋಗಿಲ್ಲ ಎಂಬುದಾಗಿ ಮೈಸೂರು ಸಂಸ್ಥಾನದ ಮುಖ್ಯಮಂತ್ರಿಗಳಾದ ಶ್ರೀ ಕೆ ಹನುಮಂತಯ್ಯನವರು ಮಂಗಳೂರಿನ ಪೌರಸಭೆಯವರು ಆರ್ಪಿಸಿದ ಬನ್ನವತ್ತಳೆಗೆ ಉತ್ತರ ಕೊಡುತ್ತ ನುಡಿದರು.

ಮೈಸೂರು ಸರ್ಕಾರ ಕರ್ನಾಟಕಪ್ರಾಂತ್ಯದ ರಚನೆಗಾಗಲಿ ಅಥವಾ ತಪ್ಪಿರುದ್ದವಾಗಿ ಆಗಲಿ ಹೋರಾಡುವುದಿಲ್ಲ ಆದರೆ ಮೈಸೂರು ಸಂಸ್ಥಾನದಲ್ಲಿ ಸೇರಿರುವಂಥವರಿಗೆ ಸದಾನನ್ನು ಸ್ವಾಗತವಿವೆ.

ಮೈಸೂರು ಮತ್ತು ದಕ್ಷಿಣ ಕನ್ನಡಜನತೆಗೆ ನಿಕಟವಾದ ನೈಕಸಂಬಂಧಗಳಿವೆ. ದೇವರ ಕೃಪೆಯೊಂದಿದ್ದರೆ ಮೈಸೂರು ಸಂಸ್ಥಾನದಲ್ಲಿ ದಕ್ಷಿಣ ಕನ್ನಡಜಿಲ್ಲೆ ಸೇರಿತ್ತಿದು ಶತಸಿದ್ಧ ಕರ್ನಾಟಕ ಪ್ರಾಂತ್ಯರಚನೆ ಸಿದ್ಧಿಸಬೇಕೆಂಬುದೇ ನನ್ನ ಆಕಾಂಕ್ಷೆ

"ಕರ್ನಾಟಕ ಪ್ರಾಂತ್ಯ ನಿರ್ಮಾಣವಾಗಬೇಕೆಂದು ಭಾರತ ಸರ್ಕಾರ ಹಾಗೂ ಮೈಸೂರಿನ ಹೊರಗಡೆಯ ಕನ್ನಡಿಗರು ಅವೇಕ್ಷಿಸುವುದಾದರೆ, ಮೈಸೂರು ಸರ್ಕಾರವೇ ಆಗಲೀ, ಮೈಸೂರು ಜನತೆಯೇ ಆಗಲೀ ಖಂಡಿತ ಅಡ್ಡ ಬರುವುದಿಲ್ಲ" ಎಂದು ಮೈಸೂರಿನ ಮುಖ್ಯಮಂತ್ರಿ ಶ್ರೀ ಕೆ ಹನುಮಂತಯ್ಯನವರು, ಮಂಗಳೂರು ಪುರಸಭೆಯ ವರತ್ತ ಮಾನಪತ್ರಕ್ಕೆ ಉತ್ತರವೀಯುತ್ತ ಘೋಷಿಸಿದರು.

೨೪ ಗಂಟೆಗಳಲ್ಲಿ ಕರ್ನಾಟಕ ಪ್ರಾಂತ್ಯ

ಮಾನ್ಯ ಮುಖ್ಯಮಂತ್ರಿಗಳು ಮುಂದುವರಿದು:—"ಕೇಂದ್ರ ಸರ್ಕಾರವು ಮನಸ್ಸು ಮಾಡಿದರೆ ಕರ್ನಾಟಕ ಪ್ರಾಂತ್ಯವನ್ನು ೨೪ ಗಂಟೆಗಳಲ್ಲಿ ನಿರ್ಮಾಣ ಮಾಡಬಹುದು. ಅಂಥ ಪ್ರಾಂತ್ಯ ನಿರ್ಮಾಣವಾದ ಮೇಲೆ ಅದರ ಆಗು ಹೋಗುಗಳನ್ನು ನೋಡಿಕೊಂಡು ಆ ಮೇಲೆ ಕರ್ನಾಟಕ ಪ್ರಾಂತ್ಯ ನಿರ್ಮಾಣದ ಬಗ್ಗೆ ಕಾರ್ಯಕ್ರಮ ಕೈಗೊಳ್ಳಬೇಕೆಂದು ಮಾಡಿರುವ ನಿರ್ಧಾರವು ಒಬ್ಬನಿಗೆ ಊಟಕ್ಕೆ ಹಾಕಿ, ಬೇರೆಯವರಿಗೆ ಊಟಕ್ಕೆ ಹಾಕುವ ದೃಷ್ಟಿಯಿಂದ ಅವನು ಜೀರ್ಣಿಸಿಕೊಳ್ಳುವ ಬಗೆಯನ್ನು ಕಾದು ನೋಡುತ್ತೀವೆಂದು ಹೇಳುವಷ್ಟು ವಿಚಿತ್ರವಾಗಿದೆ.

"ದಕ್ಷಿಣ ಭಾರತದಲ್ಲಿ ಭಾಷಾವಾರು ಪ್ರಾಂತ್ಯಗಳ ನಿರ್ಮಾಣವಾದರೆ, ಹಿಂದಿಯ ಬೆಳವಣಿಗೆಗೆ ಧಕ್ಕೆ ಬರಬಹುದೆಂಬ ಭಯವು, ಹೆಚ್ಚು ಉತ್ತರ ಭಾರತೀಯರಿಂದ ಕೂಡಿದ ಕೇಂದ್ರ ಸರ್ಕಾರಕ್ಕೆ ಉಂಟಾಗಿದ್ದರೂ ಇರಬಹುದು" ಎಂದು ನುಡಿದರು.

ಕರ್ನಾಟಕ ಏಕೀಕರಣದಬಗ್ಗೆ ಸಂಸ್ಥಾನದ ಲಾಯರುಗಳ ಸಮ್ಮೇಳನದಲ್ಲಿ ನಿರ್ಣಯ

ಕರ್ನಾಟಕ ಏಕೀಕರಣವು ಅಗತ್ಯವಾಗಿ ಆಗಬೇಕು ಇದಕ್ಕಾಗಿ ತಕ್ಷಣ ಬೌಂದರಿ ಕಮಿಷನ್ನೊಂದನ್ನು ಭಾರತ ಸರ್ಕಾರ ನೇಮಿಸಿ ಮೈಸೂರು ಕೊಡಗುಗಳನ್ನೂ ಬೊಂಬಾಯಿ, ಮದ್ರಾಸ್ ಮತ್ತು ಹೈದರಾಬಾದ್ ಪ್ರಾಂತಗಳ ಕನ್ನಡ ಭಾಗಗಳನ್ನೂ ಒಳಗೊಂಡ ಪ್ರಾಂತ ರಚನೆಗೆ ಕ್ರಮ ಕೈಗೊಳ್ಳಬೇಕು ಎಂಬುದಾಗಿ ಹಾಸನದಲ್ಲಿಕೂಡಿದ ಸಂಸ್ಥಾನದ ಲಾಯರುಗಳ ಸಮ್ಮೇಳನವು ನಿರ್ಣಯಮಾಡಿದೆ.

ಕರ್ನಾಟಕ ಏಕೀಕರಣದ ಬಗ್ಗೆ ಮಂಡಿಸಲ್ಪಟ್ಟ ನಿರ್ಣಯದ ಮೇಲೆ ಸಭೆಯಲ್ಲಿ ತೀವ್ರವಾದ ಚರ್ಚೆ ನಡೆಯಿತು ನಿರ್ಣಯದ ಪರವಾಗಿಯೂ ವಿರೋಧವಾಗಿಯೂ ಸಮಾನವಾದ ಓಟುಗಳು ಬಂದವು. ಆಗ ಸಮ್ಮೇಳನಾಧ್ಯಕ್ಷ ಶ್ರೀ ಎಂ ಪಿ. ಸೋಮಶೇಖರರಾಯರು ತಮ್ಮ ಕ್ಯಾಸ್ಟಿಂಗ್ ಓಟನ್ನು ನಿರ್ಣಯದ ಪರವಾಗಿ ಕೊಟ್ಟದ್ದರಿಂದ ನಿರ್ಣಯವು ಅನುಮೋದನವಾಯಿತು

ಈ ಅಧಿವೇಶನವು ಅಂಗೀಕರಿಸಿದ ಇನ್ನೊಂದು ನಿರ್ಣಯದಲ್ಲಿ, ಭಾರತಾದ್ಯಂತ ಹೈಕೋರ್ಟು ಜಡ್ಜರುಗಳನ್ನು ಒಂದು ಪ್ರಾಂತದಿಂದ ಇನ್ನೊಂದು ಪ್ರಾಂತಕ್ಕೆ ವರ್ಗಾಯಿಸುವುದು ಅಗತ್ಯವೆಂದೂ ಅಭಿಪ್ರಾಯ ಪಡಲಾಯಿತು.

ಹೈದರಾಬಾದು ನದಿ ಯೋಜನೆ

ಹೈದರಾಬಾದು ಪ್ಲಾನಿಂಗ್ ಬೋರ್ಡು ಹೊಸ ಯೋಜನೆ ಕೈಗೊಂಡಿದೆ ಇದು ಸಂಸ್ಥಾನಕ್ಕೆ ಬೇಕಾದ ಹೆಚ್ಚಿನ ನೀರಾವರಿ ಒದಗಿಸುವುದಕ್ಕಾಗಿ ದೇವನೂರು, ಕೃಷ್ಣ, ಮತ್ತು ಗೋದಾವರಿ ಈ ಯೋಜನೆಗಳು ಬಹು ಮುಖ್ಯವಾದುವು. ಇವುಗಳಿಂದ ಒಟ್ಟು ೬೬ ಕೋಟಿ ರೂಪಾಯಿ ವೆಚ್ಚವಾಗ ಬಹುದೆಂದು ಅಂದಾಜು ಮಾಡಲಾಗಿದೆ. ಈ ಗಾಗಲೇ ನಂದಿಕೊಂಡ ಎಂಬ ಕೆಡೆ ಜಲಾಶಯ ನಿರ್ಮಾಣ ನಡೆಯುತಿದೆ ಜಲಾಶಯವನ್ನು ಹೈದರಾಬಾದು ಮದರಾಸು ಈ ಎರಡು ಪ್ರಾಂತಗಳೂ ಉಪಯೋಗಿಸಿಕೊಳ್ಳಬಹುದಾಗಿದೆ

ಪಂ|| ನೆಪ್ರು ಅಪಘಾತದಿಂದ ಪಾರಾದರು

ಪ್ರಧಾನಿ ಪಂ|| ನೆಹರೂರವರು ರೇಲ್ವೆಯಿಂದ ಮುಂಬೈಗೆ ಪ್ರಯಾಣಮಾಡುತ್ತಿದ್ದಾಗ ಮುಂಬೈಗೆ ಸಮೀಪವಾಗಿ ಕಲ್ಯಾಣ್ ರೈಲ್ವೇ ನಿಲ್ದಾಣಕ್ಕೆ ಒಂದು ಮೈಲಿ ದೂರದಲ್ಲಿ ಯಾರೋ ದುರಾತ್ಮರು ಅತ್ಯಂತ ವಿಷಕಾರಿಯಾದ ಸಜೀವ ಬಾಂಬ್‌ವೊಂದನ್ನು ರೈಲ್ವೆ ಕಂಬಿಯ ಮೇಲೆ ಇಟ್ಟಿದ್ದರೆಂದೂ, ರೈಲು ಅಲ್ಲಿಗೆ ಬರುವ ಕೇವಲ ಕೆಲವೇ ನಿಮಿಷಗಳ ಮುಂಚೆ ಕಾವಲು ಕಾಯುತ್ತಿದ್ದ ಪೋಲೀಸು ನವನೊಬ್ಬನು ಅದನ್ನು ಕಂಡು ರೈಲ್ವೇ ಕಂಬಿಯ ಮೇಲಿಂದ ತೆಗೆದು ದೂರ ಬೀಸಾಡಿದನೆಂದೂ ವರದಿಯಾಗಿದೆ.

ಕಂಬಿಯ ಮೇಲಿಟ್ಟ ಈ ವಸ್ತು ಯಾರೋ ತಮಾಷೆಗಾಗಿಟ್ಟಿದ್ದ ಪಟಾಕಿಯೆಂದು ಪ್ರಮುಖರು ತಿಳಿಸಿದ್ದಾರೆ ಎಂದು ತಿಳಿದುಬಂದಿದೆ.

ವಿಪರೀತ ಹಳೆಯ ರಾಗಿ ತಿಂದು ವಾಂತಿಭೇದಿ

ತಾ|| ೫-೫-೩೬ರಲ್ಲಿ ೪ ಗಂಟೆ ಹೊತ್ತಿಗೆ ಹಳೇರಾಗಿ ತಿಂದು ವಾಂತಿ ಭೇದಿ ಹಿಡಿದು ಮಾರಿ ಮುತ್ತ ವಯಸ್ಸು ೩೦, ಆಯ್ಯಾಗಂ ೫, ಮುತ್ತಮ್ಮ, ೩೦, ಮತ್ತು ಮುನಿಯಮ್ಮ ೩೦ ಇವರುಗಳು ಬೆಂಗಳೂರು ವಿಕ್ಟೋರಿಯ ಆಸ್ಪತ್ರೆಗೆ ಸೇರಿಸಲ್ಪಟ್ಟರು.

Edited, Printed and Published by Brihanmathadhyaksha Sri Mahadevaiah at Sri Panchacharya Electric Press, Sayaji Rao Road, Mysore-

REGISTERED No. M 2260 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತಾ: ಪಂಚಾಸ್ಯಪೀಠಾಧಿಪಾ: । ಪಂಚಕ್ಲೇಶವಿನಾಶಕಾ: ಪರತರಶ್ರೀಪಂಚಲಿಂಗೋದ್ಭವಾ: ॥
ಪಂಚಾಚಾರನಿಯಾಮಕಾ: ಪರಿಲಸತ್ಪಂಚಾಕ್ಷರೀಬೋಧಕಾ: । ಪಂಚಾಚಾರ್ಯಜಗದ್ಗುರವೋ ಜಯತ್ಯಮರವರ್ಪಾಲಿಪ್ಪುದೀಲೋಕಮಂ ॥

ಸಂಸ್ಥಾಪಕರು — ನಾಗನೂರು ಬೃಹನ್ಮಠಾಧ್ಯಕ್ಷರಾದ ವೇದ ಪಂ॥ ಶ್ರೀ ಘಾತೀಹಾಥಶಾಸ್ತ್ರಿಗಳವರು.

ವಾರ್ಷಿಕ ಚಂದಾ ೩ ರೂ] ಸಂಪಾದಕರು— ನಾಗನೂರು ಬೃಹನ್ಮಠಾಧ್ಯಕ್ಷರಾದ ಶ್ರೀ ಮಹಾದೇವಯ್ಯನವರು [ವಿ. ಪಿ. ಖರ್ಚು ಸೇರಿ ೩ ರೂ ೬ ಆ.

ಸಂಪುಟ ೨೭] ಸೋಮವಾರ ತಾ॥ ೧೮ ನೇ ಮೇ ೧೯೫೩ [ಸಂಚಿಕೆ ೧

ಶ್ರೀ ದೇವೀಸ್ತೋತ್ರ

(ಮಾರ್ಕಂಡೇಯಪುರಾಣಾಂತರ್ಗತ)

ಸರ್ವಸ್ಯ ಬುದ್ಧಿರೂಪೇಣ ಜನಸ್ಯ ಹೃದಿ ಸಂಸ್ಥಿತೇ ।
ಸ್ವರ್ಗಾಪವರ್ಗದೇ ದೇವಿ ನಾರಾಯಣಿ ನಮೋಽಸ್ತು ತೇ ॥೦೮

ಕಲಾಕಾಷ್ಠಾದಿರೂಪೇಣ ಪರಿಣಾಮ ಪ್ರದಾಯಿನಿ ।
ವಿಶ್ವಸ್ಯೋಪರತೌ ಶಕ್ತೇ ನಾರಾಯಣಿ ನಮೋಽಸ್ತು ತೇ ॥೦೯

ಸರ್ವಮಂಗಳಮಾಂಗಲ್ಯೇ ಶಿವೇ ಸರ್ವಾರ್ಥಸಾಧಿಕೇ ।
ಶರಣ್ಯೇ ತ್ರ್ಯಂಬಕೇ ದೇವಿ ನಾರಾಯಣಿ ನಮೋಽಸ್ತು ತೇ ॥೧೦

ಸೃಷ್ಟಿಸ್ಥಿತಿನಾಶಾನಾಂ ಶಕ್ತಿಭೂತೇ ಸನಾತನಿ ।
ಗುಣಾಶ್ರಯೇ ಗುಣಮಯೇ ನಾರಾಯಣಿ ನಮೋಽಸ್ತು ತೇ ॥೧೧

ಶರಣಾಗತದೀನಾರ್ತಪರಿತ್ರಾಣಪರಾಯಣೇ ।
ಸರ್ವಸ್ಯಾರ್ತಿಹರೇ ದೇವಿ ನಾರಾಯಣಿ ನಮೋಽಸ್ತು ತೇ ॥೧೨

ಹಂಸಯುಕ್ತವಿಮಾನಸ್ಥೇ ಬ್ರಹ್ಮಾಣೀರೂಪಧಾರಿಣಿ ।
ಕೌಶಾಂಭಃಕ್ಷರಿಕೇ ದೇವಿ ನಾರಾಯಣಿ ನಮೋಽಸ್ತು ತೇ ॥೧೩

ತ್ರಿಶೂಲಚಂದ್ರಾಹಿಧರೇ ಮಹಾವೃಷಭವಾಹಿನಿ ।
ಮಾಹೇಶ್ವರಿ ಸ್ವರೂಪೇಣ ನಾರಾಯಣಿ ನಮೋಽಸ್ತು ತೇ ॥೧೪

ಮಯೂರಕುಕ್ಕುಟವೃತೇ ಮಹಾಶಕ್ತಿಧರೇಽನಘೇ ।
ಕೌಮಾರೀರೂಪಸಂಸ್ಥಾನೇ ನಾರಾಯಣಿ ನಮೋಽಸ್ತು ತೇ ॥೧೫

ಶಂಖಚಕ್ರಗದಾಶಾರ್ಙ್ಗ ಗೃಹೀತಪರಮಾಯುಧೇ ।
ಪ್ರಸೀದ ವೈಷ್ಣವೀರೂಪೇ ನಾರಾಯಣಿ ನಮೋಽಸ್ತು ತೇ ॥೧೬

ಗೃಹೀತೋಗ್ರಮಹಾಚಕ್ರೇ ದಂಷ್ಟ್ರೋದ್ಧೃತವಸುಂಧರೇ ।
ವರಾಹರೂಪಿಣಿ ಶಿವೇ ನಾರಾಯಣಿ ನಮೋಽಸ್ತು ತೇ ॥೧೭

ನೃಸಿಂಹರೂಪೇಣೋಗ್ರೇಣ ಹಂತುಂ ದೈತ್ಯಾನ್ ಕೃತೋದ್ಯಮೇ ।
ತ್ರೈಲೋಕ್ಯತ್ರಾಣಸಹಿತೇ ನಾರಾಯಣಿ ನಮೋಽಸ್ತು ತೇ ॥೧೮

ಕಿರೀಟಿನಿ ಮಹಾವಜ್ರೇ ಸಹಸ್ರ ನಯನೋಜ್ವಲೇ ।
ವೃತ್ರಪ್ರಾಣಹರೇ ಚೈಂದ್ರಿ ನಾರಾಯಣಿ ನಮೋಽಸ್ತು ತೇ ॥೧೯

ಶಿವದೂತೀಸ್ವರೂಪೇಣ ಹತದೈತ್ಯೇ ಮಹಾಬಲೇ ।
ಘೋರರೂಪೇ ಮಹಾರಾವೇ ನಾರಾಯಣಿ ನಮೋಽಸ್ತು ತೇ ॥೨೦

ದಂಷ್ಟ್ರಾಕರಾಳವದನೇ ಶಿರೋಮಾಲಾವಿಭೂಷಣೇ ।
ಚಾಮುಂಡೇ ಮುಂಡಮಥನೇ ನಾರಾಯಣಿ ನಮೋಽಸ್ತು ತೇ ॥೨೧

ಲಕ್ಷ್ಮಿ ಲಜ್ಜೇ ಮಹಾವಿದ್ಯೇ ಶ್ರದ್ಧೇ ಪುಷ್ಟೇ ಸ್ವಧೇ ಧ್ರುವೇ ।
ಮಹಾರಾತ್ರೇ ಮಹಾಮಾಯೇ ನಾರಾಯಣಿ ನಮೋಽಸ್ತು ತೇ ॥೨೨

ಮೇಧೇ ಸರಸ್ವತಿ ವರೇ ಭೂತಿಬಾಭ್ರವಿ ತಾಮಸಿ ।
ನಿಯತೇ ತ್ವಂ ಪ್ರಸೀದೇಶೇ ನಾರಾಯಣಿ ನಮೋಽಸ್ತು ತೇ ॥೨೩

ಸರ್ವಭೂತಾ ಯದಾ ದೇವೀ ಸರ್ವಶಕ್ತಿಸಮನ್ವಿತಾ ।
ತದಸ್ತುತಾ ತ್ವಂ ಸಮಯೈವಮಾಭಿರ್ದುಃಖಭವಿಷ್ಯತಿ ॥೨೪

ಸರ್ವಸ್ವರೂಪೇ ಸರ್ವೇಶಿ ಸರ್ವಶಕ್ತಿ ಸಮನ್ವಿತೇ ।
ಭಯೇಭ್ಯಸ್ತ್ರಾಹಿ ನೋ ದೇವಿ ದುರ್ಗೇ ದೇವಿ ನಮೋಽಸ್ತು ತೇ ॥೨೫

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತಿದ್ದು, ಆ ಮಹಾಧಿಕಾರಿಗಳು ವರ್ಷಕ್ಕೊಂದು ಸಲವಾದರೂ ಶಿಷ್ಯರ ಮನೆಗಳಿಗೆ ಒಂದು ಸಾರಿ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದು ತೊಂಡು ಬರುತ್ತಿರುವರು. ಆದರೆ ಇವರು ತಮ್ಮ ಶರೀರಸ್ವಾಸ್ಥ್ಯವನ್ನು ವಿಚಾರಿಸಿ ಶಿಷ್ಯರ ಯೋಗಕ್ಷೇಮ ವಿಷಯಗಳನ್ನು ಬರೆದು ತೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಬಂದುಬಿಡುವರು ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ ಇದನ್ನು ದೂರಮಾಡುವುದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಪುನಃ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚೆನ್ನಾಗಿ ತೋರಿಸಲ್ಪಟ್ಟಿದೆ. ಆಮದ ಕಿಂದ ಸವರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿರುವಂತೆ ವಿವರ ವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಣಾಡಿಕೊಳ್ಳಬೇಕು. ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ. ಬೆಲೆ ೧—೪—೦.

ವ್ಯವಸ್ಥಾಪಕರು:
ಶ್ರೀ ಪಂಚಾಚಾರ್ಯಾ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಕಿರೀಟಧಾರಣ ಮಹೋತ್ಸವಕ್ಕೆ ೭೫ ವಿದೇಶ ರಾಷ್ಟ್ರಗಳಿಗೆ ಆಹ್ವಾನ

ಲಂಡನ್ನಿನ ಬಕಿಂಗ್ ಹ್ಯಾಂ ಅರಮನೆಯಲ್ಲಿ ಜೂನ್ ೨ರಂದು ಅತ್ಯಂತ ವೈಭವದಿಂದ ನಡೆಯಲಿರುವ ಬ್ರಿಟಿಷ್ ರಾಣಿಯ ಕಿರೀಟಧಾರಣ ಮಹೋತ್ಸವದಲ್ಲಿ ಭಾಗವಹಿಸುವಂತೆ ಮಹಾರಾಣಿಯವರು ೭೫ ವಿದೇಶ ರಾಷ್ಟ್ರಗಳ ಪ್ರತಿನಿಧಿಗಳನ್ನು ಆಹ್ವಾನಿಸಿದ್ದಾರೆ.

ಬ್ರಿಟಿಷ್ ರಾಣಿಯವರು ಹಲವು ವಿದೇಶಿ ಪ್ರಮುಖರುಗಳಿಗೂ ಆಹ್ವಾನ ವಿತ್ತಿದ್ದಾರೆಂದೂ ಆ ವೈಕಿ ೨೨ ರಾಜರುಗಳೂ, ಏವರು ಪ್ರಧಾನಿಗಳೂ, ೧೧ ಮಂದಿ ವಿದೇಶಾಂಗ ಸಚಿವರುಗಳೂ ಇರುವರೆಂದು ಹೇಳಲಾಗಿದೆ. ಭಿಕ್ಷ ಸಂಸ್ಥೆ ಸೆಕ್ರೆಟರಿ ಜನರಲ್ ಮಿ॥ ಟ್ರ್ಯಗ್ವೀಲೀರವರು ಪಂಚಚಿಗಳಿಗೂ ಆಹ್ವಾನ ವಿತ್ತಿದ್ದಾರೆಂದು ವರದಿ ತಿಳಿಸಿದೆ.

ಚಂದಾದಾರರಲ್ಲಿ ವಿನಂತಿ

ನಮ್ಮೀ ಪಂಚಾಚಾರ್ಯ ಪ್ರಭಾ ವಾರ ಪತ್ರಿಕೆಯ ವಾರ್ಷಿಕ ಚಂದಾ ೩ ರೂ ಗಳಷ್ಟು ವಿ ಪಿ ಖರ್ಚಾ ಇದೇ ಎಪ್ರೀಲ ೧೯ ನೇ ತಾರೀಖಿನಿಂದ (೧೯೫೩) ಏರು ಆಣೆ ಒಂಭತ್ತು ಕಾಸು ಆಗಿದೆ ಅದ್ದರಿಂದ ನಾವು ವಿ ಪಿ ಮಾಡಿದರೆ ವಿ ಪಿ ಖರ್ಚು ಸೇರಿ ೩-೦-೦ ಆಗುವದು ಈ ದಿಡ್ಡು ನಮ್ಮ ಕೈ ಸೇರಲೇಕಾರದೆ ಆಯಾ ಪೋಸ್ಟಾಫೀಸಿಗೆ ಎರಿಡು ಆಣೆ ಹೆಚ್ಚಿಗೆ ಕೊಡಬೇಕಾಗುವದು ಹೀಗಾಗಿ ಪ್ರತಿಯೊಬ್ಬ ಚಂದಾದಾರರಿಗೆ ಕಷ್ಟ ಆಣೆ ಹೆಚ್ಚು ಖರ್ಚು ಬರುವದು ಅದ್ದರಿಂದ ಚಂದಾದಾರರ ಅವಧಿ ಮುಗಿಯುವ ೧ ವಾರ ಮುಂಚೆ ನಾವು ಪತ್ರಿಕೆಯಲ್ಲಿ ಸೂಚನೆಗಳನ್ನು ಕಳಿಸುತ್ತೇವೆ ಆ ಪ್ರಕಾರ ಕೂಡಲೆ ಮೂರು ರೂಪಾಯಿಗಳನ್ನು ಮನಿಯಾರ್ಡರ ಮಾಡಿದರೆ ಎರಡೇ ಆಣೆಯಲ್ಲಿ ಪುಸ್ತು ಪಸ್ತು ಕೈಸೇರುವುದಲ್ಲವೆ ಯಧಾಪ್ರಕಾರ ಪತ್ರಿಕೆಗಳೂ ನಿಮ್ಮ ಕೈಸೇರುತ್ತವೆ ದಯವಿಟ್ಟು ಎಲ್ಲರೂ ಮನಿಯಾರ್ಡರ ಮಾಡಿಸಿರಿ ಮನಿಯಾರ್ಡರ ಕಳಿಸದೆ ಇದ್ದವರಿಗೆ ಪತ್ರಿಕೆಗಳನ್ನು ನಿಲ್ಲಿಸಿಬಿಡುತ್ತೇವೆ ಮನಿಯಾರ್ಡರ ಫಾರಮ್ಮಿನಲ್ಲಿ ಹೆಸರು ಹಾಗೂ ತಮ್ಮ ಠಿಕಾಣಿ ಸಂಪೂರ್ಣವಾಗಿ ತಿಳಿಸಬೇಕು ಹೀಗೆ ಮಾಡುವುದರಿಂದ ಚಂದಾದಾರರಿಗೆ ಉಳಿತಾಯವಾಗುವುದಲ್ಲದೆ ನಾವು ವಿ ಪಿ ಮಾಡಿ ದಾರಿಕಾಯುವ ತೊಂದರೆಯೂ ತಪ್ಪುತ್ತದೆ ಸರ್ವ ಮಹಾಜನರು ನಾವು ಮಾಡಿಕೊಂಡ ವಿನಂತಿಯನ್ನು ಗಮನಕ್ಕೆ ತಂದು ೩ ರೂಪಾಯಿ ಚಂದಾ ಹಣವನ್ನು ಮನಿಯಾರ್ಡರ ರೂಪದಿಂದ ಸಲ್ಲಿಸುತ್ತೀರೆಂದು ನಂಬಿದ್ದೇವೆ

—ಸಂಪಾದಕರು

ಪಂಚಾಚಾರ್ಯಪ್ರಭಾ

ರ್ಗಾಱ. ಸಿಯ ಮೇ ತಾ|| ೧೮ ನೇ ಸೋಮವಾರ

೨೭ ನೇ ವರ್ಷಾರಂಭ

ವೀರಶೈವಧರ್ಮಕ್ಕೆ ಶ್ರೀಜಗದ್ಗುರು ಪಂಚಾಚಾರ್ಯರೇ ಗುರುಗಳೆಂದೂ, ಅವರ ಪರವಾಗಿ ಶ್ರೀ ಪಟ್ಟಚಂದ್ರಶೇಖರಾಗಳು ಮಠಾಧಿಕಾರಿಗಳ ಸಹಾಯದಿಂದ ಧರ್ಮಸೂತ್ರವನ್ನು ನಡಿಸುವರೆಂದೂ ಸಮಸ್ತ ವೀರಶೈವರು ಗುರುವಚನವನ್ನು ಭಕ್ತಿ ವಿಶ್ವಾಸಗಳಿಂದ ಪಾಲಿಸಲಾಗಬೇಕೆಂದೂ ಗುರುವೇ ಪರಮೈಶ್ವತವೆಂದೂ, ನಿಗುರೋ ರಕ್ಷಿಸಿಂ ಎಂಬ ಶಿವಾಕ್ಯವು ಇದಕ್ಕೇ ಪುಷ್ಟೀಕರಿಸುವದೆಂದೂ ವೇದಾಲಾಗಿ ಸಭೆ ಸನ್ಮೇಳನಗಳಲ್ಲಿ ಉದ್ಘೋಷಿಸಿ ಗುರುವಚನದ ವೈಭವವನ್ನು ಪ್ರಕಾಶಪಡಿಸಿದ ಕೈ! ಪೂಜ್ಯ ಶ್ರೀಕಾಶೀಸಿಂಹಾಸನಾಧೀಶ್ವರರಾಗಳವರು ಗುರುಗಳ ಮಹಿಮೆಯೂ ಅನನ್ಯಕತೆಯೂ ಪ್ರತಿಯೊಬ್ಬ ವೀರಶೈವನ ಹೃದಯದಲ್ಲಿ ಇನ್ನೂ ಹೆಚ್ಚಾಗಿ ವ್ಯಾಪಿಸಲಿ ಜಗದ್ಗುರುಪೀಠದ ಶತಕೋತ್ಸವ ಸಂಭ್ರಮಗಳಿಂದ ಸಮಸ್ತ ವೀರಶೈವರಲ್ಲಿ ಧರ್ಮಜಾಗೃತಿಯುಂಟಾಗಲಿ ಎಂದು ಹಾರೈಸುತ್ತೇವೆ

ಇಂದು ಶ್ರೀ ಪಟ್ಟಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳವರ ಜನ್ಮದಿನ (ಶ್ರೀಜಯಂತಿ) ಜಯಂತಿ ದಿನದಂದು ಈ ಪಂಚಾಚಾರ್ಯಪ್ರಭಾ ವಾರಪತ್ರಿಕೆಯನ್ನು ಮೈಸೂರು ರಾಜಧಾನಿಯಲ್ಲಿ ಪ್ರತಿ ಸೋಮವಾರ ಹೊರಡಿಸಲಾರಂಭಿಸಿದರು ಮೊದ ಮೊದಲು ಈ ಕಾರ್ಯಕ್ಕೆ ವಿರೋಧಿಗಳಿಂದ ಎಷ್ಟೋ ಅಡಚಣೆಗಳಾಗಲಿಗೆ ಒದಗಿದರೂ ಪೂಜ್ಯರ ಅಮೃತಹಸ್ತವಾದ ಪರಿಶ್ರಮದಿಂದಲೂ ಆಚಾರ್ಯಭಗವತ್ಪಾದರ ಆಶೀರ್ವಾದದಿಂದಲೂ ಉತ್ತರೋತ್ತರ ಶಕ್ತಿವೃದ್ಧಿಯನ್ನು ಹೊಂದಿ ೨೩ ವರ್ಷಗಳು ಪೂರ್ತಿಯಾಗುತ್ತಲಿ ಪಂಡಿತರು ದೀರ್ಘಕಾಲದ ತಮ್ಮ ಗುರುಸೇವೆಯನ್ನು ಮುಗಿಸಿಕೊಂಡು ಶಿವನಲ್ಲಿ ಸೇರಿದರು ಅನಂತರ ಸಹಾಲಕ್ಕೆ ಒದಗಿದ ಗಂಡಾಂತರದಲ್ಲಿ ಅವಕಾಶ ಕಲ್ಪಿಸಿಕೊಂಡು ಅವರ ಸಹೋದರರಾದ ನಾಮ ಸದರ ಪತ್ರಿಕೆಗೆ ಸಂಪಾದಕರಾಗಿ ಶ್ರೀ ಗುರುವೇ ಗತಿಯೆಂದು ಆಚಾರ್ಯಭಗವತ್ಪಾದರನ್ನು ನೆನೆಯುತ್ತ ಪಂಡಿತರನ್ನು ಸ್ಮರಿಸುತ್ತ ಕಷ್ಟ ದಲ್ಲಿರೆಯೇ ಮೂರು ವರ್ಷಗಳನ್ನು ಕಳೆದಿದ್ದಾಯಿತು ಅನಾಮಧೇಯನಾದ ನಾಮ ಕೈಕೊಂಡ ಪ್ರಭಾಸೇವೆಯನ್ನು ಚಂದಾದಾರರೂ, ವಾಚಕರೂ ಮೆಚ್ಚಿಸಿ ಯಥಾ ಪ್ರಕಾರದ ಅಭಿಮಾನವಿಟ್ಟದ್ದು ಪಂಡಿತರ ಕೀರ್ತಿಯ ಅವತೇಷನೆಯೆಂದು ಭಾವಿಸಿದ್ದೇನೆ

ಇದೇ ಶಾಲಿವಾಹನ ಶಕೆ ೧೮೭೫ನೇ ವಿಜಯ ನಾಮ ಸಂವತ್ಸರದ ನಿಜವೈಶಾಖ ಶು|| ೫ ವಿತಿಗೆ ೩೬ ಪತ್ರಿಕೆಯು ೩೬ ವರ್ಷಗಳನ್ನು ಕಳೆದು ೩೭ ನೇ ವರ್ಷದಲ್ಲಿ ಮುಂದಡಿ ಇಟ್ಟದೆ ಗುರುಸೇವೆ ಧರ್ಮ ಸೇವೆಗಳಲ್ಲಿ ನಿರತವಾದ ಈ ಪತ್ರಿಕೆಯು ಕನ್ನಡನಾಡಿನ ಎಲ್ಲೆಲ್ಲ ಹೆಸರುವಾಸಿಯಾಗಿದ್ದು ಆಗಿನ ಪರಿಸ್ಥಿತ್ಯನುಸಾರವಾಗಿ ನಾಡುನುಡಿಯ ಸೇವೆಯನ್ನೂ ಸಹ ಕೈಕೊಳ್ಳಬೇಕಾಯಿತೆ ಆ ನುಡಿಸಾರ ಅಮಲಿಯಕರ್ನಾಟಕ ಪ್ರಾಂತ ರಚನೆಗಾಗಿ ತಕ್ಕ ಯೋಜನೆಗಳನ್ನೂ, ರಾಜಕೀಯ ದಲ್ಲಿ ನಡೆದ ವಿಷಯಗಳನ್ನೂ ಪ್ರಕಟಿಸುತ್ತ ಕನ್ನಡಿಗರ ಹೆಚ್ಚಿನ ಪ್ರೀತಿ ನ್ನು ಎದುರುನೋಡುತ್ತಲಿದೆ ಕನ್ನಡಾಭಿಮಾನಿಗಳೂ, ಗುರುವರ್ಗಾಭಿಮಾನಿಗಳೂ, ಧರ್ಮಾಭಿಮಾನಿಗಳೂ ಆದ ನಮ್ಮ ಚಂದಾದಾರರು ಮತ್ತು ವಾಚಕರು ಎಂದಿನಂತೆ ಚಂದಾ ಕ್ರೀಕಾರಿಗಳನ್ನು ಸರ ಪ್ರಿಸತ್ರ ತೆಚ್ಚಿಗೆ ಚಂದಾದಾರರನ್ನು ಮಾಡತ್ರ ರಜಸಮುಚ್ಚಾಸ್ಪನವನ್ನು ಪಡೆದ ಈ ಪತ್ರಿಕೆಗೆ ೨೭ ವರ್ಷಾಮಹೋತ್ಸವ ವಜ್ರಮಹೋತ್ಸವ ಗಳು ಪ್ರಾಪ್ತವಾಗುವಂತೆ ಪ್ರೋತ್ಸಾಹಿಸುವರೆಂದು ನ ವಿಶ್ವಾಸ

ಧಾಪೆಯೇ ಧರ ಕೆ
ಧಾಪೆಯೇ ರಾಜ್ಯಕ್ಕೆ
ಧಾಪೆಯೇ ಸರ್ವಕಾಲಗಳವು ಎಂದೆನುತ
ವೀರಶಾಲುವರು ಸಂಜೀವ ।

ಧಾಪೆಯು ಬೆಳೆಯುಂದ
ದೇಶಕ್ಕೆ ಬೆಲೆಬಾಷ್ಪ !
ಧಾಪೆಯಲ್ಲಾ ಬಿಟ್ಟು ದೇವಾಲಿ ದಾಯ
ಕ್ಲೇಪೊಂಮನುನ ನ ಜೀವ ।

ಬಡಗಣದಿ ವಾಲ್ಮೀಕಿ
ಪಡುವಣದಿ ಎಲೂರೇಶ
ಸಿಡಿದು ತೆಂಕಣದಿ ಹಕ್ಕೆಳು ಜನಗೂಡಿ
ಪಡೆಯುವರು ರಾಷ್ಟ್ರ ನ ಜೀವ ॥೧

ಎಂಬ ಪೂವಲ್ಲಿ ನಂಜೇಶನ ಕಾಲಜ್ಞಾನವೂಹನೆಯ ತೆ ಕನ್ನಡನುಡಿಯ ನಾಡೆಲ್ಲ ವಕ್ತವಾಗುವ ನ ಸಂಧಿಯು ಬಂದಿದೆ ಗುರುಕೃಪೆಯಿಂದ ಇವ ವಿಜಯಸಂವತ್ಸರ ದಲ್ಲಿ ಕರ್ನಾಟಕರತ್ನ ಸಿಂಹಾಸನಾಧಿಪತಿಗಳಾದ ನೆ ಸೂರು ಶ್ರೀಮನ್ಮಹಾರಾಜರವರ ನೈತ್ಯತ್ವದಲ್ಲಿ ಅಖಿಲ ಕರ್ನಾಟಕ ಪ್ರಾಂತರಚನೆಯೊಳಗಿ ನಾನಾಕನ್ನಡಮಂಗಳು ಪುನರುಜ್ಜೀವನಗೊಳ್ಳಲಿ ದೂ ಧರ್ಮಸೂತ್ರಮಗಳಾದ ಕನ್ನಡಿಗರ ಸಂತೃಪ್ತಿ ಸಿಹಿನನ್ನು ಅನ ಭೂಸಲೆಂದೂ ಎಂದಿನ ಕೆ ಕಾಲ ವಿಕಲ್ಪ ಮಳೆ ಬೆಳೆ ಇಲಾ ಹೆಸ ಗೆಲಂದ ಪರಿಪೂರ್ಣವಾಗಿ ಸಿರಿಸಂಪತ್ತಿನೊಡನೆ ಬಾಳಲಿ ದೂ ಸಂಗತಿಗಳಿಗೆ ಮೆಚ್ಚಿ ಪೂಜ್ಯ ನಮ್ಮ ಚಂದಾದಾರರು ಆ ಯೋಗ್ಯಧಾನ್ಯಾದಿಗಳನ್ನು ಹೊಂದಲೆಂದೂ ಹಾರೈಸಿ ಮಂಗಳವನ್ನು ಕೋರುತ್ತೇವೆ

ಜಯವಲ್ಲ ಜಯವಲ್ಲ ಎರಡೆ !
ಜಯವು ಕಲ್ಲರು ವಂಶಕ್ಕಾಗಲೆ !
ಜಯವು ಶ್ರೀ ಗುರುಭಕ್ತಿಸಿಕರಕೆ ಧರ್ಮರಾಗಲೆ
ಜಯವು ಕನ್ನಡ ದೇವಿ ಮಾತೆಗೆ
ಜಯವು ಕನ್ನಡ ಸಕಲ ಜನತೆಗೆ !
ಜಯವು ಕನ್ನಡತತ್ಪಸಿಂಹಾಸನಕೆ ಮಂಗಲವು ॥೧೫

ವರ್ತಮಾನಸಂಗ್ರಹ

ಆಂಧ್ರಪ್ರಾಂತ ರಚನೆಗೆ ಸ್ಪೆಷಲ್ ಡ್ಯೂಟಿ ಅಧಿಕಾರಿ

ಹುಟ್ಟಾಬಿನ ಆಕ್ಕೊಂಡೆಂ ಜಿಲ್ಲರಲ್ ಆಗಿರುವ ಶ್ರೀ ಎ ಎಲ್ ಸಾಸ್ತ್ರೀನಾರವನ್ನು ಹೊಸಸಂಧ್ರಪ್ರಾಂತ ರಚನೆಗಾಗಿ ಸ್ಪೆಷಲ್ ಡ್ಯೂಟಿ ಅಧಿಕಾರಿಗಳಲ್ಲಾಗಿ ಕೇಂ ಧ್ರಸರ್ಕಾರ ನೇಮಕ ಮಾಡಿದೆ ಶ್ರೀ ಸಾಸ್ತ್ರೀನಾರವರು ಮೇ ೧೬ ರಂದು ತಮ್ಮ ಹೊಸ ಹುದ್ದೆಯನ್ನು ವಹಿಸಿ

ವಿನಾದರೂ ಸರಿಯೆ ಕಾಶ್ಮೀರದೊಳಕ್ಕೆ ನುಗ್ಗಲು ನಿರ್ಧರಿಸಿರುವೆನು

ಪರಿಣಾ ಮ ವೇನಾದರೂ ಸರಿಯೆ, ಕಾಶ್ಮೀರದೊಳಗೆ ಪ್ರವೇಶಿಸಲು ನಿರ್ಧ ರಿಸಿರುವೆನು—ಎಂಬುದಾಗಿ ಭಾರತೀಯ ಜನಸಂಘದ ಅಧ್ಯಕ್ಷರಾದ ಡಾ|| ಶಾಮಪ್ರಸಾದ ಮುಖರ್ಜಿಯವರು ಪತ್ರಿಕಾ ಪ್ರತಿನಿಧಿಗಳಿಗೆ ಹೇಳಿದರು

ನನ್ನ ಧ ಟಯಿಂದ ಯಾವ ಪ್ರಯೋಜನವೂ ಆಗುವುದಿಲ್ಲವೆಂದು ಷೇಕ್ ಅಬ್ದುಲ್ಲಾರವರು ಟೆಲಿಗ್ರಾಂನಲ್ಲಿ ತಿಳಿಸಿದ್ದಾರೆ ಇದರಿಂದ ಕಾಶ್ಮೀರದಲ್ಲಿ ಏನೋ ನಡೆಯು ತ್ತಿದೆಯೆಂದು ಅಧ ವಾಗುತ್ತಿದೆ ಅಲ್ಲಿ ನಡೆಯುತ್ತಿರುವ ಘಟನೆಗಳನ್ನು ಷೇಕ್ ಅಬ್ದುಲ್ಲಾರವರು ಮುಚ್ಚಿಡಲು ಯತ್ನಿಸುತ್ತಿದ್ದಾರೆ ಜನ್ಮವಿನಲ್ಲಿ ಪ್ರಜಾಪರಿಷತ್ತಿನ ಜೊತೆಗೆ ಏಂಕಾಂಗಿಯಾಗಿ ಶಾಂತಿ ನೆಲಸಿದ್ದರೆ, ಷೇಕ್ ಅಬ್ದುಲ್ಲಾರವರು ನನ್ನನ್ನೆ ಆಡ್ವಾನಿಸಬಹುದಾಗಿತ್ತು ನನ್ನ ಭೇಟಿಯನಂತರ ನಾನು ಪ್ರಕಟಣೆಗಳನ್ನು ಕೊಟ್ಟು ಜಂಟಿಯಾಗಿಯೆ ನಿರ್ಧರಿಸುತ್ತಿದ್ದೆವು

ಷೇಕ್ ಅಬ್ದುಲ್ಲಾರವರು ಮುಚ್ಚಿಡುತ್ತಿರುವ ವಿಷಯವನ್ನು ಖುದ್ದಾಗಿ ತಿಳಿಯಬೇಕೆಂದಿರುವೆನು ಅಲ್ಲಿಯ ಪರಿಸ್ಥಿತಿಯನ್ನು ಖುದ್ದಾಗಿ ಪರಿಶೀಲಿಸಿ ಸಮಸ್ಯೆಯನ್ನು ಶಾಂತಿಯುತವಾಗಿ ಪರಿಶೀಲಿಸಬೇಕೆಂದು ನನ್ನ ಅಭಿಲಾಷೆ

ಪಂ|| ನೆಹ್ರೂರವರು ದಿನಬೆಳಗಾದರೆ ಈಮುಖರು ನೀತಿಯನ್ನು ಪ್ರಸ್ತಾಪಿಸುತ್ತಿದ್ದಾರೆ ಇದರಿಂದ ರಾಷ್ಟ್ರದಲ್ಲಿ ಕೋಮುವಾರು ನೀತಿ ಇದೆ ಎಂದು ಭಾವಿಸುತ್ತಿದ್ದಾರೆ ಇದು ಭಾರತದ ರಾಜಕೀಯಕ್ಕೆ ದೊಡ್ಡ ಹೆಚ್ಚು ಅವರು ಯಾವುದಾಗಿ ಪಂಗಡಗಳಿಗೆ ಶರಣಾಗತರಾದರು ಅವರ ದುಸ್ಕರ್ಮಗಳಿಗೆ ಶರಣಾಗುತ್ತಿದ್ದಾರೆ ಇದರಿಂದ ಕ್ರಿರಾಷ್ಟ್ರ ಸಿದ್ಧಾಂತ ತಲೆಹಾಕುತ್ತಿದೆ —ಎಂದೂ ಡಾ|| ಮುಖರ್ಜಿಯವರು ತಿಳಿಸಿದರು

ದಸ್ತಗಿರಿ
ಜಮ್ಮು ಕಾಶ್ಮೀರ ಸರ್ಕಾರದ
ಪ್ರಕಟಣೆ

ಮುಖರ್ಜಿ ಯವರ ದಸ್ತಗಿರಿ ಬಗ್ಗೆ ಜಮ್ಮು ಕಾಶ್ಮೀರ ಸರ್ಕಾರದವರು ಪ್ರಕಟಣೆಯೊಂದನ್ನು ಹೊರಡಿಸಿ ಈರೀತಿ ತಿಳಿಸಿದ್ದಾರೆ—

ಡಾ|| ಶಾಮಪ್ರಸಾದ ಮುಖರ್ಜಿಯವರು ಅವರ ಆಯಮಂದಿ ವಸಂಯಾಯಿಗಳೊಡನೆ ಮಾಧೋಪುರಕ್ಕೆ ಆಗಮಿಸಿದರು ಅವರು ಆ ಊರಿನ ಬಾಗಿಲಿಗೆ ಬಂದೊಡನೆ ಸರ್ಕಾರದ ಜೀಪ್ ಸಕ್ಕೆಬೆಗಳವರು ಅವರಿಗೆ ನೋಟೀಸ್ ಪೊಂದಿಮ್ಮ ಕೊಟ್ಟು ಜಮ್ಮು ಕಾಶ್ಮೀರ ಪ್ರದೇಶದೊಳಗೆ ಪ್ರವೇಶಿಸುವುದನ್ನು ಪ್ರತಿಬಂಧಿಸುವುದಾಗಿ ತಿಳಿಸಿದರು ಡಾ|| ಮುಖರ್ಜಿ ಮತ್ತು ಸಾರ್ವಯವರು ಈ ಪ್ರತಿಬಂಧ ಕಾಜ್ಞೆಯನ್ನು ಉಲ್ಲ ಘಿಸಿ ಪ್ರದೇಶದೊಳಗೆ ಪ್ರವೇಶಿಸಿದರು ಆಕೂಡಲೇ ಸಾರ್ವಜನಿಕ ರಕ್ಷಣಾ ಕಾನೂನಿನ ಪ್ರಕಾರ ಡಾ|| ಮುಖರ್ಜಿ ಅವರ ಸಂಗಡಿ ರಿಬ್ಬರನ್ನೂ ದಸ್ತಗಿರಿ ಮಾಡಲಾಯಿತು ಎಂದು ತಿಳಿಸಲಾಗಿದೆ

ಜಮ್ಮುವಿನಲ್ಲಿ ಹರತಾಳ

ಶ್ಯಾಮಪ್ರಸಾದ ಮುಖರ್ಜಿ ಮತ್ತೀವರ ಬಂಧನವನ್ನು ವಿರೋಧಿಸಿ ಜಮ್ಮುವಿನಲ್ಲಿ ಹರತಾಳವನ್ನಾ ಚರಿಸಲಾಯಿತು ಪ್ರಜಾ ಪರಿಷತ್ತಿನವರುಹೀರಾನ್ ನಗರ, ಕಗುಲಾಲ್ ಮತ್ತು ಸಾಂಬ ಎಂಬಲ್ಲಿ ಪ್ರದರ್ಶನ ಮೆರವಣಿಗೆಗಳನ್ನು ನಡೆಸಿದರು

ಮಹಿಳೆಯರ ಸ್ಥಾನ ಮನೆಯಲ್ಲಿ

ಅಮೃತಸರ ಮಹಿಳಾ ಕಾಲೇಜಿನಲ್ಲಿ ಕೇಂದ್ರ ಸಚಿವ ಶ್ರೀ ಜಗದೀಶನಸಿಂಗರವರ ಉಜ್ಜುಳಭಾಷಣ

ಮಹಿಳಾ ವಿದ್ಯಾಸಂಸ್ಥೆಗಳ ಬಗ್ಗೆ ಮಾತನಾಡುತ್ತಾ " ವಿದ್ಯಾವಂತ ಮಹಿಳೆಯು ಆದರ್ಶಪತ್ನಿ, ಆದರ್ಶತಾಯಿ ಮತ್ತು ಆದರ್ಶಮಹಿಳೆಯಾಗಿ ಮಾಡುವಂತಹ ಶಾರ್ಯ

ಷ್ಟು ಮಹಿಳಾವಿದ್ಯಾಸಂಸ್ಥೆಗಳು ನಡಾಬೇಕು "ಎಂದು ಅವರು

ಸಚಿವರು ಮುಂದುವರಿದು ಮಹಿಳೆಯಸ್ಥಾನ ಶಕ್ತಿ ಗಳಲ್ಲಾ, ಮನೆಯಲ್ಲಿ ನನ್ನ ಈ ಸಲಹೆ ಅನೇಕ ವಿದ್ಯಾವಂತ ಮಹಿಳೆಯರುಗಳಿಗೆ ಹಿಡಿಸದಿರಬಹುದು ಆದರೆ ನನ್ನ ಅನುಭವದಮಾತು ಹೇಳುವುದಾದರೆ ಪಾಶ್ಚಾತ್ಯ ರಾಷ್ಟ್ರಗಳಿಗೆ ಹೋಲಿಸಿದರೆ ಭಾರತದ ಸ್ತ್ರೀಶಿಕ್ಷಣಕ್ಕೆ ಹೊಂದಿ ಕೊಳ್ಳದು ನನ್ನ ಸಂಪೂರ್ಣ ಅಭಿಪ್ರಾಯವೇ ಬೇರೆ ಅದು ಪ್ರಕಾರ ನಮ್ಮ ಸಮಾಜದಲ್ಲಿ ಪುರುಷರಿಗಿಂತ ಸ್ತ್ರೀಯರಿಗೆ ಉನ್ನತ ಸ್ಥಾನವಿದೆ ಈ ಉನ್ನತ ಸ್ಥಾನದಿಂದ ಕೆಳಮಟ್ಟಕ್ಕಿಳಿದು ನಮಗೆ ಪುರುಷರೊಡನೆ ಸರಸವಾಡಬೇಕೆಂದು ಸ್ತ್ರೀಯರು ಆಸೆ ಕೆಳುತ್ತಿದ್ದಾರೆಂಬುದೇ ನವಗೆ ಅರ್ಥವಾಗಿಲ್ಲ ಎಂದು ತಿಳಿಸಿದರು

" ಮದುವೆಗೆ ಮುಂಚೆ ಸ್ತ್ರೀಯನ್ನು ದೇವತೆಯೆಂದು ಅಂಗಣಿಸಲಾಗುತ್ತಿದೆ ಮದುವೆಯಾದಮೇಲೂ ಕೂಡ ಪುರುಷನಿಗೆ ಸ್ತ್ರೀಯಿಂದಲೇ ಮೋಕ್ಷ ಅವಳ ಯಾವ ಕಾರ್ಯವೇ ಆಗಿರಿ ಅವಳ ಸಂಗಾತಿಯಲ್ಲಿದೆ ಪೂರ್ಣವಾ ದುದು ಮಾತೆಯರಿಗಂತೂ ಮಹಾಗೌರವವಿದೆ" ಎಂದು ಸಚಿವರು ತಿಳಿಸಿದರು

ಸಚಿವರು ಮುಂದುವರಿದು " ಭಾರತದಲ್ಲಿ ರಾಷ್ಟ್ರಾಂ ದೋಲನ ಮೂಲಕ ಸ್ತ್ರೀಯರಿಗೆ ದೊರೆತಿರುವಷ್ಟು ಸರಸವಾ ಹಕ್ಕಿ, ಸೌಲಭ್ಯ ಬೇರಾವ ರಾಷ್ಟ್ರದಲ್ಲೂ ದೊರೆತಿಲ್ಲ ಆದರೆ ಇನ್ನು ಕೆಲವು ಕಾಲಪರ್ಯಂತರ ನಮ್ಮ ಹ್ಯಾಷಿನ ಸಂಸ್ಕೃತಿಯ ಪ್ರಕಾರ ಸ್ತ್ರೀಯರಿಗೆ ದೊರೆತಿದ್ದ ಸ್ಥಾನವೇ ಈಗಿನ ಸ್ಥಿತಿಗೆ ಹೆಚ್ಚುಕಡಿಮೆ ನೀವೇ ತಿಳುಬೇಕೆಳ್ಳುವಿರಿ ಹಿಂಗಿಳ ಸಚಿವರುಗಳನ್ನೂ, ಮಹಿಳಾ ರಾಯಭಾರಿಗಳನ್ನೂ ನೇಮಿಸಿಕೊಂಡಿರುವುದರಲ್ಲಿ ಭಾರತದೇ ವಿಶ್ವದಲ್ಲಿ ಮೊಟ್ಟಮೊದಲಿನ ರಾಷ್ಟ್ರ ಇದಕ್ಕಾಗಿ ನಾವು ಹೆಮ್ಮೆ ಪಡ ಬೇಕು ' ಎಂದು ತಿಳಿಸಿದರು

ಸಚಿವರು ಮುಂದುವರಿದು " ಶಬೇರಿಗಳಲ್ಲಿ ಸ್ತ್ರೀಯ ರು ಸೈನೇಗ್ಯಾ ಫರ್ಗಳಾಗಿಯೂ, ಗುಮಾಸ್ತರುಗಳಾ ಗಿಯೂ ಕೆಲಸ ಮಾಡುವುದಕ್ಕೆ ನೋಡಲು ಭವಗಿಗೆ ಸಂಘ ವು ಮಹಿಳೆಯರಿಗೆ ವಿದ್ಯಾಭ್ಯಾಸ ಕೊಡುತ್ತಿಲ್ಲ ಈ ತಿ ಕೆಲಸಗಳಿಗೆ ನಾವು ಉತ್ತೇಜಿಸ ಕೊಡಬಾರದು ' ದು ತಿಳಿಸಿದರು

' ಜನನದಲ್ಲಿ ವಿಷಾದವು ಅನಿವಾರ್ಯ ಸೈನುವಿವಾ ಹವು ಒಕುಮತದಲ್ಲಿ ನೋಲಾಗುತ್ತಿದೆ. ನನ್ನ ಸಂಸ್ಕೃತಿ ಳಿಗೊಡುವುದು ತ್ಯಾಗ ನಮ್ಮ ಸಂಸ್ಕೃತಿಯಲ್ಲಿ ಜಲಂ ದಕ್ಕೆ ಸಾಧನಗಳಿವೆ, ಸೌಲಭ್ಯಗಳಿವೆ. ಆದರೆ ಎಲ್ಲಿ ರಾಜೋಗವಾಗಬಾರದು ಅಲ್ಲಿ ' ಸರಳ ಜೀವನವೇ ಉತ್ತಮ ನವನ ' ಎಂದು ಸಚಿವರು ತಿಳಿಸಿದರು

ಕರ್ನಾಟಕ ಪ್ರಾಂತ್ಯರಚನೆ ಒಡನೆಯೇ ಆಗಬೇಕು

ಕೇಂದ್ರ ಪಾರ್ಲಿಮೆಂಟಿನ ಸದಸ್ಯರಾದ ಶ್ರೀ ಎಂ. ಎಸ್. ಗುರುಪಾದಸ್ವಾಮಿಗಳವರ ಸ್ಪೆಷ್ಯೇಕ್ತಿ

ಬಳ್ಳಾರಿ ಕನ್ನಡಿಗರಿಗೆ ಸೇರಿದ್ದು ಅದು ಮೈಸೂರಿಗೆ ಸೇರಬೇಕೆಂಬುದು ಸಂದೇಹವಾದ ವಿಷಯ ಅಲ್ಲಿ ಇರುವ ತೆಲುಗರ ಸಂಖ್ಯೆಯು ಸ್ವಲ್ಪಮಟ್ಟಿಗೆ ಹೆಚ್ಚಲು ಮುಖ್ಯ ಕಾರಣ ಅಲ್ಲಿನ ತೆಲುಗರು ಹೊರಗಿನಿಂದ ಬಂದು ನೆಲೆಸಿದವರೆ ವಿನಹ ಸ್ಥಳೀಯರಲ್ಲ ಈ ತಾಲ್ಲೂಕು ಪೂರ್ಣ ವಾಗಿ ಕನ್ನಡಿಗರೆಂಬುದು ನಿರ್ವಿವಾದವಾದುದು ಎಂದು ಶ್ರೀಮತಿಯಿ ಸದಸ್ಯರಾದ ಶ್ರೀ ಎಂ ಎಸ್ ಗುರುಸಾದ ಸ್ವಾಮಿಯವರು ಪತ್ರಿಕಾ ಪ್ರತಿನಿಧಿಗಳೊಡನೆ ಮಾತ ನಾಡುತ್ತಾ ತಿಳಿಸಿದರು

ಬಳ್ಳಾರಿಯ ಬಗ್ಗೆ ಮಾತನಾಡುತ್ತಾ ಕ್ಷೇತ್ರ ವಿಂಗಡಣಾ ಸಮಿತಿಗೆ ಕೇಂದ್ರ ಸರ್ಕಾರವು ಸೂಚನೆಯಲ್ಲಿ ಮೈಸೂ ರು ಶಾಸನಸಭೆ ಮತ್ತು ಲೋಕಸಭೆಗಳಿಗೆ ಸದಸ್ಯರ ನ್ನು ನಿರ್ಧರಿಸಲು ಬಳ್ಳಾರಿಯನ್ನು ಸೇರಿಸಿರು ವುದೆಂದು ಸೂಚಿಸಲಾಗಿದೆ ಇದರಿಂದ ನಂಗೆ ನೆಮ್ಮದಿ ಬಳ್ಳಾರಿಯು ನಿರ್ವಿವಾದಾಸ್ಪದವಾದ ಕನ್ನಡ ಜಿಲ್ಲೆ ಯೆಂದು ನಿರ್ಧರಿಸಿದ್ದರು

ಆದರೆ ಕೇಂದ್ರಪಲ್ಲಿ ಬಳ್ಳಾರಿಯನ್ನು ಆಂಧ್ರಕ್ಕೆ ಸೇರಿಸಿ ತೊಳ್ಳಬೇಕೆಂಬ ಅಭಿಲಾಷೆಯುಳ್ಳ ಕೆಲವು ಮುಖಂಡರು ಪಲಿ ನೆಹರೂರವರನ್ನು ಒತ್ತಾಯಪಡಿಸಿರುವ ಕಾರಣವೇ ಇನ್ನು ಚಳುವಳಿ ಮತ್ತು ಮಿಶ್ರಾರವರ ನೇಮಕಕ್ಕೆ ದಾರಿ ಯಾಯಿತೆಂದು ಅಭಿಪ್ರಾಯಪಟ್ಟರು

ಭಾಷಾವಾರು ಪ್ರಾಂತ್ಯರಚನೆಯು ಸ್ವಾತಂತ್ರಾನಂತರದ ಕೆಲಸವಲ್ಲ ಕಾಂಗ್ರೆಸ್ ಮತ್ತು ಇತರ ಪಕ್ಷಗಳೆಲ್ಲವೂ ಏಕ ಅಭಿಪ್ರಾಯವುಳ್ಳವಾಗಿದ್ದರೂ ಮೈಸೂರಿನ ಮುಖ್ಯ ಮಂತ್ರಿಗಳಾದ ಶ್ರೀ ಕೆ ಹನುಮಂತಯ್ಯನವರು ಕರ್ನಾ ಟಕ ಪ್ರಾಂತ್ಯರಚನೆಯಬಗ್ಗೆ ಸ್ಪೂರ್ತಿಯಾದ ಹೇಳಿಕೆ ಕೊಡ ದಿರುವುದು ಮನಸ್ಸಿಗೆ ಸಂತೋಷ ಮತ್ತು ಕ್ಷೇತ್ರ ಉಂಟು ಮಾಡುವುದಾಗಿದೆ.

ಮೈಸೂರಿನಲ್ಲಿರುವ ವಿಶೇಷ

ಕರ್ನಾಟಕ ಪ್ರಾಂತ್ಯ ರಚನೆಯ ಬಗ್ಗೆ ಮೈಸೂರಿನಲ್ಲಿ ರುವ ವಿಶೇಷವು ಪಾತಿಯಾಗಿದೆ, ಮತ್ತು ಇತಿಹಾಸದ ಮೇಲಿನ ಆಕಾಂಕ್ಷೆಯಿಂದ ಉದ್ಭವಿಸಿದ್ದಾಗಿದೆಯೆ ವಿನಹ ವಿಶೇಷ ವೇರೆಯಾವುದು ಇಲ್ಲವೆಂದೂ ಈ ರೀತಿಯ ಸಂಕುಚಿತ ಮನೋಭಾವ ಸರಿಯಲ್ಲವೆ ದೇಶ ಒತ್ತಿ ಹೇಳಿದರು

ಮುಖ್ಯವಾದ ಈ ಪ್ರಾಂತ್ಯರಚನೆಗೆ ವಿಳಂಬವನ್ನು ಹೆಚ್ಚುಕಾಲ ಮುಂದುವರಿಸಲು ಸಾಧ್ಯವಿಲ್ಲವೆಂದು ಬಳ್ಳಾರಿ ಆಂಧ್ರಕ್ಕೆ ಸೇರಲೇಕೆಂದು ವಿಚಾರವರ ಪರದಿಯಿಂದ ತೀರ್ಪು ಬಂದಲ್ಲಿ ಇಲ್ಲ ವರ ಫಲಿಯುವುದರಲ್ಲಿ ಸಂದೇಹವಿಲ್ಲವೆಂದು ಅಭಿಪ್ರಾಯಪಟ್ಟರು

ಮೈಸೂರಿನ ರಾಜಕೀಯ

ವೈಸೂರು ಕಾಂಗ್ರೆಸ್ ಪಂಥ್ಯದಲ್ಲಿಯೇ ಒಡಕು ಹುಟ್ಟಿ ಭಿನ್ನಾಭಿಪ್ರಾಯಗಳು ಅನೇಕವಿರುವಕಾರಣ ಅಧಿಕಾರದಲ್ಲಿ ಸಚಿವತೆಯು ಹುಟ್ಟಿ ಜನಗಳ ಅಸಮಾಧಾನವನ್ನು ಕಾಂಗ್ರೆಸ್ ಅಳಿದುಕೊಳ್ಳುತ್ತಿದೆ. ಜನಾಮಾಧಾನವನ್ನು ತಮ್ಮಲ್ಲಿ ಇರಿಸಿ ಇವೆ ಎಂದು ತೋರಬೇಕಾದರೆ ಮೈಸೂರಿನಲ್ಲಿ ಮುಕ್ತ ಸಾರ್ವತ್ರಿಕ ಚುನಾವಣೆಗಳು ನಡೆಯಬೇಕೆಂದು

ಕೇಂದ್ರ ಇಂದಿರ

ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಪಾಕೆಟ್ಸೈಜು)	೮	ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮	ಆಣೆ
ವೀರಶೈವಮಹಾತ್ಮರು	೬	ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮	ಆಣೆ
ಆಗಮಪರಿಜ್ಞಾನ	೮	ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೬	ಆಣೆ
ಶ್ರೀಜಗದ್ಗುರು ಶಿವಾನಂದವಿಜಯ	೬	ಆಣೆ
ಶ್ರೀಜಗದ್ಗುರು ವಿಶ್ವಕರ್ಣವಿಜಯ ನಕ್ಷತ್ರಮಾಲಿಕಾ	೮	ಆಣೆ
ಕನ್ನಡ ನ್ಯಾಯಶತಕಮ್	೮	ಆಣೆ
ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ)	೧೨	ಆಣೆ
ಶಿವಸೂತ್ರಸಿದ್ಧಾಂತದರ್ಪಣ	೧೨	ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ಪ್ರಾಚೀನತ್ವ	೧	ರೂ
ಮಾಹೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ)	೧	ರೂ
ವಿವೇಕಮುಕ್ತಾವಳಿ	೧	ರೂ
ವಿಚಾರಸಾರಾವಳಿ	೧	ರೂ
ವೈದಿಕಶಿವಪೂಜಾವಿಧಿ (ವೈದಿಕಸ್ವರದ ೨ನೆಯ ಆವೃತ್ತಿ)	೧।	ರೂ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧॥	ರೂ
ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್	೧॥	ರೂ.
ಸಚಿತ್ರ ರೇಣುಕವಿಜಯ (೩ನೆಯ ಆವೃತ್ತಿ)	೨	ರೂ.
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮುಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨	ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೨॥	ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೩	ರೂ
ವೀರಶೈವರತ್ನ (೫ನೆಯ ಆವೃತ್ತಿ, ೬೦ ಮಹತ್ವದ ಫೋಟೋಗಳಿರುವುವು)	೩	ರೂ
A brief life-sketch of Pandit Sri Kashinatha Shastriji (*English*)	4	As.
The Philosophical Aspect of Virasaivism (*English*)	8	As.
Speeches by Pandit Shri Kashinatha Shastriji (*English*)	12	As.
लिंगधारणचंद्रिका (संस्कृत)	१	रु
वीरशैवधर्म (मराठी)	१	रु.
[illegible]उपनिषद् (वीरशैवभाष्य—संस्कृत)	२	रु.
[illegible]कारिका (संस्कृत)	२	रु

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್, ಪ್ರೆಸ್, ಮೈಸೂರು

Edited Printed and Published by Bruhanmathadhyaksha Sri Mahadevaiah at Sri Panchacharya Electric Press, Sayaji Rao Road, Mysore.

REGISTERED No. M 2266 ॥ ಶ್ರೀಜಗದ್ಗುರು ಪಂಚಾಚಾರ್ಯರ ಪ್ರಸೀದಂತು ॥ REGISTERED No M 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನದಂಳಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಮೋದಧರ್ । ಪಂಚಾಚಾರ್ಯಜಗದ್ಗುರೂತ್ತಮವರರ್ಪಾಲಿಪ್ಪುದೀರೋಕಮಂ ॥

ಸಂಸ್ಥಾಪಕರು—ಹಾಗಲೂರು ಬೃಹಸ್ಮಠಾಧ್ಯಕ್ಷರಾದ ವೇದ ಪಂ॥ ಶ್ರೀ ಅತೀಶಾಧಿಪತಾಪ್ತಿಗಳವರು.

ವಾರ್ಷಿಕ ಚಂದಾ ೩ ರೂ.] ಸಂಪಾದಕರು—ಹಾಗಲೂರು ಬೃಹಸ್ಮಠಾಧ್ಯಕ್ಷರಾದ ಶ್ರೀ ಮಹಾದೇವಯ್ಯನವರು [ಏ ಪ್ರತಿಯ ಬೆಲೆ ೩ ರೂ ೬ ಆ.

ಸಂಪುಟ ೨೭] ಸೋಮವಾರ ತಾ॥ ೮ ನೇ ಜೂನ್ ೧೯೨೩ [ಸಂಚಿಕೆ ೪

ಸತ್ಪುತ್ರವಹಾರ

[ಬರಹಗಾರರು ಅಭಿಪ್ರಾಯ ಸಡುವ ಲೇಖನಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ ಎಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡಬೇಕಷ್ಟೆ. —ಸಂ]

ಶ್ರೀ ಗಿರಿಜಾ ಜಗದ್ಗುರು ಏಕೋರಾಮ ಶಿವಾಚಾರ್ಯರ ಜಯಂತ್ಯುತ್ಸವ

ನೈಜಾಂ ಇಲಾಖಾ ಗಂಗಾವತಿಧರ್ಮಾಧಿ ಕ್ರೈವಿದ್ಯ ವಾರಪಾಲಾಧ್ಯಕ್ಷ ನಾಗರಾಜ್ಯ ಮಂತ್ರಾಧಿಶ ಶ್ರೀ ಪ ಬ್ರ॥ ರುದ್ರಮುನಿ ಶಿವಾಚಾರ್ಯರ ಅಧ್ಯಕ್ಷತೆಯಲ್ಲಿ ಸದರಿ ಗಂಗಾವತಿ ಕೊಟ್ಟೂರು ಬಸವೇಶ್ವರ ದೇವಾಲಯದಲ್ಲಿ ಇದೇ ವಿಜಯ ಸಂ॥ ನೈಜೈಕಾಖ ಶು॥ ೬ ಶುಕ್ರವಾರ ಏಕೋರಾಮ ಶಿವಾಚಾರ್ಯರ ಜಯಂತ್ಯುತ್ಸವವು ಮಹಾ ವಿಜೃಂಭಣೆಯಿಂದ ನೆರವೇರಿತು

ಸದರಿ ಶುಕ್ರವಾರ ಉದಯಕ್ಕೆ ಶ್ರೀ ಜ॥ ಏಕೋರಾಮ ಶಿವಾಚಾರ್ಯರ ಭಾವಚಿತ್ರಕ್ಕೆ ಶ್ರೀ ರುದ್ರಾಭಿಷೇಕ ಸಹಸ್ರ ಬಿಲ್ವಾರ್ಚನೆಗಳು ನೇ॥ ತುರವೆಹಾಳು ಮಹದ ಅಕ್ಕಿರಯ್ಯನವರ ಪೌರೋಹಿತ್ಯದಿಂದ ಪ್ರಥಮ ೮ ಘಂಟೆಯಿಂದ ೧೦ ಘಂಟೆಯವರೆಗೂ ಕಳಶಾರಾಧನೆಗಳಂದ ಅಲಂಕೃತವಾಗಿದ್ದ ಸದರಿ ಗ್ರಾಮದಲ್ಲಿ ಏಕೋರಾಮ ಶಿವಾಚಾರ್ಯರ ಭಾವಚಿತ್ರದ ಅಂಬೋಲನೋತ್ಸವವು ಮಂಗಲಾಷ್ಟಕ, ಜಯಘೋಷ, ಭಜನೆ, ವೇದ ಘೋಷಗಳೊಡನೆ ಕೇರಿ ಬಸವೇಶ್ವರ ದೇವಾಲಯದವರಿಗೂ ಹೋಗಿ ಪುನಃ ಕೊಟ್ಟೂರು ಬಸವೇಶ್ವರ ದೇವಾಲಯಕ್ಕೆ ಬಂದು ಸೇರಿತು

ಅನಂತರ ೧೯ ಘಂಟೆಗೆ ಪೂರಾ ಗಣಾರಾಧನೆಯು ಬಹು ಶ್ರದ್ಧೆಯಿಂದ ಪ್ರಡೆಯಿತು, ಮತ್ತು ಸಾಯಂಕಾಲ ೪ ಗಂಟೆಯಿಂದ ೬ ಘಂಟೆಯವರೆಗೂ ಹಂಚಿನಕಾಳು ಮಹದ ಅಂಕ್ಕಿಯ್ಯನವರಿಂದಲೂ, ರಾಮಸಾಗರ ಮಹದ ಪಂಚಾಕ್ಷರಗವಾಯಿಗಳಿಂದಲೂ ಸಂಗೀತವು ಮತ್ತು ಶಿವ ಕೀರ್ತನೆಯೂ ಪ್ರಡೆಯಿತು. ಅನಂತರ ಶ್ರೀ ಜ॥ ಬ್ರ॥ ರುದ್ರಮುನಿ ಶಿವಾಚಾರ್ಯರು ಶ್ರೀ ಜ॥ ಏಕೋರಾಮ ಶಿವಾಚಾರ್ಯರ ಮಹತ್ಕಾರ್ಯವನ್ನು ತಮ್ಮ ದಿವ್ಯ ವಾಣಿಯಿಂದ ಪ್ರಕಾಶಗೊಳಿಸಿದರಲ್ಲದೆ ಪ್ರತಿಯೊಬ್ಬ ವೀರಶೈವರು ಪ್ರತಿವರ್ಷದಲ್ಲಿಯೂ ಶ್ರೀ ಜಗದ್ಗುರು ಪಂಚಾಚಾರ್ಯರ ಜಯಂತಿಗಳನ್ನು ತಪ್ಪದೇಮಾಡ ಬೇಕೆಂದು ಸರ್ವರ ಮನಸ್ಸಿಗೂ ಪ್ರತಿಬಿಂಬಿಸುವಂತೆ ಅಪ್ಪಣೆಕೊಡಿಸಿದರು. ಆಲ್ಲಿ ಮಳೆತಾಗಿದ್ದ ಸಕಲ ಭಕ್ತ ಮಾಹೇಶ್ವರರಿಂದ ಶ್ರೀಪಂಚಾಚಾರ್ಯರ ಜಯಘೋಷ ಮೊದಲಿಗೆ ಸಭಾ ವಿಸರ್ಜನೆಯಾಯಿತು. ಇದೇರೀತಿ ಯಾಗಿ ನೈಜೈಕಾಖ ಕು॥ ೫ ಅದಿತ್ಯವಾರ ದಾಯಿ ಜಯಂತಿಯೂ ಬಹು ಶ್ರದ್ಧಾಭಕ್ತಿಯಿಂದಾಗಿ ಪ್ರಡೆಯಿತು.

ಓರ್ವ ಗುರುಭಕ್ತ.

ಜಂಬಿಗಿ ಕನ್ನಡಶಾಲೆಯ ನುಮ್ಮೋಹಾಧ್ಯಾಯರ ಶ್ಲಾಘನೀಯ

ವಿಜಾಪುರ ತಿ॥ ಜಂಬಿಗಿ ಕನ್ನಡಶಾಲೆಯ ಮುಖ್ಯ ಉಪಾಧ್ಯಾಯರಾದ ಶ್ರೀ ಮ ಜ ಪಾಟೀಲರವರು ಚಿರಪ್ರಾಭ್ಯಧ್ಯಕ್ಷ ಶ್ರೀ ಪರಮೇಶ್ವರ ಸ್ವಾಮಿ ಗಳ ಪಾದಾ ಯದಿಂದ ಶಾಲೆಗೆ ಪೂರ್ತಿ ಕಟ್ಟಡವನ್ನು ಕಟ್ಟಿಸಿದರು ಹದಿನೇಳುವರರು ಜನಸಂಖ್ಯೆಯುಳ್ಳ ಈ ಗ್ರಾಮದಲ್ಲಿ ಎಂದಿನಿಂದಲೂ ನಾಲ್ಕನೇಕ್ಲಾಸಿನವರೆಗೆ ಇದ್ದ ಸ್ಕೂಲನ್ನು ಇವರು ಇಲ್ಲಿಗೆಬಂದ ನಾಲ್ಕೇವರ್ಷಗಳಲ್ಲಿ ಏಳನೇಕ್ಲಾಸಿನ ವರೆಗೆ ನಡೆಯುವ ತೆರೆಂಡಿ ಈ ವರ್ಷ ಮುಲ್ಕಿ ಪರೀ ಕ್ಷೆಗೆ ಹತ್ತು ವಿದ್ಯಾರ್ಥಿಗಳನ್ನು ಕಳಿಸಿದ್ದರಲ್ಲಿ ಎಳು ವಿದ್ಯಾ ರ್ಥಿಗಳು ಹೆಚ್ಚುಗುರ್ಗಳನ್ನು ಪಡೆದು ಪಾಸಾಗಿದ್ದಾರೆ ಈ ಸ್ಕೂಲಿನ ಅಭಿವೃದ್ಧಿ ಹಾಗೂ ಶ್ರೇಯಸ್ಸು ಅತ್ಯಂತ ಪರಿಶ್ರಮ ವಹಿಸಿದ ಶ್ರೀ ಮ ಜ ಪಾಟೀಲರಿಗೆ ಸಲ್ಲ ತಕ್ಕದ್ದು ಶ್ರೀ ಜಗದ್ಗುರು ಪಂಚಾಚಾರ್ಯರು ಇವರಿಗೆ ಆಯುರಾರೋಗ್ಯಧಾನ್ಯಾದಿಗಳನ್ನು ಕೊಟ್ಟು ಇವರಿಂದ ಗ್ರಾಮಕ್ಕೆ ಇನ್ನೂ ಹೆಚ್ಚಿನ ಸೇವೆಯು ಸಲ್ಲುವಂತೆ ಅನು ಗ್ರಹಿಸಲೆಂದು ಕೋರುವ,

ಓರ್ವ ವಿದ್ಯಾಭಿಮಾನಿ

ಶ್ರೀ ರೇಣುಕ ಸಂಘಕ್ಕೆ ಉದಾರ ಸಹಾಯ

ಮೈಸೂರು ನಿಟಿ ತ್ಯಾಗರಾಜ ರೋಡಿನಲ್ಲಿರುವ ಬೆಂಒಂ ಮಠೇಲ್ ಶ್ರೀ ಬಿ ಸುಬ್ಬಣ್ಣನವರ ಪುತ್ರಿ ಚಿ॥ ಸೌ॥ ಹೆ॥ ಶಾರದಮ್ಮನಿಗೂ ನಂಜನಗೂಡು ತಾ॥ ಮಡಿಹಳ್ಳಿ ಗ್ರಾಮದ ಲೇ॥ ಮುದ್ದಪ್ಪನವರ ಪುತ್ರ ಚಿ॥ ರಾ॥ ಸುಬ್ಬಣ್ಣ ಇವರಿಗೂ ತಾ॥ ೪-೬-೨೩ರಲ್ಲಿ ನಡೆದ ವಿವಾಹ ಮಹೋತ್ಸವದಲ್ಲಿ ಮೈಸೂರಿನಲ್ಲಿರುವ ಶ್ರೀ ರೇಣುಕಸಂಘಕ್ಕೆ 5 ರೂಪಾಯಿಗಳನ್ನು ಕಾಣಿಕೆಯಾಗಿ ಸಲ್ಲಿಸಿರುವುದನ್ನು ಆದರಿಂದ ಸ್ವೀಕರಿಸಿದ್ದೇವೆ

ಕಾರ್ಯದರ್ಶಿ
ಎಂ. ಎಸ್. ಶಿವನಂಜಪ್ಪ

ಕರ್ಣಾಟಕ ದಮಾಖಾಕೆ ಗದಗ

ಯಾವ ದೇಶದ ಜನೆ, ನೀರು ಆಹಾರಾದಿಗಳಿಂದ ನಾವು ಜನ್ಮವೆತ್ತಿ ಕಾಲ ಪೋಷಣ ಹೊಂದುತ್ತೇ ವೆಯೋ ಆ ದೇಶದಲ್ಲಿ ಜೆಕೆಪ ಹುಟ್ಟ ವಪ್ರತಿ ಖಾಜಿ ದ್ರವ್ಯಗಳಿಂದ ತಯಾರಾದ ಪವಿತ್ರ ಆಯುರ್ವೇದ ಔಷಧಗಳಿಂದೇ ನಮ್ಮ ಆರೋಗ್ಯ ಕಾಪಾಡಿಕೊಳ್ಳ ಬೇಕು. ಈ ಕಾರಣವಾಗಿಯೇ ಆಯುರ್ವೇದ ಚಿಕಿತ್ಸೆ ಯನ್ನು ಕಾಂಗ್ರೆಸ್ ಸರಕಾರವೂ ಕೂಡಾ ಪ್ರಕಾರ ಗೊಳಿಸಕತ್ತಿದೆ. ಮತ್ತು ಭಾರತೀಯರಾದ ನಾವು ನಮ್ಮ ಆರೋಗ್ಯ ರಕ್ಷಣೆಯಷ್ಟು ಅಲೋಪತಿಗಳ ಹೋಮಿಯೋ ಪಥಿ ಮುಂತಾದ ಅಭಿನವ ಚಿಕಿತ್ಸೆಯಿಂದ ಪಡೆ ಯದೇ, ಆಯುರ್ವೇದ ರೀತಿಯಿಂದ ಚಿಕಿತ್ಸೆಯಿಂದ ಪಡೆ ಯುವುದು ಮುಖ್ಯ ಧರ್ಮವಾಗಿದೆ ಈ ಕಾರಣವಾಗಿಯೇ ನಾವು ತನ್ಮೆಲ್ಲರ ಹಿತಸಾಧನೆಗಾಗಿ ಬಹಗೂ ಆಯುರ್ವೇದ ಪ್ರಚಾರಕ್ಕೋಸ್ಕರ ಗದಗಿನಲ್ಲಿ ಕರ್ಣಾಟಕ ದಮಖಾನೆ ಎಂಬ ಸಂಸ್ಥೆಯಿಂದ ಚಿಕಿತ್ಸೆ ಪಡೆಸಿದ್ದೇವೆ ಪ್ರಿಪ್ಪರಿಷರ ಯಾವದೇ ತರದ ರೋಗಕ್ಕೂ ಸ್ಪೆಷಲಿಸ್ಟ್‌ಗಳ ರೋಗಕ್ಕೂ ಗಮಪಕೊಟ್ಟು ನಿಮಿರಿಸಲಾಗುವುದು ಕರ್ಣಾಟಕ ಬಾಂಧವರು ಸ್ವರೂಪಾಗಿ ಬಂದು ರೋಗ ಪರಿಹರಿಸಿ ಕೊಂಡು ಹೋಗ ವಿರಾಗಿ ವಿಜ್ಞಾಪನೆ

ವೈದ್ಯವಿಶಾರದ ಡಾ॥ ಆರ್. ಸಿ ಹಿರೇಮಠ
ಚಿಕ್ಕಮಗಳೂರು

ಸ್ಥಳ—ಎಸ್ ಟಿ ಒಸ್ಸಾಸ್ಟ್ಯಾಂಡ್ ಪಕ್ಕರ, ಗದಗ

ಸೂಚನೆ— ಒಡರೋಗಿಗಳಿಗೆ ಪುಲ್ಟಿಯಾಗಿ ಔಷಧೋ ಪಚಾರ ಮಾಡಲಾಗುತ್ತದೆ

ಕನ್ನಡ ಟೈಪ್‌ರೈಟರ್

ಚಿಕ್ಕಮಗಳೂರು ಜಲ್ಲೆಯ ಸಕ್ಕರೆಪಟ್ಟಣದ ನಿವಾಸಿ ಶ್ರೀ ಎಸ್ ಜೆ ಶಮಾರವರು ಇಂಗ್ಲಿಷ್ ಟೈಪ್‌ರೈಟರ್ ಮಿಷೀನಿಗೆ ಕನ್ನಡ ಅಕ್ಷರಗಳ ಯಾವ ಬದಲಾವಣೆ ಯನ್ನೂ ಮಾಡದೆ ಆನಿನಂತೆಯೇ ಸುಲಭವಾಗಿ ಓದಲು ಬರುವಂತಹ ಕನ್ನಡ ಟೈಪ್‌ರೈಟರ್ ಕಂಡುಹಿಡಿದು ತ್ತಾರೆ ಈ ನೋಕನ ವಿಧಾನದಿಂದ ಯಾವ ವಿಧದಾದ ಲಿಪಿ ಬದಲಾವಣೆಯೂ ಇಲ್ಲದೆ ಕನ್ನಡಿಗರಿಗೆ ಟೈಪ್ ಮಾಡಬಹುದು ಎಂದು ಶ್ರೀ ಶಮಾರವರು ತಿಳಿಸು ತ್ತಾರೆ

ಸ್ವೀಕಾರ

ಚಿಕ್ಕಮಗಳೂರು ತಿ॥ ಬೊಗಸೆ ಗ್ರಾಮದಲ್ಲಿ ತಾ॥ ೧೬-೫ ೨೩ ನೇ ಭಾನುವಾರ ನಡೆದ ಅಲ್ಲೂರು ಶ್ರೀ ಕೋಮಾರಿ ದೇವೆಗೌಡರು ಮತ್ತು ಬೊಗಸೆಗ್ರಾಮದ ಶ್ರೀ ಮೊಗಣ್ಣಗೌಡರ ಸುಪುತ್ರಿ ಕುಂ॥ ಸೌ ತಾಯಮ್ಮ ಇವರುಗಳ ವಿವಾಹ ಸಮಯದಲ್ಲಿ ಪ್ರಥಮೋಷಚಿಗಾಗಿ ಪದುವರರ ಕಡೆಯಿಂದ ಕೆಗೆಯಿಸಿದ 4 ರೂಪಾಯಿಗಳು ಶ್ರೀ ಜೆ. ಪುಟ್ಟೇಗೌಡರ ದ್ವಾರಾ ಕಲ್ಪಿರುತ್ತವೆ

ಗುಲ್ಬರ್ಗಾ ತಿ॥ ಮುಗುಳನಾವಿ ಹಿರೇಮಠ ದಲ್ಲಿ ನಡೆದ ಮಂಟಪಪೂಜೆ, ಪುರಾಣಪಾಪ್ತಿ, ಪುಣ್ಯ ತಿಥಿಗಳ ಸಂತೋಷಾರ್ಥವಾಗಿ ಪ್ರಥಮೋಷಚಿಗೆ ಸಮ ಪಿಸಿದ 2 ರೂಗಳು ಚಿಕ್ಕಮಗ್ಳೂರು ಶ್ರೀ ರೇಣು ಸಿದ್ಧ ಶಿವಾಚಾರ್ಯ ಸ್ವಾಮಿಗಳವರ ದ್ವಾರಾ ಕಲ್ಪಿರು ತ್ತವೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ಶಿಕ್ಷಮಂಗಳವನ್ನೀಯಲೆಂದು ಪ್ರಾರ್ಥಿಸುತ್ತೇವೆ

ಶ್ರೀ ಜಗದ್ಗುರು ರೇಣುಕಭಗವತೆಪ್ಪಾದರನ್ನು ಕುರಿತು ಪಾಶ್ಚಿಮ್ಯರು

ಪರಶಿವಾಂಶಸಂಭೂತರಾದ ಶ್ರೀ ಜಗದ್ಗುರು ರೇಣುಕಾಚಾರ್ಯರು ಪ್ರತಿಯುಗದಲ್ಲಿಯೂ ಭೂಮಂಡಲದೊಳಗೆ ಅವತರಿಸಿ ತನಿಂತಾನಂತಶಿಲೀಲೆಗಳನ್ನು ಜನಾಂಗಕ್ಕೆ ತೋರ್ಪಡಿಸಿ ಶಿವನೇ ಸರ್ವೋತ್ತಮನೆಂದು ಸಾರಿ ಶಕ್ತಿವಿಶಿಷ್ಟಾದ್ವೈತ (ವೀರಶೈವ) ಮತವನ್ನು ಸ್ಥಾಪಿಸಿ ಅಗಸ್ತ್ಯಾದಿಮಹರ್ಷಿಗಳಿಗೂ, ಯತಿಗಳಿಗೂ, ರಾಜರಿಗೂ ಶಿವಸಿದ್ಧಾಂತವೆನ್ನು ಉಪದೇಶಿಸಿದ ವಿಷಯವು ಸರ್ವರಿಗೂ ವೇದ್ಯವಾಗಿದೆ ಈ ಭಗವತ್ಪಾದರು ಸಂಸ್ಕೃತದಲ್ಲಿ ರಚಿಸಿದ "ರೇಣುಕಸಿದ್ಧ ರಸಿರತ್ನಾಕರ" ಎಂಬ ಗ್ರಂಥವು ಈಗಲೂ ಒರ್ಮಿಯ ಲೈಬ್ರರಿಯಲ್ಲಿ ಇದೆ ಆದರ ಸಹಾಯ ದಿಂದ ಜರ್ಮನ್ನರು ಎಷ್ಟೋ ಹಳ್ಳಿಯ ನಿಘಂಟುಗಳನ್ನು ಪಡೆದಿದ್ದಾರೆ ಇವರ ಹೆಸರಿನಲ್ಲಿದ್ದ ಗ್ರಂಥಗಳು ಜರ್ಮನಿಯ ಬೇರೆ ಬೇರೆ ಲೈಬ್ರರಿಗಳಲ್ಲಿ ಇನ್ನೂ ಎಷ್ಟೋ ಇರುವಂತೆ ರೇಣುಕಸಿದ್ಧರಸರತ್ನಾಕರ ಗ್ರಂಥದ ಬೆಲೆ ೬೯ ರೂಪಾಯಿ ಇರುವದೆಂದಮೇಲೆ ಅದರಲ್ಲಿ ಎಂಥ ಮಹತ್ವದ ವಿಷಯಗಳಿರಬಹುದು ಧರ್ಮಾಭಿಮಾನಿಗಳೂ, ವೀರಾಚಾರ್ಯರೂ ಈ ಒಗ್ಗೆ ಹೆಚ್ಚಿನ ಕೂಡಲೆ ಪಡೆಯಿಸಿ ತರಬೇಕಷ್ಟಿದ್ದ ಆ ಮಹಾತ್ಮರ ಪವಿತ್ರ ಗ್ರಂಥಗಳನ್ನು ತರಿಸಿ ಜನಾಂಗಕ್ಕೆ ಅವರ ಮಹಿಮೆಯನ್ನು ತೋರ್ಪಡಿಸಿ ಕೀರ್ತಿಧ್ವಜವನ್ನಾಗಬೇಕು ಶ್ರೀ ರೇಣುಕ ಭಗವತ್ಪಾದರ ವಿಷಯಕ್ಕೆ ಸಂಸ್ಕೃತ, ಕನ್ನಡ ತೆಲಗು, ತಮಿಳು ಇಷ್ಟಿಷ್ಟು ಭಾಷೆಗಳಲ್ಲಿ ಅನೇಕ ಗ್ರಂಥಗಳು ರಚಿಸಲ್ಪಟ್ಟಿವೆ ಆಯಾ ಗ್ರಂಥಗಳ ಹೆಸರುಗಳನ್ನೂ, ಕರ್ತೃರನ್ನೂ, ಕಾಲಮಾನವನ್ನೂ ಇವರಿಯಲ್ಲಿ ಕೊಡಲಾಗಿದ

ನಮ್ಮ ತವಲ್ಲಿ

ಗ್ರಂಥ	ಕರ್ತೃ	ಕಾಲ (ಕ್ರಿಸ್ತಶಕ)
ಸ್ವಾಯಂಭುವಾಗಮ	(ಸಂಜಾಚಾರ್ಯೋತ್ಪತ್ತಿಪ್ರಕರಣಂ)	
ಸುಪ್ರಭೇದಾಗಮಃ	(ಗುರುಲಕ್ಷಣಪ್ರಕರಣಂ)	
ಪಾಶುಪತಕಂತ್ರಂ	(ಸಾಪ್ತಪ್ರಭಾಗಂ)	
ವೀರಾಗಮ		
ವೀರಶೈವೋಪನಿಷತ್	(ಯ ಒರ್ವೆ(ದಿ?ಯ)	
ಸಿದ್ಧಾಂತಶಿಖಾಮಣಿಃ	ಶಿವಯೋಗಿಶಿವಾಚಾರ್ಯ	೬೫೦
ರೇಣುಕ ಚಂಪೂಃ	ಉಶಿನಶಿವಗುರು	೯೫೦
ರೇಣುಕವಿಜಯ-ಚಂಪೂಃ	ಸಿದ್ಧನಾಥಶಿವಾಚಾರ್ಯ	೯೬೦
ರೇವಣಸಿದ್ಧಕಲ್ಪ	ಉಶನಶಿವಗುರು	೯೫೦
ಪ್ರತ್ಯಕ್ಷರೇಣುಕಂ	ರುದ್ರಮುನೀಶ್ವರ	೧೧೦೦
ಶ್ರೀಕರಭಾಷ್ಯಂ	ವೃಷಭಪಂಡಿತಾರಾಧ್ಯ	೧೦೬೦
ಶಿವಪ್ರಸಂಗರತ್ನಾಕರಃ	ವೃಷಭಲಿಂಗಶಿವಯೋಗಿ	೧೦೯೦
ಷಡ್ಭಕ್ತಸ್ಥಲಸಮುಚ್ಚಯಟೀಕಾ	ಗುಣರತ್ನ	೧೩೦೦
ನಾರಾಯಣೋಪನಿಷದ್ಭಾಷ್ಯಂ	ವೃಷಭಪಂಡಿತಾರಾಧ್ಯ	೧೪೦೦
ವೀರಶೈವಸದಾಚಾರಸಂಗ್ರಹಃ		
ಕವಿತಾಕ್ಷೀಯ ಟೀಕಾ	ಪಾಗನಾರ್ಯ	೧೪೫೦
ವೇದಾಂತಸಾರವೀರಶೈವ ಚಿಂತಾಮಣಿಃ	ನಂಜನಾರ್ಯ	
ತಂತ್ರಾಧಿಕಾರನಿರ್ಣಯಃ	ಭಟ್ಟೋಜಿದೀಕ್ಷಿತ	೧೬೫೦
ಜೋಗರೇಣುಕಸಂವಾದಃ	ಸೋಸಲೆ ರೇವಣಾರಾಧ್ಯ	೧೬೫೦
ಸಿದ್ಧಾಂತಶಿಖಾಮಣಿ ಟೀಕಾ	ಮಂಡಿತೋಟಾಚಾರ್ಯಗುರು	೧೬೫೦
ಕವಿಕಣ್ಠಾರಸಾಯನಂ	ಎಳಂದೂರು ಷಡಕ್ಷರಕವಿ	೧೬೫೫
ಧರ್ಮಚಿಂತಾಮಣಿಃ	ಷಡಕ್ಷರ ಮಂತ್ರಿ	೧೬೦೦
ವೀರಶೈವಾಚಾರಕೌಸ್ತುಭಃ	"	"
ಶಿವತತ್ತ್ವರತ್ನಾಕರಃ	ಕೆಳದಿ ಬಸವರಾಜ	೧೬೧೦
ಗುರುವಂಶಕಾವ್ಯಂ	ಶಾತಿ ಲಕ್ಷ್ಮಣಾಸ್ತ್ರೀ	೧೭೫೦

ಕನ್ನಡದಲ್ಲಿ

ಅಡಯ್ಯಗಳ ವಚನ	ಅಡಯ್ಯ	೧೧೯೮
ರೇವಣಸಿದ್ಧರಗಳೆ	ಹರಿಹರ	೧೧೯೦
ಸಿದ್ಧರಾಮೇಶ್ವರ ಪುರಾಣ	ರಾಘವಾಂಕ	೧೧೪೦
ಬಸವಪುರಾಣ	ಭೀಮಕವಿ	೧೩೬೦
ಸೌಂದರಪುರಾಣ	ಹೊಮ್ಮರಸು	೧೪೫೫
ಸಿದ್ಧೇಶ್ವರವಚನ	ತೋಂಟದಸಿದ್ಧಲಿಂಗಯತಿ	೧೪೬೦
ಪ್ರಭುದೇವರಪುರಾಣ	ಎಳಂದೂರು ಹರೀಶ್ವರ	೧೪೪೦
ರೇವಣಸಿದ್ಧಪುರಾಣ	ಚತುರ್ಮುಖ ಹೊಮ್ಮರಸು	೧೪೦೦
ವೀರಶೈವಾಮೃತಮಹಾಪುರಾಣ	ಗುಬ್ಬಿ ಮಲ್ಲಣಾರ್ಯ	೧೪೧೩
ರೇವಣಸಿದ್ಧೇಶ್ವರಕಾವ್ಯ	ಮಲ್ಲಣ್ಣಕವಿ	೧೪೧೩
ಕೆಳದಿನೃಪವಿಜಯ	ಲಿಂಗಣ್ಣಕವಿ	೧೪೫೦
ಸಿದ್ಧಾಂತಶಿಖಾಮಣಿ ಟೀಕಾ	ಉಜ್ಜಯಿನೀಕ	೧೪೫೦
ಸಂಗನಬಸವನ ವಚನ	ಬಸವಣ್ಣಂಗ	೧೫೫೦
ಚಿಕ್ಕಬಸವಪುರಾಣ	ಶಿವಪ್ರಸಾದಪಂಡಿತ	೧೫೫೪
ಶಾಲಜ್ಞಾನವಚನ		೧೬೦೦
ಶಿವಾಧಿಕ್ಯಪುರಾಣ	ಬಸವಲಿಂಗಕವಿ	೧೬೧೧
ನಿರಂಜನವಂತರತ್ನಾಕರ		೧೬೫೦
ಮಲಯರಾಜಚರಿತ್ರ	ಸಿದ್ಧಯ ಸಿದ್ಧಲಿಂಗ	೧೬೫೫
ವೃಷಭೇಂದ್ರ ವಿಜಯ	ಎಸ ಷಡಕ್ಷರಕವಿ	೧೬೫೫
ಸಿದ್ಧಾಂತಶಿಖಾಮಣಿ ಟೀಕಾ	ಸೋಸಲೆ ರೇವಣಾರಾಧ್ಯ	೧೬೬೦
ಚತುರಾಚಾರ್ಯಪುರಾಣ	ಸಂಪಾದನೆಯ ಪರ್ವತೇಶ	೧೬೯೦
ಚತುರಾಚಾರ್ಯ ಪ್ರಬಂಧ	ತಿಲಕಾಪುರ ಸೋಮಕವಿ	೧೭೦೦
ಬೀಮೇಶಾದ್ರಿಪುರಾಣ	(ರೇಣುಕಲೀಲಾವಿಲಾಸ)	
ಪಾಲುಮತಪುರಾಣ		
ರೇವಣಾಂಗತ್ಯ		
ರೇವಣಸಿದ್ಧಭಕ್ತಿಸಾರ	ತಿಪ್ಪರೆಟ್ಟಿಮಠದ ಮಹಾಂತಸ್ವಾಮಿ	೧೮೫೦
ವೀರಶೈವರತ್ನ	ಪಂಡಿತ ಕಾಶೀನಾಥಶಾಸ್ತ್ರೀ	೧೯೨೪
ಸಿದ್ಧಾಂತಶಿಖಾಮಣಿ (ಟೀಕಾ)	ಪಂಡಿತ ಕಾಶೀನಾಥಶಾಸ್ತ್ರೀ	೧೯೩೩
ಪಂಚಾಚಾರ್ಯಸ್ತೋತ್ರರತ್ನಾಕರ	"	೧೯೩೩
ಪಂಚಾಚಾರಾಸ್ತ್ರಪ್ರಭಾಕರ	(ಆಗಮಸಂಗ್ರಹ)	೧೯೩೪
ರೇಣುಕವಿಜಯ (ಗದ್ಯ)	ಪಂಗಿ ಗುರುಶಾಂತಶಾಸ್ತ್ರೀ	೧೯೩೯
ರೇಣುಕವಿಜಯ-ಪುರಾಣ	ತಂಬಳಗೂಡು ಶ್ರೀಕಂಠಶಾಸ್ತ್ರೀ	೧೯೩೩
ರೇಣುಕೇಶ್ವರ ವಚನ	ಮರಬದ ಗಂಗಾಧರತಿವಾಚಾರ್ಯ	೧೯೪೧

[ಇವಲ್ಲದೆ ಜೌಡದಾಪುರ ಲಕ್ಷ್ಮೇಶ್ವರ, ತಿರುವಾಳ ತಿಲಕಾಸಪ್ಪಗಳೂ, ಹಾಸನ, ಚಿತ್ರದುರ್ಗ, ತಿವಮೊಗ್ಗಾ ಜಿಲ್ಲೆಗಳ ತೆಲುವ ಶಾಸನಗಳೂ, ಪಂಚಾಚಾರ್ಯ ಪ್ರಭಾ, ತಿವಾಸುಭವ ಕರಣಾಸಾಹಿತ್ಯ ಮೊದಲಾದ ಪತ್ರಿಕೆಗಳೂ ಸಾಹಿತ್ಯಸಮಿತಿಗಳೂ, ಅಧುನಿಕ ಅನೇಕ ಗ್ರಂಥಗಳೂ, ಲೇಖನಗಳೂ ಅವಲೋಕನೀಯವಾಗಿವೆ]

ತೆಲುಗಿನಲ್ಲಿ

ಸಂಡಿತಾರಾಧ್ಯ ಚರಿತ್ರ	ಪಾಲ್ಕುರಿಕಿ ಸೋಮನಾಥರು	೧೧೪೦
ದ್ರಿಸದ ಸಿದ್ಧಾಂತಶಿಖಾಮಣಿ	ಚನ್ನ ವೆಗದ ನಾಗೇಶ್ವರಕವಿ	೧೪೫೦
ಕೊಲನುಪಾಕ ಮಪಾತ್ಯೆಯು	ಚಿತ್ರಾರು ಗಂಗಾಧರಕವಿ	೧೬೦೦
ರೇಣುಕಕಸ್ತವಂಪಮು	ಸತ್ಯಲಿಂಗಕವಿ	
ದ್ವಾದಶಾರಾಧ್ಯವಿಜಯವು	ಮು ವೀರಭದ್ರಾರಾಧ್ಯಕವಿ	೧೪೫೦
ಶ್ರೀವ ದ್ರೇಣುಕಾಚಾರ್ಯ ವಿಜಯಮು	ನೇಮಾನಪಸೂರ್ಯಪ್ರಕಾಶಕವಿ	೧೯೪೦
ಶ್ರೀ ರೇಣುಕಾಚಾರ್ಯಚರಿತ್ರ	ಬಂಡಾರು ತಮ್ಮಯ್ಯ	೧೯೪೧
ರೇಣುಕವಿಜಯಮು	ಸಪ್ಪಿ ಧಾನಮು ಸೂರ್ಯನಾರಾಯಣ ಶಾಸ್ತ್ರೀ	೧೯೪೨

[ವಿಭೂತಿ ಕೈವಲ್ಯಪುರಾಣ, ಕೈವಲಹಕ್ಕಬೋಧಿನಿ, ಮೊದಲಾದ ಪತ್ರಿಕೆಗಳ ಬರಹಗಳೂ, ಶೇಷಾದ್ರಿರಮಣರ ೨ ಲೇಖನಗಳೂ, ಕೊಲಚಲಶಾಸ್ತ್ರ, ಕೊಡುವಟಿಯರು ಶಾಸನಗಳೂ ಆಧಾರವಾಗಿವೆ]

ತಮಿಳಿಯಲ್ಲಿ

ವೇದೇಶ್ವರ (ನೀತಾಟೀಕಾ)	ಜ್ಞಾನಪ್ರಕಾಶ	೧೫೦೦
ಪರಮೇಶ್ವರಪ್ಪ	ಮನ್ಮಷಸ್ವಾಮಿ	೧೬೪೦
ಗುರುಲೀಲಾಸಂಗ್ರಹ		
ಶಾಶಿವಾಚಾರ್ಯ ಸ್ವಾಜೀನಪ್ಪ	ಜಿ ಮಗ ವೀರಭದ್ರಶಾಸ್ತ್ರೀ	೧೯೩೫
ಮಹೇಶ್ವರಿಗಳ ಚರಿತ್ರಕೋಶ	ಬಿ ಸಿದ್ಧೇಶ್ವರಶಾಸ್ತ್ರೀ	೧೯೩೭

[ವೀರಶೈವಕೌಸ್ತುಭ, ವೀರಶೈವ ಗರ್ಜನಾ ಮೊದಲಾದ ಪತ್ರಿಕೆಗಳು.]

ಹಿಂದಿಯಲ್ಲಿ

[illegible]	(ಶಲ್ಯಾಚಪತ್ರಿಕೆ)	೧೯೩೫

[ತಮಿಳಲ್ಲಿ ಎಷ್ಟೆಷ್ಟಿದೆಯೋ ತಿಳಿಯದು]

ಇಂಗ್ಲೀಷಿನಲ್ಲಿ

Vaishnavism and Saivism	Bhandarkar	1923
Religious gest of India	Forguchar	1926
Mysore Census Report		1910
Mysore Archeological Report		1926

ವರ್ತಮಾನ ಸಂಗ್ರಹ

ಅಧ್ಯಕ್ಷ ಸಿಂಗ್ಲ್ಯಾ ಠ್ಠೀಯವರ ಘೋಷಣೆ

ದಕ್ಷಿಣ ಕೊರಿಯದಾದ್ಯಂತ ಮಾರ್ಷಲ್ ಲಾ

ದಕ್ಷಿಣ ಕೊರಿಯದ ಅಧ್ಯಕ್ಷ ಸಿಂಗ್ಮ್ ಠ್ಠೀಯವರು ದಕ್ಷಿಣ ಕೊರಿಯದಾದ್ಯಂತ ಮಾರ್ಷಲ್ ಲಾ ಘೋಷಿಸಿದ್ದಾರೆ ದಕ್ಷಿಣ ಕೊರಿಯದ ಸೈನಿಕರಿಗೆ ಎಲ್ಲಾ ರಾಜಕೀಯ ಪಕ್ಷಗಳನ್ನು ಠ್ಠೀ ರದ್ದುಗೊಳಿಸಿದ್ದಾರೆ ಮತ್ತು ಅಮೆರಿಕ ಪ್ರವಾಸ ಠ್ಠೆಗೊಳ್ಳಲಿರುವ ದಕ್ಷಿಣ ಕೊರಿಯದ ಗಣ ಮಂತ್ರಿ ಸೇನಾಧಿಕಾರಿಗಳು (ಜನರಲ್) ತಮ್ಮ ಪ್ರವಾಸವನ್ನು ರದ್ದುಗೊಳಿಸಬೇಕೆಂದು ಆಜ್ಞೆ ನೀಡಿದ್ದಾರೆ.

ವಿದೇಶಗಳಲ್ಲಿರುವವರಿಗೆ ತಕೆ

ಸಿಂಗ್ಮ್ಯಾನ್ ರಿಯವರು ವಿಶೇಷ ಆಜ್ಞೆಯೊಂದನ್ನು ಹೊರಡಿಸಿ ಅಮೆರಿಕ ಸಂಯುಕ್ತಸಂಸ್ಥಾನದಲ್ಲಿರುವ ದಕ್ಷಿಣ ಕೊರಿಯಾದ ಚೀಫ್ ಆಫ್ ಸ್ಟಾಫರವರಾದ ಪೈಕ್ಸ್ ಯೂಸ್‌ರವರೂ ಮತ್ತು ವಿದೇಶಗಳಲ್ಲಿರುವ ದಕ್ಷಿಣ ಕೊರಿಯಾದ ಭೂ, ನೌಕಾ ಸೇನೆಯ ಅಧಿಕಾರಿಗಳೂ ತಕ್ಷಣ ಸ್ವದೇಶಕ್ಕೆ ಹಿಂತಿರುಗಬೇಕೆಂದು ಸೂಚಿಸಿದ್ದಾರೆ

ಉಳಿವು ಅಳಿವಿನಸಾಲು

ಅಧ್ಯಕ್ಷ ಠ್ಠೀಯವರು ಮಂತ್ರಿಮಂಡಲದ ರಹಸ್ಯ ಸಭೆಯನ್ನು ಕರೆದಿದ್ದರು ಸಭೆಯು ಪ್ರಡೆಯುತ್ತಿದ್ದಂತೆ ಕೊಠಡಿಯ ಬಳಿ ಸೈನಿಕರು ಸರ್ಪಾಹರವಿದ್ದರು "ಇದು ಅಳಿವಿ ಉಳಿವಿನ ಕಾಲ, ಸರ್ಕಾರದ ನಿರ್ಧಾರವನ್ನು ಪಾಲಿಸಬೇಕೆಂದು ರಂಕ್ಯಾಕ್ಷೆ ಮನವಿಮಾಡಿಕೊಳ್ಳುತ್ತೇನೆ' ಎಂದು ಠ್ಠೀ ತಿಳಿಸಿದರು ಈಗ ಹಾಕಿರುವ ಪರಿಷ್ಕರಣೆಗಳ ಆಧಾರದಮೇಲೆ ಯುದ್ಧವಿರಾಮ ಒಪ್ಪಂದಕ್ಕೆ ಸಹಿ ಹಾಕಿದರೆ ದಕ್ಷಿಣ ಕೊರಿಯವು ವಿಶಾಂಗಿಯಾಗಿ ಕಮ್ಯೂನಿಸ್ಟ್‌ರೊಡನೆ ಹೋರಾಡುವುದಾಗಿ ಸಿಂಗ್ಮ್ಯಾ ಠ್ಠೀ ಬೆದರಿಸಿದ್ದಾರೆ

ಸೂಯೆಜ್ ಸುದ್ಧಸ್ಥಿತಿ ನಪಿಸಲು ಸಾರ್ ಪ್ರಧಾನರು ಸಿದ್ಧ

ಕಾನ್ಸ್‌ನೆಲ್ಲ್ ಪ್ರಧಾನರ ಸಮ್ಮೇಳನದಲ್ಲಿ ಮುಖ್ಯ ಪ್ರಾಶ್ನೆಯ ಎರಡು ಮುಖ್ಯ ಮತ್ತು ಅಂಗ್ಲೋ-ಈಜಿಪ್ಶಿಯರ ವಿವಾದ ಇವು ಚರ್ಚೆಗೆ ಬರುವುವು ಬ್ರಿಟ್ ಮತ್ತು ಈಜಿಪ್ಟ್‌ಗಳ ವಿವಾದದಲ್ಲಿ ಮಧ್ಯಸ್ಥಿಕೆ ವಹಿಸಲು ಪಾಕಿಸ್ತಾನದ ಮುಖ್ಯಪ್ರಧಾನರಾದ ಮಿಸ್ಟರ್ ಮಹಮದಾಲಿಯವರು ಸಿದ್ಧರಿರುವರೆಂದು ತಿಳಿದು ಬಂದಿದೆ ಅವರು ಬ್ರಿಟ್‌ನ ಮಂತ್ರಿಪ್ರಧಾನರಾದ ಸರ್ ವಿನ್ಸ್ಟನ್ ಚರ್ಚಿಲ್‌ರವರೊಡನೆ ಬಾ ಫಿಮಸಗಳ ಕಾಲ ಮಾತುಕತೆ ನಡೆಸಿದರು.

ಕರ್ನಾಟಕಪ್ರಾಂತ್ಯದ ರಚನೆಯನ್ನು ಮುಂದೆ ಹಾಕುವ ಉದ್ದೇಶ ಸರ್ಕಾರಕ್ಕಿಲ್ಲ

ಗಡಿನಿರ್ಧಾರ ಸಮಿತಿಯು ಬಳ್ಳಾರಿ ತಾಲ್ಲೂಕಿನ ಪ್ರಶ್ನೆಯ ತಂಟೆಗೆ ಹೋಗುವುದಿಲ್ಲ ಎಂಬುದಾಗಿ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಭಾಷಣಮಾಡುತ್ತಾ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಎಸ್. ಎನ್. ಅಗರವಾಲರವರು ವಿವರಿಸಿದರು.

ಬಳ್ಳಾರಿ ತಾಲ್ಲೂಕಿನ ಭವಿಷ್ಯದ ಬಗ್ಗೆ ಇಷ್ಟ ಎಲ್. ಎಸ್. ಮಿಶ್ರಾರವರ ತೀರ್ಪಿನ ಬಗ್ಗೆ ಆಂಧ್ರಾಯಿಗಳು ವ್ಯಕ್ತಪಡಿಸಿರುವ ಅಭಿಪ್ರಾಯಗಳ ವಿಚಾರವಾಗಿ ಅವರು ತಮ್ಮ ವಿಷಾದವನ್ನು ವ್ಯಕ್ತಪಡಿಸಿದರು

ಬಳ್ಳಾರಿ ತಾಲ್ಲೂಕಿನ ಪ್ರಶ್ನೆಯಲ್ಲಿ ಗಡಿನಿರ್ಧಾರ ಸಮಿತಿಯು ಮತ್ತೊಮ್ಮೆ ತಲೆಹಾಕುವುದೆಂಬ ಬಯಕೆ ಸರಿಯಲ್ಲ ಈ ಹಿಂದೆ ಮಾಡಲಾದ ನಿರ್ಧಾರಗಳಿಗನುಗುಣವಾಗಿ ಸಂಬಂಧಗಳನ್ನು ನಿರ್ಣಯಿಸುವುದೇ ಗಡಿನಿರ್ಧಾರ ಸಮಿತಿಯ ಕರ್ತವ್ಯ.

ಈ ಬಗ್ಗೆ ಇನ್ನು ಮುಂದೆ ಚರ್ಚುವಿಕೆಯನ್ನು ನಡೆಸುವುದರಿಂದ ಆಂಧ್ರಪ್ರಾಂತ್ಯದ ಶೀಘ್ರ ರಚನೆಗೆ ಆತಂಕ ಉಂಟಾಗುವುದು ಅವ್ಯವಸ್ಥೆಯ ಸಮ್ಮಾವನೆ ನಾಶವಾಗುವ ಸಂಭವವನ್ನು ಉಂಟುಮಾಡಿ ಸಚಿವರುಗಳಾದುದು ಆಂಧ್ರ ಪ್ರಾಯಕರ ಕರ್ತವ್ಯ.

ಕರ್ನಾಟಕ ಪ್ರಾಂತ್ಯ ರಚನೆಯ ಪ್ರಶ್ನೆಯನ್ನು ಮುಂದೆ ಹಾಕಿ ಅಜಗ್ಗೆ ಆತಂಕವನ್ನುಂಟುಮಾಡುವ ಉದ್ದೇಶ ಸರ್ಕಾರಕ್ಕಿಲ್ಲ

ಆಂಧ್ರಪ್ರಾಂತ್ಯ ರಚನೆಯನಂತರ ಉಳ್ಳ ಸಮಸ್ಯೆಯ ಪ್ರಾಮುಖ್ಯವಾರು ಪುನರ್‌ವಿಂಗಡಣಾ ಪರಿಶೀಲನಾ ಸಮಿತಿಯನ್ನು ರಚಿಸಲಾಗುವುದು ಈ ಸಮಿತಿಯು ಒಂದು ವರ್ಷದೊಳಗೆ ವರದಿಯನ್ನು ಸಲ್ಲಿಸುವುದು ಎಂದು ಅವರು ಹೇಳಿದರು.

ಕರ್ನಾಟಕ ಪ್ರಾಂತ್ಯರಚನೆಗೆ ತಾಂತ್ರಿಯುತ ಸತ್ಯಾಗ್ರಹ

ಸಚಿವುವುದಾಗಿ ಶ್ರೀ ಕೆ. ಆರ್. ಶಾಸಂತ್

ಕರ್ನಾಟಕ ಪ್ರಾಂತ್ಯ ರಚನೆಗಾಗಿ, ತಾಂತ್ರಿಯುತ ಸತ್ಯಾಗ್ರಹ ಹಾಗೂ ನಿರಂತರಪ್ರಚಾರ ಠ್ಠೆಗೊಳ್ಳಲು ರಾಷ್ಟ್ರೀಯರೆಯುವ ಪಕ್ಷದ ಸರ್ವಪಕ್ಷ ಸಮ್ಮೇಳನ ನಿರ್ಧರಿಸಿದೆ ಅದಕ್ಕಾಗಿ ಸ್ವಯಂಸೇವಕರುಗಳನ್ನು ಸಂಗ್ರಹಿಸುವ ಕಾರ್ಯ ಪ್ರಾರಂಭವಾಗಿದೆ—ಎಂದು ಮದ್ರಾಸ್ ಮಾಜಿ ಸಚಿವರೂ, ಪ್ರಜಾ ಸೋಷಲಿಸ್ಟ್ ಮುಖಂಡರೂ ಆದ ಶ್ರೀ ಕೆ ಆರ್ ಶಾಸಂತ್‌ರು ಮೈಸೂರಿನ ಪತ್ರಿಕಾ ಸಮ್ಮೇಳನದಲ್ಲಿ ತಿಳಿಸಿದರು

ಪ್ರಾಂತರಚನೆಯ ವಿಚಾರವಾಗಿ ಮಾತನಾಡುತ್ತ "ಕರ್ನಾಟಕ ಪ್ರಾಂತ್ಯರಚನೆಯ ಅವಾವಾದಿಗಳಿಗೆ ಈಗ ಧಾರಿ ನೆಟ್ಟು ಬಿದ್ದಿದೆ, ಪ್ರಾಂತ್ಯರಚನಾ ವಿಷಯದಲ್ಲಿ ಉಳ್ಳ ತಾರಿತಾರ ಮಂತ್ರಿ ರಚನೆಯ ಆಶ್ವಾಸನೆ ಕೇವಲ ಆತ್ಮವರ ಕಣ್ಕೊರೆಸುವ ಠ್ಠೀ ಹೊರತು ಠ್ಠೆಯಲ್ಲಿ ಠ್ಠೆಯಿಲ್ಲ ಹಾಗೂ ಶಕ್ತಿಯಾಕೇಯ ಕಾರಣಗಳಿಗಾಗಿ ಕೆಲವು ನುಂದಿ ಕರ್ನಾಟಕ ವಿಶೇಷರಣವನ್ನು ವಿರೋಧಿಸಿದ್ದಾರೆ ಪ್ರಧಾಪಮಂತ್ರಿ ಪಂಡಿತ್ ನೆಹರೂರವರದೇ ಆದರೆ ಮಾತಿಗೇ ಕಿವಿಗೊಡುತ್ತಿದ್ದಾರೆ ಕರ್ನಾಟಕದ ವಿಚಾರದಲ್ಲಿ ಅವ ತೀಕ್ಷ್ಣದಲ್ಲೇ ಗಡಿನಿರ್ಧಾರಣಸಮಿತಿ ನೇಮಿಸಿದರೇ ನಮಗೆ ಸಮಾಧಾನ ಆದಲ್ಲದೆ, ಈ ಪ್ರಶ್ನೆಯನ್ನು ಉಚ್ಚ ಶಾಧಿಕಾರಮಂಡಲಿಗೆ ಬಿಡುವುವಾದರೆ ನಾವು ಅದನ್ನು ತೀವ್ರವಾಗಿ ವಿರೋಧಿಸುತ್ತೇವೆ"—ಎಂದು ತಿಳಿಸಿದರು,

ಮೈಸೂರನ್ನು ಳದು, ಹೊರಹಾಡೆ ಕರ್ನಾಟಕ ಪ್ರಾಂತರಚನಾ ಸಲಹೆ ಕ್ಕಿತಯಲ್ಲಿ ಸಾಧಿಸುವಂತೆಯೂ ಪ್ರಸ್ತಾವಿಸಿದ ಜಿಲ್ಲೆಯಲ್ಲಿ ಸಾಸಿಸುವ ಬಡಗ ಜನರೆಲ್ಲ ಉತ್ಸಾಹಿಗರು ಪ್ರಸ್ತಾವಿಸಿದ ಉತ್ಸಾಹಾಂಶಿಗೆ ಸೇರತಕ್ಕದ್ದು ಸಹಜವಾದುದು ಕರ್ನಾಟಕದ ವೈಸೂರೇತರ ಜನತೆಯಲ್ಲಿ ಪ್ರಾಂತ್ಯರಚನೆಗೆ ಇತ್ತುರವಿರುವುದು ಸ್ಪಷ್ಟವಾಗಿದೆ ಮೈಸೂರಿನಲ್ಲಿ ಸ್ವಲ್ಪ ಪ್ರಾತ್ಸಾಹವಿರುವುದು ಆದ್ದರಿಂದ ಪ್ರಾಂತ್ಯರಚನೆ ಬಗ್ಗೆ ಮೊದಲು ಮೈಸೂರಿನಲ್ಲಿ ಪ್ರಚಾರ ಠ್ಠೆಯಬೇಕು ಸಂಸ್ಥಾಪಕರಾದ ಕಾಂಗ್ರೆಸ್ ಪಕ್ಷದಲ್ಲೇ ಒತ್ತು ಇರುವುದು ಎಲ್ಲರೂ ಗೊತ್ತಾದ ವಿಚಾರ ಅಂತಹ ಪ್ರಾಣ ನೇತರದಲ್ಲಿ ಮುಖ್ಯಮಂತ್ರಿ ಶ್ರೀ ಹನುಮಂತಯ್ಯನವರು ಯಾವ ರೀತಿಯನ್ನೂ ವ್ಯಕ್ತಪಡಿಸುವುದೂ ಅವರಿಗೆ ಕಕ್ಷ್ಯನೇ ಸರಿ—ಎಂದು ಶ್ರೀ ಶಾಸಂತರು ತಿಳಿಸಿದರು

ವಿಕೇಂದ್ರೀಕರಣದ ಬಗ್ಗೆ ದಾವಣಗೆರೆ ನಿರ್ಣಯಕ್ಕೆ ಅಮೋದನೆ

ದಾವಣಗೆರೆ ಸಮ್ಮೇಳನದಲ್ಲಿ ಅಂಗೀಕೃತವಾದ ಕರ್ನಾಟಕ ವಿಕೇಂದ್ರೀಕರಣ ನಿರ್ಣಾಯಕವಾದ ಮತ್ತು ಅವಶ್ಯಕತೆ ನಿರ್ಣಯವನ್ನು ಮತ್ತು ಜೆಂಗಳೂರು ಬೃಹತ್ ಬಾರ್‌ಅಸೋಸಿಯೇಷನ್ ಸಾಮಾನ್ಯ ಸಂಘದ ಬೇಡಿಕೆಗಳಿಗೆ ಜೆಂಬಲ ಠೆಯಿಸುವ ನಿರ್ಣಯವನ್ನು ಜೆಂಗಳೂರು ಬೃಹ ಬಾರ್‌ಅಸೋಸಿಯೇಷನ್ ಸೇರಿದ್ದ ಬಹಿರಂಗ ಸಭೆಯಲ್ಲಿ ಅಂಗೀಕರಿಸಲಾಯಿತು ಕರ್ನಾಟಕ ಕಮ್ಯೂನಿಸ್ಟ್ ಪಾರ್ಟಿಯ ಶ್ರೀ ಎಲ್. ಎ ಖಾಜಾಶ್ಯಾಯರವರು ಅಧ್ಯಕ್ಷತೆ ವಹಿಸಿದ್ದರು ಪಾರ್ಟಿ ಮೆಂಬರ್ ಸಪತ್ಯದಾದ ಶ್ರೀ ಕೆ. ಆಜೆಂಟ್ ಪಂಬಿಷ್ಣ ರವರೂ ಭಾಷಣ ಮಾತಾಡಿದರು.

ಹೈದರಾಬಾದ್ ಸಂಸ್ಥಾನವನ್ನು ವಿಭಜಿಸಬೇಕು

ಹೈದರಾಬಾದ್ ಪ್ರದೇಶ ಕಾಂಗ್ರೆಸ್ ನಿರ್ಣಯ

ಹೈದರಾಬಾದ್ ಸಂಸ್ಥಾನವನ್ನು ವಿಭಜಿಸಿ ಆಯಾ ಭಾಷಾವಾರು ಪ್ರದೇಶಗಳನ್ನು ನೆರೆಹೊರೆಯ ಭಾಷಾವಾರು ಪ್ರಾಂತ್ಯಗಳಲ್ಲಿ ಸೇರಿಂದಬೇಕು ಈ ವಿಲೀನೀಕರಣ ಸಾನಲ್‌ಗಳದ ಕಾಂಗ್ರೆಸ್ ಅಧಿವೇಶನದ ನಿರ್ಣಯದಲ್ಲಿ ಸೂಚಿಸಲಾಗಿದೆ ವಿವಿಧ ಅಂಗಗಳಂತೆ ನಡೆಯಬೇಕೆಂಬುದೇ ಹೈದರಾಬಾದ್ ಪ್ರದೇಶ್ ಕಾಂಗ್ರೆಸ್ ಸಮಿತಿಯ ದೃಢ ಅಭಿಪ್ರಾಯ ದಕ್ಷಿಣ ಭಾರತದಲ್ಲಿ ಭಾಷಾವಾರು ಪ್ರಾಂತ್ಯಗಳ ಪುನರ್‌ವಿಂಗಡನೆಯ ಯೋಜನೆಯಲ್ಲಿ ಹೈದರಾಬಾದ್ ಸಂಸ್ಥಾನವನ್ನು ತಪ್ಪದೆ ಸೇರಿಸಬೇಕು ಎಂಬುದಾಗಿ ಹೈದರಾಬಾದ್ ಪ್ರದೇಶ್ ಕಾಂಗ್ರೆಸ್ ಕಾರ್ಯಸಿಶ್ಚಾಹಕ ಸಮಿತಿಯಲ್ಲಿ ಅಂಗೀಕೃತವಾದ ನಿರ್ಣಯದಲ್ಲಿ ವಿವರಿಸಲಾಗಿದೆ

ಹೈದರಾಬಾದ್ ಸಂಸ್ಥಾನದ ಪುನರ್‌ವಿಂಗಡನೆಯ ಪ್ರಶ್ನೆಗೆ ಸಂಬಂಧಿಸಿದ ಎಲ್ಲಾ ಆಂಗಗಳನ್ನೂ ಠೀಲಂಠಿಸಿ ಉಚ್ಚ ಶಾಮರ್ಥ್ಯದ ಸಮಿತಿಯ ಪರಿಶೀಲನೆಗೆ ಸೂಚಿಸುವ ಸಲುವಾಗಿ ಒಂದು ಉಚ್ಚಸಮಿತಿಯನ್ನು ನೇಮಿಸಲಾಗುವುದು

ಕರ್ನೂಲು ಆಂಧ್ರಪ್ರಾಂತದ ತಾತ್ಕಾಲಿಕ ರಾಜಧಾನಿ

ಆಕ್ಟೋಬರ್ ಒಂದನೆಯ ತಾರೀಖು ರಚನೆಯಾಗಲಿರುವ ಆಂಧ್ರಪ್ರಾಂತ್ಯದ ರಾಜಧಾನಿಯಾಗಿ ಠಾಯುಲು ನೀಮೆಯ ಕರ್ನೂಲು ಜಿಲ್ಲೆಯ ಮುಖ್ಯಷ್ಟಣಾಣದ ಕರ್ನೂಲನ್ನು ನಿರ್ಣಯಿಸಲಾಯಿತು

ಈ ಬಗ್ಗೆ ನಿರ್ಧಾರವನ್ನು ತೆಗೆದುಕೊಳ್ಳಲು ಇ ದಿಇ ಗಳಿಂದ ಮದ್ರಾಸಿನಲ್ಲಿ ನಡೆಯುತ್ತಿದ್ದ ಆಂಧ್ರರಾಷ್ಟ್ರ ಸಭಾಸದಸ್ಯರ ಸಮ್ಮೇಳನದಲ್ಲಿ ನಿರ್ಣಯವೊಂದು ಬಹು ಮತದಿಂದ ಅಂಗೀಕೃತವಾಯಿತು

ವಿಶಾಲಾಂಧ್ರ ಸ್ಥಾಪನೆಯ ಬಗ್ಗೆ ಹೈದರಾಬಾದ್ ಪ್ರದೇಶ್‌ಕಾಂಗ್ರೆಸ್ ಈಗಾಗಲೇ ಪ್ರಬಲ ತೀರ್ಮಾನಕ್ಕೆ ಬಂದಿರುವುದರಿಂದ ಕರ್ನೂಲನ್ನು ನಿರ್ಧರಿಸಿರುವುದು ಸೂಕ್ತವಾಗಿದೆ ಎಂಬುದಾಗಿ ಶ್ರೀ ಟಿ ವಿಶ್ವನಾಥಂರವರು ಹೇಳಿದರು

ಆಡಳಿತ ವಿಕೇಂದ್ರೀಕರಣವಾಗಬೇಕು

ಮೈಸೂರು ನಗರದಲ್ಲಿ ಶ್ರೀ ಶಾಸಂತರ ಭಾಷಣ

ಇಂದೀ ದೇಶದ ಹಣ ದೆಹಲಿಗೆ ಹರಿದುಹೋಗಿ ಅದರ ವಿನಿಯೋಗ ಕೇವಲ ಕೆಲವರ ಕೈಯ್ಯಲ್ಲಿ ಸೇರಿದೆ ಇದು ತಪ್ಪಬೇಕು ನಮ್ಮ ಹಣದ ವಿನಿಯೋಗ ನಮ್ಮಿಂದಲೇ ಆಗಬೇಕು ಆಗಮಾತ್ರ ಸಾಮಾನ್ಯ ಜನರಿಗೆ ಅನುಕೂಲವಾಗಿರು ಆಡಳಿತ ಆಡಳಿತದಲ್ಲಿ ಠೀಂದ್ರೀಯವಾಗಬೇಕು ಎಷ್ಟೆಯ ಅಗುಹೋಗುಗಳು ಆಯಾ ಪ್ರಾಂತ್ಯ ಗಳಾಗಬೇಕು ಆಯಾ ಜಿಲ್ಲೆಗಳಲ್ಲಿ, ಗ್ರಾಮಮಂಚಾಯಿತಿಗಳಲ್ಲಿ, ಆಡಳಿತ ಠೆಸಿಕ್ಕಬಹುದೆಂದು. ಅಂದೇ ದೇಶದ ಏಳಿಗೆ ಸಾಧ್ಯ—ಎಂದು ಮದರಾಸಿನ ಮಾಜಿ ಸಚಿವರೂ ಪ್ರಜಾಸೋಷಲಿಸ್ಟ್ ಮುಖಂಡರೂ ಆದ ಶ್ರೀ ಕೆ ರಾಮಕೃಷ್ಣ ಶಾಸಂತರು, ಮೈಸೂರು ಪುರಭವನ ಮೈದಾನದಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಘೂಡಿದರು.

ಪ್ರಾರಂಭದಲ್ಲಿ ಲೋಕಸಭೆ ಸದಸ್ಯರಾದ ಶ್ರೀ ಎಂ. ಎಸ್ ಗುರುಪಾದಸ್ವಾಮಿಯವರು ಭಾಷಣಮಾಡಿದರು. ಶ್ರೀಯುತರು ತಮ್ಮ ಭಾಷಣದಲ್ಲಿ ಇಂದಿನ ಕಾಂಗ್ರೆಸ್ ಆಡಳಿತವನ್ನು ಇಕ್ಷೇಪಿಸಿದರು.

ಕಾಂಗ್ರೆಸ್ ಕೆಲವರ ಕೈಸೇರಿದೆಯೆಂದೂ ಇವರೆಯು ಹೋ ಕೆಲವು ವ್ಯಕ್ತಿಗಳಾಗುತ್ತಿದೆ ಯೆಂದೂ ಘೂಡಿದರು, ಪಂಚವಾರ್ಷಿಕ ಯೋಜನೆಯು ಹೆಜ್ಜ ಉತ್ಪಕರಾಶದಲ್ಲೇ ಹೆಚ್ಚು ವಿನಿಯೋಗವಾಗುತ್ತಿದೆಯೆಂದೂ ಆರೋಪಿಸಿದರು ಶಾತಿವಲ್ಲೇ ಸಾಮಸಮತೆಗಳಾದ ಲಂಚಗುಳಿತನ, ಅವ್ಯವಸಗಳ ಅಧಾಡಳಿತ ಅಸಾಮರ್ಥ್ಯ ಮುಂತಾದುವುಗಳಿರುವುದೇ

ವಿಶ್ವಶಾಂತಿ, ಕೊರಿಯಾಸಮಸ್ಯೆಗೆ ಪರಿಹಾರ, ಈಜಿಪ್ಟಿನಲ್ಲಿ ಕ್ರಾಂತಿಸ್ಥಾಪನೆ ಮುಂತಾದ ಬಗ್ಗೆ ನೆಹ್ರು ಕೈಹಾಕುವುದು ಉಚಿತವಲ್ಲವೆಂದರು

ಮೈಸೂರು ಭಗವ ಪುರಭೆ ಮತ್ತು ಮೈಸೂರು ಜಿಲ್ಲಾ ಬೋರ್ಡು ಚುನಾವಣೆಗಳನ್ನು ಪಡೆಸದೇ ಮುಂದೆ ಹಾಕಿದುದು ಪ್ರಜಾಪ್ರಭುತ್ವದ ಚಿನ್ಹೆಯಲ್ಲವೆಂದರು. ಕಾಂಗ್ರೆಸ್ ಆಡಳಿತ ಹಾಗೂ ಕಮ್ಯೂನಿಸ್ಟ್ ಪಕ್ಷ ಇವೆರಡೂ ದೇಶದ ಎರಡು ಧೃವಗಳೆಂದೂ ಅವುಗಳಿಂದ ಜನತೆ ವಿಮುಕ್ತರಾಗಬೇಕೆಂದೂ ನುಡಿದರು

ಶ್ರೀ ಕಾರಂತರು ಮಾತನಾಡಿ ಕರ್ನಾಟಕ ಪ್ರಾಂತ್ಯ ರಚನೆಗೆ ಮಹಾತ್ಮ ಗಾಂಧೀಜಿಯವರ ಆಶೀರ್ವಾದ ವಿದ್ದಿತು ಕಾಂಗ್ರೆಸ್ ಸಂಸ್ಥೆಯು ಭಾಷಾವಾರು ಪ್ರಾಂತ್ಯ ರಚನೆಗಾಗಿ ೧೯೨೦ ರಲ್ಲೇ ಭಾಷೆ ಕೊಟ್ಟಿತ್ತು ಆದರೆ ತನ್ನ ವಚನ ಉಳಿಸಿಕೊಳ್ಳದೆ ಕೊಯಿತು ಭಾಷಾವಾರುಪ್ರಾಂತ್ಯ ರಚನೆಯಾಗದೇ ಭಾರತದಂಥ ದೊಡ್ಡ ರಾಷ್ಟ್ರದ ಆಡಳಿತವು ಸುಲಭವಾಗುವಾದುದು

೧೯೫೦ ರಲ್ಲಿ ಕಾಂಗ್ರೆಸ್ಸು ನಿರ್ಣಯ ಮಾಡಿ ಕರ್ನಾಟಕ ಪ್ರಾಂತ್ಯ ರಚನೆಗೆ ಮೈಸೂರನ್ನು ಒಪ್ಪಿಸಬೇಕೆಂಬ ಕೊತ್ತು ಹಾಕಿದೆ ಮೈಸೂರಿನವರು ಇದು ನ್ಯಾಯಾನ್ಯಾಯ ವಿಮರ್ಶೆಗೆ, ಪ್ರಾಂತ್ಯ ರಚನೆಗಾಗಿ ಕಣ ತೊಡಬೇಕು. ಮೈಸೂರಿನ ಹೊರಗಣ ಕನ್ನಡ ಜಿಲ್ಲೆಗಳು ಮೈಸೂರಿಗೆ ಸೇರುವುದರಿಂದ ಕನ್ನಡಿಗರಿಗೆ ಅನುಕೂಲವಿದೆ ಮಂಗಳೂರು ಜಿಲ್ಲೆಯೊಂದನ್ನೇ ಉದಾಹರಣೆಗೆ ಹೇಳುವುದಾದರೆ ಅಲ್ಲಿ ೬೪ ಹೈಸ್ಕೂಲುಗಳೂ, ೪ ಕಾಲೇಜುಗಳೂ ಇವೆ ಒಂದು ಪಾಲಿಟೆಕ್ನಿಕ್ ಸಹ ಇದೆ ೩೦ ಲಕ್ಷ ರೂ ಬೆಲೆಬಾಳುವ ಕಟ್ಟಡವಿದೆ ಸುಮಾರು ೨೦೦ ಎಕರೆ ಗರ್ವರ್ನ್ ಅರಣ್ಯವಿದೆ ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವಂತಹ ಜಲಕೂಲಗಳನೆ

ಪ್ರಾಂತ್ಯ ರಚನೆಯಾಗುವುದರಿಂದ, ಆಡಳಿತದಲ್ಲಿ ಕೇವಲ ಬೇರೆ ಒಂದು ಮತಸ್ಥರ ಪಾಪ ಪಂಗಡದವರ ಕೈ ಮೇಲಾಗುವುದೆಂಬ ಭಯ ಕೆಲವರಲ್ಲಿ ಮೂಡಿದೆ ಅದು ತಪ್ಪುಭಾವನೆ. ಕನ್ನಡದ ಎಲ್ಲ ಭಾಗಗಳೂ ಒಂದಾಗುವುದರಿಂದ ಯಾವುದೇ ಒಂದು ಪಂಗಡ ಮತ್ತೊಂದಕ್ಕಿಂತ ಹೆಚ್ಚಾಗಲಿ ಕಡಿಮೆಯಾಗಲೀ ಆಗಲಾರದು—ಎಂದು ನುಡಿದರು

ಪ್ರಜಾಸೋಷಲಿಸ್ಟ್ ಪಕ್ಷದ ಧ್ಯೇಯೋದ್ದೇಶಗಳನ್ನೂ ಆದಂ ಕಾರ್ಯಕ್ರಮವನ್ನೂ ತಿಳಿಸಿ, ಸಾರ್ವಜನಿಕರು ಪಿ. ಎಸ್ ಪಿ ಗೆ ಬೆಂಬಲ ಕೊಡಬೇಕೆಂದು ಮನವಿ ಮಾಡಿಕೊಂಡರು

ಕಾಂಗ್ರೆಸ್ ಸರ್ಕಾರದ ಆಡಳಿತ ನೀತಿಯನ್ನು ಟೀಕಿಸಿ, ಕಾಂಗ್ರೆಸ್ ಸಂಸ್ಥೆ ಕೇವಲ ಕೆಲವರ ಹಿಡಿತದಲ್ಲಿ ಸೇರಿಹೋಗಿದೆಯೆಂದೂ ಜನಸಾಮಾನ್ಯರ ವಿಶ್ವಾಸ ಕಳೆದುಕೊಂಡಿದೆಯೆಂದೂ ತಿಳಿಸಿದರು.

ಮಂಗಳೂರು ಬಂದರನ್ನು ಅಭಿವೃದ್ಧಿ ಪಡಿಸಲು ಕೇಂದ್ರದ ನಿರ್ಧಾರ

ಎಲ್ಲಾ ವಿಧವಾದ ಹವಾಮಾನ ಪರಿಸ್ಥಿತಿಯಲ್ಲಿಯೂ ಉಪಯೋಗಿಸಲು ಸಾಧ್ಯವಾಗುವ ರೀತಿಯಲ್ಲಿ ಮಂಗಳೂರು ಬಂದರನ್ನು ವೃದ್ಧಿಗೊಳಿಸಲು ಭಾರತ ಸರ್ಕಾರ ನಿರ್ಧರಿಸಿದೆ

ಮಂಗಳೂರು ಬಂದರಿನ ಒಳಭಾಗದಲ್ಲಿ ಈಗ ಬೇರೊಂದು ಬಂದರಿದೆ ಬಂದರಿನ ಪಶ್ಚಿಮದಲ್ಲಿ ರಸ್ತೆಯೂ ಇದೆ. ಒಳ ಬಂದರಿನ ಬಲ ಒಂದು ಅಡ್ಡಕಟ್ಟೆಯೂ ಇದೆ ಅದ್ದರಿಂದ ಅಲ್ಲಿಗೆ ಬರುವ ಹಡಗುಗಳು ಆ ಅಡ್ಡಕಟ್ಟೆಯ ಹತ್ತಿರ ನಿಲ್ಲಬೇಕಾಗುತ್ತಿದೆ ಹಡಗುಗಳಿಂದ ಪ್ರಯಾಣಿಕರನ್ನೂ ಮತ್ತು ಸಾಮಾನುಗಳನ್ನೂ ತೀರಕ್ಕೆ ಸಾಗಿಸಬೇಕಾಗುವುದು.

ಒಂದರಲ್ಲಿ ಅಬಿವೃದ್ಧಿಗೊಳಿಸಿದ ನಂತರ ಪಶ್ಚಿಮದ ತೀರದಲ್ಲಿ ಹೆಚ್ಚಿನ ಉಪಯೋಗ ಉಂಟಾಗುವುದು. ಈಗ ಬೋಟಾಯಿ ಮತ್ತು ಕೋಡಿಗಳ ಮಧ್ಯೆ ದೊಡ್ಡ ಬಂದರು ಯಾನವೂ ಇಲ್ಲ

ಈ ಯೋಜನೆ ಪೂರ್ಣವಾದನಂತರ ಮಂಗಳೂರು ಒಂದರಿಗೆ ಪ್ರತಿವರ್ಷವೂ ೫ ಲಕ್ಷ ರೂ ಗಳು ಉಳಿತಾಯವಾಗುವುದು.

ಎಲಿಜಬೆತ್ ರಾಣಿಯವರ ಕಿರೀಟಧಾರಣೆ ಮಹೋತ್ಸವ

ಲಂಡನ್ನಿನಲ್ಲಿ ಚಿರಸ್ಮರಣೀಯ ಸಮಾರಂಭ

ಬ್ರಿಟನ್ನಿನ ಮಹಾರಾಣಿ ಎಲಿಜಬೆತ್‌ರವರಿಗೆ ಕಿರೀಟ ಧಾರಣೆ ಮಹೋತ್ಸವವು ಜೂನ್ ೨ ರಂದು ಲಂಡನ್ನಿನ ಪುರಾತನವೂ ಚಿರಪ್ರಾಕಾರವೂ ಆದ ವೆಸ್ಟ್‌ಮಿನಿಸ್ಟರ್ ಆಬೆಯಲ್ಲಿ ಜಯಘೋಷಗಳ ವಾದ್ಯಗಳ ಮಧ್ಯೆ ವೈಭವದಿಂದ ನಡೆಯಿತು.

ಈ ಸಮಾರಂಭದ ವೈಭವವನ್ನು ಕಣ್ಣಿನಲ್ಲಿ ನೋಡಬೇಕೆ ವಿನಹ ಬರೆದು ವರ್ಣಿಸಲು ಸಾಧ್ಯವಿಲ್ಲವೆಂದು ಪತ್ರಿಕಾ ಪ್ರತಿನಿಧಿಗಳು ಅಭಿಪ್ರಾಯ ಪಡುತ್ತಿದ್ದರು.

ಬ್ರಿಟಿಷ್ ಮಹಾರಾಣಿಯವರು ಧರಿಸಿದ್ದ ನೆಯನ ಮನೋಹರವಾದ ಉಡುಪು ಕೀರ್ಟದಲ್ಲಿ ಪ್ರಕಾಶಿಸುತ್ತಿದ್ದ ಅಪೂರ್ವ ವಜ್ರವೈಡೂರ್ಯಗಳು ಮತ್ತು ವಾದ್ಯಗಳ ಕರ್ಣಾನಂದಕರವಾದ ನಿನಾದ ಇವು ವರ್ಣಾತೀತವಾಗಿದ್ದವು ಸಭೆಯಲ್ಲಿಸ್ಸೇರಿದ್ದ ವಿಶ್ವದ ನಾನಾ ರಾಜಾರಾಣಿಗಳ ಮತ್ತು ಇತರ ಸಭಿಕರ ಗಮನವು ಕೇವಲ ಎರಡು ಮಕ್ಕಳ ಶಾಯಿಯಾದ ಚಿಕ್ಕವಯಸ್ಸಿನ ಎಲಿಜಬೆತ್‌ರ ವರ ಕಡೆ ಕೇಂದ್ರೀಕೃತವಾಗಿತ್ತು.

ಎಲಿಜಬೆತ್‌ರವರು ಸುವರ್ಣರಥದಲ್ಲಿ ಬಕಿಂಗ್‌ಹ್ಯಾಂ ಅರಮನೆಯಿಂದ ಅಸಂಖ್ಯಾತ ಜನರಿಂದ ಮುಚ್ಚಿಹೋಗಿದ್ದ ರಾಜಬೀದಿಗಳ ಮೂಲಕ ಪುರಾತನವಾದ ವೆಸ್ಟ್ ಮಿನಿಸ್ಟರ್ ಆಬೆಗೆ ದಯಮಾಡಿಸಿದರು

ವೆಸ್ಟ್‌ಮಿನಿಸ್ಟರ್ ಆಬೆಯಲ್ಲಿ ಕ್ಯಾಂಟರ್‌ಬರಿಯ ಆರ್ಚ್‌ಬಿಷಪರವರು ಕಿರೀಟವನ್ನು ಎಲಿಜಬೆತ್‌ರವರ ತಲೆಯ ಮೇಲೆ ಅತಂಕ ನನ್ನ ಮತ್ತ ಪ್ರಜ್ಞಾಪೂರ್ವಕವಾಗಿ ಇರಿಸಿದರು

ಆರ್ಚ್‌ಬಿಷಪರವರು ಮಹಾರಾಣಿಯವರನ್ನು ಹೀಗೆ ಪ್ರಶ್ನೆ ಮಾಡಿದರು "ಮಹಾರಾಣಿಯವರೆ ಎಲಿಜಬೆತ್‌ರವರನ್ನು ನೀವು ರಕ್ಷಿಸಲಿ" ಎಂಬ ಜಯಘೋಷ ದಿಗ್ ತನ್ನನ್ನು ಮುಟ್ಟುವಂತೆ ಮೊಳಗಿತು

ಮಹಾರಾಣಿಯವರು ಜನಂಕರ ಪ್ರತಿಜ್ಞಾವಚನಕ್ಕೆ ಕೈಗೊ ಡರು ರಾಷ್ಟ್ರವಪ್ಪಿ ಆಸಾಮಾನ್ಯವಾಗಿ ಬಂದಿರುವ ಸಂಪ್ರದಾಯಗಳು ಮತ್ತ ಕಾನೂನುಗಳ ಪ್ರಕಾರ ರಾಜ್ಯ ಭಾರ ನಡೆಸುವ ನಿರ್ಧಾರವನ್ನು ಅಲಿಪ್ ತ್ರಿಯವನ್ನು ರಾಣಿಯವರ ಮೇಲೆ ಸಂಪ್ರೋಕ್ಷಿಸಿ ಆರ್ಚ್‌ರವರು ಆಶೀರ್ವದಿಸಿದರು

ಡ್ಯೂಕ್ ಆಫ್ ಎಡಿಬರ್ಗೋರವರು ಸಿಂಹಾಸನದ ಕೆಳಗಡೆ ಇದ್ದ ತಮ್ಮ ಸ್ಥಾನದಿಂದೆದ್ದು ತಮ್ಮ ಮಕುಟವನ್ನು ಶ್ರೀತಿವಪ್ಪಥಾರಿಯಾದ ಸೇವಕರಿಗೆ ಕೊಟ್ಟು ಸಿಂಹಾಸನದ ಎದು ಮೆಟ್ಟಿಲುಗಳನ್ನು ಹತ್ತಿ ತಮ್ಮ ಪುತ್ರ ಸ್ಥಾಲಂಯಿಂದ ನೋಡುತ್ತಿರುವಂತೆಯೇ ಕೆಂಪು ಮೆತ್ತೆಯೊಂದರ ಮೇಲೆ ಮಂಡಿಯೂರಿ ರಾಣಿಯವರಿಗೆ ಗೌರವ ಸಲ್ಲಿಸಿದರು

ಸಮಾರಂಭವು ಮುಕ್ತಾಯವಾದ ಮೇಲೆ ಸುವರ್ಣ ರಥದಲ್ಲಿ ಪತಿಯೊಡನೆ ಕುಳಿತು ಮೆರವಣಿಗೆಯಲ್ಲಿ ಬಕಿಂಗ್‌ಹ್ಯಾಂ ಅರಮನೆಗೆ ಹಿಂತಿರುಗಿದರು.

ಮೈದಾಹಿಟ್ಟು ರವೆ ತಯಾರಿಸಲು ನಿಷೇಧ

ಕೇಂದ್ರ ಸರ್ಕಾರದವರಾಗಿ ಸಂಸ್ಥಾನಗಳ ಸರ್ಕಾರದವರಾಗಿ ಅನುಮತಿ ಕೊಡದೆ ಯಾರೊಬ್ಬರೂ ಹಿಟ್ಟಿನ ಗಿರಣಿ ಮತ್ತು 'ಚಕ್ಕಿ' ಗಳಲ್ಲಿ ಸ್ವದೇಶಿ ಗೋಧಿಯಲ್ಲಿ ಮೈದಾಹಿಟ್ಟು, ರವೆ, ಸಣ್ಣರವೆ ಮೊದಲಾದುವುಗಳನ್ನು ತಯಾರಿಸಕೂಡದೆಂದು ಕೇಂದ್ರ ಸರ್ಕಾರ ನಿಷೇಧಾಜ್ಞೆ ಹೊರಡಿಸಿದೆ

ಮಂಜಿನ ಮಾನನ!

ಮಂಜಿನಿಂದ ನಿರ್ಮಿತವಾದ ಹಿಮಾಲಯ ಪರ್ವತದಲ್ಲಿ ಇರುವುದಾಗಿ ಹೇಳಲಾಗಿರುವ 'ಅರ್ಧ ಮಾನವ ಅರ್ಧ ಕಪಿ' ಯಂತಿರುವ ಮಂಜಿನ ಮಾನವನ ಕಾಲಿನ ಗುರುತುಗಳು ಎವರೆಸ್ಟ್ ಶಿಖರವನ್ನು ಹತ್ತಿದ ಕರ್ನಲ್ ಹಂಟ್‌ರ ತಂಡದವರಿಗೆ ಕಾಣಿಸಿರೇ ಇಲ್ಲವೆಂದು ಹೇಳಲಾಗಿದೆ

ಚೆಂದಾದಾರರಲ್ಲಿ ವಿನಂತಿ

ನಮ್ಮೀ ಪಂಚಾಚಾರ್ಯ ಪ್ರಭಾ ವಾರ ಪತ್ರಿಕೆಯ ವಾರ್ಷಿಕ ಚಂದಾ ೩ ರೂಪಾಯಿಗಳೆದ್ದು ಏ. ಪಿ ಜಾರ್ಡು ಇದೇ ಏಪ್ರಿಲ್ ೧ ನೆಯ ತಾರೀಖಿನಿಂದ (೧೯೫೩) ಏಳು ಆಣೆ ಬೆಂಳತ್ತು ಕಾಸು ಆಗಿದೆ ಆದ್ದರಿಂದ ನಾವು ವಿ ಪಿ ಮಾಡಿದರೆ ವಿ ಪಿ ಖರ್ಚುಸೇರಿ ೩ ೮ ೦ ಆಗುವುದು ಈ ದುಡ್ಡು ನಮ್ಮ ಕೈ ಸೇರಬೇಕಾದರೆ ಆಯಾ ಪೋಸ್ಟಾಫೀಸಿಗೆ ಎರಡು ಆಣೆ ಹೆಚ್ಚಿಗೆ ಕೊಡಬೇಕಾಗುವುದು. ಹೀಗಾಗಿ ಪ್ರತಿಯೊಬ್ಬ ಚೆಂದಾದಾರರಿಗೆ ಹತ್ತು ಆಣೆ ಖರ್ಚು ಬರುವುದು ಆದ್ದರಿಂದ ಚಂದಾದಾರರ ಅವಧಿ ಮುಗಿಯುವ ಒಂದು ವಾರ ಮುಂಚೆ ನಾವು ಪತ್ರಿಕೆಯಲ್ಲಿ ಸೂಚನೆಗಳನ್ನು ಕಳಿಸುತ್ತೇವೆ ಆ ಸೂಚನಾ ಕೂಡಲೇ ಮೂರು ರೂಪಾಯಿ ಗಳನ್ನು ಮನಿಯಾರ್ಡರ್ ಮಾಡಿದರೆ ಎರೆಡೇ ಆಣೆಮಲ್ಲು ದುಡ್ಡು ನಮ್ಮ ಕೈ ಸೇರುವುದಲ್ಲದೆ ಯಥಾಪ್ರಕಾರ ಪತ್ರಿಕೆಗಳೂ ನಿಮ್ಮ ಕೈ ಸೇರುತ್ತವೆ. ದಯವಿಟ್ಟು ಎಲ್ಲರೂ ಮನಿಯಾರ್ಡರ್ ಮಾಡಬೇಕು ಮನಿಯಾರ್ಡರ್ ಕಳಿಸದೆ ಇದ್ದವರಿಗೆ ಪತ್ರಿಕೆಗಳನ್ನು ನಿಲ್ಲಿಸಿಬಿಡುತ್ತೇವೆ. ಮನಿಯಾರ್ಡರ್ ಫಾರಿನ್ನಿಲ್ಲಿ ಹೆಸರು ಹಾಗೂ ಹಳೇ ರಿಜಿಸ್ಟರ್ ನಂಬರನ್ನು ತಿಳಿಸಬೇಕು ಹೀಗೆ ಮಾಡುವುದರಿಂದ ಚೆಂದಾದಾರರಿಗೆ ಉಳಿತಾಯವಾಗುವುದಲ್ಲದೆ ನಾವು ವಿ ಪಿ. ಮಾಡಿ ದಾರಿಕಾಯುವ ಗೊಂದಲ ತಪ್ಪುತ್ತದೆ ಸರ್ವ ಮಹಾಜನರೂ ನಾವು ಮಾಡಿಕೊಂಡ ವಿನಂತಿಯನ್ನು ಗಮನಕ್ಕೆ ತಂದು ಮೂರುರೂಪಾಯಿ ಚಿಂದಾಹಣವನ್ನು ಮನಿಯಾರ್ಡರ್ ರೂಪದಿಂದ ಸಲ್ಲಿಸುತ್ತೀರೆಂದು ನಂಬಿದ್ದೇವೆ

—ಸಂಪಾದಕರು.

Edited Printed and Published by Brahanmathadhyakaha Sri Mahadevaiah at Sri Panchacharya Electric Press, Sayaji Rao Road, Mysore.

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಧರಶಾಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮರಕ್ಕಿ ಸಾವಿರಾರು ಶಿಷ್ಯರ ಮನೆಗಳಿರುತ್ತಿದ್ದು, ಆ ಮಹಾಧಿಕಾರಿಗಳು ಎಮವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರಿ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದು ತೊಂಡು ಬರುತ್ತಿರುವರು. ಆದರೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಬಾನವನ್ನು ವಿಷಯಗಳನ್ನು ಬರೆದು ಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಬಂದುಬಿಡುವರು ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ ಇದನ್ನು ದೂರಮಾಡುವುದಕ್ಕೋಸ್ಕರ ಮೇಲ್ಕುಂಡ ಪುಸ್ತಕವನ್ನು ಪುನಃ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚೆನ್ನಾಗಿ ತೋರಿಸಲ್ಪಟ್ಟಿದೆ ಅದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿದ್ದಂತೆ ವಿವರ ವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ. ಬೆಲೆ ೧—೪—೦.

ಮ್ಯಾನೇಜರ:
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಭ್ಯಾಂ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಕೀಕಾಧಿಪರ್ । ಪಂಚಶ್ಲೋಕಪನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಮಕರ್ ಪರಿಲಸತ್ಪಂಚಾಕ್ಷರೀಮಂತ್ರೋದ್ಧರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸಂಸ್ಥಾಪಕರು—ನಾಗನೂರು ಬೃಹನ್ಮಠಾಧ್ಯಕ್ಷರಾದ ವೇದ ಪಂ॥ ಶ್ರೀ ಶಾಸ್ತ್ರೀಶಾಸ್ತಿತಾಸ್ತ್ರಿಗಳವರು.

ವಾರ್ಷಿಕ ಚಂದಾ ೩ ರೂ.] ಸಂಪಾದಕರು—ನಾಗನೂರು ಬೃಹನ್ಮಠಾಧ್ಯಕ್ಷರಾದ ಶ್ರೀ ಮಹಾದೇವಯ್ಯಸ್ವಾಮಿಗಳವರು [ವಿ ಪಿ ಖರ್ಚು ಸೇರಿ ೩ ರೂ ೬ ಆ.

ಸಂಪುಟ ೩೭] ಸೋಮವಾರ ತಾ॥ ೧೫ ನೇ ಜೂನ್ ೧೯೫೩ [ಸಂಚಿಕೆ ೫

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತಿದ್ದು, ಆ ಮಠಾಧಿಕಾರಿಗಳು ಏಳುವರ್ಷಕ್ಕೋ ಹತ್ತು ವರ್ಷಕ್ಕೋ ಒಂದುಸಾರಿ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದು ಕೊಂಡು ಬರುತ್ತಿರುವರು ಆದರೆ ಇವರು ತಮ್ಮ ಶರೀರಾರೋಗ್ಯಕ್ಕಾಗಿಯಾಗಲಿ ವಿಷಯಗಳನ್ನು ಬರೆದು ಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಬಂದುಬಿಡುವರು ಈ ಅವ್ಯವಸ್ಥೆಯಿಂದ ಅನೇಕ ಮಹನೀಯರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ ಇದನ್ನು ದೂರಮಾಡುವುದಕ್ಕೋಸ್ಕರ ನೇಲ್ಯಂಡ ಪುಸ್ತಕವನ್ನು ಪುನಃ ಮುದ್ರಣಗೊಳಿಸಿದ್ದೇವೆ ಇದ್ದರಲ್ಲಿ ಬರೆಯುವ ವಿಷಯಗಳ ವಿವರವು ಚೆನ್ನಾಗಿ ತೋರಿಸಲ್ಪಟ್ಟಿವೆ ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಆದರಲ್ಲಿದ್ದಂತೆ ವಿವರ ವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಸಾಡಿಕೊಳ್ಳಬೇಕು ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ. ಬೆಲೆ ೧೫—೪—೦.

ಮ್ಯಾನೇಜರ
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಸತ್ಪುರುಷನಹಾರ

[ಚಾತ್ರೋಪಕಾರರು ಅಭಿಪ್ರಾಯ ಪಡುವ ಲೇಖನಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ ಎಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡಬೇಕಾಗಿದ್ದು. —ಸಂ.]

ರಾಮೇಶ್ವರ ಯಾತ್ರೆಯಲ್ಲಿ ಕಂಡ ರಮಣೀಯ ನೋಟಗಳು

(ಲೇ.—ಸಂಗೀತಶಿಕ್ಷಕ ಸಿದ್ಧವನೌಡ ಕುಂಟಿನಕಾಳು)

ಪೃಥ್ವಿ, ಅಪ್ಪು, ತೇಜಸ್ಸು, ವಾಯು, ಆಕಾಶ ಇವು ಪಂಚತತ್ವಗಳು ಈ ಪಂಚತತ್ವಗಳಿಂದ ಕೂಡಿದ ಲಿಂಗ ಗಳು. ಕಂಚಿಯಲ್ಲಿರುವ ವಿಶಾಂಬ್ರೇಶ್ವರ ಲಿಂಗವು ಪೃಥ್ವಿ ಲಿಂಗವು ಈ, ಲಿಂಗವನ್ನು ನೋಡಿದರೆ ಪೃಥ್ವಿಲಿಂಗ ವೆಂದು ತಿಳಿಯುತ್ತದೆ. ಶ್ರೀರಂಗದಲ್ಲಿರುವ ಜಂಬುಕೇ ಶ್ವರ ಲಿಂಗವು ಅಪ್ಪುಲಿಂಗವು ಈ ಲಿಂಗವನ್ನು ನೋಡಿ ದರೆ ಅಪ್ಪುಲಿಂಗವೆಂದು ತಿಳಿಯುತ್ತದೆ ಅರುಣಾಚಲದ ಲ್ಲಿರುವ ಅರುಣಾಚಲೇಶ್ವರ ಲಿಂಗವನ್ನು ನೋಡಿದರೆ ಅಗ್ನಿಲಿಂಗವೆಂದು ತಿಳಿಯುತ್ತದೆ. ಕಾಳಹಸ್ತಿಯಲ್ಲಿರುವ ಕಾಳಹಸ್ತೇಶ್ವರ ಲಿಂಗವನ್ನು ನೋಡಿದರೆ ವಾಯುಲಿಂಗ ವೆಂದು ತಿಳಿಯುತ್ತದೆ ಚಿದಂಬರದಲ್ಲಿರುವ ಚಿದಂಬರೇ ಶ್ವರನನ್ನು ನೋಡಿದರೆ ಆಕಾಶಲಿಂಗವೆಂದು ತಿಳಿಯು ತ್ತದೆ. ಈ ಲಿಂಗಗಳೆಲ್ಲವೂ ಪಂಚತತ್ವಗಳಿಂದ ಕೂಡಿರು ವವು ಎಂಬುದಕ್ಕೆ ಈ ಲಿಂಗಗಳೇ ನಿದರ್ಶನವಾಗಿವೆ. ತಿವಳಿಯಲ್ಲಿರುವ ದೇವಾಲಯಗಳು ವಿಶಾಂಬ್ರೇಶ್ವರ, ಕಾಮಾಕ್ಷಿದೇವಿ, ಸಹಸ್ರಲಿಂಗ. ವಿಷ್ಣುಕಂಚಿಯಲ್ಲಿರುವ ದೇವಾಲಯಗಳು ವರದರಾಜ, ಧನಲಕ್ಷ್ಮಿ, ಪರಿಸಿಂಹ ದೇವರು. ಶ್ರೀರಂಗದಲ್ಲಿರುವ ದೇವಾಲಯಗಳು ರಾಮ, ಲಕ್ಷ್ಮಣ, ಸೀತೆ, ತ್ರಿರಂಗೇಸ್ವಾಮಿ, ಜಂಬುಕೇಶ್ವರ, ಅಖಿ ಲಾಂಡೇಶ್ವರ. ಅರುಣಾಚಲದಲ್ಲಿರುವ ದೇವಾಲಯಗಳು, ತೀರ್ಥಗಳು ಅರುಣಾಚಲೇಶ್ವರ, ಅಪಿತಕುಚಾಂಬಾ, ಸ್ಕಂದಸ್ವಾಮಿ, ಗಣಪತಿ, ರಮಣಮುನಿ ಆಶ್ರಮ, ಪ್ರತ್ಯ ತೀರ್ಥ, ಗಂಗಾತೀರ್ಥ, ಅಗ್ನಿಕುಂಡ ಕಾಳಹಸ್ತಿಯಲ್ಲಿ ರುವ ದೇವಾಲಯಗಳು ಕಾಳಹಸ್ತೇಶ್ವರ, ಕಾತಿಪ್ಪಿಗ್ಗ, ಮಲಯಾಳ ಸ್ವಾಮಿ, ಕಣ್ಣಪ್ಪ ಚಿದಂಬರನಲ್ಲಿರುವ ದೇವಾಲಯಗಳು. ತೀರ್ಥಗಳು ಪರಮಾತ್ಮನು ತಾಂಡವ ನಾಡುತ್ತಿರುವ ನಟರಾಜಮೂರ್ತಿ, ಚಿದಂಬರ ರಹಸ್ಯ, ತಿವಕಾಮೇಶ್ವರಿ, ಮಾಣಿಕ್ಕೇಶ್ವರ, ಸ್ವಂದಸ್ವಾಮಿ, ಶಿವ ಗಂಗಾತೀರ್ಥ. ಮಧುರೆಯಲ್ಲಿರುವ ದೇವಾಲಯಗಳು ಮಿನಾಕ್ಷಿದೇವಿ, ಸುಂದರೇಶ್ವರ, ಸಂತಾನಗಣೇಶ, ನಟ ರಾಜ, ಸುಬ್ರಹ್ಮಣ್ಯ ಪಳನಿಯಲ್ಲಿರುವ ದೇವಾಲಯ ಗಳು ಸುಬ್ರಹ್ಮಣ್ಯಸ್ವಾಮಿ(ಗುಡ್ಡದಮೇಲೆ) ಜೀನಲಪ ಟ್ಟಿಣದಲ್ಲಿರುವ ದೇವಾಲಯಗಳು ಈಶ್ವರ ದೇವಾಲಯ. ಪಕ್ಷಿತೀರ್ಥ. ಕುಂಭಕೋಣದಲ್ಲಿರುವ ದೇವಾಲಯಗಳು, ತೀರ್ಥಗಳು ಕುಂಭೇಶ್ವರ. ಕಾಂಗಳಾಂಬಾ, ಷಣ್ಮುಖ, ಗಜಾಸನ, ಕುಂಭತೀರ್ಥ. ವೈದ್ಯನಾಥದಲ್ಲಿರುವ ದೇವಾ ಲಯಗಳು, ತೀರ್ಥಗಳು ವೈದ್ಯನಾಥೇಶ್ವರ, ಶೈಯಲ್ ನಾಯಕಿ, ನಟರಾಜ, ಅಂಗಾರಕಸ್ವಾಮಿ, ಕುಮಾರ ಸ್ವಾಮಿ, ಗಣೇಶ, ಚಿತ್ರಾಮೃತತೀರ್ಥ ತಂಜಾವೂರಲ್ಲಿರು ವ ದೇವಾಲಯಗಳು ಬೃಹದೀಶ್ವರಸ್ವಾಮಿ, ಬೃಹನ್ನಾ ಯಕಿ, ಸುಂದರಸ್ವಾಮಿ, ಗಣಪತಿ, ದೊಡ್ಡನಂದಿ ಸೋ ಏಂದರಾಜ ಪಟ್ಟಣ (ತಿರುವಕರೆ) ವರದರಾಜ, ವೆಂಕಟೇ ಶ್ವರ, ಶ್ರೀದೇವಿ, ಭೂದೇವಿ

ಶ್ರೀ ರಾಮನು ಸ್ಥಾಪನೆಮಾಡಿದ ಕಾರಣ ರಾಮೇ ಶ್ವರ ಲಿಂಗವೆಂದು ಪ್ರಸಿದ್ಧಿಯಾಯಿತು. ಈ ಲಿಂಗವು ದ್ವಾದಶಲಿಂಗಗಳ ಪೈಕಿ ಸೇರಿರುತ್ತದೆ. ಈ ಕ್ಷೇತ್ರದಲ್ಲಿ ಎ೮ ತೀರ್ಥಗಳಿರುತ್ತವೆ.

ಗುರುಭಕ್ತಿಪೆಚ್ಚಬೇಕಾ ಮಾರುತಿಗಲ್ಲುವೇ?

ಪರಮೇಶ್ವರನ ಫಾಲಾಕ್ಷದಿಂದೊಡೆದು ದಕ್ಷಪ್ರಜ್ಞೆಯ ಶಿರಹರಿದು ವೈಸಿಂಹನ್ನು ಶರಭಾನಚಾರದಿಂದ ಸಂಹರಿಸಿದ ಶ್ರೀ ವೀರೇಶ ತತ್ಪ ಪ್ರಿಯಶಿಷ್ಯರಾದ ಮಾರುತಿಗೆ ಇಷ್ಟಲಿಂಗವನ್ನು ಕೊಟ್ಟು ಉದ್ಧರಿಸಿದರು. ಶ್ರೀತಾ ಯುಗದಲ್ಲಿ ದಶರಥನಂದನನ ಪ್ರಿಯಭಕ್ತನಾಗಿ ಎಷ್ಟೋ ಕಾಲದವರೆಗೆ ನೂರಾರು ಯೋಜನಾದೂರ ಸೇವೆಮಾಡಿದನು ಆತನಿಗೆ ಮಾರುತಿಯು ರಾಮನ ಸೇವೆಯನ್ನು ಕೊಡಿಸಿದು ಪಂಚಾ ಪರೀಷರಿಗೆ ಒಂದು ವಿರೂಪಾಕ್ಷನನ್ನು ಕುರಿತು ತಪಸ್ಸು ಮಾಡಿದನು ವಿರೂಪಾಕ್ಷನು ಮಾರುತಿಯ ತಪಸ್ಸಿಗೆ ಮೆಚ್ಚಿ ತನ್ನ ಪುತ್ರನಾದ ಉದ್ದಾಕ ವೀರಭದ್ರದೇವರ ಆಡಿಗೆ ಳಿಸಿಹಿಸಿದನು. ಆಗ ಅನನು ತಂದೆಯ ಅಜ್ಞೆಯ ಮೇರೆಗೆ ಶಿವೀಕ್ಷೆಯನ್ನು ಕೊಟ್ಟು ಳಿಸಿಹಿಸಿದನು ಒಂದಾನೊಂದು ದಿವಸ ಪರಮಾತ್ಮನು ಕೈಲಾಸದಲ್ಲಿ ಉನೆಯೊಡನೆ ಸುಖಾಸೀನನಾಗಿ ಉಳಿದವರ ಸಮಯ ದಲ್ಲಿ ಗಂಧರ್ವರು ಗಾನವನ್ನು ಮಾಡುತ್ತಿದ್ದರು ಅವನ್ನು ಕಂಡು ಮಾರುತಿಯು ಗಂಧರ್ವರಿಗಿಂತಲೂ ಮಿಗಿಲಾಗಿ ಗಾನವನ್ನು ಮಾಡಿದನು ಅಷ್ಟರೊಳಗೆ ಸಭಾ ವಿಸರ್ಜನೆ ಯಾಯಿತು. ಪರಮಾತ್ಮನು ಗಾನಪ್ರಿಯನಾಕರುದಂದ ಮಾರುತಿಗೆ ಇನ್ನಷ್ಟು ಗಾಯಪ್ರವಾಹವಾಡಿಂದು ಪೇಳಿದನು ಅಗ್ಗೆ ಮಾರುತಿಯು ನನಗೆ ಗುರುಗಳ ಅಜ್ಞೆಯಾಗಿರು ತ್ತದೆ. ನನ್ನ ತಿವಪೂಜಾನುಷ್ಠಾನ ಸಮಯವು ಸಮೀಪಿ ಸಿತು. ಎಂದು ಹೇಳಿದನು ಆಗ ಪರಮಾತ್ಮನು ನೀನು ಧರಿಸಿರುವ ಇಷ್ಟಲಿಂಗವು ನಾನಲ್ಲವೇ ? ಎಂದು ಹೇಳಲು ಮಾರುತಿಯು ಆ ಮಾತಿಷ್ಟು ಲಕ್ಷ್ಯಕ್ಕೆತಾರದೆ " ಹರ ಮುಖದಿರೆ ಗುರುಕಾಯ್ವನು " ಎಂಬ ನೀತಿಯ ವಾಕ್ಯಕ್ಕೆ ಅನುಸರಿಸಿ ಅನುಷ್ಠಾನಕ್ಕೆ ತೆರಳುವವನಾದನು. ಸ್ನಾನ ಮಾಡಿ ಅನುಷ್ಠಾನಮಾಡಿದ ಸಮಯದಲ್ಲಿ ತನ್ನ ಸಜ್ಜೆ ಕೆಯೊಳಗಿಷ್ಟ ಲಿಂಗವನ್ನು ನೋಡಲಾಗಿ ಕಾಣದಿರಲು ಭಯಭ್ರಾಂತನಾಗಿ ತಮ್ಮ ಗುರುಗಳ ಸನ್ನಿಧಿಗೆ ಹೋಗಿ ವಿಚ್ಛೆಸಿದನು ಗುರುಗಳು ತಮ್ಮ ಫಾಲನೇತ್ರ ದಿಂದ ಮರಳಿ ಇಷ್ಟಲಿಂಗವನ್ನು ತರಿಸಿಕೊಟ್ಟರು ನಮ್ಮ ವೀರಶೈವಸಂಪ್ರದಾಯ ಮಾರುತಿಯ ಗುರುಭಕ್ತಿಯಂತೆ ನಡೆದು ಮುಕ್ತಿಭಾಜನವಾಗಬೇಕು

ಪುಸ್ತಕ ಗುರುವರ್ಗ ದರ್ಪಣ

ಈ ಗ್ರಂಥದಲ್ಲಿ (೧) ಪಂಚಪೀಠಗಳಪರಂಪರೆಯು (೨) ಪಟ್ಟಾಭಿಷಿಕ್ತಾಧಿಕಾರಿಗಳಪರಂಪರೆಯು (೩) ಮಹಾಧಿಕಾರಿ ಗಳ ಪರಂಪರೆಯು (೪) ಸಂಕೀರ್ಣಭಾಗ (ಇದರಲ್ಲಿ ವೀರ ಶೈವರಿಗೆ ಅಮೂಲ್ಯವಾದ ವಿಷಯಗಳಿವೆ) ಈ ಪ್ರಕಾರ ನಾಲ್ಕು ಭಾಗಗಳು ರಚಿಸಲ್ಪಟ್ಟಿವೆ. ಇದನ್ನು ಸರ್ವರೂ ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ ಧನ್ಯರಾಗಬೇಕೆಂದು ಆಶಿಸುತ್ತೇವೆ

ಬೆಲೆ ಗಟ್ಟಿ ೩-೦-೦ ರೂ. ವಿ.ಪಿ. ಖರ್ಚು ಹೆಚ್ಚು ಮುಂಚಿತವಾಗಿ ಸದರಿ ರೂ ಗಳನ್ನು ಕಳುಹಿಸಿದಲ್ಲಿ ಪೋಸ್ಟುದ್ವಾರ ರವಾನೆಮಾಡಲಾಗುವುದು.

ವಿಳಾಸ—ಪುರಾಣಿಕಮಠದ ವಿರೂಪಾಕ್ಷಶಾಸ್ತ್ರಿಗಳು
ಪೋ॥ ಹಿರೇಹಡಗಲಿ
ತಾ॥ ಬಳ್ಳಾರಿ

ಚಂದಾದಾರರಲ್ಲಿ ವಿನಂತಿ

ನಮ್ಮೀ ಪಂಚಾಚಾರ್ಯ ಪ್ರಭಾ ವಾರ ಪತ್ರಿಕೆಯ ವಾರ್ಷಿಕ ಚಂದಾ ೫ ರೂಪಾಯಿಗಳೆದ್ದು ವಿ ಪಿ ಚಾರ್ಜು ಇದೇ ಏಪ್ರಿಲ್ ೧೫ನೆಯ ತಾರೀಖಿನಿಂದ (೧೯೫೩) ಏಳು ಆಣೆ ಒಂಭತ್ತು ಕಾಸು ಆಗಿದೆ ಆದ್ದರಿಂದ ನಾವು ವಿ ಪಿ ಮಾಡಿದರೆ ವಿ ಪಿ ಖರ್ಚುಸೇರಿ ೫೮೦ ಆಗುವುದು ಈ ದುಡ್ಡು ನಮ್ಮ ಕೈ ಸೇರಬೇಕಾದರೆ ಆಯಾ ಪೋಸಾಪೀಸಿಗೆ ಎರಡು ಆಣೆ ಪೆಟ್ಟಿಗೆ ಕೊಡಬೇಕಾಗುವುದು ಹೀಗಾಗಿ ಪ್ರತಿಯೊಬ್ಬ ಚಂದಾದಾರರಿಗೆ ಹಣ್ಣು ಆಣೆ ಖರ್ಚು ಬೀಳುವುದು ಆದ್ದರಿಂದ ಚಂದಾದಾರರ ಅವಧಿ ಮುಗಿಯುವ ಒಂದು ವಾರ ಮುಂಚೆ ನಾವು ಪತ್ರಿಕೆಯಲ್ಲಿ ಸೂಚನೆಗಳನ್ನ ಕಳಿಸುತ್ತೇವೆ ಆ ಪ್ರಕಾರ ಕೂಡಲೇ ಮೂರು ರೂಪಾಯಿಗಳನ್ನು ಮನಿಆರ್ಡರ್ ಮಾಡಿದರೆ ಎರಡೇ ಆಣೆಯಿಲ್ಲಿ ದುಡ್ಡು ನಮ್ಮ ಕೈ ಸೇರುವಷ್ಟಲ್ಲಿ ಯಾತಾಪ್ರಕಾರ ಪತ್ರಿಕೆಗಳೂ ನಿಮ್ಮ ಕೈ ಸೇರುತ್ತವೆ ದಯವಿಟ್ಟು ಎಲ್ಲರೂ ಮನಿಆರ್ಡರ್ ಮಾಡಬೇಕು ಮನಿಆರ್ಡರ್ ಕಳಿಸದೆ ಇದ್ದವರಿಗೆ ಪತ್ರಿಕೆಗಳನ್ನು ನಿಲ್ಲಿಸಿಬಿಡುತ್ತೇವೆ ಮನಿಆರ್ಡರ್ ಫಾರಮ್ಮುಗಳಲ್ಲಿ ಹೆಸರು ಹಾಗೂ ಹಳೇ ರಿಜಿಸ್ಟರ್ ನಂಬರನ್ನ ತಿಳಿಸಬೇಕು ಹೀಗೆ ಮಾಡುವುದರಿಂದ ಚಂದಾದಾರರಿಗೆ ಉಳಿತಾಯವಾಗುವುದಲ್ಲದೆ ನಾವು ವಿ ಪಿ ಮಾಡಿದ ರಿಕಾಮಿ ವನ್ನ ಕೊಂಡರಿಯಾ ತಪ್ಪಿತ್ತಾದೆ ಸದ ಮಹಾಸೀ ಮೂ ನಾವು ಮಾಡಿಕೊಂಡ ವಿನಂತಿಯನ್ನು ಗವನಕ್ಕೆ ತೆಂದ ಮೊರು ರೂಪಾಯಿ ಚಂದಾಕಣಗನ್ನು ಮನಿಆರ್ಡರ್ ರೂಪದಿಂದ ಸಲ್ಲಿಸುತ್ತೀರೆಂದು ನಂಬಿದ್ದೇವೆ

—ಸಂಪಾದಕರು

ಪಂಚಾಚಾರ್ಯ ಪ್ರಭಾ
ಗುರುವಾರ ತಾ|| ೧೮ನೇ ಜೂನ್ ತಾ|| ೨೫ನೇ ಸೋಮವಾರ

ಸಂಸ್ಕೃತಿಯು ಭಾರತದ ಅಡಿಗಲ್ಲು

ಪ್ರಸಂಚವು ಭಗವಂತನ ಲೀಲಾನಾ ಕವೆ ಎಂದು ಶಾಸ್ತ್ರವು ಸಂಸ್ಕೃತಿಯು ಪ್ರಪಂಚದ ಅಡಿಗಲ್ಲು ಜಗನ್ನಿಯಾಮಕನಾದ ಆ ಜಗನ್ನಿಯಂತನು ವೇದರವ್ಯ ತೆಯಾದ ಈ ಸಂಸ್ಕೃತಿಯನ್ನ ತಂದಿತ್ತಿಯ ಳಿಂದಲೂ ಗುರು ಮುಖದಿಂದಲೂ ಗುಹಿಮ ಖದಿಂದಲೂ ಮಾನವ ಜನಾಂಗಕ್ಕೆ ಬೋಧಿಸ್ಪಟ್ಟು ಆಚರಣೆಯಿಲ್ಲಿ ತಂದಿರುವದು ಸರ್ವರಿಗೂ ನೇಮ್ಯವಾಗಿದೆ ಯಾವದೇ ರಾಷ್ಟ್ರವಾಗಲಿ ದೇಶವಾಗಲಿ ಅಲ್ಲಿ ಒಮ ಸಂಸ್ಕೃತಿ ಇರುವುದು ಆದರೆ ಭರತಖಂಡದಲ್ಲಿ ಮಾತ್ರ ಹಿಳ್ಳು ವಯಸ್ಸಿನಲ್ಲಿಯೇ ಮಕ್ಕಳಿಗೆ ತಾಯಿ ತಂದೆಗಳ ಉತ್ತಮ ಸಂಸ್ಕೃತಿಯು ಪ್ರಾರಂಭವಾಗಿ ಧರ್ಮ ಶ್ರದ್ಧೆ, ಮಾತಾ ಪಿತೃ ಗುರುಭಕ್ತಿ, ಹಿರಿಯರಲ್ಲಿ ಆದರ, ಅಹಿಂಸೆ ಸರೋಷಕಾರ, ಸತ್ಯ, ಶಾಂತಿ, ನಯ, ವಿನಯಾದಿ ಸಕಲ ಸದ್ಗುಣಗಳು ಹೃದಯಂಗಮವಾಗಿ ವ್ಯಾಪಿಸಿ ಸುಖ-ಸಂತೃಪ್ತಿಗಳಿಲ್ಲಿ ಮೆರೆದೆದ್ದಿಲ್ಲಿ ಸಂಸ್ಕೃತಿಯು ಭಾರತದ ಅಡಿಗಲ್ಲಾಯಿತು ಆದರೆ ಇತ್ತೀಚೆಗೆ ರಾಜದರ್ಶನ, ದೇವದರ್ಶನ, ಶಾಸ್ತ್ರ ಶ್ರವಣ, ಪುರಾಣ, ಹರಿಕಥೆಗಳು, ಜನನ-ಜಾಲ ದೀಕ್ಷೆ, ವಿವಾಹಾದಿ ಸೋಡಶಕರ್ಮಗಳಲ್ಲಿ ನವೀನ ವಿದ್ಯಾಭ್ಯಾಸ ದ ಪ್ರಭಾವವು ತಲೆಯೆತ್ತಿ ಆರ್ಯ ಸಂಸ್ಕೃತಿಗೆ ತೊಂದರೆಯುಂಟಾಯಿತು ಈ ತೊಂದರೆಗಳ ನಿವಾರಣೆಗಾಗಿ ಕರ್ನಾಟಕ ಪ್ರಜಾಪರಿಷದ ಅಧಿಕಾರಿಗಳ ಲಕ್ಷಗಟ್ಟಿ ದುಡ್ಡು ಸಂಗಿಸಬೇಮಾಡಿ ಸಂಸ್ಕೃತಿ ಪ್ರಚಾರಮಾಡುತ್ತೇನೆಂದು ಒಂಗಡ ಮಾಡುತ್ತಿರುವರು ಇದು ಸಮಂಜಸವಾದು ದೇ? ಸಂಸ್ಕೃತಿಯು ಯಾವ ರೂಪದಲ್ಲಿ ಕವಿಯೆಯಾ ಬೆಯಿತೊ ಅದೇ ರೂಪದಲ್ಲಿ ಅದನ್ನು ತಿರುಗಿ ಸಂಪಾದಿಸ ಬೇಕು ಅಂದರೆ ಸಾಧ್ಯವೂ ಪಶ್ಚಿಮ ಪುಸ್ತಗಳಲ್ಲಿಯೂ ಉಟೋಪಟಗಳಲ್ಲಿಯೂ ಕಲಿತ ಧಾರ್ಮಿಕ ಭಾವನೆಗಳೂ ಒಂದರ್ಮ-ನೀತಿಗಳೂ ಉಪಾಧ್ಯಾಯರ ಮುಖೇಣ ಬಾಲ ಮಾಗರ ಮನಸ್ಸಿನಲ್ಲಿ ಹಾಸುಹಂತೆ ಸರ್ಕಾರದವರು ಶಿಕ್ಷಣವನ್ನು ರೂಪುಗೊಳಿಸಬೇಕು ಪ್ರಾಥಮಿಕ ಭಾಷೆಗೆ ಪ್ರಾಧಾನ್ಯ ಕೊಡಬೇಕು ನೀತಿಮಾಗಗಳನ್ನು ಸಮೂಲವಾಗಿ ತೆಗೆದುಹಾಕಬೇಕು ಚಿಹ ಕಾಪಿ ಅಂಗಡಿಗಳನ್ನು ತೆಗೆದು ಊಟದ ವಿಶ್ರಾಂತಿಸ್ಥಳಗಳನ್ನು ಹೆಚ್ಚಿಸಬೇಕು ದೇಶದ ಪದ್ಧತಿಯಂತೆ ವೇಷ ಭೂಷಣಗಳನ್ನು ಮಾರ್ಪಡಿಸಬೇಕು ದೇವಸ್ಥಾನಗಳಲ್ಲಿ ಸ್ಕೂಲು-ಕಾಲೇಜುಗಳಲ್ಲಿ ನಿಯಮಿತವಾದ ನೇಳಿಗೆ ' ದೇವರ ಪ್ರಾರ್ಥನೆ ನಡೆಯುವಂತೆ ವ್ಯವಸ್ಥೆಮಾಡಬೇಕು ಇದೇ ಮೊದಲಾದ ಅನೇಕ ಸೌಲಭ್ಯಗಳು ' ರೂಪುಗೊಳಿಸಿದಲ್ಲಿ ಸಂಸ್ಕೃತಿಯು ತನ್ನ ಕೈಕ್ಕೆ ತಾನೇ ರೂಪುಗೊಳ್ಳುವದು

ವಿದ್ವೆಯಲ್ಲಿ ನವಂದುವರಿದ ಈಗಿನ ನವತರುಣರು ನಾನಾ ದೇಶಗಳನ್ನ ಸಂಚರಿಸಿ ನಾನಾ ದೃಶ್ಯಗಳನ್ನು ನೋಡಿ ಅವನ್ನು ಅನುಕರಿಸುವ ಬುದ್ಧಿಯಿಂದ ತಮ್ಮ ಆರ್ಯ ಸಂಸ್ಕೃತಿಯುಷ್ಟು ಬಿಡುವುದಕ್ಕು ಹೊಸಸಂಸ್ಕೃತಿಯನ್ನ ಹಿಡಿಯುವದಕ್ಕು ಹೋಗುತ್ತಾರೆ ಇದರಿಂದ ಇಂದು ಯಾವ ಧರ್ಮಕ್ಕೂ ಹೊಂದದೆ ಹೊಳೆಯ ಪಾಲಾದಂತೆ ನಾಶವಾಗ ತ್ತಾರೆ ಭರತಖಂಡದಲ್ಲಿ ಆರ್ಯ ಸಂಸ್ಕೃತಿಯಿಂದಲೇ ಎಷ್ಟೋ ಸಹಸ್ರವರ್ಷಗಳು ಕಳೆದಿವೆ ಎಷ್ಟೋ ರಾಜಾಧಿರಾಜರು ಆಳಿ ಹೋಗಿದ್ದಾರೆ ಎಷ್ಟೋ ಪುಣ್ಯಾತ್ಮರು ಕಾಲ ಕಳೆದಿದ್ದಾರೆ ಯಾವ ಕಾಲಕ್ಕೂ ಸಂಸ್ಕೃತಿ ಬದಲಾವಣೆಯಾಗಿಲ್ಲ ಈಗ ಮಾತ್ರ ಸಂಸ್ಕೃತಿ ಬದಲಾವಣೆಯ ಲಕ್ಷಣಗಳು ತೋರಹತ್ತಿದ್ದರಿಂದ ಸದರ ಪರಿಣಾಮ ವಾಗಿ ದೇಶದಲ್ಲಿ ಸುಖ ಶಾಂತಿಗಳು ನಲಿಸದೆ ಅನಾಚಾರ ರಾಜಕೀಯ ಅತ್ಯಾಚಾರಗಳು ಲಂಚತನ ಮೋಸ ಇವೇ ಮೊದಲಾದ ದುಷ್ಟ ಪ್ರತಿಗಳು ತಲೆಯೆತ್ತಿ ಘೋರವಾದ ದುಃಖ ಪರಿಣಾಮವನ್ನೆದೆ ಹಲ್ಲಗುತ್ತಿ ವರ್ತಮಾನದಿಂ ಕೆ ಸಂಸ್ಕೃತಿಯು ಇದ್ದ ಇದೆ ಅದರ ಪಟ್ಟಿಣಕ್ಕಾಗಿ ರಂ ಗಾರಂಭಕರೂ ಆದ ಜನರಲ್ಲಿಯೇ ಸಸ್ಯ ಶಿಮವಲ್ಲವು ಕಳೆಗಿಂದಿದ ಲಿಂದ ಅವರೇ ಸಂಸ್ಕೃತಿಯನ್ನ ತಿದ್ದಿಕೊಳ್ಳಬೇಕು ಅಂದರೆ ದೇಶಕ್ಕೆ ಕ್ಷೇಮವು ಇಲ್ಲವಾದರೆ ಭಾರತದಲ್ಲಿ ಇನ್ನೂ ಅನೇಕ ಕಷ್ಟಪರಿಣಾಮ ತಲೆದೋರುವವು ಈಗಾಲೆ ಮಕ್ಕಳೆಳೆದ ದುಃ ದ್ರಭಾವದಿಂದಾಗಿರುವ ಅನಾಚಾರದ ತೊಂದರೆಯಿಂದ ಜನಗಳು ಪರಿತಪಿಸುತ್ತಿದ್ದಾರೆ ಆದ್ದರಿಂದ ವಿದ್ಯಾ ಪ್ರಭಾವ ಅಧಿಕಾರಗಳಿಂದ ಮುಂದಾದ ನಹಸೀಮೆಯಲ್ಲಿ ಆರ್ಯ ಸಂಸ್ಕೃತಿಯನ್ನು ಬೆಳಿಪ ಅದಂತೆ ವಕ್ಕಿಸಿ ಸಂಸ್ಕೃತಿಯು ಇನ್ನೂ ಹೆಚ್ಚಾಗಿ ಮು ದುನರಿಯಂತೆ ಶ್ರಮಿಸಿ ಭಾರತೀಯರಿಗೆ ಸಹಾಯಸೀಡಿ ತನ್ಮೂಲಕ ಭಗವ ತನ ಕೃಪೆಗೆ ಪಾತ್ರರಿಂಗಲೆಂದು ಕೋರುತ್ತೇನೆ

ಎಲ್ಲರಿಗೆ ಗ್ರಾಮದಲ್ಲಿ ಪುಣ್ಯತಿಥಿಶ್ರೀಸ್ವಪೂ ಯಂತೀ ಸಮಾರಂಭಗಳೂ

ಶ್ರುತಿವರ್ಷದಂತೆ ನೊಲ್ಲಾಪುರ ಜಿಲ್ಲಾ ಹೊಟಗಿ ಗ್ರಾಮದ ಬೃಹದ್ಮಠದಲ್ಲಿ ಶಾ ಕೆ ೧೮೮೫ನ ನಿಜ ವೈಶಾಖ ಬಹುಳ ಅಷ್ಟಮಿಯಂತೆ (ತಾ ೫೧೫-೫ ೫೩) ಶುಕ್ರವಾರ ಹುಮವಿಷ್ಯೋತ್ತರ ವೈರಾಗ್ಯ ಸಿಂಹಾಸನಾಧೀಶ್ವರ ಜಗದ್ಗುರು ಏಕೋತ್ತರಾಮಾರಾಧ್ಯಾಚಾರ್ಯರ ಜಯಂತೀ ಮಹೋತ್ಸವವೂ, ಇದೇ ನಿಜ ವೈಶಾಖ ಶುಕ್ಲ ಪಂಚಮಿ (ತಾ|| ೧೮೮೫ ೫೩) ಸೋಮವಾರ ಉಜ್ವಲ ತೆಪಸಂಪನ್ನರೂ, ಅನೇಕ ಅದ್ಭುತ ದಿವ್ಯಲೀಲಾಜಾಲಗಳನ್ನು ತೋರಿದವರೂ ಆಗಿ, ನೆರೆದು ಮರೆಯಾದ ಹೊಟಗಿ ಬೃಹನ್ಮಠಾಧೀಶ್ವರ ಶ್ರೀ ಸಿ ಬ್ರ ಜಿ ಚನ್ನ ಬಸವ ನುಜಾ ಸ್ವಾಮಿಗಳ ಪುಣ್ಯತಿಥಿಯು ಮತ್ತು ಶ್ರೀಮದುಜ್ಜಯಿನೀ ಸದ್ಧರ್ಮ ಸಿಂಹಾಸನಾಧೀಶ್ವರ ಜಗದ್ಗುರು ಶ್ರೀ ಚಾರುಕಾಚಾರ್ಯರ ಜಯಂತಿ ಮಹೋತ್ಸವವೂ, ಈ ಎಲ್ಲ ಸಮಾರಂಭಗಳು ಬಹು ವಿಜೃಂಭಣೆಯಿಂದ ನೆರೆವೇರಿಸಲ್ಪಟ್ಟವು ಇವುಗಳ ಅಂಗೋಪಾಂಗವಾಗಿ ಜರುಗಬೇಕಾದ ವೇದಪಠನ, ಭಜನೆ, ಭಾಷಣ, ಆಕ್ಷ ಸಂಶಪಣೆ ಮೊದಲಾದವುಗಳು ಶಾ ಶಕೆ ೧೮೮೫ ಅಧಿಕ ವೈಶಾ ಅಮಾವಾಸ್ಯೆ (ತಾ|| ೧೫-೫-೫೩) ಬುಧವಾರದಿಂದಾರಂಭಿಸಿ ಒಂದು ಸಪ್ತಾಹ ದವರೆಗೆ ಸಾಗಿದವು.

ಕಾರ್ಯದರ್ಶಿ
ಗುರುಬಸು ಹೊಲ್ಲಾಪುರ

ದುಃಖವಾರ್ತೆ

ಧಾರವಾಡ ಜಿಲ್ಲಾ ನರಗುಂದ ಪೇಠಾ ನಾಗನೂರು ಗ್ರಾಮವಾಸಿಗಳಾದ ಶ್ರೀ ಮುದಿಗೌಡ ಲಿಂಗನಗೌಡ ಸಾಬೇಲ ಇವರು ತಮ್ಮ ಅಪರ ವಯಸ್ಸಿನಲ್ಲಿ ಅಂದರೆ ೮೫ನೇ ವರ್ಷದಲ್ಲಿ ದೀರ್ಘಕಾಲದ ಶರೀರ ವ್ಯಾಧಿಯಿಂದ ನರಳಿ ತಾ|| ೧೧-೫-೫೩ನೇ ಬುಧವಾರ ಮಧ್ಯರಾತ್ರಿ ಪರಲೋಕವಾಸಿಗಳಾದರು. ಇವರು ಅನೇಕ ಕಾರ್ಯ ಭಾಗಗಳನ್ನು ಮಾಡಿ ಎಲ್ಲರಿಗೂ ಬೇಕಾದವರು ಧಾರವಾಡ ವಿಜಾಪೂರ ಜಿಲ್ಲೆಗಳಲ್ಲಿ ಇವರ ಹೆಸರು ಕೇಳದ ಜನರೇ ಇರಲಿಲ್ಲ. ಮರು ದಿನಸ ಶವದ ಅಂತ್ಯ ಸಂಸ್ಕಾರವಾಯಿತು ಜಗದೀಶ್ವರನು ಮೃತರ ಆತ್ಮಕ್ಕೆ ಶಾಂತಿ ಯನ್ನೀಯಲೆಂದು ಬೇಡುವ,

ಓರ್ವ ಮಿತ್ರಭಾಗಿ

ವರ್ತಮಾನ ಸಂಗ್ರಹ

ಕರ್ನಾಟಕ ಪ್ರಾಂತಕ್ಕಾಗಿ ಹೋರಾಟ

ಸಡೆಸಲು ಶ್ರಿಯಾಸಮಿತಿ ರಚಿತವಾಯಿತು

ದಾವಣಗೆರೆ ಅಖಂಡ ಕರ್ನಾಟಕ ರಾಜ್ಯನಿರ್ಮಾಣ ಪರಿಷತ್ತಿನಲ್ಲಿ ಮೇ ೨೯ ರಲ್ಲಿ ಆಧ್ಯಕ್ಷರಾದ ಶ್ರೀ ಕೆ. ಆರ್ ಕಾರಂತರ ಭಾಷಣವಾದ ನೇಲೆ ಪ್ರತಿ ಕನ್ನಡ ಜಿಲ್ಲೆಯ ಇಬ್ಬರಿಬ್ಬರು ಪ್ರತಿನಿಧಿಗಳನ್ನೊಳಗೊಂಡ ವಿಷಯ ನಿಯಾಮಕ ಸಮಿತಿಯನ್ನು ರಚಿಸಲಾಯಿತು.

ಮಧ್ಯಾಹ್ನ ೩ ಗಂಟೆಗೆ ವಿಷಯ ನಿಯಾಮಕ ಸಮಿತಿಯು ಶ್ರೀ ಕಾರಂತರ ಅಧ್ಯಕ್ಷತೆಯಲ್ಲಿ ನಗರ ಸಭೆಯ ಮಹಡಿಮೇಲೆ ಸೇರಿ ಪ್ರತಿನಿಧಿಗಳ ಸಭೆಯಲ್ಲಿ ತರಬೇಕೆಂದಿದ್ದ ಕರಾವುಗಳನ್ನು ಅಂಗೀಕರಿಸಲಂಯಿತು. ಕರಾವುಗಳ ಬಗ್ಗೆ ಬಿಸಿ ಬಿಸಿ ಚರ್ಚೆಯಾಯಿತು

ಈ ಸಮಿತಿಯ ಸಡೆವಳಕೆಗಳು ಸಂಜೆ ೭॥ ಘಂಟೆಯ ವರೆಗೂ ಜರುಗಿದ್ದರಿಂದ ಪ್ರತಿನಿಧಿಗಳ ಸಭೆ ೮ ಘಂಟೆಯ ಹೊತ್ತಿಗೆ ಸಮಾವೇಶಗೊಂಡಿತು ಪ್ರತಿನಿಧಿಗಳ ಹೊತ್ತಿಗೆ ತಾಲ್ಲೂರು ಸಾವಿರ ನಾಗರೀಕರೂ ಸಹ ಉತ್ಸುಕತೆಯಿಂದ ಸಭೆಯನ್ನು ವೀಕ್ಷಿಸಲು ಬಂದಿದ್ದರು

ಶ್ರೀ ಗುರುಜಾದ ಸ್ವಾಮಿಯವರಿಂದ ಕರಾವುಗಳ ಮಂಡನೆ

ಬೋಧಸಭೆಯ ಸದಸ್ಯರಾದ ಶ್ರೀ ಎಮ್. ಎಸ್. ಗುರುಜಾದ ಸ್ವಾಮಿಯವರು ರಿರಾವುಗಳನ್ನು ಮಂಡಿಸುತ್ತಾ, ಪ್ರಾಸ್ತಾವಿಕವಾಗಿ ರಿರಾವುಗಳ ಬಗ್ಗೆ ಕೆಲವು ಮಾತುಗಳನ್ನಾಡಿ ಅಖಂಡ ಕರ್ನಾಟಕದ ಅವಶ್ಯಕತೆ, ಅದಕ್ಕೆ ಕೈಗೊಳ್ಳ ಬೇಕಾದ ಕಾರ್ಯಕ್ರಮಗಳು ಈ ವಿಷಯದಲ್ಲಿ ಪಂ|| ನೆಹರೂರವರ ಅಲಕ್ಷ್ಯ ಮನೋಭಾವ ಮತ್ತು ಈಗಿರುವ ಹಿರಿಯ ಹಿಂಚಿಹೋಗಿರುವ ಕನ್ನಡ ಜಿಲ್ಲೆಗಳನ್ನರ ಪರಿಸ್ಥಿತಿ ಬಗ್ಗೆ ಸ್ಪಾರವಿಸ್ತಾರವಾಗಿ ಭಾಷಣ ಮಾಡಿ ರಿರಾವುಗಳನ್ನು ಸರ್ವಾನುಮತದಿಂದ ಒಪ್ಪಿಕೊಳ್ಳಲು ವಿನಂತಿ ಮಾಡಿದರು

ರಿರಾವುಗಳನ್ನು ಸಮರ್ಥಿಸಿ ಕರ್ನಾಟಕ ಕಮ್ಯೂನಿಸ್ಟ್ ಪಕ್ಷದ ಕಾರ್ಯದರ್ಶಿಗಳಾದ ಶ್ರೀ ಉಮಾಧ್ಯಾಯರು, ವೈ.ಸೂರಿನ ಶ್ರೀಕಂಠಪ್ಪನವರು, ಶ್ರೀ ತಲ್ಲೂರು ರಾಮಾನೆಗೌಡರು, ರಾಜ್ಯಪರಿಷತ್ತಿನ ಸದಸ್ಯರಾದ ಶ್ರೀ ಕಕ್ಕೆಲಾಯರು, ಜನಾಬ್ ಜಬ್ಬಾರ್ ಸಾಹೇಬರು, ಶ್ರೀ ಮತಿ ಹೊನ್ನಮ್ಮ ಮುಂತಾದವರು ಮಾತನಾಡಿದರು

ಶ್ರೀಗಳಾದ ವಾಲಿ ಚನ್ನಪ್ಪ, ಆ. ಹಿ. ಶಿವಾನಂದ ಸ್ವಾಮಿಯವರು ಮತ್ತು ಇಟಗಿ ವೇದಮೂರ್ತಿಯವರು ಮೊತನಾಡಿ ' ಮಾಡು ಇಲ್ಲವೆ ಮಡಿ ' ಎಂಬ ಅಹಿಂಸಾತ್ಮಕ ಹೋರಾಟವೇ ಅಖಂಡ ಕರ್ನಾಟಕ ಸ್ಥಾಪನೆಗೆ ಈಗ ಸರಿಯಾದ ಕರಾವೆಂದು ಅಭಿಪ್ರಾಯಪಟ್ಟರು.

ಬಳ್ಳಾರಿಯ ಗಡಿಗಿ ಮುರಿಸ್ವಾಮಿಪ್ಪ, ಅದವಾನಿಯ ವ್ಯಾಪಾರಿಗಳಾದ ಶ್ರೀ ರಾಜಣ್ಣನವರು, ಬಳ್ಳಾರಿಯ ವಿವಾದಾಸ್ಪದವಾಗಿ ಉಳಿದಿರುವ ಮೂರು ತಾಲ್ಲೂಕುಗಳಾದ ಆದವಾನಿ, ರಾಯದುರ್ಗ, ಆಲೂರುಗಳ ಬಗ್ಗೆ ಮಾತನಾಡಿ ಅವುಗಳನ್ನು ಎಲ್ಲಾ ಕನ್ನಡಿಗರು ನೆರಿತೊಂದು ಉಳಿಸಿಕೊಳ್ಳಬೇಕೆಂದು ಹೇಳಿ ಅವುಗಳ ಮಹ

ತ್ಯನ್ನು ತಿಳಿಸಿದರು ಅಲ್ಲದೆ ಸಭೆಯ ಮುಂದಿರುವ ಕರಾವಳಿಗಳನ್ನು ಸಮರ್ಥಿಸಿದರು.

ಕೊನೆಯಲ್ಲಿ ಕರಾವಳಿಗಳು ಸರ್ವಾಮುಮತದಿಂದ ಅಂಗೀಕರಿಸಲ್ಪಟ್ಟು ಈ ಮುಂದೆ ಇಂಡಿಯಾ ಜಿಲ್ಲಾಪರಿಷತ್ತಿಗೆ ಸೇರಿಸಲಾಯಿತು ಅಲ್ಲದೆ ಒಂದು ಕ್ರಿಯಾ ಸಮಿತಿಯನ್ನು ರಚಿಸಲಾಯಿತು ಶ್ರೀಗುಳಾದ ಕೆ ಆರ್ ಕಾರಂತರು ಮಂಗಳೂರು, ಹೊಸಮನ್ಸಾ ಸಿದ್ದಪ್ಪ ಹಾವೇರಿ, ಎಂ. ಎಸ್ ಗುರುಪಾದ ಸ್ವಾಮಿ ಬೆಂಗಳೂರು, ಗೋಪಾಲಗೌಡರು ಶಿವಮೊಗ್ಗ, ಶ್ರೀಕಂಠಪ್ಪನವರು ಮೈಸೂರು, ಪಟ್ಟಣಶೆಟ್ಟಿ ಮಹದೇವಪ್ಪ ತಲ್ಲೂರು, ರಾಯಪಗೌಡರು ಮುರುಗೋಡು, ಮಹದೇವಪ್ಪನವರು ಹುಬ್ಬಳ್ಳಿ ಬಿ ವಿ ಕಕ್ಕಿಲಾಯರು, ಮಂಗಳೂರು, ಶಿವಮೂರ್ತಿಸ್ವಾಮಿಗಳು ಹೈದರಾಬಾದ್, ಗಡಗ ಪಂ.ರಿಸ್ವಾಮಿಸ್ವಾ ಬಳ್ಳಾರಿ, ಮೊನ್ನಪ್ಪ ಕೊಡಗು, ಶ್ರೀ ಮತಿ ಹೊನ್ನಮ್ಮ ಶಿವಮೊಗ್ಗ, ಕೆ ವೀರಭದ್ರಪ್ಪ, ದಾವಣಗೆರೆ, ಟಿ ಸುಬ್ಬಣ್ಣ, ಮೈಸೂರು, ತಾ|| ನಾಗರಾಜರವರು ವಿಜಾಪುರ, ಎಸ್ ಎಲ್ ಅಪಾಧ್ಯಾಯರು, ತುಮಕಿ ವೇದಮೂರ್ತಿಗಳು ಧಾವಣಗೆರೆ

ಈ ಸಮಿತಿಯೇ ಅಖಂಡ ಕರ್ನಾಟಕ ಸ್ಥಾಪನೆ ಬಗ್ಗೆ ಮುಂದಿನ ಕ್ರಮ ಕೈಗೊಳ್ಳಬೇಕೆಂದೂ ತೀರ್ಮಾನಿಸಲಾಯಿತು

ಹುಬ್ಬಳ್ಳಿ ಗುಂದಿನೇಟಿನ ಬಗ್ಗೆ ಖಂಡನೆ

ಏಪ್ರಿಲ್ ೧೯ ರಲ್ಲಿ ಹುಬ್ಬಳ್ಳಿಯಲ್ಲಿ ಜರುಗಿದ ಪೋಲೀಸ್ ಗೋಳೀಬಾರಿನ ಬಗ್ಗೆ ವಿಚಾರಣೆಯನ್ನು ಸರ್ಕಾರವು ನಡೆಸಬೇಕೆಂದೂ ಮತ್ತು ಆ ಒಗ್ಗೆ ಕೆಲವರ ಮೇಲಿರುವ ಒಟ್ಟಿಗೆಳನ್ನು ವಾಪಸು ತೆಗೆದುಕೊಳ್ಳಬೇಕೆಂದೂ, ಸರ್ಕಾರಕ್ಕೆ ವಿನಂತಿ ಮಾಡುವ ಠರಾವನ್ನು ಸರ್ವಾನುಮತದಿಂದ ಅವ ಮೋದಿಸಲಾಯಿತು

ಬೆಳಗಾಂ, ಕಾರವಾರ, ಕೊಡಗು, ಮದ್ರಾಸ್ ಪ್ರಾಂತ್ಯದ ಇತರ ಕನ್ನಡ ಪ್ರದೇಶಗಳು ಖದ್ದ ಕನ್ನಡ ಪ್ರದೇಶಗಳಾಗಿದ್ದ ಅವುಗಳು ಅಭ್ಯಥಾಪ್ರಾಪ್ತ್ಯಗಳಿಗೆ ನೇರ ಬೇಕೆನ್ನುವರ ಕೆಲವು ಆಳುವಳಿಯನ್ನು ಖಂಡಿಸಲಾಯಿತು

ಮೈಸೂರಿನ ಹೊರಗಿರುವ ಕನ್ನಡ ಪ್ರದೇಶಗಳನ್ನು ಸುಸ್ಥಾಗಿಸುವುದಾಗಿ ಹೇಳಿರುವ ಮುಖ್ಯಮಂತ್ರಿ ಶ್ರೀ ಕೆ ಹನುಮಂತಯ್ಯನವರನ್ನು ಅಭಿನಂದಿಸಲಾಯಿತಲ್ಲದೆ ಉಳಿದ ಕನ್ನಡ ಪ್ರದೇಶಗಳ ನೇರ್ಪಡೆಗೆ ಸಕಲರೂ ಪ್ರಯತ್ನ ಸತಕ್ಕದ್ದೆಂದು ತೀರ್ಮಾನವಾಡಲಾಯಿತು

ಕೊನೆಯಲ್ಲಿ ಪರಿಷತ್ತಿನ ಉದ್ಧಾಟಕರಾಗಿದ್ದ ಶ್ರೀ ಶಿವಮೊರ್ತಿ ಸ್ವಾಮಿಗಳು, ಅಧ್ಯಕ್ಷರಾದ ಶ್ರೀ ಕೆ. ಆರ್ ಕಾರಂತರು, ಪರಿಷತ್ತನ್ನು ನೇರಿಸಿದ ಸ್ವಾಗತ ಸಮಿತಿಯ ವರನ್ನು ಅಭಿನಂದಿಸಿ, ಕೆಲವು ಮಾತುಗಳನ್ನಾಡಿ ಸಕಲರಿಗೂ ವಂದನೆಗಳನ್ನರ್ಪಿಸಿದರು

ಸ್ವಾಗತ ಸಮಿತಿಯ ಪರವಾಗಿ ಶ್ರೀ ಗುರುದೇವರು ಮಾತನಾಡಿ, ಪರಿಷತ್ತಿನ ಯಶಸ್ಸಿಗೆ ಕಾರಣರಾದವರೆಲ್ಲರನ್ನೂ ವಂದಿಸಿದರು.

ರಾಷ್ಟ್ರಗೀತೆಯೊಂದಿಗೆ ಪರಿಷತ್ತಿನ ಕಾರ್ಯಕಲಾಪಗಳು ಮುಕ್ತಾಯಗೊಂಡವು

ನಿರ್ಣಯಗಳು

ಪರಿಷತ್ತು ಅಂಗೀಕರಿಸಿದ ಮುಖ್ಯ ನಿರ್ಣಯಗಳ

ಕರ್ನಾಟಕ ಪ್ರಾಂತ ರಚನೆಯಾಗಬೇಕಾದುದು ಅಗತ್ಯವೂ, ನ್ಯಾಯವೂ, ಅಗಿದೆಯೆಂದು ಈ ಸಮ್ಮೇಳನ ಅಭಿಪ್ರಾಯಪಡುತ್ತದೆ

ಕರ್ನಾಟಕದ ಎಲ್ಲೆಗಳನ್ನು ನಿರ್ದೇಶಿಸಲು ಬೌಂಡರಿ ಕಮಿಷನ್ನೊಂದನ್ನು ೧೯೫೩ ರ ಆಗಸ್ಟ್ ೧ ರೊಳಗೆ ನೇಮಿಸಬೇಕೆಂದು ಪ್ರಧಾನ ನೆಹರೂರವರನ್ನು ಈ ಸಮ್ಮೇಳನ ಸ್ವಾಮ್ಯಪಡುತ್ತದೆ ೧೯೫೦ ರ ಅಕ್ಟೋಬರ್ ೧ ರ ವೇಳೆಗೆ ಕರ್ನಾಟಕ ಪ್ರಾಂತ ರಚಿಸಲ್ಪಟ್ಟು, ಕೆಲಸದಲ್ಲಿ ತೊಡಗಬೇಕೆಂದೂ ಈ ಸಭೆ ಅಭಿಪ್ರಾಯಪಡುವುದು

ಹಿಗಿನ ಪರಿಸ್ಥಿತಿಯಲ್ಲಿ ಕರ್ನಾಟಕ ಜನತೆ ಮುಖ್ಯವಾಗಿ ಯುವಜನರು ಈ ಸಮ್ಮೇಳನ ನೇಮಿಸಿರುವ ಶ್ರೀಯಾ ಸಮಿತಿಗೆ ಸಹಾಯಮಾಡಿ ಕರ್ನಾಟಕ ಪ್ರಾಂತ್ಯ ಸಾಧನೆ ಉದ್ದೇಶ ಸಫಲವಾಗಲು ಸಹಾಯಮಾಡಬೇಕೆಂದು ಈ ಸಮ್ಮೇಳನ ಕರೆಯೀಯುತ್ತಿದೆ.

ಶ್ರೀ ಕೆ. ಆರ್. ಕಾರಂತರ ಉಪವಾಸ ಸತ್ಯಾಗ್ರಹ

ಭದ್ರಾವತಿಯಲ್ಲಿ ಜೂ ೧೧ ನೇ ತಾರೀಖಿನಿಂದ ಅಮರಣಾಂತ ಉಪವಾಸ ಸತ್ಯಾಗ್ರಹವನ್ನು ಪ್ರತಿಯಿಸುತ್ತಿರುವ ಶ್ರೀ ಕೋಣೆರಾಮ ಮೋಹನ ಕಾರಂತರವರು ಉಪವಾಸ ಪ್ರತಿಯಿಸುತ್ತಿರುವ ಸ್ಥಳಕ್ಕೆ ಹೋಗಿ ಸಂದರ್ಶಿಸಿದಾಗ ಶ್ರೀ ಕಾರಂತರು ಬಹು ನಿಶ್ಚಶ್ಚಾಗಿರುವುದು ಕಂಡುಬಂದಿತು

ಗಂಟಲಬಾಧೆ ಮತ್ತು ತಾಲಿಗೆಯ ಮೇಲೆ ಮುಳ್ಳುಗಳು ಎದ್ದಿರುವುದರಿಂದ ಸರೀಸಾಗಿ ಮಾತನಾಡುವುದಕ್ಕೆ ಅವರಿಗೆ ಸಾಧ್ಯವಾಗುತ್ತಿಲ್ಲ ಸರ್ಕಾರವು ನಿಮ್ಮ ಬೇಡಿಕೆಗಳನ್ನು ಹುಡೇರಿಸುವ ಸಂಭವವಿದೆಯೇ ಎಂಬ ಪ್ರಶ್ನೆಗೆ ಅವರು ಸರ್ಕಾರದ ಮನಸ್ಸು ಆತ್ಮ ಮೃದುವಾಗಿಲ್ಲ— ಎಂದರು.

ಅಮರಣಾಂತ ಉಪವಾಸ ನಿರ್ಧಾರಕ್ಕೆ ಬರುವ ಮೊದಲು ಅವರು ಸರ್ಕಾರದೊಡನೆ, ವೈಸೂರು ಪ್ರದೇಶ ಕಾಂಗ್ರೆಸ್ ಮತ್ತು ಅಖಿಲ ಭಾರತ ಕಾಂಗ್ರೆಸ್‌ನೊಡನೆ ನಡೆಯಿಸಿದ ಪತ್ರವ್ಯವಹಾರವನ್ನೂ ಕೊನೆಯದಾಗಿ ತಾವು ಅಮರಣಾಂತ ಉಪವಾಸ ಸತ್ಯಾಗ್ರಹ ಹೂಡುವುದಾಗಿ ತಿಳಿಸಿ ಸರ್ಕಾರಕ್ಕೆ ಬರೆದಿರುವುದಾಗಿ ತಿಳಿಸಿದ ಪತ್ರ ಒಂದನ್ನೂ ತಮ್ಮ ಪ್ರತಿನಿಧಿಗೆ ತೋರಿಸಿ ಸರ್ವ ಪ್ರಯತ್ನಗಳೂ ವಿಫಲವಾದ್ದರಿಂದಲೇ ಈ ನಿರ್ಧಾರಕ್ಕೆ ಬರಲಾಯಿತೆಂದು ತಿಳಿಸಿದರು —ಜನವಾಣಿ

ಇನ್ನು ಕೆಲವುದಿನಗಳಲ್ಲಿಯೇ ಶಾಂತಿ ಒಪ್ಪಂದದ ನಿರೀಕ್ಷೆ

ಯುದ್ಧದಖಂತಿ ಬಿಟ್ಟುಬಿಡಿ

ಇನ್ನು ಕೆಲವು ದಿನಗಳಲ್ಲಿಯೇ ಶಾಂತಿ ಒಪ್ಪಂದದ ಅಂಗೀಕೃತವಾಗುವುದು ಯುದ್ಧದ ತಾವಶ್ಯಯವನ್ನು ಬಿಟ್ಟುಬಿಡಿ— ಎಂಬುದಾಗಿ ಪೀಕಿಂಗ್ ರೇಡಿಯೊ ಕೊರಿಯಾ ಯುದ್ಧರಂಗದಲ್ಲಿರುವ ವಿಶ್ವಸಂಸ್ಥೆಯ ಸೇನೆಗಳಿಗೆ ಪ್ರಸಾರಮಾಡಿದೆ

ಕೊರಿಯಾ ಯುದ್ಧ ವಿರಾಮವು ಸಮಿತಿಸುತ್ತಿದೆ— ಎಂದು ದಕ್ಷಿಣ ಕೊರಿಯಾದ ವಿದೇಶಾಂಗ ಮಂತ್ರಿ ಪಾರ್ಕ್ ಯಂಗ್ ಟಾಯೊರವರು ರಾಯಿಟರ್ ಪ್ರತಿನಿಧಿಗೆ ತಿಳಿಸಿದರು. ಕೊರಿಯಾ ಯುದ್ಧವಿರಾಮವನ್ನು ಸಾಧಿಸಲು ವಿಶ್ವಸಂಸ್ಥೆಯು ದಕ್ಷಿಣ ಕೊರಿಯಾವನ್ನು " ಮಾರಿಬಿಡಲು " ನಿರ್ಧರಿಸಿದೆ—ಎಂದು ಅವರು ತಿಳಿಸಿದರು

ಪ್ರಜಾ-ಸೋಷಲಿಸ್ಟ್ ಪಕ್ಷದ ವಿಶೇಷ ಸಭೆ

ಚಿತ್ರದುರ್ಗ ಜಿಲ್ಲಾ ಪ್ರಜಾ-ಸೋಷಲಿಸ್ಟ್ ಪಕ್ಷದ ಕಾರ್ಯಕಾರಿ ಸಮಿತಿಯ ಸದಸ್ಯರಾದ ಗೆಳೆಯ ಬಿ ಗರುಡೇಶಮೂರ್ತಿಯವರ ಅಧ್ಯಕ್ಷತೆಯಲ್ಲಿ ಸಭೆಸೇರಿ ಈ ಕೆಳಗಿನ ನಿರ್ಣಯಗಳನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು.

ಈ ಜಿಲ್ಲೆಯಲ್ಲಿ ಮಳೆಯಾದೆ ರೈತಕೂಲಿಯಾರಿಗೆ ಬಿತ್ತನೆ ಕೆಲಸ ತಡವಾಗಿದೆ ಧಾನ್ಯಗಳನ್ನು ಕೊಳ್ಳುವ ಶಕ್ತಿ ಇಂದಿ ರೈತ ಕೂಲಿಯಾರಿಗೆ ಹೊಂದರೆಯಾಗಿದೆ, ಸರ್ಕಾರ ಈ ಬಗ್ಗೆ ಕೂಡಲೇ ಪರಿಹಾರ ಕೊಡಬೇಕು.

ಇಂದಿನ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತಿನ ಸಂಪೂರ್ಣ ಕಾರ್ಯಕ್ರಮಗಳನ್ನು ಕೂಲಂಕುಷವಾಗಿ ಪರಿಶೀಲಿಸಿ, ಆ ಸಮ್ಮೇಳನದಲ್ಲಿ ಸರ್ವಾನುಮತದಿಂದ ಅಂಗೀಕೃತವಾಗಿರುವ ಕರ್ನಾಟಕ ವಿಕೇಂದ್ರಣ ವನ್ನು ಕೂಡಲೇ ಘೋಷಿಸಬೇಕು. ಇಲ್ಲವಾದರೆ ಆಗಸ್ಟ್ ೧ ರಂದು ಅಹಿಂಸಾತ್ಮಕ ಹೋರಾಟಕ್ಕೆ ಸಂಪೂರ್ಣವಾಗಿ ಹೊಣೆಯಾಗಬೇಕು—ಎಂಬ ನಿರ್ಣಯಕ್ಕೆ ಸಂಪೂರ್ಣವಾಗಿ ಬೆಂಬಲ ನೀಡಬೇಕೆಂದು ನಿರ್ಣಯಿಸಲಾಯಿತು.

ಸಂಸ್ಥಾನದ ಕಾರ್ಯಕರ್ತರು ಪರಿಷತ್ತಿನ ಮತ್ತು ಪ್ರದೇಶದ ಹಿತಕ್ಕಾಗಿ ಪ್ರಜೆಯರಿಯವ ಅಖಿಲ ಭಾರತ ಪ್ರಜಾ-ಸೋಷಲಿಸ್ಟ್ ಪಕ್ಷದ ಪರಿಷತ್ತಿಗೆ ಮುಕ್ತ ಚಿತ್ತ ಹೊಗಬಾರಿಪಲ್ಲಿ ಕರೆಯಬೇಕೆಂದು ತೀರ್ಮಾನಿಸಲಾಯಿತು.

ಗೌರಿಶಂಕರ ಶಿಖರದಮೇಲೆ ಭಾರತದ ರಾಷ್ಟ್ರಧ್ವಜ

ತೇನ್‌ಸಿಂಗ್ ನಾರ್ಕೆ ಮತ್ತು ಹಿಲಾರಿಯವರು ಗೌರಿಶಂಕರ ಶಿಖರವನ್ನು ಹತ್ತಿದಾಗ ಅಲ್ಲಿ ಭಾರತದ ತ್ರಿವರ್ಣ ರಾಷ್ಟ್ರಧ್ವಜವನ್ನೂ ನೆಟ್ಟರೆಂದು ಅರೋಹಿಗಳ ತಂಡದ ವೈಜ್ಞಿಗಳಿಂದ ತಿಳಿಬಂದಿದೆ ಭಾರತದ ವಿದ್ಯಾಸಚಿವರಾದ ಮೌಲಾನಾ ಆಜಾದ್‌ರವರು ಕಳುಹಿಸಿದ ಅಭಿನಂದನಾ ಸಂದೇಶಕ್ಕೆ ಅರೋಹಿಗಳ ತಂಡದ ನಾಯಕರಾದ ಶ್ರೀ ಹಂಟ್‌ರವರು ಕಳುಹಿಸಿದ ಪ್ರತಿಸಂದೇಶದಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿರುವರು

ಕೈಯಿಲ್ಲದ ಚಿತ್ರಕಾರ ಬ್ರಿಟಿಷ್ ರಾಣಿಯ ಚಿತ್ರವನ್ನು ಬರೆದಿದ್ದಾನೆ

ಕೈಯಿಲ್ಲದ ಚಿತ್ರಕಾರ ೨೫ ವರ್ಷ ವಯಸ್ಕಿನ ರಿಚರ್ಡ್ ಹೆಚ್ಚ್ ಎಂಬಾತನು ೪ ದಿನಗಳಲ್ಲಿ ಎಲಿಜಬೆತ್ ರಾಣಿಯ ಭಾವಚಿತ್ರವನ್ನು ಬರೆದು ಅವರಿಗೆ ಬಹುಮಾನವಾಗಿ ಕೊಟ್ಟಿದ್ದಾನೆ. ಆತನು ಹಲ್ಲುಗಳ ಸಂದಿನಲ್ಲಿ ಬ್ರಷ್ ಹಿಡಿದು ಚಿತ್ರವನ್ನು ಚಿತ್ರಿಸಿದನು

ಕೊರಿಯಾ ರಣರಂಗದಲ್ಲಿ ಉಗ್ರ ಹೋರಾಟ

ಕೋರಿಯಾ ರಣರಂಗದಲ್ಲಿ ೧೩ ನೇ ತಾರೀಖಿನಿಂದಿನ ಮುಂಜಾನೆ ಕಮ್ಯೂನಿಸ್ಟರಿಗೂ, ವಿಶ್ವಸಂಸ್ಥೆ ಪಡೆಗಳಿಗೂ ಉಗ್ರಹೋರಾಟ ಪಡೆಯಿತು—ಎಂದು ವಿಶ್ವಸಂಸ್ಥೆಯ ಕಮಾಂಡ್ ಪ್ರಕಟಣೆ ಹೊರಡಿಸಿದೆ ಕಮ್ಯೂನಿಸ್ಟ್ ಪಡೆಗಳು ಜೋರಾಗಿನವೆ ಈ ಸಾಮ್ರಾಜ್ಯಗಳಲ್ಲಿ ಧಾಳಿ ನಡೆಸಿದವು . ವಿಶ್ವಸಂಸ್ಥೆ ಪಡೆಗಳು ಅವುಗಳನ್ನು ಜೋಡೆದೋಡಿಸಿದುವು

ದ|| ಕೊರಿಯಾ-ರಾಷ್ಟ್ರೀಯ ಚೀಣಾ ಒಪ್ಪಂದ ಅನಕ್ಯ

ರಾಷ್ಟ್ರೀಯ ಚೀಣಿಯೊಡನೆ ರಕ್ಷಣಾ ಒಪ್ಪಂದವನ್ನು ಮಾಡಿಕೊಳ್ಳಬೇಕೆಂದು ದಕ್ಷಿಣ ಕೊರಿಯಾ ಸರ್ಕಾರಕ್ಕೆ ಮನವಿನಾಮಾಡುತ್ತಾ ದಕ್ಷಿಣ ಕೊರಿಯಾ ಶಾಸನಸಭೆಯು ಬಹುವತದಿಂದ ನಿರ್ಧರಿಸಿತು

ಎಲಿಜಬೆತ್ ರಾಣಿಯವರ ಜನ್ಮದಿನಾಚರಣೆ

ಕಾಮನ್‌ವೆಲ್ತ್ ರಾಷ್ಟ್ರಗಳ ರಾಯಭಾರಿಗಳು ಎಲಿಜಬೆತ್ ರಾಣಿಯ ಜನ್ಮದಿನೋತ್ಸವನ್ನು ಜರಿಸಿದರು ಈ ಸಂದರ್ಭದಲ್ಲಿ ಭೋಜನಕೂಟವೊಂದನ್ನೂ ಏರ್ಪಡಿಸಲಾಗಿತ್ತು

ಮುಂಬೈ ಕನ್ನಡಿಗರ ಸಂಘದಿಂದ ಕರ್ನಾಟಕ ವಿಕೇಂದ್ರಣಕ್ಕೆ ಒತ್ತಾಯ

ಮುಂಬೈ ನಗರದ ಆತ್ಯಂತ ವಿವಾನೆಂತರೂ ಕನ್ನಡ ಅಭಿಮಾನಿಗಳೂ ಕನ್ನಡಿಗರ ಸಂಘದ ಪರವಾಗಿ ತಾ|| ೩೧ ೫೩ ನೇ ದಿವಸ ನಾಗಪಾಡಾ ನೇಬರ್‌ಹುಡ್ ಹೌಸ ಸಭಾನಿಲಯದಲ್ಲಿ ಸೇರಿ ಶ್ರೀ ಕೆ ಕೆ ಪೆಟ್ಟಣಶೆಟ್ಟಿ ಘನ ಅಧ್ಯಕ್ಷತೆಯಲ್ಲಿ ಸಂಘದ ವಾರ್ಷಿಕೋತ್ಸವ ನಡೆದಿರುವುದನ್ನು ಪ್ರಸಿದ್ಧ ವಕೀಲ ಶ್ರೀ ಬಿ ಎಸ್ ಹೆಗ್ಡೆಯವರು ಉದ್ಘಾಟಿಸಿ ಪರಿಷತ್ತಿನ ಕಾರ್ಯವನ್ನು ಮಾಡಿಕೊಟ್ಟಿಲ್ಲು ಅಧ್ಯಕ್ಷರ ಗುಣಗಾನವನ್ನು ಮಾಡಿದರು ಅನಂತರ ಸಂಘದ ಕಾರ್ಯದರ್ಶಿಗಳಾದ ಶ್ರೀ ದೇವಿದಾಸ ಕಡಂದರವರು ೧ ಕರ್ನಾಟಕದ ವಿಕೇಂದ್ರಣ ೨. ಕನ್ನಡಿಗರ ಸಾಂಸ್ಕೃತಿಕ ವಿಕಾಸ ಮತ್ತು ಅಭಿವೃದ್ಧಿ, ಕನ್ನಡಿಗರಲ್ಲಿ ವಿಶ್ವಾಸ ಬೆಳೆಸುವುದು ಇವೇ ಮುಂತಾದ ಅಂಶಗಳನ್ನು ಒಳಗೊಂಡ ಈ ಸಂಘವು ಕೆಲಸ ಮಾಡಿದೆ

ಪತ್ರವ್ಯವಹಾರ

[ಚಾಟ್ಟಿದಾರರು ಅಭಿಪ್ರಾಯ ಹಾಗೂ ಲೇಖನಗಳಿಗೆ ಸತ್ಕಾರ್ತರು ಪತ್ರಿಕಾಕರ್ತರಿಲ್ಲ ಎಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡಬೇಕಾಗಿದ್ದು —ಸಂ]

ಅಖಂಡಕರ್ನಾಟಕ ರಾಜ್ಯನಿರ್ಮಾಣದ ಬಗ್ಗೆ ಶ್ರೀ ರಂಭಾಪುರಿ ಜಗದ್ಗುರುಗಳವರ ಘೋಷಣೆ ಸ್ತುತ್ಯವಾದುದು

ಲೇ —ಪಂಚಾಕ್ಷರಶಾಸ್ತ್ರೀ ಹಿರೇಹಾರ, ರಾಣಬೆ ನಿ

ಶ್ರೀಮದ್ರಂಭಾಪುರಿ ವೀರಸಿಂಹಾಸನಾಧೀಶ್ವರರಾದ ಶ್ರೀ ೧೦೮ ಜಗದ್ಗುರು ಪ್ರಸನ್ನ ರೇಣುಕ ವೀರಗಂಗಾಧರಶಿವಾಚಾರ್ಯ ಮಹಾಸ್ವಾಮಿಗಳವರು ಮೊನ್ನೆ ತಾ|| ೮-೬-೫೩ ನೇ ದಿನಸ ನೆರೆಹೊರದ ದಾವಣಗೆರೆ ಅಡ್ಡಪಲ್ಲಕ್ಕಿ ಉತ್ಸವ ಸಮಾರಂಭದ ಮಹಾಸಭೆಯಲ್ಲಿ "ಕರ್ನಾಟಕ ಪ್ರಾಂತರಚನೆ ಆಗುವ ವರೆಗೂ ಕೀರ್ತಿ ಧರಿಸುವದಿಲ್ಲ" ಎಂದು ಘೋಷಣೆ ಮಾಡಿರುವದು ಅಖಿಲಕರ್ನಾಟಕದ ಜನತೆಗೆ ಅಸಾರ ಆನಂದವನ್ನುಂಟು ಮಾಡಿದೆ. ಬಹುಕಾಲದಿಂದ ಆಳಿದ, ಪರಕಾರಗಳ ಭೇದನೀತಿಯ ಪರಿಣಾಮದಿಂದ ತುಂಡುತುಂಡಾದ ಕನ್ನಡನಾಡು ಒಂದುಗೂಡಲು ಅಡೆಪ್ಪು ದುಸ್ತರ ವಾಗಿದೆ ಎಂಬಿದು ಪ್ರತಿಯೊಬ್ಬ ಕನ್ನಡಿಗನಿಗೆ ತಿಳಿದ ಇದೆ ಇಂಥಾ ಸಂದರ್ಭದಲ್ಲಿ ಕರ್ನಾಟಕವನ್ನೊಂದು ಗೂಡಿಸಲು ಕನ್ನಡ ಜನತೆ ತೀವ್ರತರಾರ್ಯಕ್ರಮವನ್ನು ಕೈಕೊಂಡಿದೆ "ಹರಮುಖದಿರೆ ಗುರು ಕಾಯುತ್ತಾನೆ" ಎಂಬ ನಾಣ್ನುಡಿಯಂತೆ ವೀರಶೈವ ದರ್ಮಗುರುಗಳಾದ ವೀರಸೀರಾಧೀಶ್ವರರು ಮೇಲುದಾಹರಿಸಿದ ಪ್ರಕಾರ ವೀರಸ್ವಪ್ರತಿಜ್ಞೆಯನ್ನು ಮಾಡಿರುವದು ಸ್ತುತ್ಯವಾದ ಮಾತಾಗಿದೆ ಅತ್ಯಂತ ಪ್ರಾಚೀನ ಕಾಲದಿಂದಲೂ ರಂಭಾಪುರೀ ವೀರಸೀರಿಂದಿಂದ ಧರ್ಮ ಮತ್ತು ದೇಶೋ ದ್ಧಾರ ಕಾರ್ಯಗಳು ಅನಂತವಾಗಿ ಜರುಗಿವೆ ಇವಕ್ಕೆ ಭಗವಾನ್ ಶ್ರೀ ರೇಣುಕರ ಚರಿತ್ರೆಯೇ ಸಾಕ್ಷಿಯಾಗಿ ನಿಂತಿದೆ ಅಂಧ್ರದೇಶಾಂತರ್ಗತ ಕೊಲ್ಲಿಪಾಕಿ ಕ್ಷೇತ್ರದ ಶ್ರೀ ಸೋಮನಾಥಲಿಂಗದಿಂದ ಉದ್ಭವಿಸಿದ ಶ್ರೀರೇಣಾಕಾ ಚಾರ್ಯರು ಕನ್ನಡ ನಾಡಿನ ಬಾಳೇಹೊನ್ನೂರಿನಲ್ಲಿ ತಮ್ಮ ಧರ್ಮವೀರತ್ವವನ್ನು ಸ್ಥಾಪಿಸಿ ಜಗತ್ತಿಗೆ ಶಾಂತಿ ಸಂದೇಶವನ್ನು ಬೀರಿದರಲ್ಲದೆ ಇತಿಹಾಸಪ್ರಸಿದ್ಧರಾದ ಭರತಖಂಡದ ಮತ್ತು ದ್ವೀಪಾಂತರಗಳ ರಾಜಮಹಾ ರಾಜರುಗಳಿಗೆ (ವಿಧ್ಯುಕ್ತ ವಿಶ್ವಸಾಮ್ರಾಟ್ ಜೋಳ ರಾಜ) ರಾಜಧರ್ಮವನ್ನು ಬೋಧಿಸಿದರು ಕರ್ನಾಟಕ ರಾಜಧಾನಿಯಲ್ಲೊಂದಾದ ಮಂಗಳವೇಢೆಯಲ್ಲಿ ಒನ್ನೆ ಕಾಪಾಲಿಕಸಿದ್ಧನ ಅಪ್ಪಣೆಯಂತೆ ಖಡ್ಗಕ್ಕೆ ಬಲಿಯಾಗ ಲಿದ್ದ ೧೫ ಸಾವಿರ ಕನ್ನಡಿಗರಿಗೆ ಜೀವದಾನವಿತ್ತು ಅಲ್ಲಿಯ ನೃಪಾಲಾಜನಿಗೆ ದಯಾಧರ್ಮವನ್ನು ಬೋಧಿಸಿದರು ಇತ್ಯಾದ್ಯನೇಕ ಚಾರಿತ್ರಿಕ ವಿಷಯ ಗಳು ಅವಂತವಾಗಿವೆ. ಹೀಗೆ ವೀರವಿಶ್ವವು ಪ್ರಾಚೀನ ಕಾಲದಿಂದ ದೇಶ ಮತ್ತು ಧರ್ಮಗಳ ಉದ್ಧಾರಕ್ಕೆ ಕಾರಣೀಭೂತವಾಗಿದೆ ಪ್ರಸ್ತುತ ಸನ್ನಿಧಿಯವರು ವೀರಸ್ವಪ್ರತಿಜ್ಞೆಯನ್ನು ಕೈಕೊಂಡು ಸಂದೇಶ ವಿತ್ತುದು ವೀರಸಿಂಹಾಸನದ ಪ್ರಾಚೀನ ಉಜ್ವಲ ಪರಂ ಪರೆಗೆ ಒಪ್ಪುವಂತಹುದಾಗಿದೆ ಈ ಘೋಷಣೆಯ ಹೊತೆಗೆ ವೀರಶೈವರಲ್ಲಿ ಏಕ್ಯ ನಿರ್ಮಾಣದ ವಿಷಯವೂ ವಿದ್ಯುಕ್ಕುಶಾರ ಇತ್ಯಾದಿಗಳು ಕಾರ್ಯರೂಪಕ್ಕೆ ಬರುವ ವರೆಗೂ ಈ ವಿಧ ಕಾರ್ಯಗಳನ್ನು ಜಡೆಯಗೊಡುವ ದಿಲ್ಲವೆಂದು ಘೋಷಿಸಿದ್ದರೆ ಬಹಳ ಚೆನ್ನಾಗಿತ್ತು. ಆ ಪೀಠಯಲ್ಲಿ ಸನ್ನಿ ಧಾನದವರು ಕಾರ್ಯವನ್ನು ಕೈಕೊಂಡು ಅಖಿಲ ವೀರಶೈವ ಭಕ್ತಮಾಹೇಶ್ವರರನ್ನೂ ಕಟ್ಟಾಭಿ ಮಾನಿಗಳನ್ನೂ ಈ ಮಹತ್ಕಾರ್ಯದಲ್ಲಿ ತೊಡಗಿಸುವರೆಂದು ಭಕ್ತವರ್ಗವು ಆತುರ ದಿಂದ ಕಾಯುತ್ತಿದೆ. ಮೊನ್ನೆ ಮೇ ತಿಂಗಳಲ್ಲಿ ಬಳ್ಳಾರಿ ವಿಜಾರಣೆಗಾಗಿ ಬಂದಿದ್ದ ನ್ಯಾಯಮೂರ್ತಿ ಮಿಶ್ರಾರವರ ಕಡೆಗೆ ಬಳ್ಳಾರಿ ಜಿಲ್ಲೆಯ ವೀರಕೈನ, ಮಾಧ್ಯಮಿಕಾಧಿಕಾರಿಗಳು ಮತ್ತು ಯಾತ್ಮಿಸಿ ಬಳ್ಳಾರಿಯ ಉಳುಮೆಗೆ ಕಾರಣರಾಗಿರುವಂತೆ ಅಖಂಡಕರ್ನಾಟಕ ರಾಜ್ಯನಿರ್ಮಾಣಕ್ಕೆ ವೀರಶೈವ ಧೀಕ್ಷರಿರು ತಮ್ಮ ಅಧಿಕಾರ, ತಪಸ್ಸು ಮೊದಲಾದವು ಗಳನ್ನು ಉಪಯೋಗಿಸಿದಲ್ಲಿ ಕರ್ನಾಟಕದ ವಿಕ್ಷತಿಗೆ ಯಾವ ಹಡೆಯೂ ಉಂಟಾಗಲಾರದು ಆರೀತಿ ಕಾರ್ಯ ಕ್ರಮವನ್ನು ಕೈಕೊಳ್ಳು ವರೆಂದು ಕರ್ನಾಟಕದ ಸಮಸ್ತ ಜನಾಂಗವು ಎದುರುನೋಡುತ್ತಿದೆ ಆದಕಾರಣ ಸನ್ನಿಧಿಯವರು ತೀವ್ರತರಾಗಿ ಅಖಂಡಕರ್ನಾಟಕ ರಾಜ್ಯನಿರ್ಮಾಣಕ್ಕೆ ತಕ್ಕಂತಹ ಘೋಷಣೆಯನ್ನು ಮಾಡಿ ೨ ತೋಟೆ ಕನ್ನಡಿಗರಲ್ಲಿ ವೀರಶೈತನ್ಯವನ್ನು ತುಂಬುವದಲ್ಲದೆ ಕರ್ನಾಟಕದಲ್ಲಿರುವ ವಕ್ಷ ಪಂಗಡ ಗಳ ಭೇದಭಾವವನ್ನು ನಿವಾರಿಸುವ ಬಗ್ಗೆ ಕಾರ್ಯ ಕ್ರಮವನ್ನು ಕೈಕೊಂಡಲ್ಲಿ ಉತ್ತಮವಾದೀತು ಯಾವುದೇ ರಾಜ್ಯ ಸ್ಥಾಪಿಕವಾಗಬೇಕಾದರೆ ಬರಿಯ ಕ್ಷಾತ್ರಬಲದಿಂದ ಸಾಧ್ಯವಿಲ್ಲ ಇದರ ಜೊತೆಗೆ ಬ್ರಹ್ಮ ತೇಜಸ್ಸು ಕೂಡಿದಾಗಲೇ ರಾಜ್ಯನಿರ್ಮಾಣವು ಸುಲಭ ವಾಗುತ್ತದೆ ಪ್ರಾಚೀನ ಭಾರತದ ಅನೇಕ ರಾಜ್ಯಗಳ ಇತಿಹಾಸಗಳು ಈ ಮಾತಿಗೆ ಉಪಸ್ತುಬಕಗಳಾಗಿವೆ. ಆದಕಾರಣ ರಾಜ್ಯನಿರ್ಮಾಣದಂಥ ಮಹಾಕಾರ್ಯದಲ್ಲಿ ವೀರಸಿಂಹಾಸನಾಧೀಶ್ವರರೂ ಇತರ ವೀರಾಧಿಪತಿಗಳೂ ಸ್ವಾಮಿಗಳೂ ಸಹಕರಿಸಿ ಕರ್ನಾಟಕ ರಾಜ್ಯನಿರ್ಮಾಣಕ್ಕೆ ಯೋಗ್ಯ ಸಂದೇಶವನ್ನು ಕೊಡುವದಲ್ಲದೆ ಕರ್ನಾಟಕ ರಾಜ್ಯಸ್ಥಾಪನಾಚಾರ್ಯರೆಂಬ ಶ್ರೇಯಸ್ಸಿಗೆ ಕಾರಣರಾಗ ಬೇಕೆಂದು ಪ್ರಾರ್ಥಿಸುತ್ತೇನ

ಶ್ರೀರೇಣುಕೇಶ್ವರ ದೇವಾಲಯಸ್ಥಾಪನೆ

ವೈಶೂರು

ವೈಶೂರು ನಗರವಾಸಿಗಳಾದ ಡಾ|| ಟಿ ಎಸ್ ಸಿದ್ದಪ್ಪನವರು, ಸೊಪ್ಪಿನಕೆರೆಯ ಭೀದಿಯಲ್ಲಿರುವ ವಿಶಾಲವಾದ ಜಾಗವು ಶ್ರೀ ದೇವಾಲಯವನ್ನು ಕಟ್ಟಿಸಿ ಶ್ರೀರೇಣುಕೇಶ್ವರ ಲಿಂಗೋದ್ಭವ ಶಿಲಾಮೂರ್ತಿಯನ್ನು ಪ್ರಾಸ್ಥೇಕ್ಷವಾಗಿ ಪ್ರತಿಷ್ಠಮಾಡಿಸಿ ನಿತ್ಯಪೂಜೆ ನೈವೇದ್ಯ-ದೀಪಾದಿಗಳಲ್ಲಾ ಸರಿಯಾದ ಏರ್ಪಾಟು ಮಾಡಿಸಿ ದ್ದಾರೆ ಈ ದೇವರಪ್ರತಿಷ್ಠೆಯಾದವೇಳೆ ಮಾನಸಿಕಾಲಿಟಿ ಯವರು ಬೀದಿಗೆ "ಶ್ರೀರೇಣುಕೇಶ್ವರ ಟೌಂಹಲ್ ಸ್ಟ್ರೀಟ್" ಎಂಬ ಬದಲಾಯಿಸಿದ್ದಾರೆ ಈ ದೇವ ಸ್ಥಾನದಲ್ಲಿ ನಡೆಯುವ ಶ್ರೀರೇಣುಕಜಯಂತಿ ಮೊದ ಲಾದ ಉತ್ಸವಗಳಲ್ಲಿ ಅರಮನೆಯ ಮರ್ಯಾದೆ ಗಳು ಬರುವಂತೆ ಶ್ರೀಮನ್ಮಹಾರಾಜ ಜಯಚಾಮ ರಾಜೇಂದ್ರ ವಡೆಯರು ಹುಕಂ ದಯಪಾಲಿಸಿದ್ದಾರೆ ಈ ದೇವಾಲಯದ ಸಮಾಪಕರಲ್ಲಿ ಹೆಚ್ಚಾಗಿ ವೀರಶೈವ ಕುಟುಂಬದವರು ಇದ್ದಾರೆ ಇವರುಗಳಲ್ಲಿ ನಿತ್ಯ ದೇವರ ದರ್ಶನಕ್ಕೆ ಒರುತ್ತಿರುವುದು ತುಂಬಾ ಸಂತೋಷದ ವಾಗಿದೆ ಈ ರೀತಿಗೆ ಮುನಿಸಿಪಾಲಿಟಿಯವರು ಟೌಂ ಹಾಕಿಸಿ ರಿನೇರಿಮಾಡಿದ್ದಾರೆ ಈ ಕಾರ್ಯಗಳನ್ನು ಮಾಡಿಕೊಟ್ಟವರಿಗೆಲ್ಲಾ ಶ್ರೀರೇಣುಕೇಶ್ವರರು ಆರೋಗ್ಯ ಐಶ್ವರ್ಯಾದಿಗಳನ್ನು ಉಂಟುಮಾಡಲೆಂದು ಹಾರೈಸುವ,

ಓರ್ವ ಧರ್ಮಾಭಿಮಾನಿ.

ಶ್ರೀ ಪಂಚಾಚಾರ್ಯ ಸೇವಾಸಂಘದ ಕಾರ್ಯಕ್ರಮ ಗದಗ

ಶ್ರೀಮದ್ರಂಭಾಪುರಿ ವೀರಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ಪ್ರಸನ್ನ ರೇಣುಕ ವೀರಗಂಗಾಧರ ರಾಜೇಂದ್ರ ಶಿವಾಚಾರ್ಯ ಮಹಾ ಸನ್ನಿಧಿಗಳವರ ಅಡ್ಡಪಲ್ಲಕ್ಕಿ ಮಹೋತ್ಸವವು ದಾವಣಗೆರೆ ನಗರದಲ್ಲಿ ತಾ|| ೮-೬-೫೩ ನೇ ಸೋಮವಾರ ಅಮಾಕಸ್ಯೆ ಆ ಉತ್ಸ ವಕ್ಕೆ ಗದಗ, ಬೆಟಗೇರಿ, ಪಂಚಾಚಾರ್ಯಸೇವಾಸಂಘದ ಪ್ರಯಾಣ ಬೇಕಾದ ಕುರಿತು ತಾ|| ೫-೬-೫೩ ನೇ ದಿನಸ ಕಮಟಿಯಲ್ಲಿ ನಿರ್ಣಯಿಸಿದ ಪ್ರಕಾರ ತಾ|| ೭-೬-೫೩ ನೇ ಭಾನುವಾರ ಸ್ಥಿ ಹಿರಿ ಬ್ರಿ ಮಂಗಳೂರು ಅಕಳೆಕೆ ಹಿರೇಮಠದ ಪಟ್ಟದ ಮಹಾಸ್ವಾಮಿಗಳವರ ಸನ್ನಿಧಿ ಯಲ್ಲಿ ಭಕ್ತವೃಂದವು ಹೊರಟು ತಾ|| ೮-೬-೧೯೫೩ ನೇ ಸೋಮವಾರ ರಿತಸ( ) ಗಳವರ ಅಡ್ಡಪಲ್ಲಕ್ಕಿ ಮ ಹೋತ್ಸವದಲ್ಲಿ ಭಕ್ತಿಪೂರ್ವಕ ಸೇವೆಸಲ್ಲಿಸಿ ತಾ|| ೯-೬-೫೩ ನೇ ಮಂಗಳವಾರ ಗುರುಕಾಣಿಕೆಯನ್ನು ಸಲ್ಲಿಸಿ ದರ್ಶ ನಾಶೀರ್ವಾದಗಳನ್ನು ಪಡೆದು ಶ್ರೀ ಜಗದ್ಗುರು ಪಂಚಾ ಚಾರ್ಯರ ಜಯ ಘೋಷದೊಡನೆ ಮರಳಿ ಸ್ವಗ್ರಾಮಕ್ಕೆ ತಲ್ಪಿದೆವು.

ಸೆಕ್ರೆಟರಿ
ಪಂಚಾಚಾರ್ಯ ಸೇವಾಸಂಘ, ಗದಗ

ವರ್ತಮಾನಸಂಗ್ರಹ

ಭಾಷಾವಾರು ಪ್ರಾಂತ್ಯದ ಪ್ರಶ್ನೆ ಜಾಗ್ರತೆ ಬಗೆಹರಿಯಬೇಕು

ಬೇತಲ್‌ಸಿಟ್ಟಿ ಸೇರಿದ ಪಿ. ಎಸ್. ಪಿ. ಸಮ್ಮೇಳನ ದಲ್ಲಿ ಶ್ರೀ ಆಚಾರ್ಯ ಮಹಾತ್ಮರವರ ನರವಿ

ಉತ್ತರ ಭಾರತದಲ್ಲಿ ಕೋಮುವಾರು ಚಳುವಳಿ ಮತ್ತು ದಕ್ಷಿಣಭಾರತದಲ್ಲಿ ಭಾಷಾವಾರು ಪ್ರಾಂತ ಚಳು ವಳಿ ಇವುಗಳ ಫಲವಾಗಿ ಹದಗೆಟ್ಟಿರುವ ಪರಿಸ್ಥಿತಿಯನ್ನು ಕಮ್ಯೂನಿಸ್ಟ್ ಪಕ್ಷವು ತನ್ನ ಸ್ವಾರ್ಥಕ್ಕಾಗಿ ಉಪಯೋಗ ಗಿಸಿಕೊಳ್ಳುತ್ತಿದೆ ಭಾರತದ ವಿಕ್ಷತಿಯನ್ನು ಸಹಿಸಲಿಗೆ ಳಸಿ ರಾಷ್ಟ್ರವನ್ನು ದುರ್ಬಲಗೊಳಿಸುವ ಶಕ್ತಿಗಳಿಗೆ ಉತ್ತೇ ಜನ ಕೊಡಲಾಗುತ್ತಿದೆ—ಎಂಬುದಾಗಿ ಬೇತಲ್‌ಸಿಟ್ಟಿಯ ಆರಂಭ್ಯವಾದ ಪ್ರಜಾಸೋಷಲಿಸ್ಟ್ ಪಕ್ಷದ ಮಹಾ ಸಮ್ಮೇ ಳನಕ್ಕೆ ಪಕ್ಷದ ಕಾರ್ಯಾದರ್ಶಿಗಳಾದ ಶ್ರೀ ಆಶೋಕ್ ಮೆಹ್ತಾರವರು ಒಪ್ಪಿಸಿದ ನರವಿಯಲ್ಲಿ ತಿಳಿಸಿದ್ದಾರೆ

ಭಾರತದಲ್ಲಿ ಇಂದು ಕಾಂಗ್ರೆಸ್ ಪಕ್ಷವು ಪ್ರಭುತ್ವ ನಡೆಸುತ್ತಿದೆ ಪ್ರಜಾ-ಸೋಷಲಿಸ್ಟ್ ಪಕ್ಷ, ಕಮ್ಯೂನಿಸ್ಟ್ ಪಕ್ಷ ಮತ್ತು ಜನಸಂಘಗಳು ವಿರೋಧ ಪಕ್ಷಗಳಾಗಿವೆ ಪ್ರಜಾ-ಸೋಷಲಿಸ್ಟ್ ಪಕ್ಷಕ್ಕೂ ಕಮ್ಯೂನಿಸ್ಟ್ ಪಕ್ಷಕ್ಕೂ ಜನಸಂಘ ಇವುಗಳಿಗೂ ನೂರಾರೂ ತಾತ್ವಿಕ ವ್ಯತ್ಯಾಸಗಳಿರುವುದರಿಂದ ಪ್ರಜಾ ಸೋಷಲಿಸ್ಟ್ ಪಕ್ಷವು ಕಮ್ಯೂನಿಸ್ಟ್ ಪಕ್ಷದೊಡನಾಗಲೀ ಅಥವಾ ಜನಸಂಘ ದೊಡನಾಗಲೀ ಯಾವ ಸಂಬಂಧವನ್ನೂ ಹೊಂದಿರಲು ಸಾಧ್ಯವಿಲ್ಲ ಕಮ್ಯೂನಿಸ್ಟ್ ಪಕ್ಷವನಾಗಲೀ ಅಥವಾ ಜನ ಸಂಘವನಾಗಲೀ ಅಧಿಕಾರಕ್ಕೆ ಬಂದರೆ ಜೀಣ ಅಥವಾ ಪಾಕಿ ಸ್ತಾನದಲ್ಲಾದಂತೆ ಸೋಷಿಯಲಿಸ್ಟ್ ಚಳುವಳಿಗೆ ಭಾರಿ ಆಪತ್ತಿನಮೇಲೆಯೆಂಬುದಾಗುವುದು ಆದ್ದರಿಂದ ಭಾರತದ ಪ್ರ ಜಾ ಸತ್ತಾತ್ಮಕ ಅಸ್ತಿಭಾರಕ್ಕೆ, ಸೆಕ್ಯುಲರ್ ಧ್ಯೇಯಕ್ಕೆ ಚ್ಯುತಿಯುಂಟಾಗುವ ಪರಿಸ್ಥಿತಿಯಲ್ಲಿ ಪಿ. ಎಸ್. ಪಿ. ಉಗ್ರವಾಗಿ ಹೋರಾಡಲು ಹಿಂಜರಿಯುವುದಿಲ್ಲ.

ಗಡಿಯ ಬಗ್ಗೆ ಎಚ್ಚರಿಕೆ ಇರಲಿ

ಭಾರತದ ಗಡಿಯ ಪ್ರದೇಶಗಳಲ್ಲಿ ಕಮ್ಯೂನಿಸ್ಟರು ತಮ್ಮ ಗಮನವನ್ನು ಕೇಂದ್ರೀಕರಿಸಿದ್ದಾರೆ ತ್ರಿಪುರ, ಪಂ ಜಾಬ್, ಪೆಪ್ಸು ಗಳಲ್ಲಿ ಕೋಮುವಾರು ಭಾವನೆಯನ್ನು ಪ್ರಚೋದಿಸುವ ಪ್ರಯತ್ನ ದಲ್ಲಿ ಕಮ್ಯೂನಿಸ್ಟರು ತೊಡಗಿ ದ್ದಾರೆ "ಹಿಮಾಲಯದ ನೀತಿ" ಯಕ್ಕು ಆಮಂತರ ಬೇಕು ನೇಪಾಳದಲ್ಲಿ ಪ್ರಜಾ ಸತ್ತಾತ್ಮಕ, ಸೋಷ ಲಿಸ್ಟ್ ಶಕ್ತಿಗಳಿಗೆ ಬೆಂಬಲ ಕೊಡಬೇಕು.

ಭಾಷಾವಾರು ಪ್ರಾಂತ್ಯದ ಪ್ರಶ್ನೆ

ದಕ್ಷಿಣ ಭಾರತದಲ್ಲಿ ಭಾಷಾವಾರು ಪ್ರಾಂತ ಚಳುವಳಿ ಬಿರುಸಾಗುತ್ತಿದೆ, ಇಂತಹ ಮುಖ್ಯವಾದ ಜನತಾ ಚಳು ವಳಿಯಿಂದ ನಾವು ದೂರವಿರಬಾರದು. ಕಬ್ಬು ಹೆಚ್ಚು ಇಡಿದಂತೆ ಎಚ್ಚರದಿಂದಿರುವುದು ನಮ್ಮ ಕರ್ತವ್ಯ ಒಂದು ಭಾಷೆಯ ಗುಂಪಿಗೆ ಒಂದೇ ಜಂಟಿ ಪ್ರಾಂತವಿರಬೇಕೇ ವಿಷಯ ಹಲವಾರು ಪ್ರಾಂತಗಳಲ್ಲಿರಲಿ ಅಧಿಕ ಭದ್ರತೆಗೆ ಕುಂದಕ ಬರುತ್ತದೆ. ಭಾಷಾವಾರು ಪ್ರಾಂತ ರಚನೆಯ ಜೊತೆಯಲ್ಲೇ ಪ್ರಾಂತಗಳ ಪರಸ್ಪರ ಸಂಬಂಧ, ಮಧುರ ಬಾಂಧವ್ಯವನ್ನು ಬಲಪಡಿಸಬೇಕು, ೨-೩ ಪ್ರಾಂತ್ಯಗ ಳಿಗೆ ಒಬ್ಬನೇ ಗೌರ್ನರ್, ಒಂದೇ ಒಂದು ಪಬ್ಲಿಕ್ ಸರ್ವಿ ಸ್ ಕಮಿಷನ್, ಒಂದೇ ಹೈಕೋರ್ಟು ಇದ್ದರೆ ಪ್ರಾಂತಗ ಳಿಗೆ ವಿಕ್ಷಮಷ್ಟವೆಲ್ಲವೂ ಸಹಾಯವಾಗುವುದು. ಆಡಳಿತ ವೆಚ್ಚವೂ ಕಡಿಮೆಯಾಗುವುದು

ಭಾಷಾವಾರು ಪ್ರಶ್ನೆಯನ್ನು ಜಾಗ್ರತೆಯಾಗಿಯೂ, ಫಲಪ್ರದವಾಗಿಯೂ ಬಗೆಹರಿಸಬೇಕು. ಏಕೆಂದರೆ ಇದುವ ರೆಗೂ ಪಡೆದಿರುವ ಪ್ರಾಂತಗಳಲ್ಲಿ ಮಾತ್ರವಿದ್ದ ಈ ಚಳುವಳಿಯು

ಈಗ ಗ್ರಾಮಾಂತರ ಪ್ರದೇಶಗಳಿಗೂ ತರಬಹುದೆಂದು ಎಂದು ಶ್ರೀ ಆರೋ ಮೆಹತಾರವರು ತಮ್ಮ ವರದಿಯಲ್ಲಿ ತಿಳಿಸಿದರು.

ಬಳ್ಳಾರಿಯಲ್ಲಿ ಪುಂಡರ ಹಾವಳಿ

ಜೂ ೧೫ ರಂದು ಅಪರಾಹ್ನ ಬಳ್ಳಾರಿಯ ಬೀದಿಗಳಲ್ಲಿ ಕೆಲವು ಪುಂಡರು ದೊಣ್ಣೆಗಳನ್ನು ಮತ್ತು ಆಯುಧಗಳನ್ನು ಹಿಡಿದುಕೊಂಡು ಪ್ರದರ್ಶನ ಮಾಡಿದರು

ಅವರು ಅಂಗಡಿಗಳನ್ನು ಲೂಟಿಮಾಡಿ, ಕನ್ನಡದಲ್ಲಿ ಬರೆಯಲಾಗಿದ್ದ ಸೈನ್‌ಬೋರ್ಡ್‌ಗಳನ್ನು ಕಿತ್ತುಹಾಕಿ, ಜನರುಮೇಲೆ ದೊಣ್ಣೆ ಛಡಿಸಿದರು. ಪುಂಡರಲ್ಲಿ ಕೆಲವರು ವಿದ್ಯಾಸಂಸ್ಥೆಗಳೊಳಗೆ ಮಗ್ಗಿ ಅಲ್ಲಿದ್ದ ಕುರ್ಚಿ, ಮೇಜು ಪಸ್ಟರೆ ಸಾಮಾಪತ್ರಿ ಮುಚ್ಚಿಹೋಗುವಂತೆ ಒಡೆದುಹಾಕಿ, ಪಾಠಿಗಳನ್ನು ಮುಚ್ಚಿದೇಕೆಂದು ಒತ್ತಾಯ ಪಡಿಸಿದರು ಕೋರ್ಟಿನ ವರಾಂಡದಲ್ಲಿ ಪುಂಡರು ವಕೀಲರೊಬ್ಬರನ್ನು ಹಿಡಿದುಕೊಂಡು ಜೈಸ್ಸಾಗಿ ಹೊಡೆದರು ಇದರಿಂದ ಕೋರ್ಟಿನ ಕಾರ್ಯಕಲಾಪಗಳೆಲ್ಲವೂ ನಿಂತುಹೋದವು. ಸಮೀಪದಲ್ಲಿದ್ದ ಅಂಗಡಿಗಳನ್ನೂ ಮತ್ತು ಭೋಜನ ವಸತಿಗೃಹಗಳನ್ನೂ ಮಾಲೀಕರು ಭಯಭ್ರಾಂತರಾಗಿ ಮುಚ್ಚಿದರು

ಶಸ್ತ್ರಸಜ್ಜಿತ ಪೋಲೀಸರು ಕೂಡಲೇ ಸ್ಥಳಕ್ಕೆ ಧಾವಿಸಿ ಶಾಂತಿಯೇರ್ಪಡಿಸಿದರು. ಪ್ರದರ್ಶಕರು ತರುವಾಯ ಸಾರ್ವಜನಿಕ ಹಾರ್ತಾಳ ಸಭೆ ಸೇರಿ ಬಳ್ಳಾರಿ ತಾಲ್ಲೂಕಿನ ಬಗ್ಗೆ ಮಾಡಿರುವ ನಿರ್ಧಾರವನ್ನು ಕೇಂದ್ರ ಸರ್ಕಾರ ಬದಲಾಯಿಸಬೇಕೆಂದು ಕೋರಿದರು

ಕರ್ನಾಟಕ ಕ್ರಿಯಾ ಸಮಿತಿಯ ಕಾರ್ಯದರ್ಶಿಗಳಾದ ಶ್ರೀ ಜಿ ನರಸಿಪ್ಪಮೆಟ್ಟಿಯವರು ಪತ್ರಿಕಾ ಪ್ರಕಟಣೆಯೊಂದರಲ್ಲಿ ಸರ್ಕಾರ ಕೈಪಾಕ ಕೂಡಲೇ ಬಳ್ಳಾರಿಯಲ್ಲಿ ಶಾಂತಿಯನ್ನು ಸ್ಥಾಪಿಸಬೇಕೆಂದು ಮನವಿಮಾಡಿದ್ದಾರೆ ಪುಂಡರ ದೌರ್ಜನ್ಯದ ಪರಿಣಾಮವಾಗಿ ಬಳ್ಳಾರಿಯ ಜನರು ಆಸಹಾಯಕರಾಗಿದ್ದಾರೆ ಬಳ್ಳಾರಿ ತಾಲ್ಲೂಕಿನ ಬಗ್ಗೆ ಕೇಂದ್ರ ಸರ್ಕಾರ ಪುನರ್ವಿಮರ್ಶಿಸಬೇಕೆಂದು ಒತ್ತಾಯಪಡಿಸಲು ಜವಾಬ್ದಾರರಾದ ಕೆಲವು ವ್ಯಕ್ತಿಗಳು ಈ ಪುಂಡರನ್ನು ದೌರ್ಜನ್ಯ ಕೃತ್ಯಗಳಿಗೆ ಹುರಿದುಂಬಿಸಿದ್ದಾರೆ. ಇದು ತುಂಬಾ ಶೋಚನೀಯ ಸರ್ಕಾರ ತೀವ್ರ ಕ್ರಮ ತೆಗೆದುಕೊಂಡು ಶಾಂತಿ ಭದ್ರತೆಗಳನ್ನು ನೆಲೆಗೊಳಿಸಿ ಜನರಲ್ಲಿ ವಿಶ್ವಾಸವನ್ನು ಉಂಟುಮಾಡಿ ಪುಂಡರನ್ನು ಶಿಕ್ಷಿಸಬೇಕೆಂದು ಕೋರುತ್ತೇನೆ —ಎಂದು ಶ್ರೀಯುತರು ವಿವರಿಸಿದ್ದಾರೆ

ಬಳ್ಳಾರಿ ಕನ್ನಡಿಗರ ಮೇಲೆ ಆಂಧ್ರರ ದೌಂಬಿ

ಸಂಕ್ಷಿಪ್ತ ಶಿವಪೂಜಾವಿಧಿ (೧೦ನೆಯ ಆವೃತ್ತಿ)	...	...	೩ ಆಣೆ
ಅಘವಾದಿಧಿಕ್ಕಾರಶತ್ವದರ್ಪಣ (೫ನೆಯ ಆವೃತ್ತಿ)	...	...	೩ ಆಣೆ
ಪಂಚಾಚಾರ್ಯಪ್ರಕಾಶ	...	...	೩ ಆಣೆ
ಪಂಚಾಚಾರ ಪ್ರಕಾಶಿಕಾ	...	...	೩ ಆಣೆ
ಶ್ರೀಗುರುತತ್ತ್ವಸದರಣ (೩ನೆಯ ಆವೃತ್ತಿ)	...	...	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	...	...	೪ ಆಣೆ
ಲಿಂಗಧಾರಣವಿಧಿ	...	...	೪ ಆಣೆ
ವಿವಾಹವಿಧಿ (೪ನೆಯ ಆವೃತ್ತಿ)	...	...	೪ ಆಣೆ
ಶ್ರೀಪಶಿಪಂಡಿತಾರಾಧ್ಯರ ಕಾಲನಿರ್ಣಯ	...	...	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	...	...	೪ ಆಣೆ
ವೈದಿಕವಾಜ್ಮಯರಹಸ್ಯ	...	...	೪ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೩ನೆಯ ಆವೃತ್ತಿ)	...	...	೪ ಆಣೆ
ಶೈವೋಪನಿಷತ್ಸಂಗ್ರಹ (ಸಂಸ್ಕೃತ) (೨ನೆಯ ಆವೃತ್ತಿ)	...	...	೬ ಆಣೆ
ಸದ್ಯಾಸಾಶ್ತ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ)	...	...	೬ ಆಣೆ
ವೀರಶೈವಾಂಶ್ಚೇಷ್ಟಿ-ಶಾದ್ಧವಿಧಿ	...	...	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಸೂತ್ರ, ಚಿಕ್ಕಸೈಜು)	...	...	೮ ಆಣೆ
ತಿವಾದ್ವೈತಪರಭಾಷಾ (ಸಂಸ್ಕೃತ)	...	...	೮ ಆಣೆ
ವೀರಕೈವಮಮಹತ್ಕರು	...	...	೮ ಆಣೆ
ಬಸವಧ್ವಾಂತವಿವಾಕರ (೩ನೆಯ ಆವೃತ್ತಿ)	...	...	೮ ಆಣೆ
ಆಗಮಪರಿಜ್ಞಾನ	...	...	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವರಿ ಭಾಷಣಮು (ತೆಲುಗು)	...	...	೮ ಆಣೆ
ಶ್ರೀಜಗದ್ಗುರು ಶಿವಾನಂದವಿಜಯ	...	...	೮ ಆಣೆ
ಶ್ರೀಜಗದ್ಗುರು ವಿಶ್ವಕರ್ಣ ವಿಜಯ ನಕ್ಷತ್ರಮಾಲಿಕಾ	...	...	೮ ಆಣೆ
ಕನ್ನಡ ನ್ಯಾಯಶತಕಮ್	...	...	೮ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶತಶಿವಾಚಾರ್ಯಕೃತ)	...	...	೧೩ ಆಣೆ
ಶಿವಾಸೂತ್ರಸಿದ್ಧಾಂತದರ್ಪಣ	...	...	೧೩ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ಪ್ರಾಚೀನತ್ವ	...	...	೧ ರೂ
ಮಾಹೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ)	...	...	೧ ರೂ
ವಿವೇಕಮುಕ್ತಾವಳಿ	...	...	೧ ರೂ
ವಿಜಾರಸಾರಾವಳಿ	...	...	೧ ರೂ.
ವೈದಿಕಶಿವಪೂಜಾವಿಧಿ (ಸೈದಿಕಶ್ತರಯುಕ್ತರಾಮು ೩ನೆಯ ಆವೃತ್ತಿ)	...	...	೧೫ ರೂ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	...	...	೧೫ ರೂ
ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್	...	...	೧೫ ರೂ.
ಸಚಿತ್ರ ರೇಣುಕವಿಜಯ (೩ನೆಯ ಆವೃತ್ತಿ)	...	...	೧೫ ರೂ
ಶಿವಾಗಮಸಂಗ್ರಹ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	...	...	೨ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷೆಯಲ್ಲಿದ್ದು)	...	...	೨ ರೂ.
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	...	...	೩ ರೂ
ವೀರಕೈವರತ್ನ (೩ನೆಯ ಆವೃತ್ತಿ, ೩೦ ಮಹತ್ಕರ ಫೋಟೋಗಳಿರುವುವು)	...	...	೩ ರೂ.
A brief life-sketch of Pandit Sri-Kashinatha Shastriji (*English*)			**4 As**
The Philosophical Aspect of Viraisaivism (*English*)		...	**8 As**
Speeches by Pandit Shri Kashinatha Shastriji (*English*)			**12 As**
ವಿಜಯಾಚಾರ್ಯವಿಜಯ (ಚರಿತ್ರ)			೩ ಕ.
ಜೀವನೀಚರಿತ್ರ (ಚರಿತ್ರೆ)			೧ ಕ.
ಪಟ್ಟಾಚಾರ್ಯಚರಿತ್ರ (ಚರಿತ್ರೆ)			೧ ಕ.
ಪಂಚಿಕಾಚಾರ್ಯಚರಿತ್ರ (ಚರಿತ್ರೆ)			೧ ಆಣೆ

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್, ಪ್ರೆಸ್, ಮೈಸೂರು.

Edited, Printed and Published by Brahmanathadhyaksha Sri Mahadevaiah at Sri Panchacharya Electric Press, Sayaji Rao Road, Mysore

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M. 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಸಂಕಜಾತಜನಿತರ್ ಪಂಚಾಸ್ಯಶೀರಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರವಿಯೋಮಕರ್ ಪರಿಲಸತ್ಪಂಚಾಕ್ಷರೀಮೋಧಕರ್ । ಪಂಚಾಚಾರ್ಯಜಗದ್ಗುರೂತ್ತಮವರ್‌ಪಾಲಿಪ್ಪುದೀಲೋಕಮಂ ॥

ಸಂಸ್ಥಾಪಕರು—ಶಾಗನೂರು ಬೃಹನ್ಮಹಾದ್ಯಕ್ಷರಾದ ಶ್ರೀ ಮಹಾದೇವಯ್ಯನವರು

ವಾರ್ಷಿಕ ಚಂದಾ ೩ ರೂ] ಸಂಪಾದಕರು— ಶಾಗನೂರು ಬೃಹನ್ಮಹಾದ್ಯಕ್ಷರಾದ ಶ್ರೀ ಮಹಾದೇವಯ್ಯನವರು [ವಿ. ಪಿ ಖರ್ಚು ಸೇರಿ ೩ ರೂ ೪ ಆ.

ಸಂಪುಟ ೩೭] ಸೋಮವಾರ ತಾ॥ ೧೦ ನೇ ಆಗಸ್ಟ್ ೧೯೫೩ [ಸಂಚಿಕೆ ೧೩

ಪತ್ರವ್ಯವಹಾರ

[ಪತ್ರಿಕೋದ್ಯಾರರು ಅಭಿಪ್ರಾಯ ಪಡುವ ಲೇಖಪಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ ಎಂಬ ವಿಷಯವನ್ನು ಸದರೂ ಲಕ್ಷ್ಯದಲ್ಲಿಡತಕ್ಕದ್ದು —ಸಂ]

॥ ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥

ತ್ರೈಲೋಕ್ಯಸಂಪದಾಲೀಢ್ಯ ಸಚ್ಚಿದಾನಂದ-ರೂಪಾಯ
ಶಮುಲ್ಲೇಖಾಭಿವ್ಯಕ್ತಯೇ ' ಶಿವಾಯ ಬ್ರಹ್ಮಣೇ ನಮಃ।

ಶ್ರೀ ಗುರುದೇವತಾ ಭಕ್ತಿಸರಾಯಣರಾದ ಆಸ್ತಿಕ ಮಹಾಶಯರೇ! ಶ್ರೀಮದ್ವೀರಶೈವಾ ಕ ಸಿದ್ಧಾಂತ ಪುರಾಣಾಗಮೇಳಾಸಕ ಸಕಲ ಶಾಸ್ತ್ರ ಸಮ್ಮತಿ ಪ್ರಸಿದ್ಧವಾಗಿರುವ ಪಂಚಾಚಾರ ಪರಂಪರಾಗತ ಪಟ್ಟಸ್ಥಾಪನಾ ಸವಾಂಗ ಸಂಪೂರ್ಣ ಶ್ರೀಮದ್ವಿರಕ್ತಶೈವ ಮಾಮಾರ್ಯಾ ಸಮಾಜಾರ್ಯ ಶ್ರೀ ಜಗದ್ಗುರು ರೇಣುಕ ಭಗವತ್ಪಾದ ಮಹಾಚಾರ್ಯ ಪರಂಪರಾಗತ ಮೂಲಯಾಶ್ರಲಮುಖ ಭದ್ರತರ ಭದ್ರತರ ಭಾಸಮಾನ ಸಾನ್ನಿಧ್ಯಕ್ಕೆ ಲಸಿ 'ಶ್ರೀಮದ್ರಾಜಾವೀರ ಜಗದ್ಗುರು ವೀರಸಿಂಹಾಸನ ಮಹಾಸಂಸ್ಥಾನ ವರ' ದಲ್ಲಿ ಶಿಷ್ಯಶ್ರೇಣಿಯ ಸುಶಲ್ಪದ ಮೇರೆಗೆ ಪ್ರತಿಷ್ಠಿಸಲ್ಪಟ್ಟ ಶ್ರೀ ವೀರಭದ್ರಸ್ವಾಮಿ ಭದ್ರಕಾಳಿ, ಶ್ರೀ ಜಗದ್ಗುರು ರೇಣುಕರ ಲಿಂಗೋದ್ಭವ ಮೂರ್ತಿ, ಶ್ರೀ ಜ॥ ಮುತ್ತುಸ್ವಾಮೀಶ್ವರಸ್ವಾಮಿ ಮೊದಲಿಗಳಿಗೆ ರುದ್ರಾಭಿಷೇಕ, ಬಿಲ್ವಾರ್ಚನೆ, ಅನ್ನಪೂಪರಿಗಾ ಕುಂಕುಮಾರ್ಚನೆ, ಮಹಾಮಂಗಳಾರತಿ ಮುಂತಾದ ಸೇವಾದಿಗಳು ನಡೆಯಲಿರುವುವು

ಪೂಜಾಕಾರ್ಯಕ್ರಮಗಳು

ಸಂಸಾರತಾಪತ್ರಯದಿಂದ ಬೆಂದು ಬೆಂಡಾದ ಮನುಷ್ಯನಿಗೆ ಗುರುದೇವತೆಗಳ ಕೃಪಾದೃಗ್ಗ್ರಹಗಳು ಅತ್ಯವಶ್ಯಕವಾಗಿ ಬೇಕಾಗಿವೆ ಮೂಷಧಿಯಂದ ವಿವಾಸ ಬೇಕಾದ ಮಹಾಜಾಡ್ಯಗಳನ್ನು ಅಲ್ಪೌಷಧಿಯಂದ ಶಕ್ತಿ ದುಕೊಳ್ಳುವುದು ಸಾಧ್ಯವಾಗದಂತೆ, ಸಾಂಸಾರಿಕ ದುಃಖ ಪರಂಪರೆಯನ್ನು ಗುರುದೇವತಾಶ್ರೀಪಾದಾಗ್ರಹಗಳಿಂದ ಲ್ಲದೆ ಅನ್ಯೋಪಾಯಗಳಿಂದ ದೂರೀಕರಿಸಲು ಯಾರಿಂದಲೂ ಸಾಧ್ಯವಿಲ್ಲ ಒಟು ಪ್ರಾಚೀನಕಾಲದ ಶೃತಿ, ಆಗಮ, ಪುರಾಣ, ಇತಿಹಾಸ ಮುಂತಾದುವುಗಳನ್ನು ಪರಿಶೀಲಿಸಿದರೆ ಗುರುಕೃಪೆ ದೈವಾನುಗ್ರಹಗಳಂದ ಎಂತಹ ಮಹತ್ಕಾರ್ಯಗಳಾಗಿವೆ? ಯಾರುಯಾವ ಬಗೆಯ ದುರ್ಧರಗಳಾದ ಆಪತ್ಪುಗಳನ್ನು ದಾಟಿಸಿದರು? ಎಂತಹ ಆಸಾಧ್ಯ ಸಿದ್ಧಿಗಳನ್ನು ಪಡೆದರು ಎಂಬುದು ಸ್ಪಷ್ಟವಾಗಿ ತಿಳಿದುಬರುವ ಸಂಗತಿಯಾಗಿದೆ. ಮೃತ್ಯು ವಿಮೋಚನೆ ಜೋಡಾಡಲು. ರಾಜಾಧಿರಾಜರೂ, ಕಂದ ಮೂಲಾದಿಗಳನ್ನು ಸೇವಿಸುತ್ತ ಕಾನನದಲ್ಲಿ ಕಾಲಕಳೆಯುತ್ತಿದ್ದ ಅಳಿವಿನಳಿವಿನಾಶಕ್ತಿಸಂಪನ್ನರಾದ ಮಹಾ ಮಹರ್ಷಿಗಳೂ ಗುರು-ದೇವತೆಗಳ ಆರಾಧನೆಯಿಂದಲೇ ಸುಖಸಂಪತ್ತಿ, ಪದ್ಧತಿಗಳನ್ನು ಪಡೆದು ಶಾಂತಿಯ ಬೆಳಕಿನಲ್ಲಿ ಆಪಂತಮಯ - ಜೀವನವನ್ನು ಸಾಗಿಸಿದರೆಂಬ ವಿಷಯವು ಸುಪ್ರಸಿದ್ಧವಾಗಿದೆ ಪುಣ್ಯಪರಾಪೇಕ್ಷೆಗಳು ಈಗಲೂ ಇಷ್ಟಾರ್ಥಸಿದ್ಧಿಗಾಗಿಯೂ, ಕಷ್ಟನಿವಾರಣೆಗಾಗಿಯೂ, ಗುರುದೇವತಾಮಂದಿರಗಳಲ್ಲಿ ತಮ್ಮ ತಮ್ಮ ಹೆಸರುಗಳಿಂದ ನಿತ್ಯಪೂಜೆ, ಪರ್ವಪೂಜೆ, ಮಾಸಿಕಪೂಜೆ, ವಾರ್ಷಿಕಪೂಜೆ ಮುಂತಾದ ಪುಣ್ಯಕಾರ್ಯಗಳನ್ನು ನಡೆಯಿಸಿ ಅಪೂರ್ವವಾದ ಭಕ್ತಿಯಿಂದ ಸೇವೆಮಾಡಿ ಸಲ್ಲಿಸುತ್ತಾ. ನಡೆಸಿಯೂ ಪುಣ್ಯಾರ್ಜನೆ ಮಾಡಿಕೊಳ್ಳುತ್ತಾ ಧನ್ಯರಾಗುತ್ತಿರುವುದು ಸರ್ವರೂ ಕಂಡು ಕೇಳಲ್ಪಟ್ಟ ಭಾವಿಸಿದ್ದೇ ಸರಿಯಾಗಿದೆ ಈ ತತ್ವವನ್ನನುಸರಿಸಿ 'ಶ್ರೀ ಜಗದ್ಗುರು ರೇಣುಕಪುರಿ' ಮಾಮಾಸ್ಥಾನ ವರ' ದಲ್ಲಿ ಪ್ರಾಚೀನಪರಂಪರೆಯಿಂದ ನಿತ್ಯೋತ್ಸವಗಳು ನಡೆಯುತ್ತಿರುವಂತೆ ವಿಶೇಷವಾಗಿ ಈ ಕೆಳಗೆ ವಿವರಿಸಿದ ಕಾರ್ಯಕ್ರಮದಂತೆ ನಿಶ್ಚಯಿಸಿಕೊಂಡಿದ್ದೇವೆ ಈ ಕೆಳಗೆ ವಿವರಿಸಿದ ಕಾರ್ಯಕ್ರಮಗಳು ನಡೆಯಲು ವಿಜ್ಞಾಪಿಸಲಾಗಿದೆ ಕಕ್ಕಿ ಭಕ್ತಿಗಳುಳ್ಳ ಹರ-ಗುರುಭಕ್ತ ಮಹಾಶಯರು ಸೇವೆಯನ್ನು ಸ್ವೀಕರಿಸಿ ಪುಣ್ಯ ಪ್ರಸಾದಾನುಗ್ರಹಕ್ಕರ್ತರಾಗಬೇಕೆಂದು ಪ್ರಾರ್ಥಿಸುತ್ತೇವೆ.

ಪ್ರೌಜಾಕಾರ್ಯಗಳ ವಿವರ

(ಅ) ಪ್ರತಿದಿವಸ ನಡೆಯುವತ್ಕೆ ವಿಶೇಷಸೇವಾ ಪೂಜಾಕಾರ್ಯಗಳ ವಿವರ

೧ ಬೆಳಗ ರುದ್ರಾಭಿಷೇಕ, ಲಕ್ಷಬಿಲ್ವಾರ್ಚನೆ, ಕುಂಕುಮಾರ್ಚನೆ ಮಹಾಮಂಗಳಾರತಿ, ಮಹಾನೈವೇದ್ಯ ಮುಂತಾದವುಗಳು ೧೦೦೫-೦ ರೂಪಾಯಿ

೨ ವಿಶೇಷದಕಾರ ರುದ್ರಾಭಿಷೇಕ, ಸಹಸ್ರಬಿಲ್ವಾರ್ಚನೆ, ಕುಂಕುಮಾರ್ಚನೆ, ಮಹಾಮಂಗಳಾರತಿ, ಮಹಾನೈವೇದ್ಯ ಮುಂತಾದವುಗಳು ೧೦೮-೦ ರೂಪಾಯಿ

೩ ವಿಶೇಷದಕಾರ ರುದ್ರಾಭಿಷೇಕ, ಅಷ್ಟೋತ್ತರಶತ ಬಿಲ್ವಾರ್ಚನೆ, ಕುಂಕುಮಾರ್ಚನೆ, ಮಹಾಮಂಗಳಾರತಿ, ಮಹಾನೈವೇದ್ಯ ಮುಂತಾದವುಗಳು ೨೫-೦ ರೂಪಾಯಿ

೪ ವಿಶೇಷವಾರ ರುದ್ರಾಭಿಷೇಕ, ಅಷ್ಟೋತ್ತರಶತಬಿಲ್ವಾರ್ಚನೆ, ಕುಂಕುಮಾರ್ಚನೆ, ಮಹಾಮಂಗಳಾರತಿ, ನೈವೇದ್ಯ ಮುಂತಾದುವುಗಳು ೬ ೮-೦

೫ ಪ್ರತಿ ಅಮಾವಾಸ್ಯೆ ಪ್ರತಿ ಹುಣ್ಣಿಮೆಗಳಲ್ಲಿ ವಿಶೇಷವಾರ ರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನೆ, ಕುಂಕುಮಾರ್ಚನೆ, ಮಂಗಳಾರತಿ, ನೈವೇದ್ಯ ಮುಂತಾದವುಗಳು ೧೧-೦ ರೂ

೬ ಶ್ರಾವಣಮಾಸದಲ್ಲಿ ಪ್ರತಿದಿವಸ ವಿಶೇಷವಾರ ರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನೆ, ಕುಂಕುಮಾರ್ಚನೆ, ಮಂಗಳಾರತಿ, ನೈವೇದ್ಯ ಮುಂತಾದವುಗಳು ೧೧-೦-೦

(ಆ) ಶ್ರೀಜಗದ್ಗುರು ರೇಣುಕ ಜಯಂತಿ ರಥೋತ್ಸವ ಕಾಲದಲ್ಲಿ ನಡೆಯಿಸಬೇಕಾದ ಸೇವಾದಿ ಕಾರ್ಯಗಳ ವಿವರ

೧ ಶ್ರೀರಥೋತ್ಸವದ ದಿನದ ಸೇವಾ ೧೦೮-೦ ೦
೨ ಸ್ವಯಂಭೋತ್ಸವ ೧೫ ೦-೦
೩ ಅಕ್ಷರೋಹಣೋತ್ಸವ ೮೫ ೦-೦
೪ ಪುಷ್ಪೋತ್ಸವ ೧೫ ೦
೫ ಅಂಬಾಮಲಿರ್ಕೋತ್ಸವ ೧೫ ೦ ೦
೬ ರಥಾಸೀತ್ಸವ ೧೦ ೮ ೦
೭ ಪುಷ್ಪಾಭೋತ್ಸವ ೧೫ ೦ ೦
೮ ಕುಂಕುಮೋತ್ಸವ ೧೫ ೦ ೦
೯ ವೆಂಗಂಭೋತ್ಸವ ೧೫ ೦-೦
೧೦ ಭದ್ರಾವತಿಯಿಂದಾಭಿಷೇಕೋತ್ಸವ (ಮರಣ ಸವಾರಾಧನೆ) ೫೧ ೦-೦

(ಇ) ವಿಶೇಷ ಹಬ್ಬಗಳಲ್ಲಿ ನಡೆಯಿಸಬೇಕಾದ ಸೇವಾದಿ ಕಾರ್ಯಗಳ ವಿವರ

೧ ಚೈತ್ರ ಶು ದ್ಧ ಪಾಡ್ಯ (ಯುಗಾದಿಸೇವಾ) ೧೫ ೦ ೦
೨ ವೈಶಾಖ ಶುದ್ಧ ೩ ಜಗದ್ಗುರು ವಿಕೋರಾಮಾರಾಧ್ಯ, ೫ ಜಗದ್ಗುರು ದಾರು-ಕಾಚಾರ್ಯ ಜಯಂತಿ ಸೇವಾ ೧೫ ೦ ೦
೩ ವೈಶಾಖ ಪೂರ್ಣಿ ೩ ಶ್ರೀಬಸವೇಶ್ವರ ಜಯಂತಿ ಸೇವಾಸ್ತೋಗಂ ೦ ೦
೪ ಶ್ರೀಸೋಮ ಜಾಗ ಗಣೇಶ ಪೂಜಾದಿ ಸೇವಾ ೧೫ ೦ ೦
೫ ಆಶ್ವಿಜ ಶುದ್ಧ ಪಾಡ್ಯವಿಯಿಂದ ವಿಜಯದಶಮಿಯವರೆಗೂ (ನವರಾತ್ರಿ ಸೇವಾ) ೫೧ ೦ ೦
೬ ದೀಪಾವಳಿ ಮತ್ತ ಕಾರ್ತೀಕವಾಸದಲ್ಲಿ ದೀಪೋತ್ಸವದ ಸೇವಾ ದಿನ ೧೫ ೧೫ ೦-೦-೦
೭ ಧನುರ್ಮಾಸದ ಪೂಜಾಸೇವಾ ದಿನ ೧೫ ೧೫ ೦-೦-೦
೮ ಉತ್ತರಾಯಣದ ಪುಣ್ಯಕಾಲದ ಸೇವಾ ೧೫-೦ ೦
೯ ಮಹಾಶಿವರಾತ್ರಿ ಸೇವಾ ಶ್ರೀಜಗದ್ಗುರು ಪಂಡಿತಾರಾಧ್ಯ, ಜಗದ್ಗುರು ವಿಶ್ವಾರಾಧ್ಯರ ಜಯಂತಿ ಸೇವಾ ೧೫-೦-೦
೧೦ ಚಂದ್ರಗ್ರಹಣ, ಸೂರ್ಯಗ್ರಹಣಗಳ ಪರ್ವಕಾಲಗಳ ಸೇವಾ ೧೫-೦-೦

ಎಸ್. ಜೆ. ಶಿವಕಂಠಯ್ಯ,
ಎಜೆಂಟ್, ಶ್ರೀಜಗದ್ಗುರು ರೇಣುಕಾಪುರ ಸಂಸ್ಥಾನ ಮಠ. ಪೋ॥ ಬಾಳೆಹೊನ್ನೂರು ಹಿ॥ ಚಿಕ್ಕಮಗಳೂರು

ವಿ. ಸೂ— ಭಕ್ತಮಹಾಶಯರು ದಯಮಾಡಿ ಮಹಾಸಂಸ್ಥಾನ ಮೊಹರು ಹಾಕಲ್ಪಟ್ಟ ಪ್ರಿಂಟು ರಸೀದಿ ಇಲ್ಲದೆ ಹಣ ಪಾವತಿ ಮಾಡಬಾರದು. ಪೂಜಾ ವಿಧಿಯೋಗವಾದ ದಿವಸ ಪ್ರಸಾದವನ್ನು ಳಿಸಲು ಭಕ್ತ ಮಹಾಶಯರು ಸಂಪೂರ್ಣ ಪೋಸ್ಟ್ ವಿಳಾಸವನ್ನು ಹಣದ ರಸೀದಿಯಲ್ಲಿ ಬರೆಸಬೇಕಾಗಿಯೂ, ಮನಿಯಾರ್ಡರು ಮಾಡುವವರು ಕೂಪನ್ನಿನಲ್ಲಿ ಸಂಪೂರ್ಣ ವಿಳಾಸವನ್ನು ಬರಿಯಬೇಕಾಗಿಯೂ ವಿನಂತಿ

ಪಂಚಾಚಾರ್ಯಪ್ರಭಾ

೧೯೫೩ನೆಯ ಆಗಸ್ಟ್ ತಾ|| ೧೦ ನೇ ಸೋಮವಾರ

ಧರ್ಮಗುರುಗಳು ಅವರ ಕರ್ತವ್ಯಗಳು

ಸನಾತನ ಧರ್ಮಾವಲಂಬಿಗಳಾದ ಭಾರತೀಯರಲ್ಲಿ ಅನೇಕ ಮತಗಳೂ ಮತಸ್ಥಾಪಕರಿಂದ ಗುರುಗಳ ಮಠಗಳೂ ವಿರಾಜಿಸುತ್ತಲಿದ್ದು ಪ್ರತಿಯೊಂದು ಮತದ ಮೂಲಗುರುಗಳ (ಮತಸ್ಥಾಪಕರ) ಮಠಗಳ ಸಂಪ್ರದಾಯಾನುಸಾರವಾಗಿ ಪೀಠಾಧಿಕಾರವನ್ನು ನಡೆಯಿಸುತ್ತ ಬಂದುದು ಸರ್ವಶ್ರುತವಾಗಿದೆ. ವೇದವೇದಾಂಗತಜ್ಞರೂ ಸಕಲ ಶಾಸ್ತ್ರಕೋವಿದರೂ ಆಗಮೋಪನಿಷತ್ತುಗಳಲ್ಲಿ ನಿಷ್ಣಾತರೂ ಆದ ಪೀಠಾಧಿಕಾರಿಗಳು ಜಪ ತಪೋನುಷ್ಠಾನಗಳಿಂದ ತಮ್ಮ ಆತ್ಮಬಲವನ್ನು ಹೆಚ್ಚಿಸಿ ಅಣಿಮಾದ್ಯಷ್ಟಮಹಾಸಿದ್ಧಿಗಳನ್ನು ವಶಮಾಡಿಕೊಂಡು ಧರ್ಮಪರಿಪಾಲನೆಯನ್ನು ಮಾಡುತ್ತ ರಾಜಾಧಿರಾಜರಿಗೆ ಸದ್ಬೋಧೆಯನ್ನು ಮಾಡಿ ಅವರಿಂದ ಸೇವೆಗೊಳ್ಳುತ್ತ ಸಕಲರಿಂದ ಸನ್ಮಾನಿತರಾಗಿ ಮೆರೆದುದರಿಂದಲೇ ಇವರಿಗೆ ರಾಜಮರ್ಯಾದೆಗಳೂ ಅಡ್ಡಪಾಲಕಿ ಮೊದಲಾದ ಉತ್ಸವಗಳೂ ದೊರೆತು ಜನಸೋಪಾನವಾಗಿ ನಡೆಯುತ್ತ ಬಂದಿರುವವು. ಇವರು ಧರ್ಮಬೋಧೆಯಿಂದ ಜಗತ್ತನ್ನೇ ಉದ್ಧಾರಮಾಡುವವರಾದ್ದರಿಂದ ಜಗದ್ಗುರುಗಳೆಂದು ಹೆಸರು ಬಂದಿದೆ.

ಪ್ರಜಾಕ್ಷೇಮವನ್ನು ಬಯಸಿ ತನ್ನ ಭುಜಬಲದಿಂದ ರಾಜ್ಯವನ್ನು ರಕ್ಷಿಸಿಕೊಂಡು ಹೋಗಬಲ್ಲ ರಾಜನು ಹೇಗೆ ಮಾನ್ಯನೋ ಅದರಂತೆ ಆತ್ಮಬಲದಿಂದ ಧರ್ಮವನ್ನು ರಕ್ಷಿಸಿಕೊಂಡು ಹೋಗಲು ಗುರುಗಳು ದಕ್ಷರಾಗಿದ್ದಾರೆ. ರಾಜ್ಯಪರಿಪಾಲನೆಗೆ ತಕ್ಕ ಕಾನೂನುಗಳ ಅವಶ್ಯವಿದ್ದಂತೆ ಧರ್ಮಪರಿಪಾಲನೆಗೆ ಧರ್ಮನಿಬಂಧನೆಗಳೂ ಅವಶ್ಯವಾಗಿವೆ. ಈ ಧರ್ಮನಿಬಂಧನೆಗಳನ್ನು ಗುರುಗಳು ರಾಜರ ಸಹಾಯದಿಂದ ಬಲಪಡಿಸಿಕೊಂಡು ಹೋಗಬೇಕಾಗಿದೆ. ರಾಜರಿಗೂ ಧರ್ಮಗುರುಗಳಿಗೂ ನಿಕಟ ಸಂಬಂಧವಿದೆ. ಹಾಗಿಲ್ಲದೆ ಹೋದರೆ ಜಗತ್ತಿನಲ್ಲಿ ಧರ್ಮವು ತಲೆಯೆತ್ತಲಾರದು. ರಾಜನಿಲ್ಲದ ರಾಜ್ಯವೂ ಗುರುಗಳಿಲ್ಲದ ಮಠವೂ ಹಿರಿಯರಿಲ್ಲದ ಮನೆಯೂ ಚಿರಕಾಲ ಬಾಳಲಾರವೆಂದು ನೀತಿಯುಂಟು. ಅದೇಪ್ರಕಾರ ಈಗ ಭಾರತವು ರಾಜರನ್ನು ತೊರೆದದ್ದರಿಂದ ಸನಾತನಧರ್ಮಕ್ಕೆ ಆಶ್ರಯವಿಲ್ಲದಾಯಿತು. ಧರ್ಮಗುರುಗಳ ಆಸ್ತಿಪಾಸ್ತಿಗಳ ಮೇಲೆ ಆಘಾತಗಳು ಬೀಳಹತ್ತಿದವು. ಅದರಿಂದ ಮನನೊಂದ ಗುರುಗಳು ಜಿಗುಪ್ಸೆಗೊಳಗಾದರು. ಜನತೆಯ ಬೆಂಬಲದಿಂದ ಬಂದ ಈಗಿನ ಪ್ರಜಾರಾಜ್ಯದಲ್ಲಿ ಪ್ರಜಾ ಬೆಂಬಲಕ್ಕಾಗಿ ಗುರುಗಳು ದಿಕ್ಕುತೋಚದ ಮಠಗಳನ್ನು ಬಿಟ್ಟು ಸಂಚರಿಸತೊಡಗಿದರು. ಕೆಲವು ಮಠಗಳಲ್ಲಿ ಪೂರ್ವದಿಂದ ನಡೆಯುತ್ತ ಬಂದ ಪೂಜೋತ್ಸವಗಳು ನಿಂತುಹೋಗಿ ಪೂರ್ವಾಚಾರ್ಯರ ತತ್ವಕ್ಕೆ ಬಾಧಕವುಂಟಾಗಹತ್ತಿತು. ಸಂಚಾರದಲ್ಲಿ ಧರ್ಮಬೋಧೆಯೂ ನಿಂತುಹೋಗಿ ಜನಗಳಲ್ಲಿದ್ದ ಭಕ್ತಿಭಾವವೂ ಪೂಜ್ಯಬುದ್ಧಿಯೂ ನಶಿಸಹತ್ತಿದವು.

ಜಗತ್ತಿನಲ್ಲಿ ಯಾವುದೇ ರೀತಿಯಿಂದ ಭಗವಂತನ ಧ್ಯಾನ ಪೂಜಾದಿಗಳು ನಡೆದು ಆತನ ಕೃಪೆಯಿಂದ ಜನಗಳೆಲ್ಲ ಸುಖವಾಗಿ ಬಾಳಲೆಂದೇ ಧರ್ಮಸ್ಥಾಪಕರು ಒಂದೊಂದು ವಿಧವಾದ ಧರ್ಮವನ್ನು ನೆಲೆಗೊಳಿಸಿದರು. ಅವರಿಗೆ ಯಾರ ಭಯವೂ ಇದ್ದಿಲ್ಲ. ಧರ್ಮ ಸೇವೆಯ ಬಲವೇ ಅವರಿಗೆ ಅಜರಾಮರವಾದ ಕೀರ್ತಿ ಬಲಗಳನ್ನು ಕೊಟ್ಟಿತ್ತು. ರಾಜಾಧಿರಾಜರು ಚಕ್ರವರ್ತಿಗಳು ಋಷಿಗಳು ಮೊದಲಾಗಿ ತನು ಮನ-ಧನಗಳನ್ನು ಒಪ್ಪಿಸಿ ಭಯ ಭಕ್ತಿಯಿಂದ ನಡೆದು ಕೊಳ್ಳುತ್ತಿದ್ದರು. ವೀರಶೈವ ಮತಸ್ಥಾಪಕರಾದ ಶ್ರೀ ರೇಣುಕಾದಿ ಪಂಚಾಚಾರ್ಯರ ಲೀಲೆಗಳನ್ನು ಓದಿ ಕೇಳಿದ ಮಾನವರಿಗೆಲ್ಲಾ ಈ ವಿಷಯವು ಹೃದ್ಗತವಾಗಿರಬಹುದು. ಕಾಲಾಯ ತಸ್ಮೈನಮಃ ಕಾಲಕ್ಕೆ ಸರಿಯಾಗಿ ಜಗತ್ತು ಸಾಗಲಿಕ್ಕೆ ಹತ್ತಿದೆ. ಇದನ್ನು ರೂಪುಗೊಳಿಸಲು ಭಗವಂತನೇ ಅವತರಿಸಬೇಕು.

ಶ್ರೀ|| ಪಂ|| ಶ್ರೀ ಕಾಶೀನಾಥ ಶಾಸ್ತ್ರಿಗಳವರು ಗುರುವರ್ಗದ ಸುಧಾರಣೆಗಾಗಿಯೇ ಗುರುವರ್ಗದಲ್ಲಿ ಹುಟ್ಟಿ ತಮ್ಮ ಜನ್ಮವನ್ನು ಸವೆಸಿ ಕೀರ್ತಿಕಾಯರಾಗಿ ಹೋದರು. ಅವರ ಕಾಲದಲ್ಲಿ ರಂಭಾಪುರೀ ಪೀಠಾಧಿಕಾರಿಗಳಾದ ಜಗದ್ಗುರು ಶ್ರೀ ಶಿವಾನಂದ ರಾಜೇಂದ್ರ ಶಿವಾಚಾರ್ಯರೂ ಉಜ್ಜಯನಿ ಜಗದ್ಗುರು ಶ್ರೀ ಸಿದ್ಧಲಿಂಗ ಶಿವಾಚಾರ್ಯರೂ ಕಾಶೀ ಜಗದ್ಗುರು ಶ್ರೀ ವೀರಭದ್ರ ಶಿವಾಚಾರ್ಯರೂ ಪೀಠದಲ್ಲಿ ಅಮೋಘವಾದ ಕಾರ್ಯಗಳನ್ನು ಮಾಡಿ ಜಗದ್ವಂದ್ಯರಾದರು. ಇವರು ಮಾಡಿದ ಧರ್ಮ ಸೇವೆಯೂ ತೋರಿದ ವೈಭವವೂ ಹೊಂದಿದ ಕೀರ್ತಿಯೂ ಪ್ರತಿಯೊಬ್ಬ ಲಿಂಗಾಂಗಿಯ ಹೃದಯದಲ್ಲಿ ಒಡಮೂಡಿದೆ. ಆಚಾರ್ಯ ಭಗವತ್ಪಾದರಿಂದ ಸ್ಥಾಪಿತವಾದ ಪೀಠಗಳು ಭಗವಂತನ ಲೀಲಾಮಾತ್ರದಿಂದ ಪುನೀತವಾಗಿ ಎಂದಿನಂತೆ ಪ್ರಕಾಶವನ್ನು ಹೊಂದಿ ಬಾಳಲೆಂಬುದೇ ನಮ್ಮ ಹಾರೈಕೆ.

ದಾವಣಗೆರೆನಗರದ ಶ್ರೀ ಹಿರೇಮಠದ ಪಟ್ಟಾಭಿಷೇಕಮಹೋತ್ಸವ ಆಹ್ವಾನಪತ್ರಿಕಾ

ವ . . . ಶ್ರೀ . . . ಸಿರಿಸಾರವೊಡೆಯ ಪಟ್ಟ . . . ಪ್ರಜನಾದ ಸದ್ಯೋಜಾತ ವಟುವರ । ವಿ . . . ಶ್ರೀ ಶ್ರೀ . . . ಗಂಗಾಧರ ಮಹಾತ್ಮನ । ಚಾ . . . ಎಲವೊಳು ಸಡೆವು ವಿಪುಲ ವೈಭವದಿಂ ॥

ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ ಶ್ರೀ ೧೦೦೮ ಜಗದ್ಗುರು ಪ್ರಸನ್ನ ರೇಣುಕ ವೀರಗಂಗಾಧರ ರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿನಾಂ ದಿವ್ಯಸನ್ನಿಧಾನದಲ್ಲಿ ಶ್ರೀಮನ್ನೃಪಶಾಲಿವಾಹನಶಕೆಯ ೧೮೭೫ ವಿಜಯನಾಮ ಸಂವತ್ಸರೇ ಶ್ರಾವಣ ಶು|| ೬ ಶನಿವಾರ (ದಿನಾಂಕ 15-8-53) ಸೂರ್ಯೋದಯಾದಿ ಶಿವದೀಕ್ಷಾ ಸಂಸ್ಕಾರ ಘಟಿಕಾ ೫ ಪಳ ೪೫ ಕ್ಕೆ (ಬೆಳಿಗ್ಗೆ 8-15) ಸಲ್ಲುವ ಕನ್ಯಾಲಗ್ನೇ ಮಕರ ನವಾಂಶೆಯಲ್ಲಿ "ಶಿವದೀಕ್ಷಾ ಸಂಸ್ಕಾರವು" ಮತ್ತು ಅದೇ ಶನಿವಾರ (ದಿನಾಂಕ 15-8-೫೩) ಸೂರ್ಯೋದಯಾದಿ ಶ್ರೀಗುರುಪಟ್ಟಾಭಿಷೇಕ ಮುಹೂರ್ತ ಕಾಲ ಘಟಿಕಾಃ ೫-೫೫ಕ್ಕೆ (ಬೆಳಿಗ್ಗೆ 8-19) ಸಲ್ಲುವ ಕನ್ಯಾಲಗ್ನೇ, ಮಕರ ನವಾಂಶೆಯಲ್ಲಿ ದಾವಣಗೆರೆನಗರ ಶ್ರೀ ಹಿರೇಮಠದ ದೈವಜ್ಞಧುರೀಣ ಇತ್ಯಾದಿ ಪದವೀಧರರಾದ ವೇ|| ಪಂ|| ಹೆಚ್ ಯಂ ಶಿವಾನಂದ ಸ್ವಾಮಿಶಾಸ್ತ್ರಿಗಳವರ ಜ್ಯೇಷ್ಠಪುತ್ರ ಚಿ|| ಹಿ ಶಿ ಸ್ವಾಮಿ ಸದ್ಯೋಜಾತ ವಟುವಿಗೆ ಶ್ರೀಗುರು ಪಟ್ಟಾಭಿಷೇಕ ಮಹೋತ್ಸವವನ್ನು ಜರುಗಿಸಲು ದಾವಣಗೆರೆನಗರದ ಮಹಾದೈವದವರು ನಿಶ್ಚಯಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ ಶ್ರೀಗಳವರ ಕೃಪಾಶೀರ್ವಾದಗಳಿಗೆ ಪಾತ್ರರಾಗಬೇಕಾಗಿ ಕೋರುವ,

ದಾವಣಗೆರೆನಗರದ ಮಹಾದೈವದವರು

ಕಾಶೀ ವೀರಶೈವ ವಿದ್ವತ್ಸಂಘದಲ್ಲಿ ಸನ್ಮಾನ ಸಮಾರಂಭ

ತಾ|| ೨೭-೭-೫೩ ನೇ ಸೋಮವಾರ ಶ್ರೀ ಜಗದ್ಗುರು ೧೦೦೮ ವಿಶ್ವೇಶ್ವರ ಶಿವಾಚಾರ್ಯ ಮಹಾ ಸನ್ನಿಧಿಯ ಅಧ್ಯಕ್ಷತೆಯಲ್ಲಿ ಸಭೆಸೇರಿ ಶ್ರೀ ವೇ|| 'ಪಂಡಿತ ಗುರುಸಿದ್ಧ ಸ್ವಾಮಿಗಳು ಎಮ್ ಎ ಮುದೇನೂರ ಅವರಿಗೆ ಬೀಳ್ಕೊಡುವ ಸಮಾರಂಭ ಕಾರ್ಯವು ಅತ್ಯಂತ ಉತ್ಸಾಹದಿಂದ ನೆರವೇರಿತು. ಸಭೆಗೆ ಶ್ರೀಮಾನ್ ದೇವಶರ್ಮಾ ಎಂ. ಎ. ಡಿ. ಸಿ. ಪಿ. ಇತ್ಯಾದಿ ಮಹೋದಯರು ಆಗಮಿಸಿದ್ದರು. ವಿದ್ಯಾರ್ಥಿ ಜೀವನದಿಂದ ಹೊರಬೀಳುವ ಈ ಹಿರಿಯ ಮಿತ್ರರು ಕಾಶಿಗೆ ಬಂದು ಇಂದಿಗೆ ಹತ್ತು ವರ್ಷಗಳಾದವು. ಇವರು ಆಗಮಿಸಿದ ಕಾಲದಲ್ಲಿ ವಿದ್ಯಾರ್ಥಿಗಳ ನಿರುತ್ಸಾಹದಿಂದ "ವಿದ್ವತ್ ಸಂಘ"ದ ಕಾರ್ಯಕಲಾಪಗಳು ಜರಗುತ್ತಿರಲಿಲ್ಲ. ಎಷ್ಟೋ ವರ್ಷಗಳ ಹಿಂದೆ ಸ್ಥಾಪಿತವಾಗಿದ್ದ ಸಂಘಕ್ಕೆ ಜೀವ ಕಳೆಯನ್ನು ಕೊಟ್ಟು ಅದರ ಚಟುವಟಿಕೆಗಳನ್ನು ಅತ್ಯಂತ ಹಾವಳಿಗೇರಿಸಿದ ಕೀರ್ತಿಯು ಶ್ರೀ ಗುರುಸಿದ್ಧ ಸ್ವಾಮಿಗಳವರಿಗೆ ಸಲ್ಲುವುದು. ಇವರು ಮಾಡಿದ ಸುಧಾರಣೆಗಳಿಂದ ಸಂಘವು ಶ್ರೀಮಂತವಾಗಿರುವುದು ಅಲ್ಲದೆ ಇವರ ನೇತೃತ್ವದಲ್ಲಿ ಸಂಘದ ವಾಸಸ್ಥಳದಲ್ಲಿ ಕನ್ನಡ ಹಸ್ತಲಿಖಿತ ಮುದ್ರಿತ ಪತ್ರಿಕೆಗಳ ಉದಯವಾದವು. ಈಗಾಗಲೇ ಇವರಿಂದ ಹೊರಡಿಸಲ್ಪಟ್ಟ 'ವಿಕಾಸ' ಸಹಸಂಪಾದಕರಾದ ಶ್ರೀ|| ಬ್ರ|| ಶ್ರೀ ಸಿದ್ಧರಾಮ ಶಿವಾಚಾರ್ಯರು (ರೌಡಕುಂದಿ) ವೇದಾಂತ ಶಾಸ್ತ್ರಿ, ಕಾವ್ಯತೀರ್ಥ ಇತ್ಯಾದಿ ಪದವೀಧರರಾಗಿ ಬಳ್ಳಾರಿ ಜಿಲ್ಲೆಯ ಆದವಾನಿಯಲ್ಲಿ 'ಭಾರತೀಯ ಸಿದ್ಧಾಂತ' ವೆಂಬ ಮಾಸ ಪತ್ರಿಕೆಯನ್ನು ಹೊರಡಿಸುತ್ತಲಿರುವರು. ಶ್ರೀ ಗುರುಸಿದ್ಧ ಸ್ವಾಮಿಗಳು ಎಂ ಎ ಇವರು ಪ್ರಧಾನ ಸಂಪಾದಕತ್ವದಲ್ಲಿದ್ದು ಸಾಕಷ್ಟು ಸುರಿತವರಾಗಿದ್ದಾರೆ. ಇವರ ಕೈ ತುಂಬಾ ಪಳಗಿದೆ ಇವರ ಲೇಖನವು ಮಾನವನ ಮನಸ್ಸನ್ನು ವಿಕಾಸಗೊಳಿಸಲು ಹತ್ತಿದೆ. ಇವರೂ ಸಹ ಶೀಘ್ರದಲ್ಲಿಯೇ ಹರಿಹರ ಕ್ಷೇತ್ರದಲ್ಲಿ ಪತ್ರಿಕೆಯನ್ನು ಹೊರಡಿಸಲಿರುವರು. ಮನುಷ್ಯನು ಸಮಾಜದ ಧರ್ಮದ ಅಭಿವೃದ್ಧಿಗಾಗಿ ಜೀವನದ ಪರ್ಯಂತ ಹೋರಾಡುವದೇ ಅವನ ಧರ್ಮ, ಇವರ ಪರಿಶ್ರಮವೇ ಇವರ ಉನ್ನತಿಗೆ ಕಾರಣವಾಗಿದೆ. ಇವರು ಏಕ ಭಾಷಿಗಳು ಇವರ ಮಾತುಗಳಲ್ಲಿ ಹಾವ-ಭಾವ, ಅರ್ಥಗಳು ವಿಶಿಷ್ಟವಾಗಿರುವವು. ಅಲ್ಲದೆ ಮಾತುಗಳ ಮಾಧುರ್ಯ ಎಂತಹ ನಿರುತ್ಸಾಹಿಯನ್ನೂ ಕೂಡ ಉತ್ಸಾಹಿಯನ್ನಾಗಿ ಮಾಡುವ ದೈವೀ ಶಕ್ತಿ ಇದೆ. ಆದ್ದರಿಂದ ಅವರು ಆಬಾಲ ವೃದ್ಧರ ಆದರ ಸತ್ಕಾರಗಳಿಗೆ ಅರ್ಹರಾಗಿರುವರು. "ಕರ್ಮಯೋಗಿನಂ ಉಪೈತಿ ಲಕ್ಷ್ಮೀಃ" ಎಂಬ ಉಕ್ತಿಗನುಗುಣವಾಗಿ ಆಹಾರ ವಿಹಾರಗಳಿಗೆ ಗಮನ ಕೊಡದೆ ಬಂದ ಕಾರ್ಯದಲ್ಲಿ ಪರಿಶ್ರಮಪಟ್ಟು ವಿಶ್ವದಲ್ಲಿ ವಿಖ್ಯಾತಿ ಹೊಂದಿದ ಹಿಂದೂವಿಶ್ವವಿದ್ಯಾಲಯದ (ಮಾಸ್ಟರ್ ಆಫ್ ಆರ್ಟ್ಸ) ಎಂ. ಎ. ಪದವಿಯನ್ನು ಗ್ರಹಣ ಮಾಡಿರುವರು. ಮುಂದಿನ ಆಶ್ರಮದಲ್ಲಿಯೂ ಇತೋಪ್ಯತಿಶಯವಾದ ಉತ್ಸಾಹದಿಂದ ಸಾಮಾಜಿಕ, ಧಾರ್ಮಿಕ, ನೈತಿಕ ಹಾಗೂ ಶೈಕ್ಷಣಿಕ ಕಾರ್ಯಗಳಲ್ಲಿ ತತ್ಪರರಾಗಿ ಮಾನವ ಸಮಾಜಕ್ಕೆ ಜ್ಯೋತಿಪ್ರಾಯವಾಗುವಷ್ಟು ಉತ್ಸಾಹ ಸಾಹಸಗಳನ್ನೀಯಲೆಂದು ಆ ದಯಾಮಯನಾದ ವಿಶ್ವನಾಥನನ್ನು ಪ್ರಾರ್ಥಿಸುತ್ತೇವೆ.

ಇಂದಿನ ಸಭೆಯ ಸತ್ಕಾರಕ್ಕೆ ಮನನೊಂದು ಗುರುಸಿದ್ಧ ಸ್ವಾಮಿಗಳು ತಮ್ಮದೇ ಆದ ಒಂದು ಶೈಲಿಯಲ್ಲಿ ಬಾಲ್ಯಜೀವನದ ವೃತ್ತಾಂತವನ್ನು ವಿವರಿಸುತ್ತ "ನಾನು ಸಮಾಜ ಮತ್ತು ಧರ್ಮಸಂಸ್ಥೆಗಳ ಪೋಷಣೆಗಳಿಂದ ಬೆಳೆದವನು. ನಾನು ಏನು ಮಾಡಿದರೂ ಸಮಾಜದ ಧರ್ಮದ ಏಳಿಗೆಗಾಗಿಯೇ ಹೊರತು ನನ್ನದೆಂಬುದು ಏನೂ ಇಲ್ಲ" ಎಂದರು. ಮುಂದುವರಿಯುತ್ತ ನನ್ನ ಅಭ್ಯುದಯಕ್ಕೆ 'ವಿಶ್ವಾರಾಧ್ಯ ಪೀಠವೇ' ಕಾರಣವಾಗಿದೆ, ನಾನು ಒಂದೆರಡು ಕಾರ್ಯಗಳಲ್ಲಿ ಜಯವನ್ನು ಗಳಿಸಿದ್ದರೆ ಅದರ ಶ್ರೇಯಸ್ಸು ನನ್ನ ಬೆನ್ನೆಲುಬಾಗಿ ನಿಂತು ಪ್ರೇರಣೆಯಿತ್ತ ವಿಶ್ವಾರಾಧ್ಯ ಪೀಠಕ್ಕೆ ಸಲ್ಲತಕ್ಕದ್ದು, ನಾನು ಕೇವಲ ಕೈಗೊಂಬೆಯಂತೆ ಕಾರ್ಯ ಮಾಡಿದೆನಷ್ಟೇ. ನಿಮ್ಮ ಸುಸಮಯವನ್ನು ವ್ಯರ್ಥಮಾಡದೆ ಒಂದೆರಡು ಮಾತುಗಳಲ್ಲಿ ಮುಗಿಸುತ್ತೇನೆಂದು ಹೊಸದಾಗಿ ಬಂದ ವಿದ್ಯಾರ್ಥಿಗಳನ್ನು ಕುರಿತು 'ನೀವು ಬಂದ ಉದ್ದೇಶವನ್ನರಿತು ಪರಿಶ್ರಮ ಪಟ್ಟು ಅಧ್ಯಯನ ಮಾಡಿ ಎಂದು ಪಂಡಿತರಾಗುವಿರೊ? ಅಂದೇ ಹೊಟ್ಟೆಗೆ ಹಿಟ್ಟು, ನೆತ್ತಿಗೆ ಬಟ್ಟೆ ಹಾಕದೆ ಹಣವನ್ನು ಕಳಿಸಿದ ನಿಮ್ಮ ತಾಯಿತಂದೆಗಳ, ಹಿಟ್ಟನ್ನು ಕೊಟ್ಟ ಸಮಾಜದ ಉದ್ಧಾರಕ್ಕಾಗಿ ಕಟಿಬದ್ಧರಾಗಿ ನಿಂತರೆ ಮಹಾಸ್ವಾಮಿಗಳವರ ಪರಿಶ್ರಮ ಸಫಲವಾಗುವುದು. ನೀವು ಉಪಾಚಾರ್ಯರಾದರು—"ಸ್ವಯಂ ದಾಸಾಃ ತಪಸ್ವಿನಃ" ಎಂಬ ವಾಕ್ಯವನ್ನು ಮುಂದಿಟ್ಟುಕೊಂಡರೆ ಈ ಪೀಠದಲ್ಲಿ ಎಲ್ಲಾ ಕಾರ್ಯಗಳ ದಕ್ಷತೆಯನ್ನೂ ಕಲಿತುಕೊಳ್ಳಬಹುದು. ಉದಾಹರಣೆಗಾಗಿ ಸಮಾಜದ ಜಗದ್ಗುರುಗಳಲ್ಲನೇಕರು ಪಂಡಿತರು, ವಿದ್ವಾಂಸರು ಕಾಶೀಪೀಠದಿಂದಲೇ ಹೊರಬಿದ್ದಿರುವರೆಂದು ಹೆಮ್ಮೆಯಿಂದ ಹೇಳಬಹುದು. ಈ ಎಲ್ಲ ದೃಷ್ಟಿಗಳಿಂದ ಅಧ್ಯಯನಮಾಡಿ ಘನಗಂಭೀರ ಅಧಿಕ ಪದವೀಧರರು ಕಾರ್ಯಕುಶಲರು ಆಗುವಿರೆಂದು ನಂಬಿರುವೆನು. ಅಲ್ಲದೆ ಪೀಠದ ಕೀರ್ತಿಯನ್ನು ಭಾರತದಲ್ಲಿ ಅಷ್ಟೇ ಅಲ್ಲ, ವಿಶ್ವದಲ್ಲಿಯೇ ಹರಡುವ ಸಾಮರ್ಥ್ಯವನ್ನು ವಿಶ್ವನಾಥನು ದಯಪಾಲಿಸಲೆಂದು ಹೇಳುತ್ತ ತಮ್ಮ ಉಪನ್ಯಾಸವನ್ನು ಮುಗಿಸಿದರು.

ಬೀಳ್ಕೊಡುವ ಸಮಾರಂಭದ ಸಮಾಪ್ತಿ ಘಟ್ಟದಲ್ಲಿ ಶ್ರೀ ಜಗದ್ಗುರು ಘನಾ ಸನ್ನಿಧಿಯು ಸ್ವಾಮಿಗಳಿಗೆ ಆಶೀರ್ವದಿಸುತ್ತ ತಮಗಾದ ಮನಃಪೂರ್ವಕ ಆನಂದಗಳೆಲ್ಲವನ್ನು ವ್ಯಕ್ತಪಡಿಸಿದರು ತಮ್ಮ ಭಾಷಣವನ್ನು ಮುಂದುವರಿಸುತ್ತ ಗುರುಕುಲದ ಪಂಡಿತ ಶ್ರೇಷ್ಠರಲ್ಲಿ ಒಬ್ಬರಾದ ಮುದೇನೂರ ಗುರುಸಿದ್ಧ ಸ್ವಾಮಿಗಳು ದೇಶಕ್ಕೆ ಹೋಗಿ ಇದಕ್ಕಿಂತಲೂ ಹೆಚ್ಚಿಗೆ ಸಮಾಜ ಕಾರ್ಯಗಳನ್ನು ಮಾಡುವರೆಂದು ನಂಬಲಾಗಿದೆ. ವಿದ್ವಾಂಸರಾದರೂ ಸರಳಜೀವಿಗಳು, ಅಲ್ಪವಯಸ ಕಾಲದಲ್ಲಿಯೇ ಧಾರ್ಮಿಕ ಕಾರ್ಯಗಳಲ್ಲಿ ಹೆಚ್ಚಿನ ಅನುಭವ ಪಡೆದಿರುವರು ಮಠಸ್ಥಾನದಲ್ಲಿ ಪ್ರೇಮಾಭಿಮಾನಗಳಿದ್ದರೂ ತತ್ವ ತತ್ವಗಳಿಗೆ ಅಂಜದೆ, ಮಾನಮರ್ಯಾದೆಗಳಿಗೆ ಎದೆಗೊಡದೆ ಮುನ್ನುಗ್ಗುವರು. ಕೇದಾರ ಪೀಠದ ಅಭಿವೃದ್ಧಿಗಾಗಿ ತಮ್ಮ ಆರ್ಥಿಕ ಲಾಭಗಳನ್ನು ಬದಿಗೊತ್ತಿ ಐದಾರು ವರ್ಷಗಳ ಪರ್ಯಂತ ಹೋರಾಡಿರುವರು ವಿದ್ಯಾಭ್ಯಾಸ ಮುಗಿದನಂತರ ನೇಪಾಳ ವೀರಶೈವ ಜನಾಂಗದಲ್ಲಿ ಸಂಚರಿಸಿ ಎಷ್ಟೋ ವರ್ಷಗಳಿಂದ ಭಿನ್ನ ಭಿನ್ನವಾದ ಗುರುಶಿಷ್ಯ ಸಂಬಂಧ ಭಾವನೆಯನ್ನು ಉಂಟುಮಾಡಿರುವುದು ಶ್ಲಾಘನೀಯವಾಗಿದೆ. ಗುರುಸಿದ್ಧ ಸ್ವಾಮಿಗಳು ಇನ್ನೊಂದು ಮಾತು ಹೇಳಿದರು 'ಕಾಶೀ ಪೀಠದಿಂದಲೇ ಸಮಾಜದ ಸುಧಾರಕರು ತಯಾರಾಗಿರುವರೆಂದರು, ಇದು ಸಹಜವಾದ ವಿಷಯ, ಕಾಶಿಯು ಭಾರತಾಂಬೆಯ ಪುರಾತನ ಪಟ್ಟಣ ಇಲ್ಲಿ ಶಿವ ಶಕ್ತಿಯರ ವಾಸವಿದೆ ಹಿಮವಂತ ಶಿಖರದಿಂದ ಹೊರಟೋಟ ಗಂಗಾ ಉತ್ತರವಾಹಿನಿಯಾಗಿ ಹರಿದು ಸರ್ವರ ಕಲ್ಮಷಗಳನ್ನು ಆನಂದಗೊಳಿಸುತ್ತಾಳೆ ಗಂಗೆಯಲ್ಲಿ ವನಸ್ಪತಿ ಔಷಧಿಗಳಿರುವುವು ಈ ನೀರು ಆರೋಗ್ಯಾಭ್ಯುದಯಗಳಿಗೆ ಹಿತಕರವಾಗಿರುವುದು ಕಾಶಿಯು ಜ್ಞಾನ ನಿಧಿಯಾಗಿದೆ, ಜ್ಞಾನಿಗಳ ಸಹವಾಸ ವಿಶ್ವನಾಥ ಅನ್ನಪೂರ್ಣೆಯರ ದರ್ಶನ ಅವರ ಅಭ್ಯುದಯಕ್ಕೆ ಕಾರಣ ಇದೇ ರೀತಿಯಾಗಿ ಗುರುಸಿದ್ಧ ಸ್ವಾಮಿಗಳು ಅಭ್ಯುದಯ ಹೊಂದಿರುವರು ಈಗ ಇವರು ದೇಶಕ್ಕೆ ಹೋಗಿ ಸಮಾಜದ ಕುಂದ-ಕೊರತೆಗಳನ್ನು ದೂರಮಾಡಿ ಸಮಾಜದ ಅಭ್ಯುದಯಕ್ಕೆ ಪ್ರಯತ್ನಮಾಡಲು ಕಾಶೀ ವಿಶ್ವನಾಥ ಅನ್ನಪೂರ್ಣೆ ಶ್ರೀ ವಿಶ್ವಾರಾಧ್ಯ ಭಗವತ್ಪಾದರು ಶಕ್ತಿ ಸಾಹಸಗಳನ್ನೀಯಲೆಂದು ಹರಿಸಿ ಪುಷ್ಪಮಾಲೆ ಫಲ ಪಂಡಿತೋಚಿತವಾದ ಕಾಶ್ಮೀರ ಶಾಲುಗಳನ್ನು ಆಶೀರ್ವದಿಸಿದರು. ಅನಂತರ ಶಾಂತಿಪಾಠದೊಡನೆ ಸಭೆಯು ಪರಿಸಮಾಪ್ತಿಗೊಂಡಿತು

ಕಾರ್ಯದರ್ಶಿ

ಎಂ. ಶಿವಾಚಾರ್ಯ ಕೊಣ್ಣೂರ.

ವಿಶೇಷ ವಾರ್ತೆ

ಬೆಂಗಳೂರು ಜಿಲ್ಲಾ ಕನಕಪುರ ತಾಲ್ಲೂಕು, ಗುರುವಿನ ಪುರದ ಮಠದ ವೇ॥ ರೇವಣ್ಣಯ್ಯನವರು ತಾ॥ ೩-೭-೫೩ ರಂದು ಶಿವನಲ್ಲಿ ಬೆರೆದರು. ಶಾಂತರೂ, ಜ್ಞಾನಿಗಳೂ, ದಯಾವಂತರೂ, ಆಚಾರಶೀಲರೂ ಆದ ರೇವಣ್ಣಯ್ಯನವರು ಶುಕ್ರವಾರ ಬ್ರಾಹ್ಮೀ ಮುಹೂರ್ತದಲ್ಲಿ ಪ್ರಾತಃ ವಿಧಿಗಳನ್ನು ತೀರಿಸಿ ಸ್ನಾನ, ಲಿಂಗಪೂಜೆ, ಪ್ರಸಾದ ವಿನಿಯೋಗಿಸಿ ಪವಡಿಸಿದರು ಒಂದು ತಾಸು ಕಳೆದನಂತರ ಉಬ್ಬಸ ಜಾಸ್ತಿಯಾಯಿತು ಮುಖ ಕುಂದಿತು, ಕುಟುಂಬ ವರ್ಗವೆಲ್ಲ ಸುತ್ತ ನೆರೆಯಿತು ದುಃಖಿಸುವವರಿಗೆ ಬುದ್ಧಿವಾದವನ್ನು ಹೇಳಿ "ಶಿವ ಶಿವ" ಎಂಬ ದಿವ್ಯ ನಾಮ ನನ್ನ ಕಿವಿಗೆ ತಗಲುತ್ತಿರಬೇಕೆಂದು ತಿಳಿಸಿ ತಾವೂ ಜಪಿಸಲು ಪ್ರಾರಂಭಿಸಿದರು ತಮ್ಮ ಇಬ್ಬರು ಮಕ್ಕಳನ್ನು ಪಕ್ಕದಲ್ಲಿ ಕೂಡಿಸಿಕೊಂಡು "ನಮಗೆ ಶಿವನು ಕರೆಯುತ್ತಿದ್ದಾನೆ ನೀವು ದುಃಖಿಸಬಾರದು, ಜಾತಸ್ಯ ಮರಣಂ ಧ್ರುವಂ ಎಂಬ ಶೃತಿವಾಕ್ಯಾನುಸಾರ ಶರೀರ ಮೇಲೆ ಬಂದ ಪ್ರಾಣಿ ಒಂದು ದಿವಸ ಅಳಿಯಲೇ ಬೇಕು ಇದು ಸೃಷ್ಟಿಯ ಕ್ರಮ. ನೀವು ನೀತಿಗೆ ವಿರೋಧವಾಗಿ ನಡೆಯಬೇಡಿ, ಸುಳ್ಳು ಹೇಳಬಾರದು, ಮೋಸ ಕೃತ್ರಿಮ ಅಸೂಯೆಗಳಿಗೆ ಸಾಹಸ ಮಾಡಬೇಡಿರಿ, ಶಾಂತಿಯಿಂದಿರಿ, ಯಾವ ಎಡರುಗಳು ಬಂದರೂ ಶಿವನಲ್ಲಿ ನಿವೇದಿಸಿ, ಯಾವ ಪ್ರಾಣಿಗೂ ನೋವನ್ನುಂಟು ಮಾಡಬೇಡಿ, ಸಕಲ ಪ್ರಾಣಿಗಳಿಗೂ ಲೇಸು ಬಯಸುವುದೇ ಧರ್ಮ, ಶರಣರ ವಾಣಿಯ ಸಾರ ಹಿಡಿದಿರಿ, ಗುರು ಲಿಂಗ ಜಂಗಮರಲ್ಲಿ ವಿಶ್ವಾಸವಿರಲಿ; ತಂದೆತಾಯಿಗಳಿರಲಿ, ನಿಮ್ಮ ಮರೆಯಬೇಡಿ, ಸುಖ-ದುಃಖದ ಮಧ್ಯದಲ್ಲಿ ಶಿವನ ನೆನಪು ಇರಲಿ, ಶಿವನು ನಿಮಗೆ ಒಳ್ಳೆಯದು ಮಾಡಲಿ" ಎಂದು ಹರಸಿ ಶಾಶ್ವತ ನಿದ್ರೆಗೈದರು ಸಾಹಿತಿಗಳಾದ ತಾ॥ ಬ್ರ॥ ಶ್ರೀ "ಸಾಹಿತ್ಯ ರತ್ನ" ಗುರುಸಿದ್ಧ ಶಿವಾಚಾರ್ಯ ಮಹಾ ಸ್ವಾಮಿಯವರು ಮಠದ ಅಧಿಕಾರಿಗಳು, ಇವರು ರೇವಣ್ಣಯ್ಯನವರ ಸುಪುತ್ರರು ಲಿಂಗೈಕ್ಯರ ಆತ್ಮಕ್ಕೆ ದಯಾಮಯರಾದ ಭಗವತ್ಪಾದಾಚಾರ್ಯರು ಶಾಂತಿ ನೀಡಲೆಂದು ಪ್ರಾರ್ಥಿಸುತ್ತೇನೆ.

ಓರ್ವ ಪ್ರತ್ಯಕ್ಷದರ್ಶಿ.

ವರ್ತಮಾನ ಸಂಗ್ರಹ

ಕರ್ನಾಟಕ ಪ್ರಾಂತ ಬೇಗ ಆಗಬೇಕು
ಪ್ರಧಾನಿ ನೆಹ್ರೂರೊಡನೆ ಭೇಟಿ ಮತ್ತು ಮನವಿ

ಪಾರ್ಲಿಮೆಂಟಿನ ಸದಸ್ಯರುಗಳಾದ ಶ್ರೀ ಎಂ. ಎಸ್ ಗುರುಪಾದಸ್ವಾಮಿ ಮತ್ತು ಶ್ರೀ ಶಿವಮೂರ್ತಿಸ್ವಾಮಿ ಇವರುಗಳು ೬ ನೇ ತಾರೀಖು ಬೆಳಿಗ್ಗೆ ೧೧-೩೦ ಘಂಟೆ ಸಮಯದಲ್ಲಿ ಪ್ರಧಾನಿ ನೆಹರೂರವರನ್ನು ಭೇಟಿಮಾಡಿ ಅಖಂಡ ಕರ್ನಾಟಕ ರಾಜ್ಯನಿರ್ಮಾಣ ಪರಿಷತ್ತಿನ ಪರವಾಗಿ, ಕರ್ನಾಟಕ ಪ್ರಾಂತ ರಚನೆ ಬೇಗನೆ ಮಾಡಬೇಕೆಂದು ಮನವಿ ಮಾಡಿಕೊಂಡರು ಕರ್ನಾಟಕ ಪ್ರಾಂತ ರಚನೆ ವಿಳಂಬವಾದರೆ ಕನ್ನಡ ಜನತೆ ಉದ್ರೇಕಗೊಳ್ಳುವುದೆಂದೂ ಸತ್ಯಾಗ್ರಹ ನಡೆಸಲಿದೆಯೆಂದೂ ತಿಳಿಸಿದರು ಪ್ರಧಾನಿ ನೆಹರೂ ಮನವಿಗೆ ಉತ್ತರಕೊಡುತ್ತಾ 'ಸತ್ಯಾಗ್ರಹವು ಅಕ್ರಮ ಮಾರ್ಗ ಕರ್ನಾಟಕ ಪ್ರಾಂತ ರಚನೆ ಕೇಂದ್ರ ಸರ್ಕಾರದ ಗಮನದಲ್ಲಿದೆ ಮೈಸೂರಿನಲ್ಲಿಯೂ ಇದಕ್ಕೆ ಸಹಾನುಭೂತಿ ಬೆಂಬಲಗಳಿವೆ ಪಾರ್ಲಿಮೆಂಟಿನಲ್ಲಿ ಈ ಬಗ್ಗೆ ಹೇಳಿಕೆ ಕೊಡುವೆನು ಹೈಪವರ್ ಕಮಿಷನ್ನಿನವರು ಕರ್ನಾಟಕ ಪ್ರಾಂತ ರಚನೆ ವಿಷಯವನ್ನು ಮೊದಲು ತೆಗೆದುಕೊಳ್ಳುವರು" ಎಂದರು

ಕೊಳ್ಳೇಗಾಲವನ್ನು ಮೈಸೂರಿಗೆ ಸೇರಿಸಬೇಕೆಂದು ಪ್ರಧಾನಿಯವರಿಗೆ ತಿಳಿಸಲಾಗಿ ಬೌಂಡರಿ ಕಮಿಷನ್ನು ಈ ವಿಚಾರ ಪರಿಶೀಲಿಸುವುದು ಎಂದರು

ಕರ್ನಾಟಕ ಚಳವಳಿಗೆ ಬೆಂಬಲ ಕೊಡಿ

ಜಮಖಂಡಿಯಲ್ಲಿ ಸಾರ್ವಜನಿಕ ಸಭೆಯೊಂದು ಪ್ಲೀಡರ್ ಶ್ರೀ ಭಂಗಿಯವರ ಅಧ್ಯಕ್ಷತೆಯಲ್ಲಿ ನಡೆಯಿತು ಶ್ರೀ ಮಹದೇವಪ್ಪ ಪಟ್ಟಣ, 'ಜನತಾ' ಸಂಪಾದಕ ಶ್ರೀ ಶಿವಾನಂದಸ್ವಾಮಿ, ಪಾರ್ಲಿಮೆಂಟ್ ಸದಸ್ಯ ಶ್ರೀ ಶಿವಮೂರ್ತಿಸ್ವಾಮಿ ಮೊದಲಾದವರು ಭಾಷಣಮಾಡಿ ಕರ್ನಾಟಕ ಏಕೀಕರಣಕ್ಕಾಗಿ ಚಳವಳಿ ನಡೆಸುವುದರ ಆವಶ್ಯಕತೆಯನ್ನು ವಿವರಿಸಿದರಲ್ಲದೆ ಎಲ್ಲರೂ ಚಳವಳಿಗೆ ಬೆಂಬಲ ಕೊಡಬೇಕೆಂದು ಮನವಿ ಮಾಡಿಕೊಂಡರು ಬನಹಟ್ಟಿಯಲ್ಲೂ ಸಭೆ ನಡೆದು ಅವರುಗಳು ಭಾಷಣ ಮಾಡಿದರು

ಕರ್ನಾಟಕ ಏಕೀಕರಣ ಸಾಧನೆಗಾಗಿ ಕಾರ್ಯಕ್ರಮ

ಅಖಂಡ ಕರ್ನಾಟಕ ರಾಜ್ಯನಿರ್ಮಾಣ ಪರಿಷತ್ತಿನ ಕ್ರಿಯಾ ಸಮಿತಿಯವರು ಕರೆದಿದ್ದ ಕರ್ನಾಟಕ ಏಕೀಕರಣ ಕಾರ್ಯಕರ್ತರುಗಳ ಸಭೆಯು ಭಾನುವಾರ ಪರಿಷತ್ತಿನ ಕಾರ್ಯಾಲಯದಲ್ಲಿ ಶ್ರೀ ಅ ನ. ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ನಡೆಯಿತು ಶ್ರೀ ಬಿ ಶ್ರೀಕಂಠಪ್ಪನವರು ದಾವಣಗೆರೆ ಸಮ್ಮೇಳನದ ನಿರ್ಣಯವನ್ನೂ, ಹುಬ್ಬಳ್ಳಿಯಲ್ಲಿ ಸೇರಿದ್ದ ಕ್ರಿಯಾ ಸಮಿತಿಯವರು ಮಾಡಿರುವ ನಿರ್ಣಯವನ್ನೂ ಕಾರ್ಯರೂಪಕ್ಕೆ ತರಬೇಕೆಂದು ಮಾಡಿರುವ ವಿಚಾರವನ್ನೂ ಸಭೆಗೆ ತಿಳಿಸಿದರು.

ಹರತಾಳಗಳನ್ನು, ಸತ್ಯಾಗ್ರಹವನ್ನು ನಡೆಸಬೇಕೆಂದು ಮತ್ತು ಆಗಸ್ಟ್ ೧೫ ರಂದು ಕಪ್ಪುಬಾವುಟ ಪ್ರದರ್ಶನ ಮಾಡಬೇಕೆಂಬ ನಿರ್ಧಾರವನ್ನು ಮತ್ತೊಮ್ಮೆ ಕ್ರಿಯಾ ಸಮಿತಿಯು ಪರಿಶೀಲಿಸಬೇಕೆಂದು ನಿರ್ಣಯಮಾಡಲಾಯಿತು. ಸತ್ಯಾಗ್ರಹವನ್ನು ಬೆಂಗಳೂರಿನಲ್ಲಿ ಮುಖ್ಯವಾಗಿ ನಡೆಸಲು ಮುಂದೆ ಕಂಡವರನ್ನೊಳಗೊಂಡ ಸಮಿತಿಯೊಂದನ್ನು ನೇಮಿಸಲಾಯಿತು. ಶ್ರೀಗಳಾದ ಎಚ್ ಕೆ ಶಂಕರ್ (ಅಧ್ಯಕ್ಷರು), ಎಸ್ ಆರ್. ಗವಿಶೆಟ್ಟೆಪ್ಪ ಮತ್ತು ವಿ ಅಣ್ಣಯ್ಯ (ವ್ಯವಸ್ಥಾಪಕರು), ಹೆಚ್. ಎಸ್. ರೇಣುಕಾಪ್ರಸಾದ್, ಬಿ. ಸಾಂಬಮೂರ್ತಿ ಸ್ವಾಮಿ, ವೆಂಕಟರಮಣ, ವೆಂಕಟರಾಮು, ಅಣ್ಣು ರಾಮಯ್ಯ, ರಾಮಕೃಷ್ಣರಾವ್, ವಿ ರಾಮರಾಮು, ಹೆಚ್. ಗಂಗಾಧರಪ್ಪ, ಎ. ಸಿದ್ಧಪ್ಪ, ಎಸ್ ಹೆಚ್. ರಾಜಗೋಪಾಲ್, ಕುಮಾರ ವೆಂಕಣ್ಣ, ತಮ್ಮಯ್ಯ ಗುರುಬಸಪ್ಪ, ಎಂ. ಆರ್. ಶೇಷಗಿರಿರಾವ್, ರಾಜಗೋಪಾಲ್ ಹಿ ಮ ನಾಗಯ್ಯ ಮತ್ತು ಎ. ವಿ. ಬೈರಪ್ಪ ಕಾರ್ಯಕಾರೀಸಮಿತಿ ಸದಸ್ಯರುಗಳು

ಬಳ್ಳಾರಿ ಜಿಲ್ಲೆಯಲ್ಲಿ ಗವರ್ನರ್ ಪ್ರವಾಸ ರದ್ದು

ಬಳ್ಳಾರಿಪಟ್ಟಣ ಮತ್ತು ಜಿಲ್ಲೆಯ ಹಲವು ಪ್ರದೇಶಗಳಲ್ಲಿ ಆಂಧ್ರರ ಚಳವಳಿಯಿಂದಾಗಿ ಪ್ರಕ್ಷುಬ್ಧ ವಾತಾವರಣವಿರುವುದರಿಂದ ಮದ್ರಾಸ್ ಗವರ್ನರ್ ಶ್ರೀ ಶ್ರೀಪ್ರಕಾಶರವರು ಈ ವಾರದಲ್ಲಿ ಕೈಗೊಳ್ಳಬೇಕಾಗಿದ್ದ ಪ್ರವಾಸವನ್ನು ರದ್ದುಮಾಡಿದ್ದಾರೆಂದು ತಿಳಿದುಬಂದಿದೆ

ಬಳ್ಳಾರಿಯಲ್ಲಿ ನಡೆಯುತ್ತಿರುವ ಆಂಧ್ರರ ಸತ್ಯಾಗ್ರಹದಲ್ಲಿ ಸ್ತ್ರೀಯರೂ ಸಹಾ ಭಾಗವಹಿಸುತ್ತಿದ್ದಾರೆ

ಶ್ರೀ ಸಂಜೀವರೆಡ್ಡಿ ಆಂಧ್ರದ ಮುಖ್ಯಮಂತ್ರಿಗಳೆ ?

ಆಂಧ್ರ ಮುಖ್ಯಮಂತ್ರಿತ್ವದ ಬಗ್ಗೆ ಖಚಿತವಾಗಿ ಅಭಿಪ್ರಾಯ ತಿಳಿಸಲು ಪ್ರೊ॥ ರಂಗಾರವರು ನಿರಾಕರಿಸಿದರು ಅವರು ಶ್ರೀಪ್ರಕಾಶಂರೊಡನೆ ದೆಹಲಿಗೆ ತೆರಳಿದರು. ಶ್ರೀ ಎನ್ ಸಂಜೀವರೆಡ್ಡಿಯವರು ಆಂಧ್ರದ ಮುಖ್ಯಮಂತ್ರಿಯಾಗಿರುವ ವಿಷಯದಲ್ಲಿ ಈಗ ಶ್ರೀ ಪ್ರಕಾಶಂ ಪ್ರೊ॥ ಎನ್ ಜಿ ರಂಗಾ ಮೊದಲಾದ ನಾಯಕರೊಡನೆ ಸಮಾಲೋಚನೆ ನಡೆದು, ಹೆಚ್ಚು ಕಮ್ಮಿ ನಿರ್ಧಾರವಾಗಿದೆ, ಎಂದು ಕೆಲವು ಪತ್ರಿಕೆಗಳಲ್ಲಿ ಪ್ರಕಟವಾಗಿದೆ.

ಕರ್ನಾಟಕ ರಾಜ್ಯ ನಿರ್ಮಾಣಕ್ಕಾಗಿ ಚಳುವಳಿ
ಬೆಂಗಳೂರು ನಗರದಲ್ಲಿ ಸಪ್ತಾಹ ಆಚರಿಸಲು ತೀರ್ಮಾನ

ಅಖಂಡ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತಿನ ಬೆಂಗಳೂರು ಸಮಿತಿಯು ಪರಿಷತ್ತಿನ ಕಾರ್ಯಾಲಯದಲ್ಲಿ ಶ್ರೀ ಎಸ್ ಎನ್ ರಾಜಗೋಪಾಲರಾಜುರವರ ಅಧ್ಯಕ್ಷತೆಯಲ್ಲಿ ಆಗಸ್ಟ್ ೪ ರಂದು ಸೇರಿ ಕ್ರಿಯಾ ಸಮಿತಿಯ ಆದೇಶದಂತೆ ಆಗಸ್ಟ್ ೯ ರಿಂದ ೧೫ ರ ವರೆಗೂ ಕರ್ನಾಟಕ ಏಕೀಕರಣ ಸಪ್ತಾಹವನ್ನು ಆಚರಿಸಬೇಕೆಂದು ತೀರ್ಮಾನವಾಯಿತು ಏಳು ದಿನಗಳೂ ಸಭೆಗಳನ್ನು ಮಾಡಿ ಚಳವಳಿಯ ಗುರಿ ಉದ್ದೇಶ ಮತ್ತು ಆವಶ್ಯಕತೆಗಳನ್ನು ಜನತೆಗೆ ಅರಿವು ಮಾಡಿಕೊಡಬೇಕೆಂದು ತೀರ್ಮಾನಿಸಿತು ಆಗಸ್ಟ್ ೧೫ ರಿಂದ ಕ್ರಿಯಾ ಸಮಿತಿಯ ನಿರ್ದೇಶನದಂತೆ ಚಳವಳಿಯನ್ನು ನಡೆಸಬೇಕೆಂದೂ ಬೊಂಬಾಯಿ ಪ್ರದೇಶದಲ್ಲಿ ನಡೆಯಲಿರುವ ಚಳವಳಿಗೆ ಜಾತಾಗಳನ್ನು ಕಳಿಸಬೇಕೆಂದೂ ತೀರ್ಮಾನಿಸಿತು.

ಅನಂತರ ಶ್ರೀ ಹೆಚ್ ಎಸ್ ರೇಣುಕಾ ಪ್ರಸಾದರಿಂದ ಮಂಡಿಸಲ್ಪಟ್ಟ ಮುಖ್ಯ ನಿರ್ಣಯವು ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು ಪತ್ರಿಕೆಗಳಲ್ಲಿ ವರದಿಯಾಗಿರುವಂತೆ ಬಳ್ಳಾರಿ ಪ್ರಶ್ನೆಯನ್ನು ಮತ್ತೆ ಎತ್ತುವುದಾದರೆ ಅಖಂಡ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತು ಎಲ್ಲ ಶಕ್ತಿಗಳನ್ನು ಸಂಘಟಿಸಿ, ಮುಖಂಡತ್ವವನ್ನು ವಹಿಸಿ ಕಡೆಯ ಘಳಿಗೆಯವರೆಗೂ ಹೋರಾಡುವುದೆಂದು [illegible] ನಿರ್ಣಯ.

ಉಪವಾಸ ನಿಲ್ಲಿಸಲು ರಾಜಾಜಿಯ ಮನವಿ

ಶ್ರೀ ಕಾಮರೆಡ್ಡಿಯವರು ಫಿಠಾಳರಿಸಿದರು

ಒಳ್ಳಾರಿ ಶಾಖೆಯನ್ನು ಮೈಸೂರು ಸಂಸ್ಥಾನಕ್ಕೆ ಸೇರಿಸಿದುದನ್ನು ವಿರೋಧಿಸಿ ಉಪವಾಸವನ್ನು ಕೈಗೊಂಡಿರುವ ಶ್ರೀ ತೆಕಾಲಿ ಕಾಮರೆಡ್ಡಿಯವರು ಉಪವಾಸ ನಿಲ್ಲಿಸುವಂತೆ ಮದ್ರಾಸ್ ಮುಖ್ಯಮಂತ್ರಿ ಶ್ರೀ ರಾಜಗೋಪಾಲಾಚಾರಿಯವರು ತಂತೀ ಮೂಲಕ ಪ್ರಾರ್ಥಿಸಿದ್ದು ಅದನ್ನು ಪಾಲಿಸಲು ಶ್ರೀ ಕಾಮರೆಡ್ಡಿಯವರು ನಿರಾಕರಿಸಿದ್ದಾರೆ

ಒಳ್ಳಾರಿ ಮೋಳ ರೂಪನಗುಡಿ ಫಿಕ್ಕಾಗಳನ್ನು ಜನಾಭಿಪ್ರಾಯಕ್ಕೆ ಒಪ್ಪಿಸದೆ ತಾವು ಉಪವಾಸ ನಿಲ್ಲಿಸುವುದು ಸಾಧ್ಯವಿಲ್ಲವೆಂದು ಶ್ರೀ ರೆಡ್ಡಿಯವರು ಉತ್ತರ ಕಳಿಸಿದ್ದಾರೆಂದೂ ಗೊತ್ತಾಗಿದೆ

ತುಂಗಭದ್ರಾ ಅಣೆಕಟ್ಟಿನಲ್ಲಿ ತುಂಬಾ ನೀರು

ಮೈಸೂರು ಸಂಸ್ಥಾನದಲ್ಲಿ ಕಳೆದ ನಾಲ್ಕು ದಿವಸಗಳಿಂದ ವಿಪರೀತ ಮಳೆಯಾದುದರ ಪರಿಣಾಮವಾಗಿ ತುಂಗಭದ್ರಾ ಅಣೆಕಟ್ಟಿನಲ್ಲಿ ನೀರಿನ ಮಟ್ಟ ತುಂಬಾ ಏರಿದೆ

ಸುದ್ದಿ ಸಂಗ್ರಹ

ಅಮೆರಿಕದ ನ್ಯೂಯಾರ್ಕ್ ಹತ್ತಿರ ಯದರಗಳ ಮೇಲೆ ಸಟ್ಟು ಎಂಬ ಜೂಜು ಆಡುತ್ತಾರೆ ಆದಕ್ಕೆ ತಡೆಹಟ್ಟುವುದು ಅಗತ್ಯ ಆದಕ್ಕಾಗಿ ಪೋಲೀಸ್ ಎರಡನೆಯ ತಿಪ್ಪೆಪಡಿ ಸುಸಾಡಿ ವಿಧಾನ ಸಭೆಯು ಅಂಗೀಕಾರವನ್ನು ಪಡೆದಿದೆ ಈ ತಿಪ್ಪೆಪಡಿ ಮಸೂದೆ ಸಟ್ಟು ಆಡುವುದನ್ನು ನಿಷೇಧಿಸಿದೆ

ದಕ್ಷಿಣ ಕೊರಿಯದಲ್ಲಿ ಎಲ್ಲ ಪ್ರಜೆಗಳಿಗೂ ಮಿಲಿಟರಿ ಶಿಕ್ಷಣ ಕೊಟ್ಟು ಮುಂದೇನಾದರು ಯುದ್ಧ ಸಂಭವ ಒದಗಿದರೆ ಸಿದ್ಧವಾಗಿರುವಂತೆ ಮಾಡಲಾಗುತ್ತಿದೆ ದಕ್ಷಿಣ ಕೊರಿಯ ರಕ್ಷಣಾ ಮಂತ್ರಿ, ವೈಸ್ ಅಡ್ಮಿರಲ ಸೂನ್ ಯಿನ್ ಇಲ್ ತಿಳಿಸಿದ್ದಾರೆ

ಚೀನಾ ಕೊರಿಯಾ ಗಡಿಯಲ್ಲಿ ರಹಸ್ಯದ ಪ್ರಯೋಣಿಕ ವಿಮಾನವೊಂದನ್ನು ಹೊಡೆದು ಕೆಡವಿದ ಒಳ್ಳೆ ರಷ್ಯ ಸೂಚಿಸಿರುವ ಪ್ರತಿಭಟನೆಯನ್ನು ಅಮೆರಿಕಾ ತಿರಸ್ಕರಿಸುವುದಾಗಿ ಅಮೆರಿಕಾದ ಸ್ಟೇಟ್ ಇಲಾಖೆ ಪ್ರಕಟಿಸಿತು

ದಯಾನಂದ ಮೈಸೂರು ಅಗರಬತ್ತಿ

ಪರಿಶುದ್ಧವಾದ ಮಧುರ ಪರಿಮಳವುಳ್ಳ ನಮ್ಮ ದಯಾನಂದ ಮೈಸೂರು ಅಗರಬತ್ತಿಯನ್ನು ಯಾವಾಗಲೂ ಉಪಯೋಗಿಸಿರಿ ಇದರ ಸೇವಾಸಂಸ್ಥೆಯಿಂದ ಮನೆಯು ಪರಿಶುದ್ಧವಾಗುವುದಲ್ಲದೆ ಮನವು ನಿಶ್ಚಂಚಲವಾಗಿ ಆನಂದಮಯವಾಗುವದು ಶಿವಪೂಜಾಲೋಲರಿಗೆ ಹಚ್ಚಿನ ಮನಶ್ಶಾಂತಿಯನ್ನುಂಟುಮಾಡುವದು ಭಗವದ್ಭಕ್ತರೂ, ಗುರುಗಳೂ, ಸ್ವಾಮಿಗಳೂ, ಒಂದು ಸಾರಿ ತರಿಸಿಕೊಂಡು ಅನುಭವ ಪಡೆಯಿರಿ

ಒಂದು ಸೇರಿಗೆ (24 ತೊಲಾ) ರೂ 6

ವಿ ಪಿ ಖರ್ಚು ಪ್ರತ್ಯೇಕ

ವಿಳಾಸ —

ದಯಾನಂದ ಪಬ್ಲಿಸಿಟಿ ವರ್ಕ್ಸ್,
೫೮, ಅಲೀಪುರ ರೋಡ್, ಮೈಸೂರು.

ರೇಣುಕವಿಜಯಪುರಾಣಂ

(ಶ್ರಾವಣಮಾಸವು ಬಂದಿತು)

ಶ್ರೀಜಗದ್ಗುರು ರೇಣುಕಾಚಾರ್ಯರ ಸಮಸ್ತಲೀಲಾಬೋಧಕವಾದೀಪುರಾಣವು ಕರ್ನಾಟಕಭಾಷೆಯಲ್ಲಿ ಪದ್ಯರೂಪವಾಗಿ ಈಗ ಎರಡನೇ ಆವೃತ್ತಿ ಮುದ್ರಿಸಲ್ಪಟ್ಟಿದೆ ಈ ಪುರಾಣದಲ್ಲಿ ೫೦ ಸಂಧಿಗಳಿದ್ದು ಶ್ರೀರೇಣುಕಗುರುಸಾರ್ವಭೌನರ ಸಮಗ್ರಲೀಲೆಗಳು ಬಹುಮನೋಹರವಾಗಿ ವರ್ಣಿಸಲ್ಪಟ್ಟಿವೆ. ಪುರಾಣವು ಅತ್ಯುತ್ತಮವಾದ ಕಾಗದದಲ್ಲಿ ಸರ್ವಾಂಗಸುಂದರವಾಗಿ ಮುದ್ರಿಸಲ್ಪಟ್ಟಿದ್ದು ಧರ್ಮವಾದ ಬೈಂಡಿನಿಂದೂಡಗೂಡಿದ ಪ್ರಾಜೆಕ್ಟ್‌ದಲ್ಲಿ ಅಲ್ಲಲ್ಲಿ ಕಂದಪದ್ಯಾನುಸಾರವಾಗಿ ಆಚಾರ್ಯರ ಲೀಲಾಬೋಧಕಗಳೂ ಅನೇಕ ಸುಂದರ ಚಿತ್ರಗಳು ಸೇರಿಸಲ್ಪಟ್ಟಿವೆ ಸದ್ಯ ಶ್ರಾವಣಮಾಸವು ಸಮೀಪವಾಗಿದ್ದು ಪ್ರತಿಯೊಬ್ಬ ಗುರುಭಕ್ತರೂ ಈ ಮಹಾಪುರಾಣವನ್ನು ಕರೀತಕೊಂಡು ಪರಿಸಿ, ಪೂಜಿಸಿ, ಪವಿತ್ರಾತ್ಮರಾಗಬೇಕೆಂದು ಕೋರಿಕೆ ಬೆಲೆ ರೂ. ೨ ೦-೦

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ನವ್ಯಮಾಣವಾದ ಐತಿಹಾಸಿಕ ಗ್ರಂಥವು !

ವೀರಶೈವರಿಗೆ ಅತ್ಯಾವಶ್ಯಕವು !! ಮತಾಭಿಮಾನಿಗಳಿಗೆ ಸಂಗ್ರಾಹ್ಯವು !!!

ಶ್ರೀ ಪೂವಲ್ಲಿ (ಹೂಲಿ) ಯ ಸಿಂಹಾಸನ ಬೃಹನ್ಮಠದ ಸಂಕ್ಷಿಪ್ತ ಇತಿಹಾಸವು

ಈ ಐತಿಹಾಸಿಕ ಗ್ರಂಥವು ಸೆ ಗುಡು ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಅಂದವಾಗಿ ಮುದ್ರಿಸಲ್ಪಟ್ಟು ಪ್ರಕಾಶಕ್ಕೆ ಬಂದಿದೆ ಈ ಗ್ರಂಥದ ಸಂಪೂರ್ಣಾಂಶವು ಶ್ರೀ ಪೂವಲ್ಲಿ (ಹೂಲಿ) ಯ ಸಿಂಹಾಸನ ಬೃಹನ್ಮಠದ ಧರ್ಮಾಧಿಕಾರಿಗಳ ಸಂಪೂರ್ಣ ಸಹಕಾರದಿಂದ ಅತ್ಯಂತ ಪ್ರಾಚೀನ ಐತಿಹಾಸಿಕ ಚಾರಿತ್ರಿಕ ಪ್ರಮಾಣ ಸದಾಚಾರಯುಕ್ತವಾದ ದಾನಶಾಸನ ಶಿಲಾಶಾಸನ ಮೊದಲಾದ ಐತಿಹಾಸಿಕ ಸಾಧನಗಳಿಂದಲೂ ಸಿದ್ಧಪಡಿಸಲ್ಪಟ್ಟಿದ್ದು ಸುಮಾರು ೧೪೦೦ ಪುಟಗಳ ಪರಿಪೂರ್ಣ ಗ್ರಂಥವಾಗಿದೆ

ಈ ಗ್ರಂಥದಲ್ಲಿ ವೈದಿಕ ಕಾಲದ ಕಕ್ಷ್ಯಯಜುರ್ವೇದಾಧ್ಯಾಯಿಗಳಾದ ಸಪ್ತ ಪ್ರವರಾಂತರ್ಗತ ಪ್ರವರಗಳು ಶಿವಾಗಮ ಕಾಲದ ಊಕಸಿದ್ಧಾಂತ ಮತ್ತು ಶಿವಸಂಹಿತೆ ಮೊದಲಾದ ವಿಷಯವೂ ಶರ್ಮಾಂತ್ಯವಾದ ಸತ್ಪತಿವಂಶ ಉಪ್ಪಣಮಾಲಾ ನ್ಯೋಮಂಎಂಂ ಗೃ ಭಕ್ಷಕ ರ ವಿಷಯವೂ ವೇದಿಂವ ತಂತ್ರಾಕಪೈವ ವೈದಿಕತಾಂತ್ರಿಕೈವ, ತಾಂತ್ರಿಕವೈದಿಕ ವೈವಮೆಂಬ ಚತುವಿಧ ಪೂಜಾಕ್ರಮಗಳ ವಿಷಯವೂ ವೀರಶೈವರಿಗೂ ಪಾಶುಪತಾದಿ ಶೈವರಿಗೂ ಇರುವ ಭೇದಾಭೇದವೂ ಲಾಕುಂಮುದ್ರ (ಗುಂಡಗೆಗಳ್ಳರಿಗೆ)ಯ ಧಾರಣ ಸಾಂಪ್ರದಾಯವೂ ಶ್ರೀ ಜಗದ್ಗುರು ರುದ್ರಮುನಿ ಶಿವಾಚಾರ್ಯರ ಮತ್ತು ಶ್ರೀ ಜಗದ್ಗುರು ಮಲ್ಲಿಸಿದ್ಧಶಿವಾಚಾರ್ಯರ ವೀರಶೈವ ಧರ್ಮಾಭಿವೃದ್ಧಿಯ ವಿಷಯವೂ, ಅವರಿಂದ ಸ್ಥಾಪಿಸಲ್ಪಟ್ಟ ಶಿವಯೋಗೀಪೀಠಗಳಾದ ವರವರಪಟ್ಟ ಗಣಾಚಾರಿ ಗಣಕುಮಾರ ಸ್ಥಾವರ ಪಂಚಪೀಠಾಚಾರ್ಯರ ಉಪಪೀಠಗಳೂ ಅವರಿಗೆ ಒಂಚತಕ್ಕ ಪ ಚಿಕಲಸಗಳ ಬಾಬುಗಳೂ ಸ್ಥಿರಪಟ್ಟ ಚರಪಟ್ಟ ದೇಶಿಕ (ಚರಪಟ್ಟ)ಗಳ ಅಧಿಕಾರ ವಿಷಯವೂ, ಈ ಅಧಿಕಾರಕ್ಕೆ ಸ್ಥಿರಪಟ್ಟ ಹಿರೇಮಠ ಕಟ್ಟಿಮನೆ, ಪಂಚಗೃಹ ಅಥವಾ ಪೂರ್ವಗೃಮಠ ಸಾವಿರಮಠ ತಾಖಾಸಿಂಹಾಸನ ಬೃಹನ್ಮಠ ಸಿಂಹಾಸನ ಬೃಹನ್ಮಠ, ಶ್ರೀ ಜಗದ್ಗುರು ಪಂಚಸಿಂಹಾಸನ ಬಹಿರ್ಗಳ ವಿಷಯವೂ ಪಟ್ಟಾಧಿಕಾರದಲ್ಲಿ ಹಂಚಿಕೆಕಟ್ಟುಗಳ ವಿಷಯವೂ, ಕರಣಕ್ಕಾಲಮರೆ ವಿರಕ್ತಮಠಗಳ ವಿಷಯವೂ, ಎಡೆಯ ಇರು ಶ್ರೀ ತೋಂಟಿವೆ ಸಿದ್ಧಲಿಂಗಶಿವಯೋಗಿಗಳ ಮತ್ತು ಶ್ರೀ ಪೂವಲ್ಲಿ ಪಂಚಪೀಠಗಳೆಯ ಸಿದ್ಧವೆಂಜೇಶ ಶಿವಾಚಾರ್ಯರ ಕರ್ತೃತ್ವಮಹಿಮೋಪಬೃಂಹಿಯೂ, ಪಂಚಪೀಠಗಣಾಧಿಪತಿಯ ಪಂಚವರ್ಣಗಳಿಂದ ಹುಟ್ಟಿದ ಪಂಚಮಜಾತಿ ಸಾಂಪ್ರದಾಯವೂ, ಹೂಲಿಯ ಬೃಹನ್ಮಠದ ಪ್ರಾಚೀನ, ಅರ್ವಾಚೀನ ಶಿವಾಚಾರ್ಯರಿಂದ ರಚಿಸಲ್ಪಟ್ಟು ಸಂಸ್ಕೃತ ಕರ್ನಾಟಕ ಗ್ರಂಥಗಳ ವಿಷಯವೂ, ಅವುಗಳನ್ನು ಪ್ರಕಾಶಪಡಿಸುವ ಧಾರವಾಡ ಮುರಘಾಮಠದ ಶ್ರೀ ಪ್ರ॥ ಸ್ವಾ॥ ಮೃತ್ಯುಂಜಯಸ್ವಾಮಿಗಳ ಮತ್ತು ಸಂಪಾದಕರಾದ ಶ್ರೀಮಾನ್ ಸಂಸ್ಕೃತ, ಕರ್ನಾಟಕ, ಇಂಗ್ಲೀಷ ಪಂಡಿತರಾದ ಭೂಸನೂರು ಮಠ ಎಂ ಎ, ಮತ್ತು ಶ್ರೀಮಾನ್ ಮಾಳವಾಡ ಎಂ ಎ, ಮಹಾತಪಸ್ವರ ನಿಷ್ಪಕ್ಷಪಾತವಾದ ಧರ್ಮಸೇನೆಯೂ, ಧರ್ಮಾಭಿಮಾನವೂ, ಸಮಯೋಚಿತ ಅನಿವಾರ್ಯ ಈ ಗ್ರಂಥವು ಸರ್ವ ವೀರಶೈವರಿಗೆ ಅತ್ಯಾವಶ್ಯಕವಾಗಿದೆ ಗುರುವರ್ಗಮಠ, ವಿರಕ್ತಮಠ, ಕರಣಸ್ಥಲ ಮಠದ ಸ್ವಾಮಿಗಳಿಗೆ ಪ್ರಾಚೀನ ಸಾಂಪ್ರದಾಯ ಬೋಧಕವಾಗಿದ್ದು, ಸಾಧಾರಣ ವಿಚಾರಜ್ಞರಾದ ಮತಾಭಿಮಾನಿಗಳು ಇದರಲ್ಲಿರತಕ್ಕ ವಿಷಯಗಳನ್ನು ತಿಳಿದುಕೊಂಡು ಆಚರಿಸಿದರೆ ಗುರುವರ್ಗ ವಿರಕ್ತವರ್ಗದಲ್ಲಿ ತಲೆದೋರಿದ ವೈಷಮ್ಯವು ಇಲ್ಲದಂತಾಗುವದೆಂದು ಪ್ರಾಸಂಕಿಯವಾಗಿ ಹೇಳಬಹುದಾಗಿದೆ ಈ ಐತಿಹಾಸಿಕ ಪ್ರಮಾಣಭೂತವಾದ ಪುಸ್ತಕವನ್ನು ಸರ್ವಶಾಸ್ತ್ರಪಾರಿಸ್ಪಾತರೂ, ಮಂತ್ರಸಿದ್ಧರೂ ಶಿವಯೋಗಸಿದ್ಧರೂ ಆದ ಶ್ರೀ ಕರ್ಕರೇಶ್ವರ ಹೂಲಿ ಬೃಹನ್ಮಠಾಧ್ಯಕ್ಷ ವೀರಲಿಂಗಂತಿವಾಚಾರ್ಯ ಮಹಾಸ್ವಾಮಿಗಳವರು ನಿಷ್ಪಕ್ಷಪಾತ ದೃಷ್ಟಿಯಿಂದ ಒರೆದು ಶ್ರೀ ಪೂವಲ್ಲಿ ಪಂಚವರ್ಣ ಬೃಹನ್ಮಠ ಗ್ರಂಥಮಾಲೆಯ ಸುಂದರ ಮತ್ತು ಸುಗಂಧಭರಿತವನ್ನಾಗಿ ಮುದ್ರಿಸಿ ಪ್ರಕಾಶಪಡಿಸಿದ್ದಾರೆ ಈ ಪುಸ್ತಕವು ಗಗಲ ಪುಟದ್ದಿದ್ದು ಉಪಯುಕ್ತವಾದ ಭೂಮಿಕೆಯಂದ ತೋಧಿಸಲ್ಪಟ್ಟು ಬೆಲೆ ತೀರ ಕಡಿಮೆಯೆಂದರೆ ಆಣೆಗೆ ಡೊರೆಯಂತೆ ವ್ಯವಸ್ಥೆ ಮಾಡಿದ್ದಾರೆ ಪುಸ್ತಕ ದೇಣಿಗೆಯು ಮೊದಲಿಗೆ ಮುಮ್ಮಡಿಯಾದರ ಮಾತ್ರ ತಗಿಸಿಕೊಳ್ಳಬೇಕು ರಜೆಯ ಮೂಲಕ ಕಳಿಸಲಾಗುವುದು ವ್ಯಾಪಿಯಿಂದ ಕಳಿಸಲಾಗುವದಿಲ್ಲ ಪೋಷ್ಟ ರಜಿಸ್ಟರ್ ಚಾರ್ಜು ಕೂಡಿ ಒಂದು ಪುಸ್ತಕಕ್ಕೆ ೧ ರೂಪಾಯಿ ಬೀಳಬಹುದು. ಪ್ರತಿಗಳು ಕಡಿಮೆಯಿದ್ದು ಶೀಘ್ರ ಪತ್ರವ್ಯವಹಾರ ಮಾಡಬೇಕು. ಪುಸ್ತಕಗಳು ಮೈಸೂರು ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿಯೂ ದೊರೆಯುವವು

ವಿಳಾಸ :— ಹೂಲಿ ಸಿಂಹಾಸನ ಬೃಹನ್ಮಠಾಧ್ಯಕ್ಷರಾದ

ಶ್ರೀ ವೀರಲಿಂಗಂತಿವಾಚಾರ್ಯಮಹಾಸ್ವಾಮಿಗಳು, ಪೋ॥ ಸವದತ್ತಿ ಜಿ॥ ಬೆಳಗಾಂ.

Edited, Printed and Published by Brahmasthadhyaksha Sri Mahadevaiah at Sri Panchacharya Electric Press, Sayaji Rao Road, Mysore.

REGISTERED No. M. 2266 ॥ ಶ್ರೀಚಾಮುಂಡಿ ಪಂಚಾಂಗಾಲಯೋ-ಪ್ರತೀಪಂತು ॥ REGISTERED No. M. 2266

ಪಂಚಾಂಗಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಸಂಕಟಾಹನಿಕರ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರುತರ್ತ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಮೋಧಕರ್ । ಪಂಚಾಚಾರ್ಯಜಗದ್ಗುರೂತ್ತಮವರರ್ಪಾಲಿಪ್ಪುದೀಲೋಕಮಂ ॥

ಸಂಸ್ಥಾಪಕರು—ಶಾಗನೂರು ಬೃಹನ್ಮಹಾದ್ಯಕ್ಷಶಾಖ ವೆಡೆ ಪಂಡಿ ಶ್ರೀ ಶಾಂತೀಶಾಧಿಪಶಾಸ್ತ್ರಿಗಳವರು.

ಚಾರಿಸಿ ಚಂದಾ ೩ ರೂ.] ಪಂಚಾಪಕರು—ಶಾಗನೂರು ಬೃಹನ್ಮಹಾದ್ಯಕ್ಷಶಾದ ಶ್ರೀ ಮಹಾದೇವಯ್ಯನವರು [ವಿ. ಪಿ ಖರ್ಚು ಸೇರಿ ೩ ರೂ ೮ ಆ.

ಸಂಪುಟ ೨೭] ಸೋಮವಾರ ತಾ॥ ೧೭ ನೇ ಆಗಸ್ಟ್ ೧೯೫೩ [ಸಂಚಿಕೆ ೧೪

ಶಿವ ಸ್ತೋತ್ರ

(ಶ್ರೀವಿದರಕ್ಷೇ ದ್ವಾದಶಾಂಶ)

ಪದ್ಮೋಜಾತೋ ಜಾಹುದೇವ ಈಶಾನೋ ಘೋರಪೂರುಷಃ ।
ಪಂಚಬ್ರಹ್ಮಮಯಃ ಪಂಚಮುಖಃ ಪಂಚಾಚಾರಮಹಗ್ಗಃ ೧೮॥

ಪಂಚಾಕ್ಷರೀ ಮುಖ್ಯಗಃ ಪಂಚಕೋಶವಿವರ್ಜಿತಃ ।
ಪಾವಕಃ ಪವನಃ ಪಾಶಃ ಪಶುಪಾಶವಿವರ್ಜಿತಃ ॥೨೦

ವಿಷ್ಣುಪೂಜ್ಯೋ ವಿಶಾಂಶ್ರೇಷ್ಠೋ ವಿನಾಯಕವರಪ್ರದಃ ।
ಗಂಗಾಧರೋಂಬಿಕಾಧವಾ ಪರಾಶ್ ಶಕಾಶ್ ಜಗೇಶ್ವರಃ ೨೧॥

ಶಂಪರ್ವತಪರ್ಣಾ ಪರಃ ಶಪದೀಃ ಪೀಲಲೋಹಿತಃ ।
ವಿನಾಶಹಾನಿಃ ಶಾಲಾತ್ಮಾ ಗೋಪತಿರ್ಗೋಪಹಸಃ ೨೨॥

ಶ್ರಿಪುಂಡ್ರಧಾರೋ ಧಸ್ಮಾಂಗೋ ಪುಂಡರೀಕೈಶ್ವಗಂಬರಃ ।
ಗಾಯತ್ರೀಮಧ್ಯನಿಲಯೋ ಮಿತ್ರರೂಪೋ ಜಗತ್ಪ್ರಭುಃ ೨೩॥

ಬಿಲ್ವಪೂಜ್ಯೋ ಬಿಲ್ವಿಸಕ್ತ ಬಿಲೇಶಯಫಣಾಧರಃ ।
ಭಾಗಲಿಂಗಾಗರಪ್ರೀತೋ ಬಡಬಾಮಂಬಿಭವಃ ೨೪॥

ಪುಳ್ಯಬ್ರಹ್ಮ ಪುರಂ ಸತ್ಯಂ ಪರೋ ಪೈ ಕೈವಲ್ಯಪಿಂಗಲಃ ।
ಊರ್ಧ್ವರೇತಾ ವಿರೂಪಾಕ್ಷಃ ಪ್ರತೀಕಃ ಶ್ವೇತವರ್ಧನಃ ೨೫॥

ಶಾಸುವಃ ಶಾಸುಪುತ್ರಃ ಶ್ರೇಷ್ಠಃ ಶಪಶಾಂಬರಃ ।
ಸನೋ ಪಿಸ್ತೀಮಮಿಂಮಾ ವಸೇಃ ಪ್ರೇತ್ರಶಾಯಳಃ ೨೬॥

ಕೈಲಾಸಕೈಲನಿಲಯೋ ನಿಲಯೋ ಲಯವರ್ಜಿತಃ ।
ರತ್ನಾಕರೋ ರಾತ್ನಸಭೋ ರಾತ್ನಪ್ರೀತೋ ರತಪ್ರದಃ ೨೭॥

ಸುತಿಥಿಃ ಶೌತಿಕೋ ಧೂರ್ತೋ ಶಕ್ತೂರ ಶುಮಪ್ರಿಯಃ ।
ಶಪಶಾಂಗದಶೇಯಾಂಬರಾಶಾಳೋದರಪ್ರಿಯಃ ೨೮॥

ಉಮಾಧವೋ ಮಾಧಪಾನ್ಯೋ ಧಸ್ಮರುದ್ರಾಕ್ಷಭೂಷಣಃ ।
ಗಂಗಾಸಂಗಜಟಾಮೌಲಿರ್ಗಾಂಗಾಶಮಾಧಾಯಕಃ ೨೯॥

ಕಮಾಲಮಾಲಾಸುಗಲಃ ಶಪಶಾಲಂಕೃತಃ ।
ಶಟ್ಕೋಟ್ಟಿಪಾಸೋ ನಿಶಿಟೋ ದಂಷ್ಟ್ರಾಕರಾಲಿಂಪಲ್ಲಕಃ ೩೦॥

೩೦ ಜಯ ಕೈಲಾಸನಿಲಯ ಜಯ ಕೈಲಾಸಜಾನಕೇ ।
ಜಯ ಮುಂಡಾಸ್ತನೀಭೂತ ಜಯ ದೈಂಡಾಶಯಾರಿತ ೩೧॥

ಜಯ ಶಾಮುಂಗಪಜಯ ಜಯ ಪಾಮುಂಗಕ್ಕಿಂಬ ।
ಜಯ ಸೋಮಶೆಖರಾಮೌಳೆ ಜಯ ಭಕ್ತಸುಖ್ಯಲೋಕಪ ೩೨॥

ಜಯ ರುದ್ರಮಹಾದೇವ ಜಯ ಭವ್ಯವರಾಸನ ।
ಜಯ ಪಾಗೇಂದ್ರಕೇಯೂರ ಜಯ ಯೋಗೀಂದ್ರಸೇವಿತ ೩೩॥

ಜಯ ಗಂಗಾಧರೇಶಾನ ಜಯ ಭೋಗಾಪವರ್ಗದ ।
ಜಯ ರಾಗಾದಿದೋಷಹಶ್ನ ಜಯ ರಾಮಾಪಸಪ್ರಿಯ ೩೪॥

ಜಯ ವಿಶ್ವಪ್ರಕಾಶಾತ್ಮನ್ ಜಯ ವಿಶ್ವವಿಧಾಯಕ ।
ಜಯ ವಿಶ್ವಾಧಿಪ ಶ್ವಮಿನ್ ಜಯ ವಿಶ್ವಾಧಿಪ್ರಭೋ ೩೫॥

ಜಯ ವಿಷ್ಣುಪೀಠರೂಪಾಂಗ ಜಯ ಹವ್ಯಪ್ರಿಯಾನ್ನಯ ।
ಜಯ ಶಂಭೋ ನ್ವಹಾರೂಢ ಜಯ ಶುಂಭೋದ್ಭವಸ್ತುತ ೩೬॥

ಜಯ ಶಕ್ತಿಕ್ರಯಾರಾಧ್ಯ ಜಯ ಮುಕ್ತಿಸುಖಪ್ರದ ।
ಜಯ ಭಕ್ತಪರಾಧೀನ ಜಯ ಮುಳ್ಳಜನೇಡಿತ ೩೭॥

ಜಯ ಪ್ರಣತಸಮಂತಾರ ಜಯ ಪ್ರಣವವಿಗ್ರಹ ।
ಜಯ ಬದ್ಧಜಟಾಜೂಟ ಜಯ ಶುದ್ಧವರಾತ್ಮತೇ ೩೮॥

ಜಯ ವಿಶ್ವೇಶವರದ ಜಯ ಮುಕ್ತೇಂದ್ರಸೂದನ ।
ಜಯ ಕೋಟ್ಟೀಶ್ವರಾಂತಾಕ ಜಯ ಶಾಟ್ಕೆವಿಹಾರದ ೩೯॥

ಜಯ ಶಾವಳೆಳ್ಕಾಶ್ಮ ಜಯ ಶೇತವಪರ್ಣ ।
ಜಯ ಶ್ರಿಪುಂಡ್ರನಿಲಿಂ ಜಯ ಶ್ರಿಪುರೆತಾಸನ ೪೦॥

ಜಯ ಪಂಚಾಕ್ಷರೀರೂಪ ಜಯ ಪಂಚಾನನೋಜ್ಜ್ವಲಿ ।
ಜಯ ಪಂಚಶ್ವರಹಿತ ಜಯ ಪಂಚದಶಾಂಬಳ ೪೧॥

ಜಯ ನಂದಿತಶಾಪಾಶ ಜಯ ನಂದಿತವಜ್ಜನ ।
ಜಯ ನಂದಿತದೇವೇಶ ಜಯ ನಂದಿಮುಖಪ್ರಿಯ ೪೨॥

ಜಯ ಸಚ್ಚಿತ್ಸುಖಾತ್ಮಂಗ ಜಯ ಸಚ್ಚಿತ್ಸವ್ಯಲ ।
ಜಯ ದಾರಿದ್ರ್ಯಮೂಲಶ್ನ ಜಯ ದಾರಿಪಮುಜಾಸ ೪೩॥

ಜಯ ಪಾರದಗಾಸೇಶ್ನ ಜಯ ಪೀರದವೇಖರ ।
ಜಯ ದಾಮುವಪಾಂತಶ್ನ ಜಯ ಪಾಮುಳಳೀವರ ೪೪॥

ಜಯ ಸಚ್ಚೋಕ್ಷಪುಷ್ಪಾಸ ಜಯ ಸಚ್ಚೋಕಪೆಂಬಳೆ ।
ಜಯ ಶ್ರೀಕಂಠಧರಸ್ ಜಯದ್ವಿಗ್ಮಂಡಕಪ್ರಪ ೪೫॥

ಜಯ ಶ್ಯಾಕೋ ಪಹುಪೆಕೆ ಜಯ ವೀಷಾಂಪಕ್ಕರ ।
ಜಯ ಪ್ಯಾಕ್ಷಾತಿಪಧರ ಜಯ ಪ್ಯಾಕ್ಷಾಂಪ್ರಿಸೇವಿತ ೪೬॥

ಜಯ ಸತ್ಪಪೀಮಿಶ ಜಯ ವೀಪ್ಪ ವಿಕೋಮುಖ ।
ಜಯ ವಿಶ್ವಪಾಂಪಾಂ ಜಯ ಪ್ಪಪರಪ್ರಪ ೪೭॥

ಜಯ ಜ್ಯಾಜಾಂಪಿಂ ಜಯ ಸತ್ಪಸಂಸ್ಕಿತ ।
ಜಯ ಶ್ರೀಂಗೀಂಪಾಂಗ ಜಯ ಶ್ರೀಂಗಾಪೂಜಿತ ೪೮॥

ಪಂಚಾಚಾರ್ಯಪ್ರಭಾ

೧೯೫೩ ನೆಯ ಆಗಸ್ಟ್ ತಾ॥ ೧೭ ನೇ ಸೋಮವಾರ

ಪುರಾಣಶ್ರವಣ

ಪುರಾಣಗಳ ವ್ಯಾಸಂಗದಿಂದ ಮಾನವರಿಗೆ ಆಗಬೇಕಾಗಿರುವ ಪ್ರಯೋಜನಗಳಲ್ಲಿ ಆಸ್ತಿಕತೆಯು ಪ್ರಾಮುಖ್ಯವಾಗಿದೆ ಆಸ್ತಿಕತೆಯೆಂದರೆ ದೇವರಿದ್ದಾನೆಂಬ ನಂಬಿಕೆ ಮಾತ್ರವಲ್ಲ ಜನರು ತಮ್ಮ ನಿತ್ಯಗಟ್ಲೆಯ ಜೀವನಕ್ರಮದಲ್ಲಿ ಅಧರ್ಮವನ್ನು ತ್ಯಜಿಸಿ ಧರ್ಮದಿಂದ ವರ್ತಿಸುವದು ಆಸ್ತಿಕತೆಯೆಂದು ಹೇಳಬಹುದು ಮಾನವನ ಕರ್ಮಗಳಿಂದ ಸುಖಪ್ರಾಪ್ತಿಯೂ, ದುಃಖಪ್ರಾಪ್ತಿ ಅಥವಾ ದುಃಖನಿವೃತ್ತಿಯೂ ಫಲಿಸುತ್ತಿರುತ್ತವೆ ಅನುಭವದಿಂದ ಇದನ್ನು ಮನಗಂಡವರು ದೇವತ್ವಕ್ಕೆ ಏರಲು ಬಯಸುತ್ತಾರೆ ಇಂಥ ಮುಂದಾಲೋಚನೆಯುಳ್ಳ ಮಹಾತ್ಮರ ಉದಾಹರಣೆಗಳನ್ನು ಪುರಾಣಗಳಲ್ಲಿ ಹೇರಳವಾಗಿ ವರ್ಣಿಸಿರುತ್ತಾರೆ ಆ ಮಹಿಮರ ಗುಣಾತಿಶಯಗಳನ್ನು ಅರಿತುಕೊಂಡು ಜನಜೀವನವು ಧರ್ಮ ಅಥವಾ ನೀತಿಯ ಅವಲಂಬನೆಯಿಂದ ನೋಲ್ಪಡಲೆಂಬುದೇ ಪುರಾಣಶ್ರವಣದ ಉದ್ದೇಶವಾಗಿದೆ

ದೇವರು ಸುಗುಣನೂ, ಸಾಕಾರನೂ ಆಗಿದ್ದಾನೆಂದು ಶೈವರೂ, ವೈಷ್ಣವರೂ, ಶಾಕ್ತೇಯರೂ ನಂಬುತ್ತಾರೆ ದೇವರು ಸುಗುಣನಾಗಿ ನಿರಾಕಾರನಾಗಿದ್ದಾನೆಂದು ಮುಸಲ್ಮಾನರೂ, ಕ್ರಿಶ್ಚಿಯನ್ನರೂ, ಒಪ್ಪುತ್ತಾರೆ ದೇವರು ಇದ್ದರೂ ಕಾರ್ಯಕರ್ತನಾಗದೆ ಮುಂದುವರಿಯುವ ಮಾನವರಿಗೆ ಮೇಲ್ಪಂಕ್ತಿಯಾಗಿ ಮಾತ್ರ ಇದ್ದಾನೆಂದು ಜೈನರು ಹೇಳುತ್ತಾರೆ ಬುದ್ಧನು ದೇವರಿದ್ದಾನೆಂದು ಹೇಳದಿದ್ದರೂ ಧಾರ್ಮಿಕಜೀವನದಿಂದಲೇ ಮನುಷ್ಯನ ಶ್ರೇಯಸ್ಸಾಧನೆಯೆಂದು ಹೇಳಿದ್ದರಿಂದ ಬೌದ್ಧರು ಅವನನ್ನೇ ದೇವರೆಂದು ಪೂಜಿಸುತ್ತಿದ್ದಾರೆ ಸಾಂಖ್ಯರು ಮೀಮಾಂಸಕರು ದೇವರನ್ನು ಒಪ್ಪದಿದ್ದರೂ ಧರ್ಮ ಅಥವಾ ಕರ್ಮವೇ ಜನರ ಕಲ್ಯಾಣಕ್ಕೆ ಸಾಧನವೆಂದು ತಿಳಿಯುತ್ತಾರೆ ಅದ್ವೈತವೇದಾಂತಿಗಳು ನಿಷ್ಕಾಮಕರ್ಮಾಚರಣೆಯಿಂದ ಚಿತ್ತದಲ್ಲಿರುವ ರಾಗದ್ವೇಷ ಮುಂತಾದ ಮಲಗಳು ತೊಲಗಿ ಆತ್ಮನು ಶುದ್ಧನಾಗಲು ಪರತತ್ವದ ಸ್ವರೂಪವು ಗೊತ್ತಾಗಿ ಬ್ರಹ್ಮಾತ್ಮೈಕ್ಯದ ಸಾಕ್ಷಾತ್ಕಾರವಾಗುತ್ತದೆ ಇದೇ ಮೋಕ್ಷವೆಂಬ ಪರಮಪುರುಷಾರ್ಥವು ಎಂದು ಹೇಳುತ್ತಾರೆ

ಹೀಗೆ ನಾನಾಬಗೆಯ ಜನರ ರುಚಿ ಸಂಸ್ಕೃತಿಗಳಿಗೆ ಅನುಕೂಲವಾಗುವಂತೆ ವ್ಯಾಸರು ಹದಿನೆಂಟು ಮಹಾಪುರಾಣಗಳನ್ನೂ, ಅನೇಕ ಉಪಪುರಾಣಗಳನ್ನೂ ರಚಿಸಿ ಬೋಧಿಸಿ ಪ್ರಚಾರಪಡಿಸಿದ್ದಾರೆ ಇವುಗಳಲ್ಲಿ ಶೈವಪುರಾಣಗಳು, ವೈಷ್ಣವಪುರಾಣಗಳು, ಶಾಕ್ತೇಯಪುರಾಣಗಳು ಎಂದು ಮೂರು ವಿಧವಾಗಿವೆ ಪರಶಿವನು ತ್ರಿಮೂರ್ತಿಗಳನ್ನು ಗರ್ಭೀಕರಿಸಿ ಲಿಂಗಾಕಾರವಾಗಿರುವನೆಂದೂ ಲಿಂಗಪುರಾಣವು ಬೋಧಿಸುತ್ತದೆ ಅಂದರೆ ಲಿಂಗದ ಬಲಭಾಗದಲ್ಲಿ ವಿಷ್ಣುವೂ, ಎಡಭಾಗದಲ್ಲಿ ಬ್ರಹ್ಮನೂ, ಮಧ್ಯದಲ್ಲಿ ಶಿವನೂ, ಲಿಂಗದ ಬುಡದಲ್ಲಿ ಬ್ರಹ್ಮನೂ, ಮಧ್ಯದಲ್ಲಿ ವಿಷ್ಣುವೂ, ಶಿರಸ್ಸಿನಲ್ಲಿ ಶಿವನೂ ಇರುವರೆಂದು ಹೇಳಿದ್ದಲ್ಲದೆ ಬ್ರಹ್ಮ ವಿಷ್ಣು, ಶಿವರಲ್ಲಿ ಭೇದವನ್ನೆಣಿಸಿದರೆ ಶ್ರೇಯಸ್ಸು ದೊರೆಯಲಾರದೆಂದು ವರ್ಣಿತವಾಗಿದೆ ಈ ಸರಣಿಯನ್ನನುಸರಿಸಿ ಉತ್ತರಭಾಗದಲ್ಲಿ ವಿಷ್ಣುಭಕ್ತಿಯನ್ನು ನಿರೂಪಿಸಿದೆ ದೈವೀಭಕ್ತಿಯು ಹೆಚ್ಚಾಗಲೆಂಬ ಉದ್ದೇಶದಿಂದಲೇ ಶ್ರಾವಣಮಾಸದಲ್ಲಿ ಅಲ್ಲಲ್ಲಿ ಪುರಾಣಶ್ರವಣವು ನಡೆಯುತ್ತಿರುವುದು ಲೋಕರೂಢಿಯಾಗಿದೆ

ಭಕ್ತಿಗೂ ಗಾನಕ್ಕೂ ನಿಕಟಸಂಬಂಧವಾಗಿರುವದೆಂಬ ವಿಷಯವನ್ನು ಸರ್ವರೂ ಒಪ್ಪುತ್ತಾರೆಂಬುದಕ್ಕೆ ಸಂಗೀತಪ್ರಿಯನಾದ ನಾರದನು ಅನನ್ಯವಾದ ಭಕ್ತಿಯಿಂದ ಭಗವಂತನನ್ನು ಸ್ತೋತ್ರಮಾಡಿ ಮನವಲಿಸುತ್ತಿದ್ದನೆಂಬುದೇ ಸಾಕ್ಷಿಯಾಗಿದೆ ಆದ್ದರಿಂದ ಈಗಲೂ ಪುರಾಣ, ಕೀರ್ತನ, ಶಾಸ್ತ್ರಶ್ರವಣ, ಭಜನಾದಿಗಳನ್ನು ಇಂಪಾದ ಗಾನದೊಂದಿಗೆ ನಡೆಸುತ್ತಿದ್ದಾರೆ ಇಂಥ ಧರ್ಮಾಚರಣೆಯಿಂದ ಪ್ರಪಂಚದಲ್ಲಿರುವ ಎಲ್ಲ ಮತಗಳಲ್ಲೂ ಸಹಾನುಭೂತಿ ಗೌರವಾದರಗಳು ಬೆಳೆದು ಜಗತ್ಕಲ್ಯಾಣವಾಗಬೇಕಾಗಿದೆ

ಸರ್ವೇ ಲಿಂಗಮಯಾ ಲೋಕಾಃ ।
ಸರ್ವೇ ಲಿಂಗೇ ಪ್ರತಿಷ್ಠಿತಾಃ ॥

ಎಂಬಂತೆ ಜಗತ್ತೆಲ್ಲವೂ ಲಿಂಗಸ್ವರೂಪವಾಗಿದ್ದು ಲಿಂಗದಿಂದ ಪ್ರತಿಷ್ಠಿತವಾಗಿರುವದೆಂದು ಲಿಂಗಪುರಾಣದ ಹನ್ನೊಂದನೇ ಅಧ್ಯಾಯದ ನಾಲ್ವತ್ತನೇ ಶ್ಲೋಕದಲ್ಲಿ ಹೇಳಿದ ಪ್ರಕಾರ ಬ್ರಹ್ಮ, ವಿಷ್ಣು ಮೊದಲಾದ ದೇವತೆಗಳು ಲಿಂಗವನ್ನು ಸ್ಥಾಪಿಸಿ ಪೂಜಿಸಿ ಇಷ್ಟಾರ್ಥವನ್ನು ಪಡೆದರೆಂಬುದಕ್ಕೆ ಶ್ರೀ ರಾಮನು ಸ್ಥಾಪಿಸಿದ ರಾಮೇಶ್ವರಲಿಂಗವೇ ಸಾಕ್ಷಿಯಾಗಿದೆ ಇದರಂತೆ ಲಿಂಗಪುರಾಣದಲ್ಲಿ ಲಿಂಗದ ಮಹಿಮೆಯು ಅನಂತವಾಗಿ ವರ್ಣಿಸಲ್ಪಟ್ಟಿದೆ

ವೀರಶೈವಧರ್ಮಕ್ಕನುಗುಣವಾಗಿ ಶಿವನ ಶ್ರೇಷ್ಠತೆಯೂ ಗುರುವಿನ ಪ್ರಾಬಲ್ಯವೂ ಅಷ್ಟಾವರಣಗಳ ಮಹಿಮೆಯೂ ನೂರೊಂದು ಸ್ಥಲಗಳ ನಿರೂಪಣೆಯೂ ಶ್ರೀ ರೇಣುಕವಿಜಯ ಮಹಾಪುರಾಣದಲ್ಲಿ ವಿಶದವಾಗಿ ವರ್ಣಿಸಲ್ಪಟ್ಟಿದ್ದು ಅನೇಕ ಭಕ್ತಿಭರಿತವಾದ ಕಥೆಗಳೂ ಇವೆ ಈ ಮಹಾಪುರಾಣವನ್ನು ಸರ್ವ ವೀರಶೈವರು ಪ್ರತಿದಿವಸ ಶ್ರಾವಣ ಮಾಸ ಪೂರ್ತಿಯಾಗಲಿ ಧನುರ್ಮಾಸಾಂತ್ಯದವರೆಗಾಗಲಿ ಪಠಿಸಿದರೆ ಸಕಲ ಪಾಪನಿವೃತ್ತಿಯಾಗಿ ಇಷ್ಟಾರ್ಥಸಿದ್ಧಿಯಾಗುವದಲ್ಲದೆ ಗ್ರಹಪೀಡೆಗಳ ತೊಲಗಿ ಸುಖದಲ್ಲಿ ಬಾಳಲು ಸಹಾಯವಾಗುತ್ತದೆ ಓದಿ ಪಠಿಸಿ ಧನ್ಯರಾಗಲೆಂದು ಹಾರೈಸುತ್ತೇನೆ

ಪತ್ರವ್ಯವಹಾರ

[ಬಾತ್ಮೀದಾರರು ಅಭಿಪ್ರಾಯ ಪಡುವ ಲೇಖನಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ ಎಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು —ಸಂ]

ಜ॥ ಶ್ರೀ ಶಿವಾನಂದ ರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರ ಪುಣ್ಯತಿಥಿ

ಕೈಲಾಸವಾಸಿಗಳಾದ ರಂಭಾಪುರೀ ಜಗದ್ಗುರು ಶ್ರೀ ಶಿವಾನಂದ ರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರು ಲಿಂಗೈಕ್ಯರಾಗಿ ಇದೇ ಶ್ರಾವಣ ಶುದ್ಧ ಚೌತಿಗೆ ಏಳು ವರ್ಷಗಳು ಮುಗಿದು ಎಂಟನೇ ವರ್ಷವು ಪ್ರಾಪ್ತವಾದ ಮೂಲಕ ಈ ಪುಣ್ಯದಿನದಲ್ಲಿ ಅವರ ೮ ನೇ ಪುಣ್ಯತಿಥಿಯನ್ನು ಮಾಡಿ ಆತ್ಮಕ್ಕೆ ಶಾಂತಿಯನ್ನೂ ಶಿವಸಾಯುಜ್ಯವನ್ನೂ ಕೋರಲು ರಂಭಾಪುರೀ ಶ್ರೀ ಮಹಾಮಠದಲ್ಲಿ ರುದ್ರಾಭಿಷೇಕ, ಸಹಸ್ರಬಿಲ್ವಾರ್ಚನೆ ಮಹಾಮಂಗಳಾರತಿ ಪೂರ್ವಕ ಶಿವಾರಾಧನೆಯು ಆಚರಿಸಲ್ಪಟ್ಟಿತೆಂದು ತಿಳಿಸುವ,

ಬಿ ಎಸ್ ರುದ್ರಯ್ಯ
ಫಾರ್ ಏಜಂಟ್

ಶ್ರಾವಣಮಾಸದ ಪೂಜೋತ್ಸವ, ರಾಣೇಬೆನ್ನೂರು

ದೇಶದ ಸರ್ವಾನಿಷ್ಟನಿವಾರಣೆಗಾಗಿಯೂ ಸರ್ವರ ಅಭ್ಯುನ್ನತಿಗಾಗಿಯೂ ಶ್ರೀ ರೇಣುಕಮಂದಿರದಲ್ಲಿ ಕೆಳಗಿನಂತೆ ಇದೇ ಶ್ರಾವಣಮಾಸದಲ್ಲಿ ಶ್ರಾವಣ ಶುದ್ಧ ಪಾಡ್ಯದಿಂದ ಬಹುಳ ೩೦ ರ ವರೆಗೆ (ತಾ॥ ೧೦-೮-೫೩ ರಿಂದ ೭-೯ ೧೯೫೩) ಕೆಳಕಂಡ ಕಾರ್ಯಕ್ರಮಗಳು ಜರುಗುತ್ತವೆ

೧ ಪ್ರತಿದಿನವೂ ಪ್ರಾತಃಕಾಲ ರೇಣುಕರಿಗೆ ಪಂಚಾಮೃತ ಅಭಿಷೇಕ, ಮಧ್ಯಾಹ್ನ ಅಲಂಕಾರ ಪೂಜಾ, ಸಂಜೆ ಅಷ್ಟೋತ್ತರ ಮಂಗಲಪೂಜಾ

೨ ಪ್ರತಿ ಸೋಮವಾರ ಮುಂಜಾನೆ ಶ್ರೀ ರುದ್ರಾಭಿಷೇಕ, ಸಹಸ್ರಬಿಲ್ವಾರ್ಚನೆ. ಶುಕ್ರವಾರ ಮಂಗಳವಾರ ಮಧ್ಯಾಹ್ನದಲ್ಲಿ ಕುಂಕುಮಾಕ್ಷತಾರ್ಚನ ಪೂಜಾ

ಪ್ರತಿದಿವಸ ಸಾಯಂಕಾಲ ೬ ಘಂಟೆಯಿಂದ ೮ ಘಂಟೆಯ ವರೆಗೆ ಸಾಮೂಹಿಕ ಭಜನಾ ೮ ರಿಂದ ೯ ರ ವರೆಗೆ ಶ್ರೀ ವಂ॥ ನಾಗಪ್ಪಶಾಸ್ತ್ರಿ, ಗುತ್ತಲ ಇವರು 'ಶ್ರೀ ರೇಣುಕವಿಜಯ ಪುರಾಣ' ವನ್ನು ಹೇಳುತ್ತಾರೆ ಮತ್ತು ರಾಣೇಬೆನ್ನೂರು ಗವಿಸಿದ್ಧೇಶ್ವರ ದೇವಸ್ಥಾನದಲ್ಲಿ ಪ್ರತಿದಿವಸ ಬೆಳಿಗ್ಗೆ ೪ ಘಂಟೆಯಿಂದ ೬ ಘಂಟೆಯ ವರೆಗೆ ಶ್ರೀ ವಸ್ತ್ರದ್ ಭದ್ರಮುದ್ದ ಪಾರ್ಟಿ ಇವರಿಂದ ನೇತೃತ್ವದಲ್ಲಿ ಪಂಚಾಕ್ಷರೀ ಮಹಾಮಂತ್ರ ಜಪಾನುಷ್ಠಾನ ನಡೆಯುತ್ತ ಈ ಪ್ರಕಾರ ಕಾರ್ಯಕ್ರಮಗಳು ನಡೆಯುತ್ತವೆ ಈ ಸರ್ವ ಕಾರ್ಯಕ್ರಮದಲ್ಲಿ ಯಾವತ್ತರೂ ಭಾಗಿಗಳಾಗಬೇಕೆಂದು ಆಶಿಸುವೆವು

ಶ್ರೀ ಜಗದ್ಗುರು ಪಂಚಾಚಾರ್ಯ ಭಜನಾಸಂಘದ
ಸೆಕ್ರೆಟರಿ.

ಧರ್ಮಾರ್ಥದೀಕ್ಷಾಸಂಸ್ಕಾರ, ಬೀರೂರು

ಶ್ರೀ ಪ್ರಭುಲಿಂಗಸ್ವಾಮಿ ವಿದ್ಯಾರ್ಥಿನಿಲಯ ಸಂಪಾದನೆಮಠ, ಬೀರೂರು ಈ ನಿಲಯದಲ್ಲಿ ನೆಲಸಿರುವ ಶ್ರೀ ಮರುಳಸಿದ್ಧೇಶ್ವರಸ್ವಾಮಿಗೆ ಪ್ರತಿವರ್ಷ ಪದ್ಧತಿ ಪ್ರಕಾರದಂತೆ ಈ ವರ್ಷ ವಿಜಯ ಸಂ॥ ಶ್ರಾವಣಮಾಸ ಪಾಡ್ಯ ಸೋಮವಾರದಿಂದ ಸೂರ್ಯೋದಯಕ್ಕೆ ಸರಿಯಾಗಿ ರುದ್ರಾಭಿಷೇಕ, ಸಹಸ್ರಬಿಲ್ವಾರ್ಚನೆ ಮತ್ತು ಸಾಯಂಕಾಲ ೬ ಘಂಟೆಯಿಂದ ಪುರಾಣಪ್ರವಚನ ವ್ಯಾಖ್ಯಾನಗಳು ನಡೆಯುತ್ತವೆ ಹಾಗು ಶ್ರಾವಣ ಶು॥ ದಶಮಿ ಗುರುವಾರ ಬೆಳಿಗ್ಗೆ ದೀಕ್ಷಾಸಂಸ್ಕಾರವನ್ನು ನಡೆಸಲಾಗುತ್ತೆ ಆದ್ದರಿಂದ ಸರ್ವ ಭಕ್ತಮಾಹೇಶ್ವರರು ಸಕಾಲಕ್ಕೆ ಬಂದು ನಿಮ್ಮ ಕಾರ್ಯಗಳನ್ನು ನೆರವೇರಿಸಿಕೊಂಡು ಹೋಗಬೇಕಾಗಿ ವಿನಂತಿ ದೀಕ್ಷಾಸಂಸ್ಕಾರ ಹೊಂದುವ ಮಹೇಶ್ವರರಿಗೆಲ್ಲ ಆಹ್ವಾನವಿರುತ್ತೆ.

ಬಾವಿಹಳ್ಳಿ ಹೊಳಗುಂದಿ ಹಿರೇಮಠದ ಸಿದ್ಧಾಂತಿ ವೇದಾಧ್ಯಾಪಕ ಬಸವಲಿಂಗಶಾಸ್ತ್ರಿಗಳವರು ಸದರಿ ವೈದಿಕ ಕರ್ಮಗಳನ್ನು ಶ್ರಾವಣಮಾಸ ಆಖೈರಿ ವರೆಗೆ ಮಾಡುವವರಾಗಿದ್ದಾರೆ

ಗಿರಿಯಾಪುರದ ವೀರಭದ್ರಯ್ಯನವರಿಂದ ಪುರಾಣಪ್ರವಚನ ವ್ಯಾಖ್ಯಾನಗಳು ನಡೆಯಲ್ಪಡುತ್ತವೆ ಸರ್ವರಿಗೂ ಆಹ್ವಾನವಿರುತ್ತೆ

ವ್ಯವಸ್ಥಾಪಕ,
ನಾಗಾಪುರದ ಚನ್ನಬಸಪ್ಪನವರು,
ಪ್ರಭುಲಿಂಗಸ್ವಾಮಿ ವಿದ್ಯಾರ್ಥಿನಿಲಯ,
ಸಂಪಾದನೆಮಠ, ಬೀರೂರು

ನೋಟೀಸು

ಶ್ರೀಮದುಜ್ಜಯಿನಿ ಸದ್ಧರ್ಮ ಸಿಂಹಾಸನ ಜ್ಞಾನ ಗುರುವಿದ್ಯಾಪೀಠದ ಆಫೀಸಿನಿಂದ,

ಮಹಾಶಯರೇ,

ಶ್ರೀಮದುಜ್ಜಯಿನಿ ಸದ್ಧರ್ಮ ಸಿಂಹಾಸನ ಜ್ಞಾನ ಗುರುವಿದ್ಯಾಪೀಠದ ಮೀಟಿಂಗು ತಾ॥ ೬-೮-೫೩ ರಂದು ನಡೆಯಲಿದ್ದದು ಕೋರಂ ಇಲ್ಲದ್ದಕ್ಕಾಗಿ ಬಹು ವಿಷಾದಪಟ್ಟು ಸದ್ರಿ ಮೀಟಿಂಗನ್ನು ತಾ॥ ೨೩-೮-೫೩ ಕ್ಕೆ ಮುಂದೂಡಲಾಗಿದೆ ಇಂತಹ ಸಂಸ್ಥೆಗೆ ತಮ್ಮಂಥವರ ಸೌಹಾರ್ದತೆ ಬೆಂಬಲ ತುಂಬಾ ಬೇಕು ಕಾರಣ ತಾವು ನಾಳಿನ ತಾ॥ ೨೩-೮-೫೩ ರ ಮೀಟಿಂಗಿಗೆ ತಪ್ಪದೆ ಬರಬೇಕಾಗಿ ಹಾಗೂ ಇಂಥಹ ಸಂಸ್ಥೆಯು ಒಳ್ಳೆ ಅಭಿವೃದ್ಧಿಸ್ಥಿತಿಯಲ್ಲಿ ನಡೆಯಲು ಸಹಕರಿಸುವಿರೆಂದು ಕಳಕಳಿಯಿಂದ ಕೋರಲಾಗಿದೆ.

ಕಾರ್ಯಸೂಚಿ

1) ತಾ॥ ೨೦ ೫ ೫೩ ರಿಂದ ನಡೆದ ಜಮಾಖರ್ಚಿನ ಮಂಜೂರಾತಿ ವಿಷಯ

2) ಆಫೀಸು ಕೆಲಸದ ವಿಷಯದಲ್ಲಿ ಒಬ್ಬ ಗುಮಾಸ್ತನನ್ನು ನೇಮಿಸಿದ್ದನ್ನು ಮಂಜೂರಾತಿ ವಿಷಯ.

3) ಅಧ್ಯಕ್ಷರಲ್ಲಿದ್ದ ಹಣದ ವಿಷಯದಲ್ಲಿ ಸಂಸ್ಥೆಯ ಫಂಡು ಹೆಚ್ಚಿಸಲೋಸುಗ ಸರಿಯಾದ ಆಸಾಮಿಗಳಿಗೆ ಬಡ್ಡಿಗಾಗಿ ಕೊಟ್ಟಿದ್ದನ್ನು ಮಂಜೂರುಮಾಡುವ ವಿಷಯ

4) ಶ್ರೀ ಸಿದ್ಧಲಿಂಗೇಶ್ವರ ಪ್ರಸಾದನಿಲಯ ಬಳ್ಳಾರಿ, ಈ ಸಂಸ್ಥೆಗೆ ಸಹಾಯಮಾಡುವ ವಿಷಯದಲ್ಲಿ ಸಭೆಯ ಅಭಿಪ್ರಾಯ.

5) ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರ ವಿಷಯ

ಎಸ್. ಗುರುಬಸಪ್ಪ, ಸೆಕ್ರೆಟರಿ.

ತಾ॥ ೧೭-೮-೫೩ ಅಧ್ಯಕ್ಷ

ಶ್ರೀ ಮುಕ್ಕಾಲು ಬಸವೇಶ್ವರ ದೇವಸ್ಥಾನದಲ್ಲಿ ಶ್ರೀ ಪೂಜ್ಯ ಯತಿಯಿಂದ ಸಿದ್ಧಲಿಂಗೇಶ್ವರ ಪುರಾಣಪ್ರಾರಂಭ

ದಿನಾಂಕ ೧೧ ೮-೮೯೩೩ ನೇ ಸೋಮವಾರದಿಂದ ಪ್ರತಿದಿನ ಸಾಯಂಕಾಲ ಪುರಾಣ ಪ್ರವಚನ ಪಟ್ಟುಗುಣ, ಶ್ರೀ ವೇಗಿ ಗಂಗಾಧರ ಶಾಸ್ತ್ರಿಗಳು ಹರಿಭಕ್ತ ಕೊಂಗೋಡ ಇವರು ಜಾತ್ಯಸಿದ್ಧಾಂತವಾಗಿ ಹೇಳುವ ಸ್ವಾರಿ ಸಂಗೀತ ವಿದ್ವಾನ್ ಶ್ರೀ ವೇಗಿ ರುದ್ರಮುನಿ ಸ್ವಾಮಿ ಹರಿಭಕ್ತ ಇವರು ಸಂಗೀತ ರಹಸ್ಯದೊಡನೆ ಓದುತ್ತಾರೆ ಯಾವತ್ತೂ ಭಕ್ತ ಸ್ತ್ರೀ-ಪುರುಷರು ಪುರಾಣವನ್ನು ಕೇಳಲಿಕ್ಕೆ ಆಗಮಿಸಬೇಕಾಗಿ ವಿನಂತಿ

ಶ್ರೀ ಮುಕ್ಕಾಲು ಬಸವೇಶ್ವರ ಭಕ್ತಮಂಡಳಿ, ಗದಗ

ಕನ್ನಡ ವಾರಪತ್ರಿಕೆ

ಅದನಾವಿಯ ಭಾರತೀಯ ಸಿದ್ಧಾಂತ ಕಾರ್ಯಾಲಯದಿಂದ "ಶಿವಸಿದ್ಧಾಂತ" ಎಂಬ ವಾರಪತ್ರಿಕೆಯೊಂದನ್ನು ಹೊರತರಿಸುವ ಯೋಜನೆಯನ್ನು ಮಾಡಲಾಗಿದೆಯೆಂದು ಭಾರತೀಯ ಸಿದ್ಧಾಂತ ಕಾರ್ಯಾಲಯದ ಕಾರ್ಯದರ್ಶಿಗಳು ತಿಳುಹಿಸುತ್ತಾರೆ

ವರ್ತಮಾನ ಸಂಗ್ರಹ

ಶೇಕ್ ಅಬ್ದುಲ್ಲಾರ ನಿಜ ಮತ್ತು ದಸ್ತಗಿರಿ

ಶೇಕ್ ಅಬ್ದುಲ್ಲಾರವರ ೩೧ ಮಂದಿ ಬೆಂಬಲಿಗರೂ ದಸ್ತಗಿರಿಯಾಗಿದ್ದಾರೆ

ಕಾಶ್ಮೀರದ ಪ್ರಧಾನ ಮಂತ್ರಿಶ್ರೇಷ್ಠರಿಂದ ವಜಾ ಮಾಡಲ್ಪಟ್ಟಿದ್ದ ಶೇಕ್ ಮಹಮದ್ ಅಬ್ದುಲ್ಲಾರವರನ್ನು ಶ್ರೀನಗರಕ್ಕೆ ೨೮ ಮೈಲಿ ದೂರದಲ್ಲಿರುವ ಗುಲ್ಮಾರ್ಗ್ ಪಲ್ಲಿ ದಸ್ತಗಿರಿ ಮಾಡಲಾಯಿತು ಮಂತ್ರಿಮಂಡಲವನ್ನು ವಿಸರ್ಜಿಸಲಾಗಿದೆ

ಉಧಂಪುರ ಜಿಲ್ಲೆಯ ಅರಮನೆಯೊಂದರಲ್ಲಿ ಶೇಕ್ ಅಬ್ದುಲ್ಲಾರವರನ್ನು ಬಂಧಿತವಲ್ಲದ ಬಂಧನವುಂಟೆಂದು ತಿಳಿದುಬಂದಿದೆ ಶೇಕ್ ಅಬ್ದುಲ್ಲಾರ ಮಂತ್ರಿ ಮಂಡಲದಲ್ಲಿ ಮಂತ್ರಿಯಾಗಿದ್ದ ಮಿರ್ಜಾ ಅಫಜಲ್ ಬೇಗ್ ರವರೂ ಇತರ ೩೦ ಮಂದಿ ಅವರ ಬೆಂಬಲಿಗರೂ ಸಾರ್ವಜನಿಕ ರಕ್ಷಣಾ ಶಾಸನದ ಪ್ರಕಾರ ದಸ್ತಗಿರಿ ಮಾಡಲಾಗಿದೆ

ಕಳೆದ ಹತ್ತು ವಾರಗಳಿಂದ ಕಾಶ್ಮೀರದಲ್ಲಿ ರಾಜಕೀಯ ವಿಶ್ಲೇಷಣೆಗಿತ್ತು ಮಂತ್ರಿ ಮಂಡಲದಲ್ಲೂ ರಾಷ್ಟ್ರೀಯ ಸಮ್ಮೇಳನದಲ್ಲೂ ಭಿನ್ನಾಭಿಪ್ರಾಯಗಳುಂಟಾಗಿತ್ತು ಭಾರತದೊಡನೆ ಕಾಶ್ಮೀರದ ಸಂಬಂಧ ಮತ್ತು ಸಂಸ್ಥಾನದ ಭವಿಷ್ಯಗಳ ವಿಚಾರದಲ್ಲಿ ಶೇಕ್ ಅಬ್ದುಲ್ಲಾರವರು ಹೊಸ ಧೋರಣೆ ತಾಳಿದ್ದರು. ಈಗ ಶೇಕ್ ಅಬ್ದುಲ್ಲಾ ದಸ್ತಗಿರಿಯಾಗಿ, ಉಪಪ್ರಧಾನ ಮಂತ್ರಿಯಾಗಿದ್ದ ಭಕ್ಷಿ ಗುಲಾಂ ಮಹಮದ್‌ರವರು ಪ್ರಧಾನಮಂತ್ರಿಯಾಗಿ ಪ್ರಮಾಣ ವಚನ ಮಾಡಿ ಅಧಿಕಾರ ವಹಿಸಿಕೊಂಡಿದ್ದಾರೆ

ಹೊಸ ಪ್ರಧಾನ ಮಂತ್ರಿಯ ಎಚ್ಚರಿಕೆ

ರಾಷ್ಟ್ರೀಯ ವಿಪತ್ತನ್ನು ತಡೆಯುವುದಕ್ಕಾಗಿ ತಾವು ಸರ್ಕಾರ ನಡೆಸುವ ಜವಾಬ್ದಾರಿಯನ್ನು ವಹಿಸಿಕೊಂಡಿರುವುದಾಗಿ ಪ್ರಧಾನಮಂತ್ರಿ ಭಕ್ಷಿ ಗುಲಾಂ ಮಹಮದ್‌ರವರು ತಿಳಿಸಿದರು.

"ದೇಶದ ಹಿತಕ್ಕೆ ಮತ್ತು ಶಮ್ಮು ಪ್ರಜಾಸತ್ತಾತ್ಮಕ ಶಕ್ತಿ ಹೋರಾಟದ ಸಂಪ್ರದಾಯಗಳ ವಿರುದ್ಧವಾದ ಕಾರ್ಯ ಚಟುವಟಿಕೆಯಲ್ಲಿತ್ತು. ಅದು ಕ್ಷಿಪ್ರ ಪರಿಣಾಮಗಳಿಗೆ ಕಾರಣವಾಗಿತ್ತೆಂದು" ಎಂದುದಾಗಿ ಅವರು ತಿಳಿಸಿದರು.

"ಸಂಸ್ಥಾನದ ಒಂದು ಭಾಗವನ್ನು ಉಗ್ರ ಸಂಸ್ಥಾನದಿಂದ ವಿಚ್ಛೇದಿಸಿ, ಅದನ್ನು ಸ್ವತಂತ್ರ ಸಂಸ್ಥಾನವಾಗಿ ಮಾಡಲು ನಮ್ಮ ಮಾತ ಸಹೋದ್ಯೋಗಿಗಳಲ್ಲಿ ಕೆಲವರು ಮುಂದಿ ಪ್ರಯತ್ನಿಸಿದ್ದರು. ಆ ಪ್ರಯತ್ನಗಳಿಗೆ ಕೆಲವು ಸ್ವಾರ್ಥಿಗಳೂ ವಿದೇಶೀ ರಾಷ್ಟ್ರಗಳ ಬೆಂಬಲವಿತ್ತು."

ಎಂಬುದಾಗಿಯೂ ಭಕ್ಷಿ ಗುಲಾಂ ಮಹಮದ್ ತಿಳಿಸಿದರು.

ಭಾರತಕ್ಕೊಡನೆ ಇರುವುದೆಂದರೇ ಕಾಶ್ಮೀರದ ಪ್ರಗತಿ ಅಭ್ಯುದಯಗಳು ಸಾಧ್ಯವೆಂದೂ, ಭಾರತದ ಸೈನ್ಯ ಕಾಶ್ಮೀರದ ರಕ್ಷಣೆಗಾಗಿ ಕಾಶ್ಮೀರದಲ್ಲಿರುವುದಾಗಿಯೂ, ಅವಶ್ಯಕತೆಗಳ ಅಡಚಣೆ ಉಂಟಾಗಿ ಆಹಾರ ಸಾಮಗ್ರಿಗಳ ಕೊರತೆ ಆಗಬಾರದೆಂದೂ ಕಾಶ್ಮೀರದ ಇತರ ಪೆಂಬುದು ಕೆಲವರು ಆರು ವರ್ಷಗಳಿಂದ ಕಾಶ್ಮೀರದ ಜನತೆಗೆ ಅನುಭವವಾಗಿದೆಯೆಂದೂ ಭಕ್ಷಿ ಗುಲಾಂ ಮಹಮದ್ ಹೇಳಿದರು

ಪಾಕಿಸ್ತಾನದೊಡನೆ ಸೇರಲು ಪ್ರಯತ್ನ ನಡೆಸಬೇಕೆಂದರೂ ತಪ್ಪಿದರೆ, ಆಗ ಸಂಸ್ಥಾನದೇ ತುಂಡಾಗುವುದೆಂದು ಅವರು ಎಚ್ಚರಿಕೆ ಕೊಟ್ಟರು

ಭಾರತ ಪಾಕಿಸ್ತಾನಗಳ ಹುಟ್ಟಕ ಮಾತುಕತೆಗಳನ್ನು ಅವರು ಪ್ರಸ್ತಾಪಿಸಿ, ಎರಡೂ ರಾಷ್ಟ್ರಗಳು ತಮ್ಮ ಪರ ಸ್ಪರ ದ್ವೇಷ ಸಂಬಂಧವನ್ನು ಹೆಚ್ಚಿಸಿಕೊಳ್ಳಲು ಹೊಂದಿರುವ ಆಕ್ಷೇಪವನ್ನು ಈ ಮಾತುಕತೆಗಳು ವ್ಯಕ್ತಪಡಿಸುವುದೆಂದು ತಿಳಿಸಿದರು

'ಹೈಡ್ರೋಜನ್ ಬಾಂಬು ಅಮೆರಿಕಾ ಒಂದರ ಗುತ್ತಿಗೆಯೇನಲ್ಲ'

'ಹೈಡ್ರೋಜನ್ ಬಾಂಬು ಅಮೆರಿಕಾವೊಂದರ ಗುತ್ತಿಗೆಯೇನಲ್ಲ' ಎಂದು ರಷ್ಯನ್ ಪ್ರಧಾನ ಮಂತ್ರಿ ಜಾರ್ಜ ಮಲೆಂಕಾಫ್ ಘೋಷಿಸಿದ್ದಾರೆ ಈ ಬಾಂಬಿನ ರಹಸ್ಯ ವೇಗ ರಹಸ್ಯಾದ ಸ್ವತ್ತೂ ಆಗಿದೆಯೆಂದೂ, ರಷ್ಯಾದ ಬಳಿಯೂ ಹೈಡ್ರೋಜನ್ ಬಾಂಬುಗಳಿವೆ ಎಂದೂ ಅವರು ಘೋಷಿಸಿದ್ದಾರೆ

ಸುಪ್ರೀಂ ಸೋವಿಯೆಟ್‌ನ ಎರಡೂ ಸಭೆಗಳ ಸಂಯುಕ್ತ ಅಧಿವೇಶನದಲ್ಲಿಂದು ಭಾಷಣ ಮಾಡುತ್ತ್ತಲೇ ಮಿ ಮಲೆಂಕಾಫ್ ಈರೀತಿ ಹೇಳಿದರು ಮಿ ಮಲೆಂಕಾಫ್‌ರವರು ಭಾಷಣಮಾಡುವ ಕಾರ್ಯಕ್ರಮ ಮೊದಲೇಷೂ ನಿಗದಿಯಾಗಿರಲಿಲ್ಲ ಅವರು ಇದ್ದಕ್ಕಿದ್ದಂತಾಗಿಯೇ ಅಧಿವೇಶನಕ್ಕೆ ಆಗಮಿಸಿ ಭಾಷಣ ಮಾಡಿದರು ಎಲ್ಲರನ್ನೂ ಆಶ್ಚರ್ಯಗೊಳಿಸಿತು.

ಕಾಮಿರೆಡ್ಡಿ ಉಪವಾಸ ಮುಕ್ತಾಯ

ಬಳ್ಳಾರಿ ತಾಲ್ಲೂಕು ಮೈಸೂರಿಗೆ ಸೇರಿಸಬೇಡವೆನ್ನು ಪ್ರತಿಭಟನೆಗಾಗಿ ೪೯ ದಿನಗಳಿಂದ ಉಪವಾಸ ಕೈಗೊಂಡಿರುವ ಆಂಧ್ರ ಸತ್ಯಾಗ್ರಹಿ ಶ್ರೀ ಕೆಳಲಿ ಕಾಮಿರೆಡ್ಡಿಯವರು ೯ ನೇ ತಾರೀಖು ಭಾನುವಾರ ಬೆಳಿಗ್ಗೆ ಪ್ರಧಾನ ಮಂತ್ರಿ ಪಂಡಿತ ಜವಹರಲಾಲ ನೆಹರೂರವರ ಮನವಿಯ ಮೇರೆಗೆ ಏಳನೆಯವ್ರತ ಮುಕ್ತಾಯಗೊಳಿಸಿದರು

ಕನ್ನಡಿಗ ಮುಖಂಡರ ದಸ್ತಗಿರಿಗೆ ಖಂಡನೆ

ಬೆಂಗಳೂರು ಪ್ರಜಾ-ಸೋಷಲಿಸ್ಟ್ ಪಕ್ಷದ ನಗರ ಸಮಿತಿ ನಿರ್ಣಯ

ಹುಬ್ಬಳ್ಳಿಯಲ್ಲಿ ಕರ್ನಾಟಕ ಜಿಲ್ಲೆಯಲ್ಲಿ ೧೧ ಮಂದಿ ಮುಖಂಡರನ್ನು ದಸ್ತಗಿರಿ ಮಾಡಿರುವ ಬಗ್ಗೆ ಖಂಡನೆ ವ್ಯಕ್ತಪಡಿಸುವ ನಿರ್ಣಯವನ್ನು ಪ್ರಜಾ ಸೋಷಲಿಸ್ಟ್ ಪಕ್ಷದ ನಗರ ಸಮಿತಿ ನಿರ್ಣಯಮಾಡಿ ತಕ್ಷಣ ಬಿಡುಗಡೆಗೆ ಒತ್ತಾಯ ಪಡಿಸಿದೆ.

ಕೊಯಮತ್ತೂರು ಜಿಲ್ಲಾ ಕನ್ನಡಿಗರ ಸಮ್ಮೇಳನದಲ್ಲಿ ನಿರ್ಣಯ

ಕೊಯಮತ್ತೂರು ಜಿಲ್ಲಾ ಕನ್ನಡಿಗರ ಸಮ್ಮೇಳನವು ಗೋದಿಚಿಟ್ಟು ಪಾಳ್ಯದ ತಾಲ್ಲೂಕು ತಾಳವಾಡಿ ಗ್ರಾಮದ ದಲ್ಲಿ ತಾ ೨-೮-೩೩ ರಂದು ಕರ್ನಾಟಕ ಪ್ರಾಂತ್ಯ ಕಾಂಗ್ರೆಸ್ ಸಮಿತಿ ಪ್ರಧಾನ ಕಾರ್ಯದರ್ಶಿ ಶ್ರೀ ಗುತ್ತಿಪ್ಪ ಹಳ್ಳಿಕೇರಿಯವರ ಅಧ್ಯಕ್ಷತೆಯಲ್ಲಿ ಜರುಗಿತು.

ಮೈಸೂರು ಶಾಸನಸಭಾ ಸದಸ್ಯರಾದ ಶ್ರೀ ಯು ಎಂ ಮಾಡಿದ್ದಪ್ಪನವರು ಸಮ್ಮೇಳನದ ಅಧ್ಯಾಯದ ಭಾಷಣ ವನ್ನು ಮಾಡುತ್ತಾ "ಕೊಯಮತ್ತೂರು ಜಿಲ್ಲಾ ಕನ್ನಡಿಗರನ್ನು ಮಾತ್ರವಲ್ಲದೆ, ಇಂಗ್ಲೀಷರ ಆಳ್ವಿಕೆಯಿಂದ ಹರಿದು ಹಂಚಿ ಹೋಗಿರುವ ಎಲ್ಲಾ ಕನ್ನಡಿಗರನ್ನೂ, ಯಾವ ಪ್ರಾಂತದಲ್ಲಿ ಇದ್ದಾಗ್ಯೂ ಪ್ರೀತಿ ವಿಶ್ವಾಸದಿಂದ ಮೈಸೂರು ಪ್ರಾಂತಕ್ಕೆ ಸೇರಿಸಿಕೊಂಡು ತಮ್ಮ ಸಹೋದರರಂತೆ ಕಾಣುತ್ತಿರುವ ತಮ್ಮ ಸಹೋದರರು ದೇಶ ದೇಶ ಸರ್ಕಾರಗಳ ಅಡಚಣೆಗೆ ಸಿಕ್ಕಿ ಹೊಂದರೆ ಪಡುತ್ತಿರುವುದು ತಮ್ಮ ಗಮನಕ್ಕೆ ಬಂದಿದೆ. ಆ ಬಂಧಪತ್ರಗಳಿಂದ ವಿವೇಚನೆಯಾಗಬೇಕಾದರೆ ಭಾಷಾವಾರು ಪ್ರಾಂತರಚನೆಯೊಂದೇ ಸಿದ್ಧೌಷಧ. ಈ ಭಾಷಾವಾರು ಪ್ರಾಂತ ರಚನೆಗೆ ಅಡ್ಡಿ ಆತಂಕಗಳು ಅರಿಯೋಪಾದಿಯಲ್ಲಿ ಬರುತ್ತಲಿವೆ. ಕೆಲ್ಲೆದೆಯ ವೀರರಾದ ಕನ್ನಡಿಗರು ಇವುಗಳಿಗೆ ಎದೆಗುಂದು ಪೆಂಬು ಅಮಂಡ ಕರ್ನಾಟಕದ ನಿರ್ಮಾಣದಲ್ಲಿ ಭಾಗಿಗಳಾಗಬೇಕು" ಎಂದು ದಾಗಿ ಹೇಳಿದರು

ಅಮಂಡ ಕರ್ನಾಟಕದ ನಿರ್ಮಾಣಕ್ಕೆ ಬಳ್ಳಾರಿ ಜಿಲ್ಲೆಯ ೭ ತಾಲ್ಲೂಕುಗಳು ಮೈಸೂರಿಗೆ ಸೇರಿರುವುದು ಪ್ರಕೃತಿಯ ನಿರ್ಣಯವೆಂತೆ. ಇದೇ ರೀತಿ ಕೊಯಮತ್ತೂರು ಜಿಲ್ಲೆಯ ಕನ್ನಡಿಗರು ಸಹ ಮೈಸೂರಿಗೆ ಸೇರಲಿಚ್ಛಿಸಿರುವುದು ಸಂತೋಷದ ವಿಷಯ ಈ ಕಾರ್ಯದಲ್ಲಿ ಯಶಸ್ಸು ಪಡೆಯಲೆಂದೂ ಅವರು ಹಾರೈಸಿದರು

ಕೊಳ್ಳೇಗಾಲದಿಂದ ಆಗಮಿಸಿದ ತಾಲ್ಲೂಕು ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀ ಸಿ ಕೃಷ್ಣಶೆಟ್ಟಿರು ಕಾರ್ಯದರ್ಶಿಗಳಾದ ಶ್ರೀ ರಾಮಕೃಷ್ಣ ಶೆಟ್ಟರು ಭಾಷಣ ಮಾಡುತ್ತಾ ಈ ಜಿಲ್ಲೆಯ ಕನ್ನಡಿಗರೆಲ್ಲಾ ಮೈಸೂರಿಗೆ ಸೇರಲೇಬೇಕೆಂದು ತಿಳಿಸಿದರು

ಕಡೆಯದಾಗಿ ಅಧ್ಯಕ್ಷಪೀಠದಿಂದ ಶ್ರೀ ಗುತ್ತಿಪ್ಪ ಹಳ್ಳಿಕೇರಿಯವರು ಮಾತನಾಡುತ್ತಾ, ಕರ್ನಾಟಕ ವಿಶೇಷರಾಜ್ಯಗಳಾಗಬೇಕಾದ್ದು ಕನ್ನಡಿಗರ ಪರಂಪರೆಯಾದ ಆಸೆ ಇದನ್ನು ಕಡೆಗಟ್ಟಲು ಯಾರಿಂದಲೂ ಸಾಧ್ಯವಿಲ್ಲ ಆದ್ದರಿಂದ ಪ್ರಜಾ ಸರ್ಕಾರದವರು ಇದನ್ನು ಕೂಡಲೇ ಕಾರ್ಯಗತ ಮಾಡುವ್ಹಾರೆಂಬು ನಂಬಿದ್ದೇನೆ" ಎಂದು ತಿಳಿಸಿದರು.

ನಿರ್ಣಯ

ಬಳ್ಳಾರಿ ಜಿಲ್ಲೆಯ ತಾಲ್ಲೂಕುಗಳು ಮೈಸೂರು ರಾಜ್ಯಕ್ಕೆ ಸೇರುವ ಸಂದರ್ಭದಲ್ಲೇ ಕೊಯಮತ್ತೂರು ಜಿಲ್ಲಾ ಗೋದಿಚಿಟ್ಟು ಪಾಳ್ಯದ ತಾಲ್ಲೂಕು ತಾಳವಾಡಿ ಫಿರ್ಕಾ ಕನ್ನಡ ಪ್ರದೇಶವೂ, ಭವಾನಿ ತಾಲ್ಲೂಕು ಬರಗೂರು ಅರಣ್ಯ ಪ್ರದೇಶವೂ, ಕೊಳ್ಳೇಗಾಲ ತಾಲ್ಲೂಕು, ಸೇರಿಸಲ್ಪಡಬೇಕೆಂದು ಕೇಂದ್ರ ಸರ್ಕಾರವನ್ನು ಸಭೆಯು ಒತ್ತಾಯ ಮಾಡುವ ನಿರ್ಣಯ ಮಾಡಿತು

ಸ್ವೀಕಾರ

ತಿರುಮಕ್ಕೂಡ ತಿರು ಸಿಕಾಂಬುರದ ಶ್ರೀ ರೇಣುಕ ಸಿದ್ಧಪ್ಪನೆಂಬ ವರಿಗೆ ನ್ಯಾಮತಿ ಹಳ್ಳೂರ ಮುಂಗಿಪ್ಪ ನವರ ಸುಪುತ್ರಿಯನ್ನು ಕೊಟ್ಟು ನ್ಯಾಮತಿಯಲ್ಲಿ ಇದೇ ಜ್ಯೇಷ್ಠ ಬ ೫ ಮಿತಿಯಲ್ಲಿ ವಿಜೃಂಭಣೆಯಾಗಿ ನಡೆಸಿದ ಸಂತೋಷಾರ್ಥವಾಗಿ ವರನಕಡೆಯಿಂದ ಪ್ರಧಾನೋಪಹಾರಕ್ಕೆಗೆ ಸಮರ್ಪಿಸಿದ ೫ ರೂ ಜಾಗು ಹರಗನಹಳ್ಳಿವಾಸಿ ಹಾವೇರಿ ಜನ್ನಬಸಪ್ಪನವರ ತಮ್ಮ ಲೇಟು ವಿವಪ್ಪನವರ ಪುತ್ರ ಚಿಗಿ ಗುರುಸಿದ್ಧಪ್ಪನೆಂಬ ವರಿಗೂ, ದೊಡ್ಡತ್ರಿನ ಹಳ್ಳಿವಾಸಿ ಲೇಟು ಹಸುಬಿ ಜನ್ನಬಸವನವರ ಶಿವಪ್ಪ ಇಂಬಿ ಸೊಸೆ ರೇವಮ್ಮನೆಂಬ ವಧುವಿಗೂ ಇಲೇ ಜ್ಯೇಷ್ಠ ಬ ೯ ಭಾನುವಾರ ದಿವಸ ವಿವಾಹ ವಡೆದ ಸಮಯದ್ದಲ್ಲಿ ಪ್ರಧಾನೋಪಹಾರಕ್ಕಾಗಿ ವರನಕಡೆಯಿಂದ ಸಮರ್ಪಿಸಿದ 2 ರೂ. ಗಳು ಪಟ್ಟು ಮೂರು ರೂಪಾಯಿಗಳು ಸ್ವಾಮಿ ಶ್ರೀ ವಿಶ್ವೇಶ್ವರಸ್ವಾಮಿಗಳ ದ್ವಾರಾ ತಲ್ಪಿರು ೬ವೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಪ್ರಾರ್ಥಿಸುತ್ತೇವೆ.

ಮನೋಹರವಾದ ಫೋಟೋಗಳು.

ಶ್ರೀರೇಣುಕಾಚಾರ್ಯರ ಲಿಂಗೈಕ್ಯಪ್ರಸಿದ್ಧ ಫೋಟೋ (ನಾಮಾವಳಿಗಳಿಂದ ಮುದ್ರಿತ ಸಹಿತ) ಸೈಜು ೧೪×೧೦ ಬೆಲೆ	೦—೬—೦
ಶ್ರೀಜಗದ್ಗುರು ಪಂಚಾಚಾರ್ಯರು ಪಂಚಮಪೀಠಾಧಿಪತಿಗಳಿಗೆ ಶಿಷ್ಯರಿಂದ ಪಾದಪೂಜೆ ಮಾಡುವ ಫೋಟೋ	೦—೪—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾಯತ ವೇದ ಫೋಟೋ ಸೈಜು ೧೪×೧೦ ಬೆಲೆ ೧೫	—೪—೦
» ಜಕ್ಕ ಸೈಜು ಚಿಕ್ಕ	೦—೦—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿದ ಫೋಟೋ	೦—೧—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡಿಸಿದ ಫೋಟೋ	೦—೧—೬
ಶ್ರೀರೇಣುಕಾಚಾರ್ಯರು ಶ್ರೀಸಂಗಮೇಶ್ವರಲಿಂಗವನ್ನು ಅನುಗ್ರಹಿಸುವ ಫೋಟೋ	೦—೧—೬
ಶ್ರೀರೇಣುಕಾಚಾರ್ಯರು ಏಳು ಕೋಟಿ ಶಿವಲಿಂಗಗಳನ್ನು ಸ್ಥಾಪಿಸುವ ಫೋಟೋ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರು ಶ್ರೀ (ನಾಮಾವಳಿಗಳಿಂದ ಮುದ್ರಿತ)	೦—೪—೦
ಶ್ರೀಜಗದ್ಗುರುಗಳ ಶ್ರೀ ಪಂಚಾಚಾರ್ಯರು ತಿರುಪತಿಯಲ್ಲಿ ಪೂಜೆಮಾಡುವ ಫೋಟೋ	೦—೧—೬
ಸಚ್ಚಿ ಪೀಠಾರೋಹಣವಾದಾಗ ಶ್ರೀಜಗದ್ಗುರು ವಿಶ್ವೇಶ್ವರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ	೦—೪—೦
ಶ್ರೀಜಗದ್ಗುರುಗಳು ಸಿಂಹಾಸನಾರೂಢರಾಗಿರುವ ಫೋಟೋ	೦—೧—೬
ಶ್ರೀಮದ್ರಂಭಾಪುರೀ ಪೀಠ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಜಗದ್ಗುರುಗಳು ಶ್ರೀ ಶಾಂತೇಶಾಷ್ಟಶಾಸ್ತ್ರಿಗಳವರು ಆಶೀರ್ವದಿಸುತ್ತಿರುವ ಫೋಟೋ	೦—೧—೬
ಪಂಡಿತ ಶ್ರೀಶಾಂತೇಶಾಷ್ಟಶಾಸ್ತ್ರಿಗಳವರ ಫೋಟೋ (ನಾಮಾವಳಿಯ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕ ಸೈಜು ಬೆಲೆ	—೨—೮
ಪಂಡಿತ ಶ್ರೀಶಾಂತೇಶ ಷಷ್ಟ ಶಾಸ್ತ್ರಿಗಳವರ ಫೋಟೋ (ನಾಮಾವಳಿ ಬಿಳ್ಳಗೆಂಬಣ ಮುದ್ರಿತವಾಪುದು) ದೊಡ್ಡ ಸೈಜು ಬೆಲೆ	೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಪಟ್ಟದ ರಥ ಅತ್ಯಂತ ಸುಂದರವಾದ ಫೋಟೋ ಬೆಲೆ	—೧—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಸ್ವಾಮೀಜಿ ಪಟ್ಟದ ಸುಂದರ ಫೋಟೋ ಬೆಲೆ	೦—೧—೬
ಶ್ರೀ ಜಗದ್ಗುರು ಕೇದಾರನಿಂದ ಸನದು ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೧—೬
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಸನ್ಮಹಾಂತರಿಂದ ವಿರಾಜಿಸುತ್ತಿರುವ ಫೋಟೋ	೦—೧—೬
ಶ್ರೀಜಗದ್ಗುರುರಂಭಾಪುರೀ ಪೀಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶಿಲಾಶಾಸನಗಳು	೦—೩—೦

ಚಂದಾದಾರರಲ್ಲಿ ವಿನಂತಿ

ನಮ್ಮೀ ಪಂಚಾಚಾರ್ಯ ಪ್ರಭಾ ವಾರ ಪತ್ರಿಕೆಯ ವಾರ್ಷಿಕ ಚಂದಾ ೩ ರೂಪಾಯಿಗಳಿದ್ದು ೨ ಪಿ ಜಾರ್ಜು ಇದೇ ವಿಧ್ಯುಕ್ತ ೧ ನೆಯ ತಾರೀಖಿನಿಂದ (೧೭೯) ವಿಳ ಆಣೆ ಒಂಭತ್ತು ಕಾಸು ಆಗಿದೆ ಆದ್ದರಿಂದ ನಾವು ೨ ಪಿ ಮಾಡಿದರೆ ೨ ಪಿ ಖರ್ಚುಸೇರಿ ೩ ೮೦ ಆಗುವುದು ಈ ದುಡ್ಡು ನಮ್ಮ ಕೈ ಸೇರಬೇಕಾದರೆ ಆಯಾ ಪೋಸ್ಟಾಫೀಸಿಗೆ ಎರಡು ಆಣೆ ಹೆಚ್ಚಿಗೆ ಕೊಡಬೇಕಾಗುವುದು ಹೀಗಾಗಿ ಪ್ರತಿಯೊಬ್ಬ ಚಂದಾದಾರರಿಗೆ ಹತ್ತು ಆಣೆ ಖರ್ಚು ಬೀಳುವುದು ಆದ್ದರಿಂದ ಚಂದಾದಾರರ ಅವಧಿ ಮುಗಿಯುವ ಒಂದು ವಾರ ಮುಂಚೆ ನಾವು ಪತ್ರಿಕೆಯಲ್ಲಿ ಸೂಚನೆಗಳನ್ನು ಕಳಿಸುತ್ತೇವೆ ಆ ಪ್ರಕಾರ ಕೂಡಲೇ ನೂರು ರೂಪಾಯಿಗಳನ್ನು ವಿ ಪಿಯಾರ್ಡರ್ ಮಾಡಿದರೆ ಎರಡೇ ಆಣೆಯಲ್ಲಿ ದುಡ್ಡು ನಮ್ಮ ಕೈ ಸೇರುವುದಲ್ಲದೆ ಯಥಾಪ್ರಕಾರ ಪತ್ರಿಕೆಗಳೂ ನಿಮ್ಮ ಕೈ ಸೇರುತ್ತವೆ. ದಯವಿಟ್ಟು ಎಲ್ಲರೂ ಸುಪಿಯಾರ್ಡರ್ ಮಾಡಬೇಕು ಮನಿಯಾರ್ಡರ್ ಕಳಿಸದೆ ಇದ್ದವರಿಗೆ ಪತ್ರಿಕೆಗಳನ್ನು ಫಿಲ್ಲಿಸಿಬಿಡುತ್ತೇವೆ ಮನಿಯಾರ್ಡರ್ ಫಾರಮ್ಮುಗಳಲ್ಲಿ ಹೆಸರು ಹಾಗೂ ಹಳೇ ರಿಜಿಸ್ಟರ್ ನಂಬರನ್ನು ತಿಳಿಸಬೇಕು ಹೀಗೆ ಮಾಡುವುದರಿಂದ ಚಂದಾದಾರರಿಗೆ ಉಳಿತಾಯವಾಗುವುದಲ್ಲದೆ ನಾವು ವಿ ಪಿ ಮಾಡಿದಾರಿಕಾಯುವ ತೊಂದರೆಯೂ ತಪ್ಪುತ್ತದೆ ಸರ್ವ ಮಹಾಶಯರೂ ನಾವು ಮಾಡಿಕೊಂಡ ವಿನಂತಿಯನ್ನು ಗಮನಕ್ಕೆ ತಂದು ಮೂರು ರೂಪಾಯಿ ಚಂದಾಹಣವನ್ನು ಮನಿಯಾರ್ಡರ್ ರೂಪದಿಂದ ಸಲ್ಲಿಸುತ್ತಿರೆಂದು ವಿಜ್ಞಾಪಿಸಿದ್ದೇನೆ

—ಸಂಪಾದಕರು

ಸದ್ಗ್ರಂಥಗಳು ಸಾಧಾರಣ ಸುತ ಗ್ರಂಥಗಳು

ಸೋತ್ರಸೂತ್ರಪಟ (೩ನೆಯ ಆವೃತ್ತಿ) — —	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಸಂಶಯಿತಶತಕ ಪ್ರಶ್ನಪ್ರಕಾಶ (೫ನೆಯ ಒನೃತ್ತಿ)	೧ ಆಣೆ
ಶ್ರೀಜಗದ್ಗುರು ರೇಣುಕಾಚಾರ್ಯ ಕೀರ್ತನ	೧ ಆಣೆ
ಶ್ರೀಪಂಚಾಚಾರ್ಯ ನುಂಗಲಸ್ತೋತ್ರಾವಳಿ (೧೧ನೆಯ ಆವೃತ್ತಿ)	೩ ಆಣೆ
ಶ್ರೀರೇಣುಕಾಚಾರ್ಯಶತಕ (೩ನೆಯ ಆವೃತ್ತಿ) —	೩ ಆಣೆ
ಶ್ರೀರುದ್ರವಿ.ಪಿವಿಾವಾಚಾರ್ಯಶತಕ —	೩ ಆಣೆ
ಶಿವಶಕ್ತಿವಿಲಾಸ	೩ ಆಣೆ
ವಿಜಯಭೈರಿ ಸಾಮ್ರಾಜ್ಯವೂ ಶ್ರೀರೇಣುಕಾಚಾರ್ಯರೂ —	೩ ಆಣೆ
ಖಲ್ವಮಾಹಾತ್ಮ್ಯ (೩ನೆಯ ಆವೃತ್ತಿ) —	೩ ಆಣೆ
ಸಂಶ್ಲಿಷ್ಟ ಶಿವಪೂಜಾವಿಧಿ (೧೦ನೆಯ ಆವೃತ್ತಿ) —	೩ ಆಣೆ
ಅಸದಾದಿಸಿದ್ಧಶತ್ವದರ್ಪಣ (೩ನೆಯ ಆವೃತ್ತಿ)	೩ ಆಣೆ
ಪಂಚಾಚಾರ್ಯಪ್ರಕಾಶ —	೩ ಆಣೆ
ಪಂಚಾಚಾರ ಪ್ರಕಾಶಿಕಾ — —	೩ ಆಣೆ
ಶ್ರೀಗುರುಶಕ್ತ್ಯಷ್ಟಪದಗಳು (೩ನೆಯ ಆವೃತ್ತಿ) —	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ) —	೪ ಆಣೆ
ಲಿಂಗಧಾರಣವಿಧಿ — —	೪ ಆಣೆ
ವಿವಾಹವಿಧಿ (೪ನೆಯ ಆವೃತ್ತಿ) — —	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ — —	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ —	೪ ಆಣೆ
ವೈದಿಕವಾಙ್ಮಯರಹಸ್ಯ — —	೪ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೩ನೆಯ ಆವೃತ್ತಿ) —	೪ ಆಣೆ
ಕೃತೋಪನಿಷತ್ಸಂಗ್ರಹ (ಸಂಸ್ಕೃತ) (೨ ನೆಯ ಆವೃತ್ತಿ) —	೬ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಫೋಟನ (೩ನೆಯ ಆವೃತ್ತಿ) —	೬ ಆಣೆ
ವೀರಶೈವಾಂತ್ಯೇಷ್ಟಿ—ಶ್ರಾದ್ಧವಿಧಿ — —	೬ ಆಣೆ
ಸದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು) —	೮ ಆಣೆ
ತಿವಾದ್ವೈತಪರಿಭಾಷಾ (ಸಂಸ್ಕೃತ) — —	೮ ಆಣೆ
ವೀರಶೈವಮಯಾತ್ಮರು	೮ ಆಣೆ
ಬನವಧ್ವಾಂತದಿವಾಕರ (೩ನೆಯ ಆವೃತ್ತಿ)	೮ ಆಣೆ
ಆಗಮಪರಿಜ್ಞಾನ	೮ ಆಣೆ
ಪಂಡಿತ ಶ್ರೀಶಾಂತೇಶಾಷ್ಟಶಾಸ್ತ್ರಿಗಳವರ ಭಾವಚಿತ್ರ (ಕಿರಿಯ)	೮ ಆಣೆ
ಶ್ರೀಜಗದ್ಗುರು ಶಿವಾನಂದವಿಜಯ	೮ ಆಣೆ
ಶ್ರೀಜಗದ್ಗುರು ವಿಶ್ವಕರ್ಣವಿಜಯ ಸಕ್ಷತ್ಕಮಾಲಿಕಾ	೮ ಆಣೆ
ಖಷ್ಟ ಸ್ಥಲ ನ್ಯಾಯಶತಕಮ್	೮ ಆಣೆ
ಸಿದ್ಧಾಂತಸಾರಾವಳಿ (ಶ್ರೀಮೋಚಿಪತಿವಾಚಾರ್ಯಕೃತ)	೧೩ ಆಣೆ
ಶಿವಾಸೂತ್ರಸಿದ್ಧಾಂತದರ್ಪಣ	೧೩ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ಪ್ರಾಜೀಕಶ್ಯ	೧ ರೂ
ಮಾಹೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ)	೧ ರೂ
ವಿನೇಕಮುಕ್ತಾವಳಿ	೧ ರೂ
ವಿಜಾರಶಾತಾವಳಿ	೧ ರೂ
ವೈದಿಕಶಿವಪೂಜಾವಿಧಿ (ವೈದಿಕಸ್ತರಯುಪ್ತಾಮಮು ೩ನೆಯ ಆವೃತ್ತಿ)	೧೫ ರೂ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೫ ರೂ
ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್ —	೧೫ ರೂ
ಸಚಿತ್ರ ರೇಣುಕವಿಜಯ (೩ನೆಯ ಆವೃತ್ತಿ) —	೧೫ ರೂ
ಶಿವಾಗಮಸಂಗ್ರಹ (ದಂಪ್ರಜ್ಞಾ ಸಾಗರ-ಶಾಂಕರಾಗಮ-ಮುಖಬಿಂಗಮ-ಸೂತ್ರಾಗಮಗಳಿಂದ ಕೂಡಿರುವುದು)	೩ ರೂ
ರೇಣುಕವಿಜಯ ಮಹಾಪುರಾಣ (ಖಷ್ಟಸ್ಥಲ ಭಾವಪೀಠಸ್ಥವು) —	೩ ರೂ
ಸಿದ್ಧಾಂತಶಿಖಾಮಣಿ (ಖಷ್ಟಸ್ಥಲ ವೀಕಾಸಹಿತ) — —	೩ ರೂ
ವೀರಶೈವಧರ್ಮ (೩ನೆಯ ಆವೃತ್ತಿ, ೧೦ ಮಹತ್ವದ ಫೋಟೋಗಳುಳ್ಳವು)	೩ ರೂ
A brief life-sketch of Pandit Sri Kashinatha Shastrigal (English)	4 As.
The Philosophical Aspect of Viraasaivism (English)	8 As
Speeches by Pandit Shri Kashinatha Shastrigal (English)	12 As
ಶಿವಾಚಾರಚಂದ್ರಿಕಾ (ಚಿತ್ರಕಾ)	೩ ರೂ.
ಶೀಲಸಿದ್ಧರಾಜ (ಚರಿತೆ)	೧ ರೂ
ಜಗದಾಚಾರ್ಯಚರಿತೆ (ಶೀಲಸಿದ್ಧರಾಜ—ಚರಿತ್ರ)	೧ ರೂ.
ಶೀಲಸಿದ್ಧೇಶ್ವರಚರಿತೆ (ಚರಿತ್ರ) — —	೨ ಆಣೆ

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್, ಪ್ರೆಸ್, ಮೈಸೂರು.

Edited Printed and Published by Brahmasrimathadhyakshe Sri Mahadevaiah at Sri Panchacharya Electric Press, Sayaji Rao Road, Mysore

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯ: ಪ್ರಸೀದಂತು ॥ REGISTERED No M. 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಭವನಿಕರ ಪಂಚಾಸ್ಯವೀಣಾಧರ । ಪಂಚಕ್ಲೇಶವಿನಾಶಕರ ಪರತತ್ತ್ವಪಂಚಜಲಿಂಗೋದ್ಭವರ ॥
ಪಂಚಾಚಾರಧರಾಮಕರ ಪರಿಲಸತ್ಪಂಚಾಕ್ಷರೀಮೋದಧರ । ಪಂಚಾಚಾರ್ಯಜಗದ್ಗುರೂತ್ತಮವರ್ ಪಾಲಿಪ್ಪ ದೀಲೋಕಮಂ ॥

ಸಂಸ್ಥಾಪಕರು—ಹಾಗಲೂರು ಬೃಹನ್ಮಹಾಧ್ಯಕ್ಷರಾದ ವೇದಶ್ರೀ ಪಂ॥ ಶ್ರೀ ಕಾಶೀನಾಥಶಾಸ್ತ್ರಿಗಳವರು.

ವಾರ್ಷಿಕ ಚಂದಾ ೩ ರೂ.] ಸಂಪಾದಕರು—ಹಾಗಲೂರು ಬೃಹನ್ಮಹಾಧ್ಯಕ್ಷರಾದ ಶ್ರೀ ಮಹಾದೇವಯ್ಯನವರು [ಪ್ರತಿ ಸಂಖ್ಯೆಗೆ ೩ ರೂ ೪ ಇ

ಸಂಪುಟ ೩೭] ಸೋಮವಾರ ತಾ॥ ೨೪ನೇ ಆಗಸ್ಟ್ ೧೯೫೩ [ಸಂಚಿಕೆ ೧೫

ಪತ್ರವ್ಯವಹಾರ

[ಚಾಸ್ಕ್ರೀದಾರರು ಅಭಿಪ್ರಾಯ ಪಡುವ ಲೇಖನಗಳಿಗೆ ಪತ್ರಕಾರಕರು ಜವಾಬ್ದಾರರಲ್ಲ ಎಂಬ ವಿಷಯವನ್ನು ಸದರಿಯ ಲಕ್ಷ್ಯವಲ್ಲಿಡಕ್ಕಿದ್ದು —ಸಂ]

ಪಂ॥ ಶ್ರೀಕಾಶೀನಾಥಶಾಸ್ತ್ರಿಗಳವರ ನೂತನ ಗದ್ದುಗೆಯ ಮೇಲೆ ಲಿಂಗಪ್ರತಿಷ್ಠೆ

ಮೈಸೂರು ರಾಜಧಾನಿಯಲ್ಲಿ ಜಾನುಂಡಿಬೆಟ್ಟಕ್ಕೆ ಹತ್ತಿರವಾದ ಶಿರ್ಲಿ ಶ್ರೀ ಸಿದ್ಧಲಿಂಗಸ್ವಾಮಿಗಳ ಜಾಗೆಯ ಶಾಂಪೌಂಡಿನಲ್ಲಿದ್ದರುವ ವೇ॥ ಪಂ॥ ಶ್ರೀಕಾಶೀನಾಥಶಾಸ್ತ್ರಿಗಳವರ ಕೈವಲ್ಯಾವ್ಯತೆಗದ್ದುಗೆಯನ್ನೂ ಮೊದಲಿದ್ದ ಮಂಟಪವನ್ನೂ ತೆಗೆದು ಸುಭದ್ರವಾಗಿ ಪಂಚಕಲಶ ಏರ್ಪಾಡಾದ ಮಂಟಪವನ್ನು ಕಟ್ಟಿಸಿದ ಅವರ ಸಹೋದರರಾದ ವೇ॥ ಬ್ರ॥ ಶ್ರೀ॥ ಮಹಾದೇವಯ್ಯನವರು ಇದೇ ವಿಜಯನಾಮ ಸಂವತ್ಸರದ ಶ್ರಾವಣ ಶುದ್ಧ ೧೧ ಶುಕ್ರವಾರ ಶುಭಲಗ್ನದಲ್ಲಿ ಸದರಿ ಮಂಟಪ ಹೊಳಗೆ ಲಿಂಗಸ್ಥಾಪನೆಯನ್ನು ಮಾಡಿಸಿದರು ಈ ಕಾರ್ಯವು ನಂಜನಗೂಡು ಹೊಂದಲಗೆರೆ ಮಹದ ಶ್ರೀ॥ ಜ್ಞಾ॥ ಬ್ರ॥ ವಿರುದ್ರಸ್ವಾಮಿಗಳ ಅಧ್ಯಕ್ಷತೆಯಲ್ಲಿ ಮೈಸೂರು ಸಂಸ್ಕೃತ ಕಾಲೇಜಿನ ಪ್ರೊಫೆಸರರಾದ ಆಸ್ಥಾನ ಪಂಡಿತ ಶ್ರೀ ಘಂಟಂಚಾರ್ಯರ್ ವೈದಿಕತ್ವ ಮೊದಲಿನ ಸಂಸ್ಕೃತ ಪಾಠಶಾಲೆಯ ವಿದ್ಯಾರ್ಥಿಗಳ ವೇದಘೋಷಣೆಯಿಂದ ವಿಧ್ಯುಕ್ತವಾಗಿ ಆಚರಿಸಲ್ಪಟ್ಟು ಸಾಯಂಕಾಲ ೬॥ ಘಂಟೆಗೆ ಶ್ರೀ ಜಗದ್ಗುರು ಪಂಚಾಚಾರ್ಯರ ಜಯಘೋಷದೊಡನೆ ಮುಕ್ತಾಯಗೊಂಡಿತು ವೈದಿಕ ಮಾರ್ಗೇಶ್ವರರಿಗೂ ಆತಿಥಿಗಳಿಗೂ ಮೈಸ್ವಾಸ್ಥ್ಯ ಭೋಜನವಾಗಿ ಭೂದಕ್ಷಿಣೆ ತಾಂಬೂಲಾದಿಗಳಿಂದ ಸಮ್ಮಾನವೂ ಆಯಿತು ಈ ಮಹಾದೇವಯ್ಯನವರ ಕೈಕೆಯಿಂದ ಬೆಳಗಿ ಬಾಳಲೆಂದು ಆಶಿಸುವ,

ಓರ್ವ ಪ್ರತ್ಯಕ್ಷದರ್ಶಿ

ಪುರಾಣ ಪ್ರಾರಂಭ ಗಂಗಾವತಿ

